೨೪
ವರ್ಷ ೪

ಸಂಕಲನ

ನವಂಬರ್ + ಡಿಸೆಂಬರ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನ : ನವಂಬರ್ + ಡಿಸೆಂಬರ್ ೨೦೦೫

ಸಂಪುಟ ೪, ಸಂಚಿಕೆ ೬

ಸಂಪಾದಕರು : **ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ**

●

ಅಮೃತ ರಾ. ಯಾರ್ದಿ — *ಎಸ್. ಸೀತಾರಾಮು*

ಕೆ. ವಿ. ಉಭಯಭಾರತಿ — *ವಿಜಯ ಧಾರವಾಡ*

ಪಾಂಡುರಂಗ ಕೋಟಿ — *ಶ್ರೀವತ್ಸ ದೇಸಾಯಿ*

ಎಚ್. ಎಸ್. ರಾಘವೇಂದ್ರ ರಾವ್

ಬಸವರಾಜ ವಕ್ಕುಂದ — *ಸಿ. ಪಿ. ಕೃಷ್ಣಕುಮಾರ್*

ಷ. ಶೆಟ್ಟರ್ — *ತಿಪ್ಪೇಸ್ವಾಮಿ*

ಚಂದೂಲಾಲ್ ದುಬೆ

●

• *ದೇಶಪಾಂಡೆ ಸುಬ್ಬರಾಯ* • *ದುಷ್ಯಂತ ನಾಡಗೌಡ* • *ಗುಂಡಣ್ಣ ಕಲಬುರ್ಗಿ*
• *ವಿಜಯಕುಮಾರಿ ಎಸ್. ಕರಿಕಲ್* • *ನಾ. ದಾಮೋದರ ಶೆಟ್ಟಿ* • *ಎ. ಮುರಿಗೆಪ್ಪ*
• *ಮೋತಿಲಾಲ ಹಲವಾಯಿ* • *ಹೆಚ್. ಎ. ಪಾರ್ಶ್ವನಾಥ್*
• *ಎಲ್. ವಿ. ಶಾಂತಕುಮಾರಿ.*

●

ಬಿ. ಎ. ವಿವೇಕ ರೈ — ಬಸವರಾಜ ವಕ್ಕುಂದ

ಬಸವರಾಜ ಚಿಕ್ಕನರಗುಂದ — ಎಸ್. ಎಂ. ಕಂಬಾಳಿಮಠ

ಲಲಿತಾ ಸಿದ್ದಬಸವಯ್ಯ — ಖುರ್ಷೀದ ಆಲಂ ಮೋಮಿನ

ಕೆ. ಆನಂದ ಗಾಣಿಗ — ಡಿ. ಸಿ. ರಾಜಪ್ಪ

ಬಿ. ಎ. ಸನದಿ — ಶಿವಶಂಕರ ಹಿರೇಮಠ

ಎಸ್. ಶೇಷಾದ್ರಿ ಕಿನಾರ — ಎಂ. ಡಿ. ಗೋಗೇರಿ

ಎಸ್. ಎಂ. ಶಿವಪ್ರಕಾಶ್ — ವಾಸಂತಿ ಪ್ರಭಾಕರ ನಾಯಕ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

ಸಂಕಲನ

ನವಂಬರ್ + ಡಿಸೆಂಬರ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC
SANKALANA :
A Kannada Literary Magazine
Volume 4, Issue 6 : November + December 2005
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004
Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೨೪
ಸಂಪುಟ ೪, ಸಂಚಿಕೆ ೬ : ನವಂಬರ್ + ಡಿಸೆಂಬರ್ ೨೦೦೫
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೬೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)
ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮
ಮೊಬೈಲ್ : ೯೪೪೮೮ ೩೬೮೧೮

ಸಂಪಾದಕರ ಮಾತು

'ಕವಿರಾಜಮಾರ್ಗ'ವನ್ನು ಕುರಿತು ಪ್ರೊ. ಷ. ಶೆಟ್ಟರ್ ಅವರು ಬರೆದ ಆರು ವಿಶಿಷ್ಟ ಸಂಶೋಧನ ಲೇಖನಗಳನ್ನು ಸಂಕಲನ-೧೮ ರಿಂದ ೨೩ ರ ವರೆಗೆ ನಿಯಮಿತವಾಗಿ ಪ್ರಕಟಿಸಿದ್ದೇವೆ. ಪ್ರಸ್ತುತ ಸಂಕಲನ-೨೪ ರಲ್ಲಿ ಮಹಾನವಮಿ ಮಹೋತ್ಸವದ ಐತಿಹಾಸಿಕ ದಾಖಲೆಗಳನ್ನು ಆಧರಿಸಿ ಅವರೇ ಬರೆದ ಸಂಶೋಧನ ಲೇಖನವನ್ನು ಪ್ರಕಟಿಸಿದ್ದೇವೆ. 'ಕವಿರಾಜಮಾರ್ಗಮಂಥನ' ಸಂಕಲನ-೨೫ ರಿಂದ ಮತ್ತೆ ಮುಂದುವರಿಯುತ್ತದೆ.

ಸಂಕಲನ-೨೩ ರಲ್ಲಿ ಪ್ರಕಟವಾದ ಡಾ. ಶ್ರೀನಿವಾಸ ಹಾವನೂರರ ವಿಷ್ಣುದಾಸ ಭಾವೆ ಕುರಿತ ಲೇಖನಕ್ಕೆ ಡಾ. ಚಂದೂಲಾಲ್ ದುಬೆ ಅವರು ಅಷ್ಟೇ ಮಹತ್ವದ ಸಂಶೋಧನಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಈ ಲೇಖನ ಕೊನೆ ಗಳಿಗೆಯಲ್ಲಿ ನಮ್ಮ ಕೈಗೆ ಬಂದಿತು. ಆದರೂ ಪ್ರಸ್ತುತ ಸಂಚಿಕೆಯಲ್ಲಿಯೇ ಇದನ್ನು ಪ್ರಕಟಿಸುವುದು ಸೂಕ್ತವೆನಿಸಿತು. ಹೀಗಾಗಿ ಅನಿವಾರ್ಯವಾಗಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು.

ಈ ಸಂಚಿಕೆಯ ೨-೩ ಲೇಖನಗಳೂ ಸಾಕಷ್ಟು ದೊಡ್ಡವಾಗಿವೆ. ಈ ಸಲ ನಾಲ್ಕು ಪುಟಗಳನ್ನು ಹೆಚ್ಚು ಮಾಡಿದರೂ ನಾವು ಮೊದಲು ಹೊಂದಿಸಿಟ್ಟುಕೊಂಡಿದ್ದ ಕೆಲವು ಲೇಖನಗಳು, ಪುಸ್ತಕ ಪರಿಶೀಲನೆಗಳು, ಕವಿತೆಗಳನ್ನು ಅನಿವಾರ್ಯವಾಗಿ ಮುಂದಿನ ಸಂಚಿಕೆಗಳಿಗಾಗಿ ಇಟ್ಟುಕೊಳ್ಳಲೇ ಬೇಕಾಯಿತು.

ಇದು ನಾಲ್ಕನೇ ವರ್ಷದ ಕೊನೆಯ ಸಂಚಿಕೆ. ನಾವು ಅಪೇಕ್ಷಿಸಿದ ಮತ್ತು ನಿರೀಕ್ಷಿಸಿದ ಸಂಖ್ಯೆಯಲ್ಲಿ ಚಂದಾದಾರರು ಕೂಡಿರದಿದ್ದರೂ, ಒಂದು ಬಗೆಯ 'ಹುಂಬ ಧೈರ್ಯ'ದಿಂದ ಸಂಕಲನವನ್ನು ಮುಂದುವರಿಸಿದ್ದೇವೆ.

ಈ ವರೆಗೆ ಚಂದಾಹಣ ಕೊಟ್ಟ ಎಲ್ಲ ಆತ್ಮೀಯರಿಗೆ ಕೃತಜ್ಞತೆಗಳು. ಈ ಸಂಚಿಕೆಯೊಂದಿಗೆ ೨೦೦೫ ರ ವಾರ್ಷಿಕ ಚಂದಾ ಮುಗಿದಿದೆ.

ದಯವಿಟ್ಟು ೨೦೦೬ ರ ಚಂದಾಹಣ ಕಳಿಸಿ ಸಹಕರಿಸಿರಿ.

೧ ನವಂಬರ್ ೨೦೦೫
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಪರಿವಿಡಿ

೧. ನನ್ನ (ಶಾಲಾ!) ಗುರುಗಳು : ಲೇಖನ- ೭ : *ಅಮೃತ ರಾ. ಯಾರ್ದಿ* ೫ - ೧೩

೨. ನವ ಶಾಯರಿಗಳು : *ಎಸ್. ಸೀತಾರಾಮು* ೧೩

೩. ನನ್ನ ಅಪ್ಪ ನನ್ನ ಅಮ್ಮ : ಲೇಖನ- ೨೩ : *ಕೆ. ವಿ. ಉಭಯಭಾರತಿ* ೧೪ - ೧೯

೪. ಮೂರು ಕವಿತೆಗಳು : *ವಿಜಯ ಧಾರವಾಡ* ೧೯ - ೨೩

೫. ನನ್ನ ಅವ್ವ ನನ್ನ ಅಪ್ಪ : ಲೇಖನ- ೨೪ : *ಪಾಂಡುರಂಗ ಕೋಟಿ* ೨೩ - ೨೬

೬. ನೀ ನನಗೆ ಬೇಡ, ಕಣೆ ! : *ಶ್ರೀವತ್ಸ ದೇಸಾಯಿ* ೨೬

೭. ಸಾಂಸ್ಕೃತಿಕ ಪಠ್ಯವಾಗಿ ಯಶೋಧರ ಚರಿತೆ :
ಎಚ್. ಎಸ್. ರಾಘವೇಂದ್ರ ರಾವ್ ೨೭ - ೪೦

೮. ನಾಲ್ಕು ಕವಿತೆಗಳು : *ಬಸವರಾಜ ವಕ್ಕುಂದ* ೪೦ - ೪೨

೯. ಕುವೆಂಪು ಮತ್ತು ದಲಿತ ಪ್ರಜ್ಞೆ : *ಸಿ. ಪಿ. ಕೃಷ್ಣಕುಮಾರ್* ೪೨ - ೪೫

೧೦. ಮಹಾನವಮಿ ಮಹೋತ್ಸವ : *ಷ. ಶೆಟ್ಟರ್* ೪೬ - ೬೦

೧೧. ಅನನ್ಯ ಭಾಷೋಪಾಸಕ, ಅನುವಾದಕ ಬಿ. ಆರ್. ನಾರಾಯಣ್ :
ತಿಪ್ಪೇಸ್ವಾಮಿ ೬೧ - ೬೩

೧೨. ಮೊದಲನೇ ಮರಾಠೀ ನಾಟಕ ಮತ್ತು ಕರ್ನಾಟಕದ ಭಾಗವತ ಮಂಡಳಿ :
ಚಂದೂಲಾಲ್ ದುಬೆ ೬೩ - ೬೮

೧೩. ಪುಸ್ತಕ ಪರಿಶೀಲನೆ : ೬೯ - ೮೦

೧. ಕುಲುಮೆಯೊಳಗಿನ ಚಿಲುಮೆ : ಅನು. ಸಿ. ನಾಗಣ್ಣ —*ದೇಶಪಾಂಡೆ ಸುಬ್ಬರಾಯ*

೨. ಅರಹಂತ : ಎಸ್. ರಾಮನಾಥ —*ದುಷ್ಯಂತ ನಾಡಗೌಡ*

೩. ಮಗು ಮಲಗಿದೆ ಎದೆಯ ಮೇಲೆ : ಎಂ. ಡಿ. ವಕ್ಕುಂದ —*ಗುಂಡಣ್ಣ ಕಲಬುರ್ಗಿ*

೪. ಬಯಲ ಬೆರಗು : ಬಸವರಾಜ ಡೋಣೂರ —*ವಿಜಯಕುಮಾರಿ ಎಸ್. ಕರಿಕಲ್*

೫. ಬೆಳಗು : ಚಂದ್ರಶೇಖರ ವಸ್ತ್ರದ —*ನಾ. ದಾಮೋದರ ಶೆಟ್ಟಿ*

೬. ಸ್ವರ್ಗಾದಪಿ ಗರೀಯಸಿ, ೭. ಗಾಳಿಯ ಉಡುಗೊರೆ, ೮. ಮಾಯವಾದ ಮೊಲ
: ಜಿ. ಜೆ. ಹರಿಜಿತ್ —*ಎ. ಮುರಿಗೆಪ್ಪ*

೯. ಭಂಗಸ್ನನೆ : ಮಧುಸೂದನ ಜೆ. ಘಾಟೆ —*ಮೋತಿಲಾಲ ಹಲವಾಯಿ*

೧೦. ನಾನು ಮೋಸಗಾರನೇ? : ಟಿ. ವಿ. ಶ್ರೀನಾಥಶಾಸ್ತ್ರೀ —*ಹೆಚ್. ಎ. ಪಾರ್ಶ್ವನಾಥ್*

೧೧. ಆಗ್ನೇಯದಂಗಳದಲ್ಲಿ : ವೆಂಕಟೇಶ ಮಾಚಕನೂರ —*ಎಲ್. ವಿ. ಶಾಂತಕುಮಾರಿ*

೧೪. ಸಂಕಲನ : ಅನಿಸಿಕೆ : ೮೧ - ೮೨

೧೫. ಕಡೇಪುಟ : *ಸಿದ್ಧಲಿಂಗ ಪಟ್ಟಣಶೆಟ್ಟಿ* ೮೩

ನನ್ನ (ಶಾಲಾ!) ಗುರುಗಳು

ಅಮೃತ ರಾ. ಝಾರ್ದಿ

- ಶಕೆ ೧೭೭೩ (ಇಸ್ವಿ ೧೮೭೧) ಇದು ನನ್ನ ಶಾಲೆ ಸ್ಥಾಪನೆಯಾದ ವರ್ಷ.
- – ದತ್ತೋಪಂತ ಮಾಮಲೆದಾರ ವಾಡೆ, ಮಣಕಿಲ್ಲಾ, ಧಾರವಾಡ ಇದು ನನ್ನ ಶಾಲೆಯ ವಿಳಾಸ.
- – ಶ್ರೀ ಹನುಮಂತರಾವ ನಾರಾಯಣರಾವ ಉಣಕಲಕರ ಇವರು ನನ್ನ ಗುರುಗಳು.
- – ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು ೦೨– ನಾನು ಮತ್ತು ನನ್ನ ಅಣ್ಣ; ನನಗಿಂತ ಎರಡೂವರೆ ವರ್ಷ ದೊಡ್ಡವ.
- – ನಾನು ಶಾಲೆ ಸೇರಿದ್ದು, ಇಸ್ವಿ ೧೯೬೦ ರಲ್ಲಿ. ಅಂದರೆ, ನನ್ನ ವಯಸ್ಸಿನ ಎರಡೂವರೆ ವರ್ಷದವನಿದ್ದಾಗ.

• ಈಗ ನನ್ನ ಶಾಲೆ ಹೊಸ ರೂಪ ತಾಳಿದೆ. ಆ ವಾಡೆ ಹೊಸ ಗಾಳಿಯ ರುಚಿ ಅನುಭವಿಸಿದೆ. ಶಕೆ ೧೭೭೩(ಇಸ್ವಿ ೧೮೭೧)ರಿಂದ ಇಂದಿನ ವರೆಗೆ ನಡೆದುಹೋದ ಎಲ್ಲ ಘಟನೆಗಳಿಗೆ ಸಾಕ್ಷಿಯಾಗಿ ನಿಂತಿರುವ ಆ ಚಿಕ್ಕ ದತ್ತದೇವಸ್ಥಾನ. ಅದರೊಳಗೆ ಎರಡು ಸುಂದರವಾದ ಶಿಲಾಪಾದುಕೆಗಳು ಇವೆ. ಅದರ ಹಿಂದೆ ಮಹಾಪುರುಷನಂತೆ ಎತ್ತರವಾಗಿ ನಿಂತಿರುವ ಅಶ್ವತ್ಥ ವೃಕ್ಷ, ತನ್ನ ಬೇರುಗಳೊಂದಿಗೆ ಸಂಸ್ಕೃತಿಯ ಧಾರೆಯನ್ನೆ ಮುನ್ನಡೆಸುತ್ತಿರುವ ಹಾಗೆ ನಿಂತಿರುವ ಆಲದ ಮರ. ಇವೆರಡರ ಸಂಗಮದಿಂದ ಕೂಡಿದ ಆ ಗಿಡಗಳ ಭವ್ಯವಾದ ಪರಿಧಿ, ಇಂದಿಗೂ ಹಾಗೆಯೇ ಇದೆ. ಆದರೆ ಮಹಾಕಾಯ ಪುರುಷನ ಶರೀರ ಜರಾಜರ್ಜರವಾದಾಗ ಒಣಗುವ ಹಾಗೆ ಆ ಮರಗಳು ಕೂಡ ಈಗ ಗಾತ್ರದಿಂದ ಸಣ್ಣಾಗಿವೆ. ಔದುಂಬರ ವೃಕ್ಷ, ಬೇವಿನ ಮರ, ನೀರಲ ಗಿಡ, ದಾಸಾಳೆಯ ಗಿಡಗಳು, ಪೇರಲ ಗಿಡಗಳು; ಅವುಗಳೆದುರು ಆಳವಾಗಿ ನೀರನ್ನು ತುಂಬಿಕೊಂಡು ಪೂರ್ಣಜ್ಞಾನಿಯಂತೆ ನಿಂತ ಚೌಕಾದ ಬಾವಿ, ಆ ಬಾವಿಯ ಪಕ್ಕದಲ್ಲಿ ತಮ್ಮ ರಕ್ತವರ್ಣದ ಹಣ್ಣುಗಳಿಂದ ಸೊನ್ನೆ ಮಾಡುತ್ತಿರುವ ಆ ಔದುಂಬರ ಗಿಡ, ಅದರ ಪಕ್ಕದಲ್ಲೆ ಆರೆಂಟು ದನ-ಕರಗಳನ್ನು ಕಟ್ಟಲು ನಿರ್ಮಿಸಿದ ಕೊಟ್ಟಿಗೆ. ಇವೆಲ್ಲ ಈಗ ಕಾಲ ಕವಲಿತವಾಗಿವೆ. ಬದಲಾವಣೆಗೊಂಡಿರುವ, ಕಾಲಕ್ಕೆ ತಕ್ಕಂತೆ ರೂಪುಗೊಂಡು ನಿಂತಿರುವ ನಮ್ಮ ಆ ಶಾಲೆಯ ಹೊಸ ರೂಪ ಹಳೆಯ ರೂಪವನ್ನು ಒರೆಸಲಿಕ್ಕೆ ಎಷ್ಟೇ ಪ್ರಯತ್ನಪಟ್ಟರೂ, ಅದು ಸಾಧ್ಯವಾಗಲಿಲ್ಲ.

• ಈಗ ನನ್ನ ಗುರುಗಳಿಲ್ಲ. ಅವರು ಜ್ಞಾನವೃಕ್ಷದ ರೂಪದಲ್ಲಿ ನನ್ನೊಳಗೆಯೆ ಇದ್ದಾರೆ ಎನ್ನುವ ಅನುಭವ ಎಂಥ ಅದ್‌ಭುತ! ಗುರು ಎಂಬುದು ವ್ಯಕ್ತಿಯಲ್ಲ, ಅದೊಂದು ಶಕ್ತಿ ಎಂಬ ಮಾತು ಅನುಭವಿಸುವದು ಕೂಡ ಒಂದು ಭಾಗ್ಯ.

• ನನ್ನ ಶಾಲಾ ಗುರುಗಳು ಒಬ್ಬರೆ, ಹನುಮಂತರಾವ ಉಣಕಲಕರ. ಶುಭ್ರವಾದ ಧೋತರ, ಹಣೆಯ ಮೇಲೆ ಎರಡು ಬೆರಳಿನ ಕೆಂಪು ಬಣ್ಣದ ಗಂಧರೇಖೆಗಳು, ತೀಕ್ಷ್ಣವಾದ ನಜರು, ತಲೆಯ ಮೇಲೆ ಪಟಕಾ, ಕೊರಳಲ್ಲಿ ರುದ್ರಾಕ್ಷ ಮಾಲೆ, ಬಿಳಿ ಶರ್ಟಿನ ಮೇಲೆ ಕರಿ ಬಣ್ಣದ

ಕೋಟು. ಅತ್ಯಂತ ಆಕರ್ಷಕವಾದ ವ್ಯಕ್ತಿತ್ವ ಹೊಂದಿದವರು ನನ್ನ ಗುರುಗಳು. ಅವರಿಗೆ ಆವಾಗ ೫೮ ವಯಸ್ಸು. ನಾವೆಲ್ಲರೂ ಅವರಿಗೆ ದಾದಾ ಎಂದು ಕರೆಯುತ್ತಿದ್ದೆವು.

ಅವರು ಪಿ.ಡಬ್ಲ್ಯೂ.ಡಿ.ಯಲ್ಲಿ ಕ್ಲಾರ್ಕ್ ಆಗಿದ್ದರು. ನನ್ನ ತಂದೆಯವರು ಕೂಡ ಪಿ.ಡಬ್ಲ್ಯೂ.ಡಿ.ಯಲ್ಲಿ ಇದ್ದರು. ಹೀಗಾಗಿ ಅವರಿಬ್ಬರ ಪರಿಚಯವಿತ್ತು. ದಾದಾ ಅವರು ಒಬ್ಬ ಆಧ್ಯಾತ್ಮಿಕ ಶಕ್ತಿಯುಳ್ಳ ವ್ಯಕ್ತಿ ಇದ್ದಾರೆ, ಎಂದು ಗೊತ್ತಾದಾಗ, ನನ್ನ ತಂದೆ-ತಾಯಿ ಅವರನ್ನು ಹತ್ತಿರದಿಂದ ಕಂಡರು. ನಮ್ಮ ಮನೆಯಲ್ಲಿ ಆ ಕಾಲಕ್ಕೆ ಸಾಕಷ್ಟು ಕಷ್ಟಕಾರ್ಪಣ್ಯಗಳಿದ್ದವು, ನೆಮ್ಮದಿ ಇರಲಿಲ್ಲ. ಅಂಥ ಅನೇಕ ಕಾರಣಗಳಿಂದ ನನ್ನ ತಂದೆ ತಾಯಿಯವರು ಅವರನ್ನು ತಮ್ಮ ಗುರುಗಳನ್ನಾಗಿ ನಂಬಿದರು.

ದಾದಾರವರ ಸಲಹೆಯಂತೆ ನಮ್ಮಿಬ್ಬರನ್ನು (ನಾನು, ನನ್ನ ಅಣ್ಣ ಸಂಜೀವ) ಗುರುಪಾದಾರವಿಂದಗಳಲ್ಲಿ ಸಮರ್ಪಿಸಿದರು. ನನ್ನ ಶಾಲೆಯ ವೇಳೆ ಬೆಳಗ್ಗೆ ೬ ರಿಂದ ರಾತ್ರಿ ೯ ರ ವರೆಗೆ ಇತ್ತು. ಈಗ ಬಾಲವಾಡಿ, ಕೆ.ಜಿ., ಸೀನಿಯರ ಕೆ.ಜಿ. ಏನೇನೊ ಇವೆ. ಬಹುಶಃ ನಮ್ಮ ಶಾಲೆಯೂ ಅದರದ್ದೆ ಹಳೆಯ ಅವತಾರವಾಗಿರಬೇಕು. ಆದರೆ ಅಲ್ಲಿ ನಾವಿಬ್ಬರೆ ವಿದ್ಯಾರ್ಥಿಗಳು!

ನನ್ನ ಗುರುಗಳು ನನಗೆ ಮೂಲಾಕ್ಷರಗಳನ್ನು ಕಲಿಸಲೇ ಇಲ್ಲ. ಗುರುಗಳು ತಮ್ಮ ತೊಡೆಯ ಮೇಲೆ ಕೂಡಿಸಿಕೊಂಡು ನನ್ನ ಬೆರಳನ್ನು ಹಿಡಿದು ನೇರವಾಗಿ 'ಧರ್ಮಕ್ಷೇತ್ರೇ ಕುರುಕ್ಷೇತ್ರೇ' ಈ ಶ್ಲೋಕವನ್ನು ಕಲಿಸಲಾರಂಭಿಸಿದರು. ಭಗವದ್‌ಗೀತೆಯ ಇಡೀ ಹದಿನೆಂಟು ಅಧ್ಯಾಯಗಳು ಮತ್ತು ಶ್ರೀವಿಷ್ಣುಸಹಸ್ರನಾಮ ಇವುಗಳನ್ನು ಇದೇ ರೀತಿಯಲ್ಲಿ ಕಲಿಸಿದರು. ಸುಮಾರು ನಾಲ್ಕೈದನೆ ವರ್ಷದಲ್ಲಿ ಇಡೀ ಭಗವದ್‌ಗೀತೆ ನಮ್ಮಿಬ್ಬರಿಗೆ ಮುಖೋದ್‌ಗತವಾಯಿತು. ಆನಂತರ ನಮಗೆ ಆ ಗೀತೆಯ ಪುಸ್ತಕವನ್ನು ನೋಡಿ ಅದನ್ನು ತರ್ಜುಮೆ ಮಾಡುವ ಅಭ್ಯಾಸ ಹಾಕಿಕೊಟ್ಟರು. ಸಣ್ಣ ಮಕ್ಕಳು, ಆಡುವ ವಯಸ್ಸು, ಮಲಗುವ ವಯಸ್ಸು ಎಂದು ಕಸಿವಿಸಿಗೊಂಡು ದಾದಾರವರ ಮನೆಯವರು– ಅವರಿಗೆ ನಾವೆಲ್ಲರೂ ಆಈ ಎಂದು ಕರೆಯುತ್ತೇವೆ– ನಮಗೆ ತಿಂಡಿ ಕೊಡುವದು, ಆಟಿಗೆಯ ಸಾಮಾನ ಕೊಡುವದು ಇದೆಲ್ಲ ಮಾಡುತ್ತಿದ್ದರು. ದಾದಾರವರ ಮೂರು ಜನ ಗಂಡುಮಕ್ಕಳು ಸದಾನಂದ, ಶಿವಾನಂದ ಮತ್ತು ದಿಗಂಬರ ಹಾಗೂ ಮಗಳಾದ ಮೀರಾ ಅಕ್ಕಾ ಇವರೆಲ್ಲರೂ ನಮ್ಮನ್ನು ಮನೆಯ ಮಕ್ಕಳ ಹಾಗೆ ನೋಡಿಕೊಳ್ಳುತ್ತಿದ್ದರು.

ಪ್ರತಿ ವರ್ಷ ಗೀತಾಜಯಂತಿಯ ಕಾರ್ಯಕ್ರಮ ಆಚರಿಸುವಾಗ, ಧಾರವಾಡದ ಎಲ್ಲ ಶಾಲೆಗಳಲ್ಲಿ ನಮ್ಮಿಬ್ಬರನ್ನು ಕರೆಯುವ ಹುನ್ನಾರ ನಡೆಯುತ್ತಿತ್ತು. ಕರ್ನಾಟಕ ಹೈಸ್ಕೂಲ, ವಿದ್ಯಾರಣ್ಯ ಹೈಸ್ಕೂಲ, ಮದಿಹಾಳದ ಚಿದಂಬರ ಸೇವಾ ಸಮಿತಿ, ಶ್ರೀಶಂಕರಾಚಾರ್ಯ ಪಾಠಶಾಲೆ ಈ ಶಾಲೆಗಳಲ್ಲಿ ಹೋಗಿ ಭಗವದ್‌ಗೀತಾ ಕಂಠಪಾಠದ ರುಚಿಯನ್ನು ತೋರಿಸಿದೆವು. ನನಗೆ ಇನ್ನೂ ನೆನಪಿದೆ, ಒಂದು ವರ್ಷ ವಿದ್ಯಾರಣ್ಯ ಹೈಸ್ಕೂಲಿನಲ್ಲಿ ದ. ರಾ. ಬೇಂದ್ರೆಯವರು ಗೀತಾಜಯಂತಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದರು. ಅದು ಸುಮಾರು ೧೯೬೪ ನೇ ವರ್ಷ. ಅಲ್ಲಿಯ ವರೆಗೆ ನಮ್ಮಿಬ್ಬರ ಖ್ಯಾತಿ, 'ದಕ್ಷಿಣ ಭಾರತದ ಆಶ್ಚರ್ಯದ ಹುಡುಗರು' ಎಂದಾಗಿತ್ತು. ಏಕೆಂದರೆ, ನಾವು ಕೈಯಲ್ಲಿ ಪುಸ್ತಕವಿಲ್ಲದೆ ಭಗವದ್‌ಗೀತೆಯ

ಯಾವುದೇ ಅಧ್ಯಾಯದ ಯಾವುದೇ ಶ್ಲೋಕ, ಅನುಕ್ರಮ ಸಂಖ್ಯೆಯ ಸಮೇತ ಹೇಳುವಷ್ಟು ನೈಪುಣ್ಯತೆ ಪಡೆದಿದ್ದೆವು. ಆಗ ದ. ರಾ. ಬೇಂದ್ರೆಯವರ ಪಕ್ಕದಲ್ಲಿ ಕುಳಿತುಕೊಂಡ ನೆನಪುಗಳು ಈಗ ಅದಕ್ಕೆ ಬೇರೆಯೆ ಮಹತ್ವ ನೀಡುತ್ತವೆ.

- ಏಳನೆಯ ವಯಸ್ಸು ದಾಟಿದ ಮೇಲೆ ಒಂದು ದಿನ ಬೆಳಗ್ಗೆ ನಾಲ್ಕೂವರೆ ಗಂಟೆಗೆ ನನ್ನ ಗುರುಗಳು ಹಿತ್ತಲಿನ ಹಿಂಭಾಗದಿಂದ ನಮ್ಮ ತಾಯಿ ತಂದೆಯವರನ್ನು ಕರೆದು,(ಅವರ ಮತ್ತು ನಮ್ಮ ಮನೆಯ ನಡುವೆ ಒಂದು ದೊಡ್ಡ ಗಟಾರವಿತ್ತು. ಆದ್ದರಿಂದ ಎಷ್ಟೋ ಸಲ ಮಹತ್ವದ ಸುದ್ದಿಗಳನ್ನು ತಿಳಿಸಲು ಆ ಹಿತ್ತಲಿನ ಹಿಂಭಾಗವನ್ನೆ ಉಪಯೋಗಿಸುತ್ತಿದ್ದೆವು) ನಿಮ್ಮಿಬ್ಬರೂ ಮಕ್ಕಳ ಮುಂಜಿವೆ ಈ ವಾರದೊಳಗೆ ಆಗಲೇಬೇಕು ಎಂದು ಆಜ್ಞೆಯನ್ನು ಕೊಟ್ಟರು. ತಂದೆ-ತಾಯಿಯವರು ದಂಗುಬಡಿದರು. ನೆರೆಯವರನ್ನ, ಆಪ್ತರನ್ನ, ಸ್ನೇಹಿತರನ್ನ ಇಷ್ಟು ಕಡಿಮೆ ಸಮಯದಲ್ಲಿ ಹೇಗೆ ತಿಳಿಸುವದು, ಹೇಗೆ ತಯಾರಿ ಮಾಡುವದು, ಆಮಂತ್ರಣ ಪತ್ರಿಕೆ ಹೇಗೆ ಛಾಪಿಸುವದು ಇಂಥೆಲ್ಲ ಪ್ರಶ್ನೆಗಳಿಗೆ 'ಗುರುಗಳ ಆಜ್ಞೆ' ಇದೊಂದೆ ಉತ್ತರವಿತ್ತು.
- ಕೃಷ್ಣಾ ನದಿಯ ತೀರದಲ್ಲಿ ಸುಶಾಂತ ವಾತಾವರಣದಲ್ಲಿ ಔದುಂಬರ ಎಂಬ ತೀರ್ಥಕ್ಷೇತ್ರದಲ್ಲಿ ನಮ್ಮಿಬ್ಬರ ಮುಂಜಿವೆಯಾಯಿತು. ರಮ್ಯವಾದ ಕೃಷ್ಣಾ ನದಿ, ಅಲ್ಲಿನ ದೇವಸ್ಥಾನ, ತಪಸ್ವಿಗಳ ಗುಹೆ, ದಡವನ್ನು ದಾಟಿದಾಗ ಕಾಣಿಸುವ ಭುವನೇಶ್ವರಿ ದೇವಿಯ ದೇವಸ್ಥಾನ ಇವೆಲ್ಲ, ಇಂದಿಗೂ ನನ್ನ ವ್ಯಕ್ತಿಮತ್ವದ ಒಂದು ಅವಿಭಾಜ್ಯ ಅಂಗವಾಗಿವೆ.

ಮುಂಜಿವೆ ಮುಗಿಸಿಕೊಂಡು ಬಂದ ನಂತರ ದಾದಾರವರು ಸ್ವಲ್ಪ ಕಠೋರರಾದರು. ಅವರ ಕೈಯಲ್ಲಿ ಬೆತ್ತದ ಛಡಿ ಮತ್ತು ಕಾತಿಯ ಹಗ್ಗ ಕಾಣಿಸತೊಡಗಿತು. ಭಗವದ್‌ಗೀತೆಯ ಪಾಠಾಂತರ, ಅಲ್ಲಿಯ ವರೆಗೆ ಮುಗಿದು ಹೋದ ಕಥೆಯಾಗಿತ್ತು. ಈಗ ಋಗ್ವೇದ, ಸಂಧ್ಯಾವಂದನೆ, ರುದ್ರಾಧ್ಯಾಯ ಇವೆಲ್ಲ ನಮ್ಮ ಕಿವಿಗಳಲ್ಲಿ, ಕಣ್ಣುಗಳ ಮುಂದೆ ನರ್ತಿಸತೊಡಗಿದವು. ಬೆಳಿಗ್ಗೆ ೪ ಗಂಟೆಗೆ ನಮ್ಮನ್ನು ಎಬ್ಬಿಸಬೇಕು ಎಂದು ಕಠೋರ ಆಜ್ಞೆ ಇದ್ದಾಗ ನಮ್ಮ ತಂದೆ ತಾಯಿಯವರು ಅದನ್ನು ಮೀರುವದು ಸಾಧ್ಯವೆ ಇರಲಿಲ್ಲ.

ಇಡೀ ದಿನ ದತ್ತನ ಗುಡಿಯಲ್ಲಿ ಇರುವದು. ಮಳೆ ಬಂದಾಗ ಮಾತ್ರ ದಾದಾರವರ ಮನೆಯಲ್ಲಿ ಹೋಗುವದು. ಹಂಚಿನ ಛಪ್ಪರವಿದ್ದ ಆ ದತ್ತಮಂದಿರದ ಖಂಬಗಳು ಹಳೆಯದಾಗಿದ್ದವು. ಕೊಟ್ಟಿಗೆಯೂ ಹಳೆಯದಾಗಿತ್ತು. ಅದೆಲ್ಲವೂ ಸುಧಾರಣೆಗೊಳ್ಳುತ್ತಿತ್ತು. ದಾದಾರವರ ಒಂದು ಕೈಯಲ್ಲಿ ಜಪಮಾಲೆ, ಇನ್ನೊಂದು ಕೈಯಲ್ಲಿ ಛಡಿ, ಕಾತಿಯ ಹಗ್ಗವೊ, ಇದ್ದೇ ಇರುತ್ತಿತ್ತು. ಹೀಗಾಗಿ ನನ್ನ ಒಂದು ಕಣ್ಣು ಅವರ ಕೈಯನ್ನು ನೋಡುತ್ತಿದ್ದರೆ, ಇನ್ನೊಂದು ಕಣ್ಣು ಪುಸ್ತಕಗಳನ್ನು ನೋಡುತ್ತಿತ್ತು.

ಆ ಕಾಲದಲ್ಲಿ ಡಾ. ಬಿ. ಸಿ. ಪಾಟೀಲ ಎಂಬವರು ಭೂಸಪೇಟೆಯಲ್ಲಿ ಭಾರತೀಯ ಸಂಸ್ಕೃತ ಪಾಠಶಾಲೆ ನಡೆಸುತ್ತಿದ್ದರು. ಅವರಲ್ಲಿ ದಾದಾ ಅವರು ಸಂಸ್ಕೃತ ಕಲಿಸಲು ಬೆಳಿಗ್ಗೆ ಎರಡು ಗಂಟೆಗಳು, ಮತ್ತು ಮಧ್ಯಾಹ್ನ ಎರಡು ಗಂಟೆಗಳ ಕಾಲ ಹೋಗುತ್ತಿದ್ದರು. ಆಗ ನನಗೆ ಬಹಳ ಖುಶಿಯಾಗುತ್ತಿತ್ತು. ಯಾಕೆಂದರೆ ಅಷ್ಟು ಹೊತ್ತು ನನ್ನ ಸುತ್ತಲಿನ ಸರ್ಪಗಾವಲು ಸಡಿಲಿಸುತ್ತಿತ್ತು. ದಾದಾರವರ ಅನುಪಸ್ಥಿತಿಯಲ್ಲಿ ನಾವು— ನನ್ನಣ್ಣ, ದಾದಾರವರ ಚಿರಂಜೀವ

ದಿಗಂಬರ ಮತ್ತು ನಾನು– ಗೋಟಿ ಆಡಲು, ಚಿನ್ನಿದಾಂಡು ಆಡಲು ಆ ಸಮಯ ಉಪಯೋಗಿಸುತ್ತಿದ್ದೆವು! ದಾದಾರವರು ಬರುವ ಸಮಯ ಸಾಧಾರಣವಾಗಿ ಗೊತ್ತಾಗೆ ಬಿಟ್ಟಿತ್ತು. ಹೀಗಾಗಿ ಅವರು ಮನೆಗೆ ಮರಳುವ ಸಮಯದಲ್ಲಿ, ದೂರದಿಂದ ಕೇಳಿಬರುವ ಅವರ ಚಪ್ಪಲಿಗಳ ಕರ್‌ಕರ್ ಸಪ್ಪಳ ಕೇಳಿ ನಾನು ಅತ್ಯಂತ ಗಂಭೀರ ಮುದ್ರೆಯೊಂದಿಗೆ ವೇದಪಠಣ ಮಾಡಲಾರಂಭಿಸುತ್ತಿದ್ದೆ. ಒಂದು ದಿನ ನನ್ನ ಈ ಚತುರತೆ ಗೊತ್ತಾಗಿ ಅವರು ನಮ್ಮಿಬ್ಬರನ್ನು ಚೆನ್ನಾಗಿ ಥಳಿಸಿದರು. ಅವರು ಸಿಟ್ಟಾಗಿದ್ದು ನೋಡಿದರೆ, ಅವರಿಗೆ ಜಮದಗ್ನಿಯ ಆಧುನಿಕ ಅವತಾರ ಎಂದು ಕರೆಯುವದೆ ಸರಿ!

ಅವರು ಕೊಡುವ ಶಿಕ್ಷೆಗಳು ಕೂಡ ಬಹಳ ವಿಚಿತ್ರವಾಗಿದ್ದವು. ಅಂಗಾಲುಗಳನ್ನು ಹಿಡಿದು ಬೆತ್ತದ ಛಡಿಯಿಂದ ಹೊಡೆಯುವದು, ಕಾತಿಯ ಹಗ್ಗವನ್ನು ಮಡಿಚಿ ಅದರಿಂದ ಹೊಡೆಯುವದು, ಉಲಟಾ ಖುರ್ಚಿ (ಅಂದರೆ, ಎದ್ದು ನಿಂತು ಎರಡೂ ಮೊಣಕಾಲುಗಳ ನಡುವೆ ಗೋಣು ಹಾಕಿ ಎರಡು ಕೈಗಳಿಂದ ಕಿವಿಗಳನ್ನು ಹಿಡಿಯುವದು) ಇತ್ಯಾದಿ. ಇವೆಲ್ಲಕ್ಕೂ ಮಣಿಯದಿದ್ದಾಗ ನಮ್ಮಿಬ್ಬರಿಗೂ ಎದುರಿಗೆ ನಿಲ್ಲಿಸಿ, ಅವನು ನನ್ನ ಗಲ್ಲದ ಮೇಲೆ ಮತ್ತು ನಾನು ಅವನ ಗಲ್ಲದ ಮೇಲೆ ಹೊಡೆಯುವದು. ಇಂಥ ವಿಚಿತ್ರ ಶಿಕ್ಷೆಗಳನ್ನು ಅನುಭವಿಸುವದು ಸಾಕು ಅನಿಸಿದಾಗ, ನಾವು ನಮ್ಮ ವಿದ್ಯಾಭ್ಯಾಸ ಗಂಭೀರವಾಗಿ ತಗೊಂಡೆವು. ಋಗ್ವೇದವನ್ನು ಕಲಿಸಲು ಶ್ರೀ ಮಹಾದೇವ ಭಟ ಸಂಗಮ ಎಂಬವರು ದಾದಾರವರ ಮನೆಯಲ್ಲಿ ಬಂದು ವಾಸವಾಗಿದ್ದರು. ಆರು ಅಡಿ ಎತ್ತರದ, ಕೃಷ್ಣವರ್ಣದ ಆ ಸಂಗಮ ಗುರುಗಳು ನನ್ನ ಮೇಲೆ ಶುದ್ಧ ಉಚ್ಚಾರಗಳ ಉತ್ತಮ ಸಂಸ್ಕಾರಗಳನ್ನು ಮಾಡಿದರು. ಅವರ ಶುದ್ಧ ಉಚ್ಚಾರಗಳಿಗೆ ಮೋಹಿತನಾಗಿ ನಾನು ಋಗ್ವೇದದ ಅಭ್ಯಾಸ ಆಸ್ಥೆಯಿಂದ ಮುಂದುವರಿಸಿದೆ.

● ಬರೆಯುವದು ಇದೊಂದು ಅಭ್ಯಾಸದ ಉತ್ತಮ ತಂತ್ರ ಎಂದು ದಾದಾ ನಂಬಿದ್ದರು. ಶುದ್ಧ ಉಚ್ಚಾರಣೆ ಅತ್ಯಂತ ಆವಶ್ಯಕ ಎಂದು ಅವರ ಆಗ್ರಹವಿತ್ತು. ಹೀಗಾಗಿ ಜೋರಾಗಿ ಓದುವದು ಮತ್ತು ದಿನದ ಆರಾರು ಗಂಟೆಗಳ ವರೆಗೆ ಬರೆಯುವದು ಇದೊಂದು ಒಳ್ಳೆಯ ಶಿಕ್ಷೆಯೆ ಆಗಿರುತ್ತಿತ್ತು. ಬರೆಯುವುದನ್ನು ತಪ್ಪಿಸಬೇಕೆಂದು ನಾನು ಬೇಕಂತಲೆ, ನಿಬ್ಬಗಳನ್ನು (ಆವಾಗ ಮಸಿಯ ಸೀಸೆಯಲ್ಲಿ ಎದ್ದಿ ಬರೆಯುವ ಟಾಕಗಳು ಇರುತ್ತಿದ್ದವು) ಮುರಿಯುತ್ತಿದ್ದೆ. ಆಗ ಬೇಜಾರಾಗದೆ ದಾದಾ ನನಗೆ ಮೂರು ಪೈಸೆ ಕೊಟ್ಟು ಆರು ನಿಬ್ಬಗಳನ್ನು ತರಲು ಹೇಳುತ್ತಿದ್ದರು. ಆ ಆಟವೂ ನಡೆಯದಾದಾಗ ಬರೆಯುವದೆ ಒಳ್ಳೆಯದು ಎನಿಸಿತು. ಹೀಗಾಗಿ ಋಗ್ವೇದವನ್ನು ಸುಮಾರು ೧೨ ಸಲವಾದರೂ ಬರೆದು ತೆಗೆದೆ. ಏತನ್ಮಧ್ಯೆ ಸಿದ್ಧಾಂತಕೌಮುದೀ ಎಂಬ ಸಂಸ್ಕೃತ ವ್ಯಾಕರಣಗ್ರಂಥ ಕೂಡ ಬರೆಯುವ ಅಭ್ಯಾಸ ಕೊಟ್ಟರು. ಇಡೀ ಸಿದ್ಧಾಂತಕೌಮುದಿಯನ್ನು ಬರೆಯುವ ಆಭ್ಯಾಸ ಕೊಟ್ಟರು. ಇಡೀ ಸಿದ್ಧಾಂತ ಕೌಮುದಿಯನ್ನು ನಾಲ್ಕೈದು ಸಲ ಬರೆದು ತೆಗೆದಿದ್ದು ನೆನಪಿದೆ. ಅದರ ಜೊತೆಗೆನೆ ತರ್ಖಡಕರ ಭಾಷಾಂತರ ಮಾಲೆಯ ಮೂರು ಭಾಗಗಳು, ರೆನ್ ಆ್ಯಂಡ್ ಮಾರ್ಟಿನ್ ಇಂಗ್ಲಿಷ್ ಗ್ರಾಮರ್ ಇವೆಲ್ಲ ಗ್ರಂಥಗಳನ್ನು ಬರೆದು ಬರೆದು ಅದರ ಸ್ವಲ್ಪ ಪ್ರಯೋಜನ ಕಂಡುಬಂದಿತು. ಹೀಗೆ ಒಬ್ಬ ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವಕ್ಕೆ ಬೇಕಾಗುವ ಎಲ್ಲ ಅಂಶಗಳನ್ನು ದಾದಾರವರು ನನಗೆ ಕಲಿಸಿದರು.

• ನಮ್ಮ ಶಾಲೆಯ ಎಡಭಾಗದಲ್ಲಿ ಒಂದು ಸಾಕಷ್ಟು ಉದ್ದ ಮತ್ತು ಅಗಲವಾದ ಕೋಣೆ ಇತ್ತು. ಆ ಕೋಣೆಯಲ್ಲಿ ಉರುವಲು ಕಟ್ಟಿಗೆ ಒಟ್ಟುವದು ಅವರ ಒಂದು ಚಟ. ಶಿವಾಜಿ ರಸ್ತೆಯಲ್ಲಿ ಪಿ. ಜಿ. ಕುಲಕರ್ಣಿ ಎಂಬವರು ಕಟ್ಟಿಗೆ ಅಡ್ಡೆಯ ಮಾಲಿಕರು ಅವರ ಪರಿಚಿತರು. ಹಾವೇರಿಪೇಟೆಯ ಇಸ್ಮೈಲ್ ಅನ್ನುವ ಒಬ್ಬ ಜಂಗಲ ಕಂತ್ರಾಟದಾರ ಇವರ ಪರಿಚಯದವರು. ಇವರಿಬ್ಬರ ಕಡೆಯಿಂದ ದಾದಾ ಕಟ್ಟಿಗೆ ತರಿಸುತ್ತಿದ್ದರು. ಕಟ್ಟಿಗೆಯಿಂದ ತುಂಬಿದ ಟ್ರಕ್ಕು ಬಂದು ನಿಂತಾಗ ಹಗಲು ರಾತ್ರಿ ಅನ್ನದೇ, ನಮ್ಮ ಮನೆಯವರೆಲ್ಲರೂ, ದಾದಾರವರ ಮನೆಯವರೆಲ್ಲರೂ ಅವುಗಳನ್ನು ಆ ಕೋಣೆಯಲ್ಲಿ ಒಟ್ಟುತ್ತಿದ್ದೆವು. ಆಗ ನನಗಂತೂ ಮನಸ್ಸಿನಲ್ಲಿ ಬಹಳಷ್ಟು ಖುಶಿಯಾಗುತ್ತಿತ್ತು. ಯಾಕೆಂದರೆ, ಕಟ್ಟಿಗೆ ಬಂದ ನಂತರ ಅವುಗಳನ್ನು ಒಡೆಯುವದು ಒಂದು ದೊಡ್ಡ ಕಾರ್ಯಕ್ರಮ. ಚಾಣಾ, ಘನ್ನು, ಕೊಡಲಿ ಇವುಗಳ ಸಹಾಯದಿಂದ ದೊಡ್ಡ ದೊಡ್ಡ ಬಡ್ಡೆಗಳನ್ನು ಒಡೆಯುವದೆಂದರೆ, ಖುಶಿಯೆ ಖುಶಿ. ಯಾಕೆಂದರೆ ಆ ಸಮಯದಲ್ಲಿ ಬರೆ, ಓದು, ಕಂಠಪಾಠ ಮಾಡು ಇವೇನೂ ಇರುತ್ತಿರಲಿಲ್ಲ. ಅವರ ಮಗ ದಿಗಂಬರ, ನನ್ನ ಅಣ್ಣ ಸಂಜೀವ ಮತ್ತು ನಾನು, ಈ ಕಾರ್ಯಕ್ರಮದಲ್ಲಿ ಬಹಳ ಆಸಕ್ತಿ ತಗೊಳ್ಳುತ್ತಿದ್ದೆವು.

ನಮ್ಮ ಶಾಲೆಯ ಆವರಣ ಬಹಳ ದೊಡ್ಡದಲ್ಲ. ಆದರೆ, ಸಣ್ಣದೂ ಅಲ್ಲ. ಮಣ್ಣಿನ ಗೋಡೆಗಳಿಂದ ಕಟ್ಟಲಾಗಿದ್ದ ಆ ಮನೆ ಬಹಳ ಹಳೆಯದಾಗಿತ್ತು. ಹಾಗಾಗಿ ಮೇಲಿಂದ ಮೇಲೆ ಮಣ್ಣಿನಲ್ಲಿ ಒಣ ಹುಲ್ಲುಕಡ್ಡಿಗಳನ್ನು ಕೂಡಿಸಿ, ಅವುಗಳನ್ನು ಮೆತ್ತುವದು, ಹಳೆಯಾದ ಖಂಬಗಳನ್ನು ಬದಲಿ ಮಾಡಿ ಅವುಗಳನ್ನು ಹೊಸದಾಗಿ ಸೇರಿಸುವದು. ಹೀಗೆ ಮಣ್ಣು, ಕಲ್ಲು, ಸಿಮೆಂಟ ಮತ್ತು ಇಟ್ಟಂಗಿಗಳ ಜೊತೆ ಆಡುವ ಭಾಗ್ಯವು ನನಗೆ ದೊರಕಿತು! ನಂತರ ಕೆಲವು ಸಲ ಹಳೆಯ ಬಾಗಿಲುಗಳು ಮುರಿದಾಗ ಅದಕ್ಕೆ ಪಟ್ಟಿಗಳನ್ನು ಜೋಡಿಸಿ ಕಟ್ಟಿಗೆಯ ಪ್ಯಾಚ್‌ವರ್ಕ್ ಕೂಡ ಮಾಡಿದ್ದಿದೆ.

ಇದೆಲ್ಲ ಶಿಕ್ಷಣ ಒಂದೆಡೆ ಇದ್ದರೆ, ಇನ್ನೊಂದು ಕಡೆ ಬೆಳಿಗ್ಗೆ ಆರು ಗಂಟೆಗೆ ದತ್ತದೇವಸ್ಥಾನದಲ್ಲಿನ ಪಾದುಕೆಗಳಿಗೆ ರುದ್ರಾಭಿಷೇಕ ಆಗಲೇಬೇಕು. ನಂತರ ಸೂರ್ಯನಮಸ್ಕಾರಗಳು, ಆನಂತರ ಜಪ, ಈ ರೀತಿಯ ಪ್ರಾತಃಕಾಲದ ದಿನಚರ್ಯೆ ಇದ್ದರೆ, ಮಧ್ಯಾಹ್ನದ ವೇಳೆ ಋಗ್ವೇದ, ಸಂಸ್ಕೃತ ವ್ಯಾಕರಣ, ಇಂಗ್ಲೀಷ ವ್ಯಾಕರಣ ಇವುಗಳ ಅಧ್ಯಯನ ನಡೆಯಲೇಬೇಕಾಗುತ್ತಿತ್ತು. ಚಿಕ್ಕ ವಯಸ್ಸಿನಲ್ಲಿ ಬೇಕಾಗಿರುವ ಆಟ ನಮ್ಮ ಪಾಲಿಗೆ ರಾಜಮಾರ್ಗದಿಂದ ಬರಲಿಲ್ಲ. ಇಡೀ ದಿನ ಬರೆಯುವದು, ಓದುವದು ಇವರಲ್ಲಿಯೆ ಕಳೆಯುತ್ತಿತ್ತು.

• ನನ್ನ ಬಟ್ಟೆಗಳೆಂದರೆ, ಒಂದು ಉಡುವ ಧೋತರ, ಮೇಲೆ ಹೊತ್ತುಕೊಳ್ಳಲು ಉಪರಣೆ. ತಲೆಯ ಮೇಲೆ ಕೂದಲು ಬೆಳೆಸುವ ಹಾಗೆ ಇಲ್ಲ. ಶಿಖಾ ಮಾತ್ರ ಬೆಳೆಸಬೇಕು. ಹದಿನೈದು ದಿನಗಳಿಗೊಮ್ಮೆ ತಲೆ ಬೋಳಿಸಿಕೊಳ್ಳಲೇಬೇಕಾಗಿತ್ತು. ಹೀಗಾಗಿ ಬಾಹ್ಯ ಜಗತ್ತಿನ ಸಂಪರ್ಕವೇ ನನಗಿರಲಿಲ್ಲ. ಮನೆಯಿಂದ ಬೆಳಗ್ಗೆ ಆರು ಗಂಟೆಗೆ ಬರುವದು, ಊಟಕ್ಕಾಗಿ ಮಧ್ಯಾಹ್ನ

ಒಂದು ಗಂಟೆ ಬಿಡುವು; ಮತ್ತೆ ಮಧ್ಯಾಹ್ನದಿಂದ ರಾತ್ರಿ ಒಂಬತ್ತರ ವರೆಗೆ ನಮ್ಮ ಶಾಲೆ ಮತ್ತು ನನ್ನ ಗುರುಗಳು!

'ಭಾರತೀಯ ವಿದ್ಯಾಭವನ ಮುಂಬಯಿಯ ಪ್ರಾರಂಭ, ಪ್ರವೇಶ, ಪರಿಚಯ ಮತ್ತು ಕೋವಿದ ಈ ಸಂಸ್ಕೃತ ಪರೀಕ್ಷೆಗಳ ತಯಾರಿ ಮಾಡಿಕೊಳ್ಳುವಾಗ ದಾದಾ ಅವರು ನಮಗೆ ಸಂಸ್ಕೃತ ಮಹಾಕಾವ್ಯಗಳನ್ನು, ವೃತ್ತರತ್ನಾಕರ, ದಶಕುಮಾರಚರಿತ, ಸಿದ್ಧಾಂತಕೌಮುದೀ ಇವುಗಳನ್ನು ಕಲಿಸುತ್ತಿದ್ದರು. 'ಸಾಹಿತ್ಯ' ಪರೀಕ್ಷೆಯ ತಯಾರಿ ಮಾಡುವಾಗ ತರ್ಕಶಾಸ್ತ್ರ ಈ ವಿಷಯ ಕಲಿಯಲು ನಮಗೆ ಕೆಲ ಸಲ ಸಂಸ್ಕೃತ ಪಾಠಶಾಲೆಯಲ್ಲಿ ಪಂ. ಪ್ರ. ಭಾಲಚಂದ್ರಶಾಸ್ತ್ರಿಯವರಲ್ಲಿ, ಕೆಲ ಸಲ ಚಿದಂಬರ ಸೇವಾ ಸಮಿತಿಯ ಪ. ಪೂ. ಅರವಿಂದ ದೀಕ್ಷಿತ ಇವರಲ್ಲಿ ಕಳಿಸುತ್ತಿದ್ದರು. ಆದರೆ, ದುರ್ದೈವವಶಾತ್ ತರ್ಕಶಾಸ್ತ್ರವು ನಮ್ಮ ಪಾಲಿಗೆ ಪಕ್ವಾನ್ನ ಆಗಲೇ ಇಲ್ಲ. ಸಂಸ್ಕೃತ ಸಾಹಿತ್ಯ ಪರೀಕ್ಷೆಯಲ್ಲಿ ನಾವು ಅದೇ ವಿಷಯದಲ್ಲಿ ನಾಪಾಸಾದೆವು. ನಾಪಾಸಾಗುವ ಕಹಿ ರುಚಿ ಆಗ ಅನುಭವಿಸಿದೆವು. ಈ ರೀತಿ ಸಂಸ್ಕೃತ ಭಾಷೆಯ ಶ್ರೀಮಂತಿಕೆಯನ್ನು ಪರಿಚಯಿಸುತ್ತ ದಾದಾ ಅವರು ನಮಗೆ ಅದೇ ಮಾರ್ಗದಲ್ಲಿ ಮುಂದುವರಿಸಬೇಕೆಂಬ ವಿಚಾರದಲ್ಲಿದ್ದರು.

ಜ್ಯೋತಿಷ ಶಾಸ್ತ್ರದಲ್ಲಿ ದಾದಾರವರು ಒಳ್ಳೆಯ ಖ್ಯಾತಿಯನ್ನು ಪಡೆದಿದ್ದರು. ಸಂಕಷ್ಟದಲ್ಲಿರುವವರು, ಮನೆತನದ ಜಗಳಗಳಿದ್ದವರು, ಮಕ್ಕಳಿಲ್ಲದವರು ಹೀಗೆ ಅನೇಕ ದುಃಖತಪ್ತರು ದಾದಾರವರ ಕಡೆಗೆ ಬರುತ್ತಿದ್ದರು. ದುಃಖಿತರು ಬಂದಾಗ ಅವರ ದುಃಖನಿವಾರಣೆಗಾಗಿ ಏನಾದರೊಂದು ಉಪಾಯ ಹೇಳೇ ಹೇಳುತ್ತಿದ್ದರು. ಶ್ರದ್ಧೆಯಿಂದ ನಡೆದುಕೊಂಡವರಿಗೆ ಅದರ ಫಲ ಸಿಕ್ಕೇ ಸಿಗುತ್ತಿತ್ತು. ಹೀಗಾಗಿ ದಾದಾರವರು ಓರ್ವ ಸಂತರೂ ಆಗಿದ್ದರು. ಶ್ರೀದತ್ತಾತ್ರೇಯರ ಕೃಪಾಪಾತ್ರರಾಗಿದ್ದ ಅವರಿಗೆ ಅನೇಕ ದೈವೀ ಅನುಭವಗಳು ಬಂದಿದ್ದವು. ರಾಯಚೂರ ಜಿಲ್ಲೆಯಲ್ಲಿರುವ 'ಕುರ್ವಾಪೂರ' ಇದು ಶ್ರೀಪಾದ ಶ್ರೀವಲ್ಲಭರವರ ತೀರ್ಥಕ್ಷೇತ್ರವಾಗಿದೆ. ಅದು ದಾದಾರವರ ಶ್ರದ್ಧಾಸ್ಥಾನವಾಗಿತ್ತು. ಅನೇಕ ಸಲ ಅವರು ಸಂಕಷ್ಟದಲ್ಲಿ ಸಿಕ್ಕಿಕೊಂಡಾಗ ಅಲ್ಲಿ ಹೋಗುತ್ತಿದ್ದರು. ದಿವ್ಯ ಅನುಭೂತಿಗಳನ್ನು ಪಡೆದುಕೊಂಡು ಬರುತ್ತಿದ್ದರು. ದುಃಖಿತಸ್ಥರು, ಪೀಡಿತರು ಬಂದಾಗ ಮೊದಲಿಗೆ ಅವರ ಜನ್ಮಕುಂಡಲಿ ಬರೆಯುತ್ತಿದ್ದರು. ದಾದಾರವರಲ್ಲಿ ಸುಮಾರು ಒಂದು ನೂರು ಇಪ್ಪತ್ತು ವರ್ಷಗಳಷ್ಟು ಹಳೆಯ ಪಂಚಾಂಗಗಳಿದ್ದವು. ಜನ್ಮಕುಂಡಲಿ ಬರೆಯುವದು ಹೇಗೆ ಎನ್ನುವದು ನನಗೆ ಕಲಿಸಿಕೊಟ್ಟಿದ್ದರು. ನಂತರ ನಂತರವಂತೂ ನಾನು ಬರೆದ ಜನ್ಮಕುಂಡಲಿ ನೂರಕ್ಕೆ ನೂರು ಸರಿ ಎಂದು ಅವರು ಹೆಮ್ಮೆಯಿಂದ ಹೇಳುತ್ತಿದ್ದರು. ಅವರು ಮಾಡಿದ ಅಖಂಡ ಸಾಧನೆಯಿಂದ ಅವರಿಗೆ ದೈವೀ ಕೃಪೆಯಾಗಿ ಭವಿಷ್ಯ ಹೇಳುವ ಸಾಮರ್ಥ್ಯ ಅವರು ಪಡೆದಿದ್ದರು. ಹೀಗಾಗಿ ದಾದಾರವರ ಮಹಿಮೆ, ಹಿರಿಮೆ ಆ ಹುಚ್ಚು ವಯಸ್ಸಿನಲ್ಲಿ ನನಗೆ ಗೊತ್ತಾಗಲೇ ಇಲ್ಲ.

ದಾದಾರವರ ಶಿಸ್ತು ಅಂದರೆ ಬಹಳ ಕಠೋರ. ಅವರು ಸಮಯಕ್ಕೆ ಬಹಳಷ್ಟು ಮಹತ್ವ ನೀಡುತ್ತಿದ್ದರು. ಹೇಳಿದ ಸಮಯದಲ್ಲಿ ಒಂದು ನಿಮಿಷ ಹೆಚ್ಚು ಕಡಿಮೆ ಆದಾಗ ಅವರ

ಕೋಪ ನೆತ್ತಿಗೇರುತ್ತಿತ್ತು. ಮತ್ತು ಬೈಗುಳಗಳ ಸುರಿಮಳೆಯಾಗುತ್ತಿತ್ತು. ಆದರೆ. ನಂತರ ಕೋಮಲ ಅಂತಃಕರಣದ ಅವರು ನಗುತ್ತ ನಮ್ಮನ್ನು ಸಮೀಪಕ್ಕೆ ತಗೊಂಡು ಲಾಲಿಸುತ್ತಿದ್ದರು.

ನಾನು ಚಿಕ್ಕವನಿದ್ದಾಗ ಅವರು ನನಗೆ ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ನನ್ನ ಹಣೆಗೆ ಗಂಧ ಹಚ್ಚಿದ್ದು ಈಗಲೂ ಪ್ರತಿದಿನ ಬೆಳಗ್ಗೆ ನೆನಪಿಗೆ ಬರುತ್ತದೆ.

• ನಮ್ಮ ತಂದೆ ತಾಯಿಯವರು ನಮ್ಮ ಬಗ್ಗೆ ನಿಶ್ಚಿಂತವಾಗಿದ್ದರು ಸರಿ. ಆದರೆ, ನಮ್ಮ ಆಪ್ತಬಾಂಧವರು ನಮ್ಮ ಬಗ್ಗೆ, ನಮ್ಮ ಭವಿತವ್ಯದ ಬಗ್ಗೆ ಅಸ್ವಸ್ಥಗೊಂಡಿದ್ದರು. ಅವರು ನಮ್ಮ ತಂದೆ ತಾಯಿಯವರಿಗೆ ಪದೇ ಪದೇ ಬೈಯುತ್ತಿದ್ದರು, ನೀವು ನಿಮ್ಮ ಮಕ್ಕಳನ್ನು ಬರೆ ಸಂಸ್ಕೃತ ಕಲಿಸಿ ಅವರ ಭವಿಷ್ಯವನ್ನೇ ಹಾಳ ಮಾಡಿಬಿಟ್ಟಿರಿ. ಈ ಮಾತುಗಳನ್ನು ಕೇಳಿ ನಮ್ಮ ತಂದೆ ತಾಯಿ ದಾದಾರವರ ಕಡೆಗೆ ಬಂದರು. ಲೋಕಾಪವಾದವನ್ನು ಕೇಳಿ ದಾದಾರವರು ನಮ್ಮ ಲೌಕಿಕ ಶಿಕ್ಷಣದ ವ್ಯವಸ್ಥೆಯನ್ನು ಮಾಡತೊಡಗಿದರು.

ಆಗ ನನ್ನ ವಯಸ್ಸು ೧೭. ಆಗ ಒಂದು ನಿಯಮವಿತ್ತು. ಶಾಲೆಗೆ ಹೋಗದೆ ಇರುವವರು ತಮ್ಮ ೧೮ ನೇ ವಯಸ್ಸಿನ ನಂತರ ನೇರವಾಗಿ ಮೆಟ್ರಿಕ್ ಪರೀಕ್ಷೆಯನ್ನು ಬರೆಯಬಹುದಾಗಿತ್ತು. ಕರ್ನಾಟಕ ಹೈಸ್ಕೂಲದಲ್ಲಿ ಶ್ರೀ ವ್ಹಿ. ಬಿ. ಕುಲಕರ್ಣಿ, ಶ್ರೀ ಜಿ. ಸಿ. ಇನಾಮದಾರ ಮಾಸ್ತರ ಇವರ ಸಲಹೆಯನ್ನು ಪಡೆದು ಆಗಿನ ರಾಷ್ಟ್ರಪತಿಗಳಿಗೆ ಮತ್ತು ರಾಜ್ಯಪಾಲರಿಗೆ ಪತ್ರಗಳನ್ನು ಬರೆದು ವಿಶೇಷ ಪರವಾನಿಗೆ ತಗೊಂಡು ಮೆಟ್ರಿಕ್ ಪರೀಕ್ಷೆಗೆ ಕೂಡುವ ಅವಕಾಶ ಮಾಡಿಕೊಟ್ಟರು. ಕರ್ನಾಟಕ ಹೈಸ್ಕೂಲದಲ್ಲಿ ಪರೀಕ್ಷಾ ಕೇಂದ್ರವಿತ್ತು.

ಗಣಿತ, ಇಂಗ್ಲೀಷ, ಸಂಸ್ಕೃತ, ವಿಜ್ಞಾನ, ಸಮಾಜಶಾಸ್ತ್ರ ಮತ್ತು ಹಿಂದೀ ಈ ವಿಷಯಗಳನ್ನು ತಗೊಂಡು ಪರೀಕ್ಷೆಯ ಫಾರ್ಮಗಳನ್ನು ತುಂಬಿದೆವು. ಆದರೆ, ಈ ವಿಷಯಗಳನ್ನು ಕಲಿಸುವವರು ಯಾರು, ಎಂಬ ಪ್ರಶ್ನೆ ಬಂದಾಗ ದಾದಾರವರು ಅದರ ಜವಾಬ್ದಾರಿಯನ್ನು ತಾವೆ ವಹಿಸಿಕೊಂಡರು. ಅವರು ಎಲ್ಲ ವಿಷಯದ ಪುಸ್ತಕಗಳನ್ನು ತರಿಸಿ ನಮಗೆ ಅದನ್ನು ಬರೆಸಲಾರಂಭಿಸಿದರು. ನಾವು ಬೇರೆಯವರ ಕಡೆ ಆ ವಿಷಯಗಳನ್ನು ಹೇಳಿಸಿಕೊಳ್ಳಲು ಹೋಗುತ್ತೇವೆಂದರೆ, ಅದಕ್ಕೆ ಅವರು ಒಪ್ಪುತ್ತಿರಲಿಲ್ಲ. ನಮಗಂತೂ ಅವರು ಹೇಳಿದ ಗಣಿತ ತಿಳಿಯುತ್ತಿರಲಿಲ್ಲ. ಹೀಗಾಗಿ ರಾತ್ರಿ ಒಂಬತ್ತರ ನಂತರ ಮನೆಗೆ ಬಂದು ಊಟ ಮುಗಿಸಿ, ಹಳೆ ತಾಲೂಕ ಕಚೇರಿಯಲ್ಲಿ ಇರುತ್ತಿದ್ದ ಗಣಿತದ ಉತ್ತಮ ಶಿಕ್ಷಕರಾಗಿದ್ದ ಶ್ರೀ ಎಸ್. ಬಿ. ಕುಲಕರ್ಣಿ ಇವರಲ್ಲಿ ಗಣಿತ ವಿಷಯ ಕಲಿಯಲಿಕ್ಕೆ ಹೋಗುತ್ತಿದ್ದೆವು. ನಮ್ಮ ಗುರುಗಳಿಂದ ಮುಚ್ಚಿಟ್ಟು ಪಡೆದ ವಿದ್ಯೆ ಗಣಿತ ಒಂದೆ! ಇನ್ನಿತರ ವಿಷಯಗಳ ತಯಾರಿ ಮಾಡಿಕೊಂಡು ಮೆಟ್ರಿಕ್ ಪರೀಕ್ಷೆ ಬರೆಯಲು ನಮ್ಮನ್ನು ಕಳಿಸಿದರು.

ಪರೀಕ್ಷೆಯ ಪರಿಣಾಮ ಬಂದಾಗ ಶೇಕಡಾ ಅರವತ್ತೆಂಟರಷ್ಟು ಗುಣಗಳನ್ನು ಪಡೆದದ್ದನ್ನು ನೋಡಿ ದಾದಾರವರು ನಮ್ಮ ತಂದೆ ತಾಯಿಯವರಿಗೆ ಹೇಳಿದರು, 'ಈಗ ನನ್ನ ಜವಾಬ್ದಾರಿ ಮುಗಿಯಿತು. ಇನ್ನು ಮುಂದೆ ನೀವು ನೋಡಿಕೊಳ್ಳಿರಿ.'

ಒಂದೇ ಸಮಯಕ್ಕೆ ಕೃತಾರ್ಥತೆ ಮತ್ತು ಜ್ಞಾನದಾನದ ಕಾರ್ಯ ಅರ್ಧಕ್ಕೆ ಬಿಟ್ಟಿರುವುದರ ಬಗ್ಗೆ ದುಃಖ. ಈ ಭಾವನೆಗಳಿಂದ ದಾದಾರವರು ಅಸ್ವಸ್ಥಗೊಂಡರು. ಆದರೂ ಎಂಟ್ಹತ್ತು ದಿನಗಳಲ್ಲಿ ಅವರ ಸಿಟ್ಟು ಕಡಿಮೆಯಾಯಿತು.

• ದಾದಾರವರು ಜನರ ಪೀಡೆಗಳನ್ನು ಪರಿಹರಿಸುತ್ತಿದ್ದರು. ಆದರೆ, ಅವರ ತಮ್ಮದೇ ಪೀಡೆಗಳನ್ನು ಪರಿಹರಿಸುವದು ಅವರಿಗೆ ಸಾಧ್ಯವಾಗಲಿಲ್ಲ. ಅವರ ಹಠಮಾರಿತನದ ಸ್ವಭಾವದಿಂದ ತಮ್ಮ ತಮ್ಮಂದಿರೊಂದಿಗೆ ಕೋರ್ಟ ಕಚೇರಿ, ಹೊಲದ ಬಗೆಗಿನ ಕೆಲ ಖಟ್ಲೆಗಳನ್ನು ಎದುರಿಸುವದು, ಸಣ್ಣಪುಟ್ಟ ಕಾರಣಗಳಿಗೆ ಸರಕಾರಿ ಅಧಿಕಾರಿಗಳ ಮೇಲೆ ತಕರಾರುಗಳನ್ನು ಮಾಡುವದು ಇದರಲ್ಲೆ, ಅವರ ಇಡೀ ಜೀವನ ಕಳೆಯಿತು. ತತ್ವಕ್ಕೆ ಚ್ಯುತಿ ಬರದೆ, ತತ್ವನಿಷ್ಠರಾಗಿ ಬಾಳುವ ಜನರಿಗೆ ಈ ಸಮಾಜ, ಮಾನಸಿಕ ವಿವಂಚನೆಯನ್ನು ಬಿಟ್ಟರೆ, ಬೇರೆ ಏನೂ ಕೊಟ್ಟಿಲ್ಲ. ಆದರೆ, ದಾದಾರವರ ವೈಶಿಷ್ಟ್ಯವೆಂದರೆ, ಇಷ್ಟೆಲ್ಲಾ ಪ್ರಸಂಗಗಳಲ್ಲಿ ಅವರು ತಮ್ಮ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಲಿಲ್ಲ. ಸ್ವಲ್ಪ ಅನ್ಯಾಯ ಕೂಡ ಸಹಿಸದೆ, ಎದೆಗಾರಿಕೆಯಿಂದ ವರ್ತಿಸುವ ಛಲದಿಂದ ಅವರು ಅನೇಕ ಶತ್ರುಗಳನ್ನು ನಿರ್ಮಿಸಿದರು. ಆದರೆ, ಆ ಶತ್ರುಗಳೆ, ನಂತರ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಅವರಿಗೆ ಶರಣು ಬಂದರು.

ಕೋರ್ಟಗಳಿಗೆ, ಭೂಕಂದಾಯ ಇಲಾಖೆಗೆ, ಮಹಾನಗರಪಾಲಿಕೆಗೆ, ಪರ ಊರಿನ ವಿವಿಧ ಧಾರ್ಮಿಕ ಮತ್ತು ಯೋಗ ಸಂಸ್ಥೆಗಳಿಗೆ ಸಾಕಷ್ಟು ಪತ್ರಗಳನ್ನು, ಅರ್ಜಿಗಳನ್ನು ಬರೆಯುವ ಒಂದು ಚಟಾನೆ ಅವರದಾಗಿತ್ತು. ಹೀಗಾಗಿ ಎಲ್ಲಿಯಾದರೂ ಪತ್ರ, ಅರ್ಜಿ ಬರೆಯಬೇಕಾದರೆ, ಅದನ್ನು ನಾನೆ ಬರೆಯಬೇಕು. ಅವರು ಹೇಳುವದು, ನಾನು ಬರೆಯುವದು. ಈ ರೀತಿ ಪತ್ರಲೇಖನ, ಅರ್ಜಿ ಬರೆಯುವದು, ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿನ ಪತ್ರವ್ಯವಹಾರ; ಕೋರ್ಟಿನಲ್ಲಿ ನಡೆಯುವ ಎಲ್ಲ ತರಹದ ಚಟುವಟಿಕೆಗಳು ನನಗೆ ಸಮೀಪದಿಂದ ನೋಡುವ ಅವಕಾಶ ಸಿಕ್ಕಿತು!

ನನ್ನಲ್ಲಿ ವ್ಯಾವಹಾರಿಕ ಜಾಣತನ ಎಷ್ಟಿದೆ ಗೊತ್ತಿಲ್ಲ. ಆದರೆ, ಪ್ರಾಮಾಣಿಕತನದಿಂದ ಬದುಕುವದು ಹೇಗೆ, ಕಠಿಣ ಸಮಯದಲ್ಲಿ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವದು ಹೇಗೆ, ಪರರ ಪೀಡೆಯನ್ನು ಅರ್ಥ ಮಾಡಿಕೊಂಡು ಅದನ್ನು ಪ್ರತಿಕ್ರಿಯಿಸುವದು ಹೇಗೆ, ಇವೆಲ್ಲವನ್ನು ನಾನು ಅವರಿಂದ ಕಲಿತುಕೊಂಡೆ.

ಲೇಖನ, ವಾಚನ, ಸುಂದರ ಹಸ್ತಾಕ್ಷರ, ಶುದ್ಧ ಉಚ್ಚಾರಣೆ, ಸ್ವಲ್ಪ ಮಟ್ಟಿಗೆ ಹಾಡುಗಾರಿಕೆ ಇವೆಲ್ಲವೂ, ಅವರಿಂದಲೇ ಕಲಿತಿದ್ದು. ಅವರ ಆಯುಷ್ಯದ ಕೊನೆಯ ವರ್ಷಗಳಲ್ಲಂತೂ ನಾನು, ಪ್ರತಿದಿನ ಸಂಜೆ ಅವರೊಂದಿಗೆ ಕೂಡಬೇಕು, ಜ್ಞಾನೇಶ್ವರಿ, ದಾಸಬೋಧ ಮುಂತಾದ ಗ್ರಂಥಗಳನ್ನು ಓದಬೇಕು. ದತ್ತಾತ್ರೇಯನ ಸುಂದರವಾದ ಪದಗಳನ್ನು ಹಾಡಬೇಕು, ಈ ಪರಿಪಾಠ ನಡೆದೆ ಇತ್ತು.

• ಇಂದು ನಾನು ಬದುಕುತ್ತಿರುವ ಪ್ರತಿ ಕ್ಷಣವು ನನ್ನ ಗುರುಗಳ ಜ್ಞಾನಬೀಜದ ವಟವೃಕ್ಷವಾಗುವ ಪ್ರಕ್ರಿಯೆಯಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು.

ಆತ್ಮನಾಮ ಗುರೋರ್ನಾಮ ನಾಮಾತಿಕೃಪಣಸ್ಯ ಚ ।
ಶ್ರೇಯಸ್ಕಾಮೋ ನ ಗೃಹ್ಣೀಯಾತ್ ಜ್ಯೇಷ್ಠಾಪತ್ಯಕಲತ್ರಯೋಃ ॥

ಶ್ರೇಯಸ್ಸನ್ನು ಬಯಸುವವನು ತನ್ನ, ತನ್ನ ಗುರುಗಳ, ಅತ್ಯಧಿಕ ಜಿಪುಣತನ ಮಾಡುವವನ, ಹಿರಿಯ ಅಪತ್ಯ(ಪುತ್ರ)ನ, ಮತ್ತು ಹೆಂಡತಿಯ ಹೆಸರು ತೆಗೆದುಕೊಳ್ಳಬಾರದು

ಎಂದು ಸುಭಾಷಿತವಿದ್ದರೂ ಗುರುಗಳ ಋಣದ ಉಲ್ಲೇಖ ಮಾಡುವದರಲ್ಲಿ ತಪ್ಪೇನಿಲ್ಲವಲ್ಲ!

ನನ್ನ ಅಣ್ಣನ ಮಗನ ಮುಂಜಿವೆಗಾಗಿ ನಾನು ೧೯೬೭ ರ ಮೇ ತಿಂಗಳಿನಲ್ಲಿ ನಾಸಿಕಕ್ಕೆ ಹೋಗಿದ್ದೆ. ಮುಂಜಿವೆ ಮುಗಿದ ಮರುದಿನ ಸತ್ಯನಾರಾಯಣ ಪೂಜೆಯೂ ಆಯಿತು. ಆನಂತರದ ದಿನ ಬೆಳಗ್ಗೆ ದಾದಾರವರು ಈ ದೇಹವನ್ನು ಬಿಟ್ಟುಹೋದರು. ಅಂದು ಅಲ್ಲಿ ನಾನಿರಲಿಲ್ಲ. ಸುಮಾರು ೩೬ ವರ್ಷಗಳ ಪ್ರದೀರ್ಘ ಅಖಂಡ ಸಹವಾಸಕ್ಕೆ ದಾದಾರವರು ಈ ರೀತಿ ಆಕಸ್ಮಿಕವಾಗಿ ವಿರಾಮ ಕೊಟ್ಟರು.

■ ಡಾ. ಅಮೃತ ರಾ. ಯಾರ್ದಿ
ಮುಖ್ಯಸ್ಥರು, ಮರಾಠೀ ವಿಭಾಗ, ಕರ್ನಾಟಕ ಮಹಾವಿದ್ಯಾಲಯ, ಧಾರವಾಡ-೫೮೦ ೦೦೧ ■

ನವ ಶಾಯರಿಗಳು — ಎಸ್. ಸೀತಾರಾಮು

---

೧. ಚೈತ್ರಕ್ಕೂ ಶಿಶಿರಕ್ಕೂ ಒಂದೇ ವ್ಯತ್ಯಾಸ
ಸ್ವರ್ಗಕ್ಕೂ ನರಕಕ್ಕೂ ಒಂದೇ ವ್ಯತ್ಯಾಸ
ಅಂದಿಗೂ ಇಂದಿಗೂ ಒಂದೇ ವ್ಯತ್ಯಾಸ
ಅಂದು ನೀನಿದ್ದೆ ಇಂದು ನೀನಿಲ್ಲ.

೨. ಅಪರಿಚಿತನೆಂದು ಹೋಗದಿರು ಸಖಿ, ನೆನಪಷ್ಟೇ ಅಳಿದಿರಬಹುದು
ಒಮ್ಮೆ ನನ್ನ ಕಣ್ಣಲ್ಲಿ ನೋಡು, ನೆನಪಾಗಬಹುದು ಹೋದ ಜನ್ಮದಲ್ಲೂ ನೀ ನನ್ನ ಕಾಡಿದ್ದು.

೩. ನಿನ್ನ ಸೌಂದರ್ಯ ವರ್ಣಿಸಲು ಉಪಮೆಗಳೇಕೆ ಸಖಿ?
ನಿನ್ನ ಸುತ್ತ ನಿಂತ ಯುವ ಪ್ರತಿಮೆಗಳು ಸಾಲವೆ?

೪. ಪ್ರೀತಿ ನೀನೆಂಥ ಸುಳಿಗಾಳಿ? ಆಕಾಶಕೆನ್ನ ಸುತ್ತಿ ಎತ್ತಿಕೊಂಡೊಯ್ದು ಬಿಟ್ಟೆ,
ಬಿಟ್ಟೆ ಕ್ಷಣದಲ್ಲಿ ಪ್ರಪಾತಕ್ಕೆ ತಳ್ಳಿಬಿಟ್ಟೆ.

೫. ಮಧುವಿನಲ್ಲೇನಿದೆ ಸಖೀ ಮತ್ತು
ನಿನ್ನ ಮುತ್ತಿನಲ್ಲಿರುವ ಗಮ್ ಮತ್ತು.

೬. ಹೃದಯದ ನಗಾರಿ ಬಾರಿಸಹತ್ತಿತ್ತೆಂದರೆ
ಅದಕ್ಕೆ ನಿನ್ನ ಸುಳಿವು ಹೇಗೊ ತಿಳಿದಿರಬೇಕು.

೭. ನನ್ನೊಲವು ತಾಜಮಹಲ್ ಅಲ್ಲ, ಭಗ್ನಾವಶೇಷವೂ ಅಲ್ಲ
ನೀ ಸ್ವಚ್ಛಂದ ಹಾರಲು ಸೃಷ್ಟಿಸಿದ ಒಲವಿನಂಬರ.

೮. ಸಾವಿಲ್ಲದ ಸ್ವರ್ಗವನ್ನೇ ಬಯಸಿಹನು ಅವನು
ಮೂರ್ಖ ಅರಿತಿಲ್ಲ ನಿನ್ನ ಮಡಿಲಲ್ಲಿ ಸಾಯುವುದೇ ಸ್ವರ್ಗ ಎಂದು.

೯. ಇಪ್ಪತ್ತರಲಿ ಮುದ ನೀಡಿತ್ತು ನಿನ್ನ ಪ್ರೀತಿಯ ಕಾವು
ಈ ಇಳಿಹೊತ್ತಿನಲ್ಲಿ ಚೇತೋಹಾರಿ ಎನ್ನಿಸಿದೆ ನಿನ್ನ ಪ್ರೀತಿಯ ತಂಪು.

■ ಎಸ್.ಸೀತಾರಾಮು : ಪ್ರಧಾನ ವ್ಯವಸ್ಥಾಪಕರು ಹಾಗೂ ಮುಖ್ಯ ಜಾಗ್ರತ ಅಧಿಕಾರಿ
ಸಿಂಡಿಕೇಟ್ ಬ್ಯಾಂಕ್, ಗಾಂಧೀನಗರ, ೨ನೇ ಕ್ರಾಸ್, ಬೆಂಗಳೂರು-೫೬೦ ೦೦೯ ■

ನನ್ನ ಅಪ್ಪ ನನ್ನ ಅಮ್ಮ

ಕೆ. ವಿ. ಉಭಯಭಾರತಿ

ನನ್ನ ಅಪ್ಪ ವಿಶ್ವನಾಥಶಾಸ್ತ್ರಿಗಳು ತೀರಿಕೊಂಡು ಇಂದಿಗೆ ೨೬ ವರ್ಷಗಳಾಗಿವೆ. ಅವರು ತೀರಿಕೊಂಡಾಗ ಅವರಿಗೆ ೬೭ ವರ್ಷ. ಅವರ ಏಳು ಮಕ್ಕಳಲ್ಲಿ ನಾನು ಐದನೆಯವಳು. ನಾನು ಹುಟ್ಟಿದಾಗ ಅವರಿಗೆ ೪೨ ವಯಸ್ಸು. ಅವರು ತೀರಿಕೊಂಡಾಗ ನನಗೆ ೨೫. ನನ್ನ ಅಮ್ಮ ಜಾನಕಮ್ಮನಿಗೆ ಈಗ ೭೯. ನಾನು ಹುಟ್ಟಿದಾಗ ಅವರಿಗೆ ೨೮. ನನಗೀಗ ೫೧ ವಯಸ್ಸು. ಹೀಗೆ ಕಾಲವನ್ನು ಅಳೆದು ನಾನು ಎಷ್ಟು ಕಾಲ ಅಪ್ಪ ಅಮ್ಮ ಅವರ ಜೊತೆಯಲ್ಲಿ ಜೀವಿಸಿದ್ದೇನೆ ಎಂದುಕೊಂಡಾಗ ಬದುಕೆಂದರೆ ಇಷ್ಟೇನಾ ಎಂದು ತುಂಬಾ ವೇದನೆಪಡುತ್ತೇನೆ. ಇನ್ನೆಷ್ಟು ಕಾಲ ಸವೆಯುವುದಿದೆ ಎಂಬ ಚಿಂತೆಯೂ ಕಾಡುತ್ತದೆ.

ಹಾಸನ ಜಿಲ್ಲೆಯ ಕೋಣನೂರಿನಲ್ಲಿನ ವೈದಿಕ ಸಂಪ್ರದಾಯದ ತೆಲುಗು ಮುಲಕನಾಡು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ನನ್ನಪ್ಪನ ಪೂರ್ವಿಕರು ವೇದ, ಶಾಸ್ತ್ರ, ಸಂಗೀತ ಮುಂತಾದ ವಿದ್ಯೆಗಳಲ್ಲಿ ಪಾರಂಗತರಾಗಿದ್ದರು. ನನ್ನಪ್ಪನಿಗೆ ಬಾಲ್ಯದಿಂದಲೂ ಸಂಗೀತದಲ್ಲಿ ಅಪಾರ ಒಲವು. ಚಿಕ್ಕಂದಿನಲ್ಲಿ ಅವರ ತಂದೆಯೇ ಅವರ ಸಂಗೀತದ ಗುರುವಾಗಿದ್ದರು. ಸಂಗೀತಕ್ಕಾಗಿ ಪರಿಶ್ರಮಪಟ್ಟರು. ತಮ್ಮ ೨೨ನೇ ವಯಸ್ಸಿಗೆ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾನಿಲಯದ 'ಸಂಗೀತಭೂಷಣ' ಡಿಗ್ರಿ ಪಡೆದು ಮೈಸೂರಲ್ಲಿ ನೆಲೆಸಿದರು.

ಪ್ರಾರಂಭದಲ್ಲಿ ಅವರಿಗೆ ನಿಶ್ಚಿತವಾದ ಒಂದು ಉದ್ಯೋಗವಿರಲಿಲ್ಲ. ಸಂಗೀತ ಕಚೇರಿಗೆ ಅವಕಾಶ ಬಂದಾಗ ಸಿಕ್ಕಷ್ಟು ಸಂಭಾವನೆ, ಆಕಾಶವಾಣಿಯಲ್ಲಿ ಹಾಡಿದ ಕೀರ್ತಿ ಇಷ್ಟರಲ್ಲೇ ತೊಳಲಾಡುತ್ತಿದ್ದ ಅಪ್ಪನಿಗೆ ತಮ್ಮ ೨೮ನೇ ವಯಸ್ಸಿನಲ್ಲಿ ಮದುವೆಯೂ ಆಯಿತು. ಅವರಿಗೆ ಮೈಸೂರಿನ ಸೇಂಟ್ ಮೇರಿಸ್ ಶಾಲೆಯ ಸಂಗೀತ ಮೇಷ್ಟ್ರಾಗಿ ಖಾಯಂ ಕೆಲಸ ಸಿಕ್ಕಾಗ ಅವರಿಗಾಗಲೇ ಎರಡು ಗಂಡುಮಕ್ಕಳು ಹುಟ್ಟಿದ್ದವು!

ಬಡತನವೆಂದರೆ ಏನೆಂದು ಗೊತ್ತಿಲ್ಲದ ನನ್ನಮ್ಮನಿಗೆ ಮದುವೆಯಾದ ತಮ್ಮ ೧೪ ನೇ ವಯಸ್ಸಿನಿಂದಲೇ ಸ್ವಾಭಿಮಾನದ ನನ್ನಪ್ಪನಿಂದಾಗಿ ತೊಳಲಾಡುವಂತಾಯಿತು. ಹೆರಿಗೆಗೆ ಕೂಡಾ ಅಮ್ಮನನ್ನು ತೌರುಮನೆಗೆ ಅಪ್ಪ ಕಳಿಸುತ್ತಿರಲಿಲ್ಲ. ಅವರ ಕೋಪ ಎಷ್ಟಿತ್ತೆಂದರೆ ಒಮ್ಮೆ ಕೋಪದಲ್ಲಿ ಅವರು ಎಸೆದ ಸೌದೆಯ ಸಿಬಿರು ನನ್ನಮ್ಮನ ಪಾದದ ಚರ್ಮದೊಳಕ್ಕೆ ನಾಟಿ ದೊಡ್ಡ ತೂತಾಗಿತ್ತಂತೆ. ನಾವು ಹುಟ್ಟುವಾಗ ಈ ಬಗೆಯ ಕ್ರೌರ್ಯ ಅವರಲ್ಲಿರಲಿಲ್ಲ. ಅಪ್ಪ ಅಮ್ಮ ಜಗಳವಾಡುವುದನ್ನು ನಾವು ನೋಡಿದ್ದೇವೆ. ನೋಡಿ ನಗಾಡಿದ್ದೂ ಉಂಟು. ಆದರೆ ಅಪ್ಪ ಅಮ್ಮನ ಮೇಲೆ ಕೈ ಮಾಡಿದ್ದನ್ನು ನಾವು ನೋಡಲಿಲ್ಲ. ಎಷ್ಟೇ ಬಾಧೆಯಾದರೂ 'ಪತಿಯೇ ಪರದೈವ' ಎಂದುಕೊಂಡು ಅಪ್ಪನೊಡನೆ ಅಮ್ಮ ಬದುಕಿದ್ದು ನೆನೆಸಿಕೊಂಡರೆ ಅವರ ಸಹನೆ ಎಷ್ಟಿತ್ತಪ್ಪ ಎಂದು ನನಗೆ ಆಶ್ಚರ್ಯವೆನಿಸುತ್ತದೆ. ಬಹುಶಃ ಸೀತೆಯ ಹೆಸರಿಟ್ಟುಕೊಂಡವರಿಗೆ ಇಂಥ ಸಹನೆ ಬಾಲ್ಯದಿಂದಲೇ ಮೈಗೂಡುವುದೋ ಏನೋ. ತಾಳ್ಮೆಯಿಂದ ಎಲ್ಲವನ್ನೂ ಸಹಿಸಿಕೊಂಡು ಬಂದ ನನ್ನಮ್ಮನ ಬಗ್ಗೆ ಕ್ರಮೇಣ ನನ್ನಪ್ಪನಿಗೆ ಸಹಾನುಭೂತಿ

ಬಂದಿತ್ತೇನೋ. ಅಮ್ಮನಿಲ್ಲದಿದ್ದರೆ ನಮ್ಮ ಬಾಳು ಎಂದೋ ಬೀದಿಪಾಲಾಗುತ್ತಿತ್ತು ಎಂಬುದನ್ನು ಅವರು ಬಹುಬೇಗ ಗ್ರಹಿಸಿರಬೇಕು.

ಉದರಪೋಷಣೆಗೆ ಸಂಗೀತ ನೆರವಾಗುವುದಿಲ್ಲವೆಂಬುದನ್ನು ತಮ್ಮ ಸ್ವಂತ ಅನುಭವದಿಂದ ಮನಗಂಡ ನನ್ನಪ್ಪ ನಮಗಾರಿಗೂ ಅದರಲ್ಲಿ ಆಸಕ್ತಿ ಉಂಟಾಗದಂತೆ ಬೆಳೆಸಿದರು. ಆದರೆ ಅಮ್ಮನಿಗೆ ಒಳ್ಳೆಯ ಸಂಗೀತಜ್ಞಾನವಿತ್ತು. ಅಪ್ಪ ಹಾಡುವಾಗ ಅಮ್ಮ ಮೈಮರೆತು ರಸಾನುಭೂತಿ ಹೊಂದುತ್ತಿದ್ದರು. ಸಂಸಾರದಲ್ಲಿ ಬಡತನವಿದ್ದರೂ ಇಂಥ ನಾದೋಪಾಸಕರ ಕೈ ಹಿಡಿದೆನಲ್ಲ ಅಷ್ಟೇ ಸಾಕು ಎಂಬ ತೃಪ್ತಿ ಅವರದು.

ನನ್ನಪ್ಪನ ಬಗ್ಗೆ ಚಿಂತಿಸಿದಾಗ ನನಗೆ ನೆನಪಾಗುವುದು ದಶರಥನ ಪುತ್ರಶೋಕ. ಅವರು ಪುತ್ರಶೋಕದಲ್ಲೇ ಬದುಕಿದರು, ಪುತ್ರಶೋಕದಲ್ಲೇ ಸತ್ತರು. ಸುಯೋಗದಿಂದ ಮೊದಲನೇ ಎರಡು ಮಕ್ಕಳು ಗಂಡಾಗಿ ಹುಟ್ಟಿದರೂ ಅವರುಗಳಿಂದ ಅಪ್ಪ ವೇದನೆ ಪಡುವಂತಾಯಿತೇ ಹೊರತು ಸುಖಪಡಲಿಲ್ಲ. ಹಿರಿಯವನು ಹಾಗೂ ಹೀಗೂ SSLC ಮುಗಿಸಿದ. ಕಷ್ಟದಲ್ಲಿ ಕಷ್ಟ ಎಂದು ಇಂಜಿನಿಯರಿಂಗ್ ಡಿಪ್ಲೊಮಾ ಮಾಡಲು NIE ಕಾಲೇಜಿಗೆ ಸೇರಿಸಿದರೆ ಕಟ್ಟಲು ನೀಡಿದ ಫೀಜನ್ನು ಪೋಲಿ ಹುಡುಗರ ಜೊತೆ ಸೇರಿ ಪೋಲು ಮಾಡಿ ಅಪ್ಪನ ಪ್ರಾಣ ಹಿಂಡಿದ. ಓದನ್ನು ನಿಲ್ಲಿಸಿ ಒಂದು ಚಿಕ್ಕ ಉದ್ಯೋಗಕ್ಕೆ ಸೇರಿಕೊಂಡರೂ ಮನೆಗೆ ಒಂದು ಬಿಡಿಗಾಸೂ ಕೊಡದೆ ಬೇಜವಾಬ್ದಾರಿತನದಿಂದ ಇದ್ದ.

ಎರಡನೆಯ ಪುತ್ರ ಇವನಿಗಿಂತ ಕೀಳು. ಕಳ್ಳ, ಸುಳ್ಳ, ಭಂಡ, ಮನೆಹಾಳ. ಓದುವುದನ್ನು ಬಿಟ್ಟು ಶಾಲೆಗೆ ಚಕ್ಕರ್ ಹಾಕಿ ಅಲೆಯುವುದು, ಬಂಧುಬಾಂಧವರಲ್ಲಿ, ಪರಿಚಯದ ಅಂಗಡಿಗಳಲ್ಲಿ ಅಪ್ಪನ ಹೆಸರು ಹೇಳಿ ಸಾಲ ಮಾಡುವುದು. ಇದೆಲ್ಲಾ ಸಹಿಸಲಾರದೆ ಅವನನ್ನು ಮನೆಯಿಂದ ಕೆಲಕಾಲ ಅಪ್ಪ ಹೊರದೂಡಿದ್ದೂ ಉಂಟು. ಒಮ್ಮೆ ತಲೆ ಬೋಳಿಸಿಕೊಂಡು— ಅಪ್ಪ ಸತ್ತರು, ಸಂಸ್ಕಾರಕ್ಕೆ ಹಣ ಬೇಕು ಎಂದು ಬೇಡಿ ಹಣ ಗಿಟ್ಟಿಸಿ ಉಡಾಯಿಸಿದ ಭೂಪ ಇವನು. ತಾವು ಕಳೆದ ಜನ್ಮದಲ್ಲಿ ಯಾವುದೋ ಪಾಪ ಮಾಡಿದ್ದರಿಂದ ಇಂಥ ಪಡಪೋಷಿ ಮಕ್ಕಳು ತಮಗೆ ಹುಟ್ಟಿದರು ಎಂದುಕೊಂಡು ಅವರು ಹಲುಬುತ್ತಿದ್ದರು.

ಇವರಿಬ್ಬರ ನಂತರ ನನ್ನ ಅಕ್ಕ. ಅನಂತರ ನರಹರಿ. ಈ ಮೂರನೇ ಪುತ್ರ 'ಬೆಳೆಯುವ ಸಿರಿ ಮೊಳಕೆಯಲ್ಲಿಯೇ' ಎನ್ನುವ ಹಾಗೆ ಓದುವುದರಲ್ಲಿ ಆಸಕ್ತಿ ತೋರಿಸಿದ. ಗುಣವಂತನೂ ಆಗಿದ್ದ. ಪರೀಕ್ಷೆಗಳಲ್ಲಿ ಒಳ್ಳೆಯ ಮಾರ್ಕು ಪಡೆಯುತ್ತಿದ್ದ. ಓದು ಭರದಿಂದ ಮುಂದೆ ಮುಂದೆ ಸಾಗಿತು. ಮೆರಿಟ್ ಸ್ಕಾಲರ್‌ಷಿಪ್ ಹಣದಿಂದಲೇ NIE ಕಾಲೇಜಿನಲ್ಲಿ ಅವನು BE ಕೂಡಾ ಮಾಡಿದ. ಬಂಧುಬಳಗದವರ, ಸ್ನೇಹಿತರ ಮುಂದೆ ಅಪ್ಪ ತಲೆ ಎತ್ತಿ ತಿರುಗಾಡುವಂತಾಯ್ತು. ಆದರೆ ಇಲ್ಲಿಯೂ ಅವರಿಗೆ ಒಂದು ದೊಡ್ಡ ಆಘಾತ ಕಾದಿತ್ತು. ಭೋಪಾಲಕ್ಕೆ ಹೋಗಿ ಅಲ್ಲಿ BHEL ಕಂಪನಿಗೆ ಕೆಲಸಕ್ಕೆ ಸೇರಿದ ಎರಡೂವರೆ ತಿಂಗಳಲ್ಲೇ ಅವನು ಬ್ಲಡ್ ಕ್ಯಾನ್ಸರ್‌ನಿಂದಾಗಿ ತೀರಿಕೊಂಡ. ಆಗ ಅವನ ವಯಸ್ಸು ಕೇವಲ ೨೨ ಮಾತ್ರ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿ ನನ್ನಪ್ಪ ನರಳಾಡಿದ್ದು ಅಷ್ಟಿಷ್ಟಲ್ಲ. ಆಗ ಅವರಿಗೆ ೬೧ ವರ್ಷ. ಕೆಲಸದಿಂದ ಬೇರೆ ನಿವೃತ್ತರಾಗಿದ್ದರು. ಇಂಥಾ ಸ್ಥಿತಿಯಲ್ಲಿ ನನ್ನಪ್ಪನ ಪೆನ್ಷನ್‌ಗಾಗಿ

ಸಾಕಷ್ಟು ಪ್ರಯತ್ನ ನಡೆಸಿ ನೆರವು ನೀಡಿದ ಶಾಲಾ ಹೆಡ್‌ಮಿಸ್ಟ್ರೆಸ್ ಫಿಲೋಮಿನಾ ಅವರನ್ನು ನಾನು ಮರೆಯುವಂತಿಲ್ಲ.

ಅನಂತರದ ಮನೆಯ ಸಂಸಾರ ನಿರ್ವಹಣೆಗಾಗಿ ಹೆಗಲು ಕೊಟ್ಟವರು ನನ್ನ ಅಕ್ಕ ಮತ್ತು ನಾನು. ಅಕ್ಕ B.A. ಮುಗಿಸಿದ ಬಳಿಕ ಅಪ್ಪ ಸೇವೆ ಸಲ್ಲಿಸಿದ ಶಾಲೆಯಲ್ಲೇ ಟೀಚರ್ ಆಗಿ ಸೇರಿಕೊಂಡಳು. ನಾನು ಕೂಡಾ B.Sc. ಮುಗಿಸಿದಾಗ ನನ್ನಪ್ಪ ಅದೇ ಶಾಲೆಯಲ್ಲಿ ನನಗೆ ಕೆಲಸ ಸಿಗುವಂತೆ ನೋಡಿಕೊಂಡರು. ನಾವುಗಳು ವಿದ್ಯಾರ್ಥಿಗಳಾಗಿ ಓದಿದ್ದ ಶಾಲೆಯಲ್ಲಿಯೇ ಟೀಚರ್ ಆಗಿ ಹೋದದ್ದು ಒಂದು ವಿಶಿಷ್ಟ ಅನುಭವವಾಗಿತ್ತು. ನನ್ನಕ್ಕನ ಮದುವೆಯಾದದ್ದು, ನನಗೆ LIC ಯಲ್ಲಿ ಕೆಲಸ ಸಿಕ್ಕಿದ್ದು ನರಹರಿ ನಮ್ಮನ್ನು ಅಗಲಿದ ನಂತರವೇ. ಇವೆರಡೂ ನರಹರಿಯ ಮರಣ ಕಾಲದ ಮಹತ್ತರ ಆಸೆಗಳಾಗಿದ್ದವು. ನರಹರಿಯ ಬಾಯಿಂದಲೇ ಇದನ್ನು ಅರಿತಿದ್ದ ಅವನ ನೆಚ್ಚಿನ ಸಹೋದ್ಯೋಗಿಗಳು ಅಕ್ಕನ ಮದುವೆಗೆಂದು ಸುಮಾರು ಹತ್ತು ಸಾವಿರ ರೂಪಾಯಿ ಹಣ ಸಂಗ್ರಹಿಸಿ ಕಳಿಸಿಕೊಟ್ಟಿದ್ದನ್ನು ಈಗ ನೆನೆಸಿಕೊಂಡರೆ ಜಗತ್ತಿನಲ್ಲಿ ಸಾರ್ವಜನಿಕ ಸಹಾನುಭೂತಿ ಎನ್ನುವುದು ಪೂರ್ತಿಯಾಗಿ ಸತ್ತಿಲ್ಲ ಎಂದು ಹೃದಯ ಹಗುರವಾಗುತ್ತದೆ.

ನರಹರಿಯನ್ನು ಭೋಪಾಲ್‌ನಷ್ಟು ದೂರ ಕೆಲಸಕ್ಕಾಗಿ ಕಳಿಸಿಕೊಡಲು ನನ್ನಪ್ಪನಿಗೆ ಸುತರಾಂ ಇಷ್ಟವಿರಲಿಲ್ಲ. ಮೈಸೂರಿನಲ್ಲೋ, ಬೆಂಗಳೂರಿನಲ್ಲೋ ಒಂದು ಕೆಲಸ ಹುಡುಕಿಕೊಂಡು ಇದ್ದರೆ ಸಾಲದೆ ಎಂದು ಅವನನ್ನು ತಡೆಯಲು ತುಂಬಾ ಪ್ರಯತ್ನಪಟ್ಟರು. "ಇದೇ ಊರಲ್ಲಿ ಇದ್ದರೆ ನಿಮ್ಮ ಸಂಗೀತ ವಿದ್ಯೆಯಂತೆ ನನ್ನ ವಿದ್ಯೆಯೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಈ ಮನೆಯ ದಾರಿದ್ರ್ಯ ಹರಿಯಬೇಕು, ಅಕ್ಕನ ಮದುವೆಯಾಗಬೇಕು" ಎಂದು ಅವನು ವಾದಿಸಿದ್ದ. ಮುಂದಾಗುವುದನ್ನು ಕಾಣದ ನನ್ನಮ್ಮ ಆಗ ಬಾಯಿ ಹಾಕಿದ್ದರು– 'ಅವನನ್ನು ಏಕೆ ತಡೆಯುತ್ತೀರಿ...? ಭೋಪಾಲ್ ವಿದೇಶವೇ...? ಅವನ ಉತ್ಸಾಹಕ್ಕೆ ತಣ್ಣೀರೆರಚಬೇಡಿ, ಅವನನ್ನು ಹಾರೈಸಿ ಕಳಿಸಿಕೊಡಿ...' ಎಂದು. ಸಂಸಾರಕ್ಕೆ ಅಗತ್ಯವಾಗಿ ಬೇಕಾದ ಕೈತುಂಬಾ ಸಂಪಾದನೆಯ ನಿರೀಕ್ಷೆ ಒಂದು ಕಡೆ ಆದರೆ, ದೂರವಿದ್ದರೂ ಪರವಾಗಿಲ್ಲ ಮಗನ ಭವಿಷ್ಯ ಭವ್ಯವಾಗಿರಲಿ ಎನ್ನುವ ಇಂಗಿತ ಆ ಮಾತಲ್ಲಿತ್ತು. ಇದನ್ನು ಈಗಲೂ ಅಮ್ಮ ಆಗಾಗ ನೆನೆಸಿಕೊಂಡು ಕಣ್ಣೀರು ಹಾಕುತ್ತಾರೆ. ನಾವು ಒಂದು ಬಗೆದರೆ ದೈವ ಇನ್ನೊಂದು ಬಗೆಯಿತು ಎನ್ನುವುದು ಇದಕ್ಕೇ ಅಲ್ಲವೇ?

ನರಹರಿಗೂ ಮನೆಯಿಂದ ದೂರವಾಗಿರುವುದು ಕಷ್ಟವಾಗಿತ್ತು. ಅವನಿಗೆ ಈ ಕಡೆಯದೇ ಧ್ಯಾನ. ಅಲ್ಲಿಂದ ಪತ್ರಗಳ ಮೇಲೆ ಪತ್ರ ಬರೆಯುತ್ತಿದ್ದ. ಒಂದೊಂದು ಪತ್ರವೂ ೩-೪ ಪುಟ ಇರುತ್ತಿತ್ತು. ಅಪ್ಪನಿಗಂತೂ ದಿನಾ ಮಗನ ಪತ್ರಕ್ಕಾಗಿ ಕಾಯುವುದು ಒಂದು ಕೆಲಸವಾಗಿತ್ತು. ಮಗನಿಗಾಗಿ ಅಪ್ಪ, ಅಪ್ಪನಿಗಾಗಿ ಮಗ ಹಂಬಲಿಸುತ್ತಿದ್ದುದನ್ನು ಕಣ್ಣಾರೆ ಕಂಡ ನನಗೆ ಅವರನ್ನು ಅಗಲಿಸಿದ ವಿಧಿಯ ಮೇಲೆ ರೋಷ ಉಕ್ಕಿ ಬಂದಿತ್ತು.

ಭೋಪಾಲ್ ಗ್ಯಾಸ್ ದುರಂತ ೧೯೮೪ ರ ಡಿಸೆಂಬರ್‌ನಲ್ಲಿ ಜರುಗಿದ್ದರೂ, ನಮ್ಮ ಪಾಲಿಗೆ ಬೇರೊಂದು ಬಗೆಯ ಭೋಪಾಲ್ ದುರಂತ ೧೯೭೨ ರ ಜೂನ್‌ನಲ್ಲೇ ನಡೆದುಹೋಯಿತು. 'ನರಹರಿ ಅಡ್ಮಿಟೆಡ್ ಹಾಸ್ಪಿಟಲ್, ಸ್ಟಾರ್ಟ್ ಇಮೀಡಿಯೆಟ್ಲಿ...' ಎಂದು

ನಮಗೆ ಟೆಲಿಗ್ರಾಂ ಬಂದಾಗ ನಾವುಗಳು ಆತಂಕಪಟ್ಟೆವು. ಅಪ್ಪನ ಜಂಘಾಬಲವೇ ಉಡುಗಿಹೋಗಿತ್ತು. ಭೋಪಾಲ್‌ಗೆ ಹೋಗಿ ಬರುವಷ್ಟು ರೇಲ್ವೆ ಖರ್ಚಿಗೆ ಕೂಡಾ ಮನೆಯಲ್ಲಿ ಹಣವಿರಲಿಲ್ಲ. ನನ್ನ ಅಕ್ಕನ ಓಲೆಯನ್ನು ಅಡವಿಟ್ಟು ಪ್ರಯಾಣಕ್ಕೆ ಹಣ ಒದಗಿಸಬೇಕಾಯ್ತು. ವಯಸ್ಸಾದ ಅಪ್ಪ ಎದೆಗುಂದದೆ ಅಷ್ಟೊಂದು ದೂರ ಒಬ್ಬರೇ ಹೊರಟದ್ದು ಅಂದಿನ ಸಾರಿಗೆಯ ಸ್ಥಿತಿಗತಿಗೆ ಒಂದು ದೊಡ್ಡ ಸಾಹಸವೇ ಆಗಿತ್ತು. ಎರಡು ರಾತ್ರಿ ಒಂದು ದಿನ ರೈಲಿನಲ್ಲಿ ಪ್ರಯಾಣ ಮಾಡಿ ಅಪ್ಪ ಭೋಪಾಲ್ ಮುಟ್ಟಿದಾಗ ಆಸ್ಪತ್ರೆಯಲ್ಲಿದ್ದ ನರಹರಿ ಚಿಂತಾಜನಕ ಸ್ಥಿತಿಯಲ್ಲಿದ್ದ. ಅವನು ರಕ್ತ ಕಾರಿದ್ದು, ಉಸಿರಾಡಲು ಹೆಣಗಾಡಿದ್ದು ಅಪ್ಪ ಕಣ್ಣಾರೆ ಕಂಡು ಕುಸಿದುಹೋಗಿದ್ದರು. ಅವರು ಅಲ್ಲಿಗೆ ತಲುಪಿದ ನಾಲ್ಕೇ ದಿನಗಳಲ್ಲಿ ನರಹರಿ ಕೊನೆಯುಸಿರು ಎಳೆದ. ನರಹರಿಯ ಸಹೋದ್ಯೋಗಿಗಳು ಅಪ್ಪನಿಗೆ ಧೈರ್ಯ ನೀಡಿ ಎಲ್ಲಾ ಬಗೆಯ ಸಹಾಯ ನೀಡದಿದ್ದಲ್ಲಿ ನನ್ನಪ್ಪನ ಅವಸ್ಥೆ ಏನಾಗುತ್ತಿತ್ತೋ! ಶವಸಂಸ್ಕಾರದ ಏರ್ಪಾಡು ಕೂಡಾ ಅವರೇ ಮಾಡಿದ್ದರು. ಯಾರೆಷ್ಟು ಸಹಾಯ ಮಾಡಿದರೂ ರುದ್ರಭೂಮಿಯಲ್ಲಿ ಹೆತ್ತ ಮಗನ ಶವಕ್ಕೆ ಕೊಳ್ಳಿ ಇಡುವಾಗ ಅವರನ್ನು ಸಾಂತ್ವನಗೊಳಿಸಲು ತನ್ನವರೆನ್ನುವವರು ಯಾರೂ ತನ್ನ ಬಳಿಯಲ್ಲಿಲ್ಲ ಎಂಬ ಕೊರಗು ಅವರನ್ನು ಅತಿಯಾಗಿ ಬಾಧಿಸಿತ್ತು. ಅಂಥಾ ಘೋರ ಸಂಕಟವನ್ನು ಆ ಹೊತ್ತಿನಲ್ಲಿ ಹೇಗೆ ತಡೆದುಕೊಂಡರೋ?

ನರಹರಿಯ ಸಾಮಾನುಗಳ ಪೆಟ್ಟಿಗೆಯೊಡನೆ ಅಪ್ಪ ಭೋಪಾಲ್‌ನಿಂದ ಹಿಂತಿರುಗಿದಾಗ ಅವರನ್ನು ನೋಡಲಿಕ್ಕೆ ಆಗುತ್ತಿರಲಿಲ್ಲ. ಅವರಿಂದ ಸರಿಯಾಗಿ ಮಾತೇ ಹೊರಡುತ್ತಿರಲಿಲ್ಲ. ಇಷ್ಟಾದರೂ ಶಾಸ್ತ್ರ ಪ್ರಮಾಣ ನರಹರಿಯ ಶ್ರಾದ್ಧ, ವೈಕುಂಠ ಸಮಾರಾಧನೆಯನ್ನು ಅವರು ಸಾಂಗವಾಗಿ ನೆರವೇರಿಸಿದರು. ಮಗನ ಆತ್ಮಕ್ಕೆ ಶಾಂತಿ ಸಿಗಲಿ ಎಂದು ತಮ್ಮ ದುಃಖವನ್ನು ಬದಿಗಿಟ್ಟು ತಮ್ಮ ಕರ್ತವ್ಯವನ್ನು ಅವರು ನೆರವೇರಿಸಿದ್ದರು. ಸ್ವಲ್ಪ ಸುಧಾರಿಸಿಕೊಂಡ ನಂತರ ಭೋಪಾಲ್‌ನಲ್ಲಿ ನರಹರಿಯ ಅಂತ್ಯಕಾಲದ ಚಿತ್ರಣವನ್ನು ಅಳುತ್ತಲೇ ಹೇಳಿದ್ದರು– ಆಸ್ಪತ್ರೆಯಲ್ಲಿ ಅವನ ಸಾವು-ಬದುಕಿನ ನಡುವಿನ ಹೋರಾಟ, ಡಾಕ್ಟರುಗಳು ಅವನನ್ನು ಹೇಗಾದರೂ ಬದುಕಿಸಲು ಪಡುವ ಶ್ರಮ, ಅವನ ರಕ್ತವಾಂತಿ, ಉಸಿರಾಟದ ತೊಂದರೆ, ಮರಣಕಾಲದ ಘೋರ ಸಂಕಟ, ದೇವರಲ್ಲಿ ಅವರು ಮೊರೆಯಿಟ್ಟಿದ್ದು, ಡಾಕ್ಟರರ ಚಿಕಿತ್ಸೆಯ ವೈಫಲ್ಯ, ಕಡೆಗೂ ನರಹರಿ ಸೂರ್ಯಾಸ್ತದ ವೇಳೆ ಪ್ರಾಣ ಬಿಟ್ಟಿದ್ದು, ಅವರ ಆಘಾತ, ಮಗನ ಮೃತ ಶರೀರವನ್ನಪ್ಪಿ ಗೋಳಾಡಿದ್ದು, ಅಂತಹ ಶೋಕಸಮಯದಲ್ಲೂ ಅಂದೇ ರಾತ್ರಿ ಶವದ ದಹನಸಂಸ್ಕಾರ ಆಗಬೇಕೆಂದು ಅವರು ಹಟ ಹಿಡಿದದ್ದು, ಮರುದಿನಕ್ಕೆ ಶವಸಂಸ್ಕಾರವನ್ನು ಮುಂದೂಡಲು ನರಹರಿಯ ಸ್ನೇಹಿತರು ಮಾತಾಡಿಕೊಂಡಾಗ ತಮ್ಮನ್ನು ಮಗನ ಶವದೊಂದಿಗೆ ಡೆಡ್‌ವಾರ್ಡಿನಲ್ಲಿರಿಸುವಂತೆ ಪಟ್ಟುಗೊಂಡದ್ದು, ಕಡೆಗೂ ಶವಸಂಸ್ಕಾರ ವಾದದ್ದು, ಫ್ಯಾಕ್ಟರಿಯ ಸಿಬ್ಬಂದಿ ವರ್ಗದವರೆಲ್ಲರ ಮೌನಶೋಕ, ನರ್ಮದಾ ನದಿಯಲ್ಲಿ ಮಗನ ಅಸ್ಥಿ ವಿಸರ್ಜನೆ ಮಾಡಿದ್ದು, ಹಾಸ್ಟೆಲ್‌ನಲ್ಲಿ ಮಗನ ಪುಸ್ತಕಗಳು, ಬಟ್ಟೆಗಳು, ಹಾಸಿಗೆ, ಪೆಟ್ಟಿಗೆ... ಮುಂತಾದವುಗಳನ್ನು ನೋಡುತ್ತಾ ಗೋಳೋ ಎಂದು ಶೋಕಪಟ್ಟಿದ್ದು... ಎಲ್ಲವನ್ನೂ ನಮ್ಮ ಕಣ್ಮುಂದೆ ನಡೆದಂತೆ ಚಾಚೂ ಬಿಡದೆ ಹೇಳಿ ಕಣ್ಣೀರು ಹಾಕುತ್ತಲೇ ಇದ್ದರು.

'ಪುತ್ರಶೋಕಂ ನಿರಂತರಂ' ಎನ್ನುವಂತೆ ಅಪ್ಪನಲ್ಲಿ ಶೋಕ ಮಡುಗಟ್ಟಿತ್ತು. ಅವರಿಗೆ ಊಟ-ತಿಂಡಿ, ಬಟ್ಟೆ-ಬರೆ, ವಿಶ್ರಾಂತಿ-ನಿದ್ರೆ... ಎಲ್ಲದರಲ್ಲೂ ನಿರಾಸಕ್ತಿ, ಜಿಗುಪ್ಸೆ ಉಂಟಾಗಿತ್ತು. ಸಂಧ್ಯಾವಂದನೆ ಮಾಡುವುದನ್ನು ಬಿಟ್ಟುಬಿಟ್ಟರು. ಸಂಗೀತವನ್ನಂತೂ ಸಂಪೂರ್ಣ ತ್ಯಜಿಸಿ ಬಿಟ್ಟರು. ಸದಾ ಭಗವದ್ಗೀತೆ ಪುಸ್ತಕ ಅವರ ಕೈಯಲ್ಲಿರುತ್ತಿತ್ತು. ಒಮ್ಮೆ ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ್ದೂ ಉಂಟು. ಈ ಸಂದರ್ಭದಲ್ಲಿ ಎಲ್ಲಿಲ್ಲದ ಧೈರ್ಯ ತಂದುಕೊಂಡು ಅಮ್ಮ ಅಪ್ಪನನ್ನು ಸಂತೈಸದಿದ್ದರೆ ಅವರು ನಿಜವಾಗಿಯೂ ಆತ್ಮಹತ್ಯೆ ಮಾಡಿಕೊಂಡುಬಿಡುತ್ತಿದ್ದರೋ ಏನೋ! ಸಹನೆಯಲ್ಲಿ ಅಪ್ಪನಿಗಿಂತ ಅಮ್ಮನೇ ಗಟ್ಟಿ ಎಂದು ನಮಗೆ ಗೊತ್ತಾದದ್ದು ಆವಾಗಲೇ. ಅಮ್ಮ ಮಗನ ವಿಯೋಗದ ದುಃಖವನ್ನು ಎದೆತುಂಬಾ ತುಂಬಿಕೊಂಡಿದ್ದರೂ ನಮ್ಮೆಲ್ಲರಿಗಾಗಿ ದುಡಿಯುತ್ತಿದ್ದರು. 'ಗಟ್ಟಿ ಮಣ್ಣ ಶಿಶುವ ಮಾಡಿ ಹೊಟ್ಟೆಯೊಳಗೆ ಇರಿಸಲಿಲ್ಲ. ಕೊಟ್ಟ ದೇವ ಕೊಂಡು ಹೋದರೆ ಕುಟ್ಟಿಕೊಂಡು ಅಳುವುದೇಕೆ?' ಎಂಬ ಪುರಂದರದಾಸರ ಪದವನ್ನು ಹೇಳಿ ತಮಗೆ ತಾವೇ ಸಮಾಧಾನ ಮಾಡಿಕೊಳ್ಳುತ್ತಿದ್ದರು.

ನರಹರಿ ಸತ್ತ ವರ್ಷದಲ್ಲಿ ನನಗೆ LIC ಯಲ್ಲಿ ಕೆಲಸ ದೊರಕಿತು. ನಂತರದ ವರ್ಷದಲ್ಲಿ ಅಕ್ಕನಿಗೆ ದೈವಬಲದಿಂದ ಒಳ್ಳೆಯ ಸೆಂಟಸ್ಮಿಕೆ ಸಿಕ್ಕಿತು. ಇದು ಅಪ್ಪನ ಪರಿಶ್ರಮದಿಂದಲ್ಲ. ಅವರ ಶೋಕವನ್ನು ಕಂಡು ಮರುಗಿದ ಅವರ ಆಪ್ತಸ್ನೇಹಿತರ ಪ್ರಯತ್ನಗಳಿಂದ. ಮದುವೆಯ ಸಮಯದಲ್ಲಿ ಕೂಡಾ ಅಪ್ಪನಿಗೆ ಸ್ವಲ್ಪವೂ ಉತ್ಸಾಹವಿರಲಿಲ್ಲ. ತುಂಬಾ ಸೋತುಹೋಗಿದ್ದರು. ಒಂದು ಅನಿವಾರ್ಯ ಕಾರ್ಯ ಮುಗಿಸಿದವರಂತೆ ಅವರು ನೀರಸವಾಗಿದ್ದರು. ಭೋಪಾಲ್‌ದಿಂದ ನರಹರಿಯ ಗೆಳೆಯರು ಕಳಿಸಿದ ಹಣದ ಅರ್ಧ ಭಾಗ ಸಂಸಾರಕ್ಕಾಗಿ ಕರಗಿ ಹೋಗಿತ್ತು. ಹಾಗಾಗಿ ಮೇಲೆ ಸಾಲ ಮಾಡಬೇಕಾಯಿತು. ಸಾಲದ ಹೊಣೆಯನ್ನು ನಾನು ಹೊತ್ತುಕೊಂಡೆ. ಮದುವೆಯ ಸಾಲ, ಮನೆಯ ನಿರ್ವಹಣೆಗಾಗಿ ಮಾಡಿದ ಸಾಲ ಸೇರಿಕೊಂಡು ಒಂದು ದೊಡ್ಡ ಹೊರೆಯಾಗಿತ್ತು. ಸಂಸಾರದ ಭಾರ ನನ್ನೊಬ್ಬಳ ಮೇಲೆ ಬಿದ್ದಿತಲ್ಲಾ ಎಂಬ ನೋವು ಅವರಿಗೆ ಕೊನೆವರೆಗೂ ಇತ್ತು. ನನ್ನನ್ನು ಮಗಳಂತೆ ಕಾಣದೆ ಮಗನಂತೆಯೇ ಭಾವಿಸಿದ್ದರು. ನರಹರಿಯನ್ನು ನನ್ನಲ್ಲೇ ಕಂಡುಕೊಳ್ಳುತ್ತಿದ್ದರೇನೋ? ಸಾಲಗಳನ್ನೆಲ್ಲ ಕ್ರಮೇಣ ತೀರಿಸುತ್ತಾ ಬರಲು ಬಹಳ ಕಾಲ ಹಿಡಿಯಿತು. ಆ ಚಿಕ್ಕ ವಯಸ್ಸಿನಲ್ಲೇ 'ಸಾಲ' ಎಂದರೆ ಅಸಹ್ಯವಾಗಿ ಈಗಲೂ ಸಾಲ ಅನ್ನುವ ಪದವೇ ನನಗೆ ಅಲರ್ಜಿ.

ನನ್ನಕ್ಕ ಎಂಟು ತಿಂಗಳ ಗರ್ಭಿಣಿಯಾಗಿದ್ದಾಗ ಅವಳನ್ನು ನೋಡಿಕೊಂಡು ಬರಲು ಅಪ್ಪ ಅವಳ ಮನೆಗೆ ಹೋಗಿ ಬಸ್ಸಿನಲ್ಲಿ ಹಿಂತಿರುಗುವಾಗ ಅವರಿಗೆ ಲಕ್ವ ಹೊಡೆದು ದಾರಿಯಲ್ಲಿ ಬಿದ್ದರು. ದಾರಿಹೋಕರು ಇವರ ಗುರುತು ಹಿಡಿದು ಮನೆಗೆ ಮುಟ್ಟಿಸುವಂತಾಯ್ತು. ಅದಾದ ಒಂದೂವರೆ ವರ್ಷದಲ್ಲೇ ಅಪ್ಪ ತೀರಿಕೊಂಡರು. ಈ ವೇಳೆಗೆ ಬೆಂಗಳೂರಿಗೆ ನನಗೆ ವರ್ಗವಾಗಿದ್ದರಿಂದ ಅವರ ಕೊನೆಯ ನಾಲ್ಕೂವರೆ ತಿಂಗಳು ನನ್ನ ಬಿಡಾರದಲ್ಲೇ ಕಳೆಯಿತು. ಹಾಸಿಗೆ ಹಿಡಿದಿದ್ದರು. ಮಾತು ಹೊರಬೀಳುತ್ತಿರಲಿಲ್ಲ. ಸಂಜ್ಞೆಯಿಂದಲೇ ತಮ್ಮ ಇಷ್ಟಾರ್ಥಗಳನ್ನು ಅವರು ತಿಳಿಸುವಂತಾಯ್ತು. ಸಂಗೀತಕ್ಕೆ ಸಮರ್ಪಿಸಿಕೊಂಡ ಅವರ ನಾಲಿಗೆ ಹೀಗೆ ನಿಶ್ಚೇಷ್ಟಿತವಾಗಿದ್ದು ಒಂದು ದೊಡ್ಡ ವಿಪರ್ಯಾಸ. ಈ ಸಂದರ್ಭದಲ್ಲಿ ಅಮ್ಮ ಸ್ವಲ್ಪವೂ ಬೇಸರಪಡದೆ ನಿರ್ವಂಚನೆಯಿಂದ ಅಪ್ಪನ ಮಲಮೂತ್ರ ಬಾಚಿ ಅವರ ಸೇವೆ

ಮಾಡಿದ್ದನ್ನು ನಾನು ಮರೆಯಲಾರೆ. ಅಜ್ಜಿಯ (ಅಪ್ಪನ ತಾಯಿ) ಕೊನೆಗಾಲವಲ್ಲೂ ಇದೇ ರೀತಿ ಅವರ ಸೇವೆಯನ್ನು ಅಮ್ಮ ಮಾಡಿದ್ದರು. ಅಪ್ಪ ದೈನ್ಯದಿಂದ ಅಮ್ಮನಿಗೆ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದ್ದನ್ನು ನಾನು ಕಂಡಿದ್ದೇನೆ.

ಅಪ್ಪ ಅಮ್ಮ ತುಂಬಾ ಬಡತನದಲ್ಲೇ ನಮ್ಮ ಲಾಲನೆ ಪಾಲನೆ ಮಾಡಿಕೊಂಡು ಬಂದರು. ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆ ಸಂಪಾದನೆ ಇದ್ದುದರಿಂದ ದಿನಸಿ ಅಂಗಡಿ, ಸೌದೆ ಅಂಗಡಿ, ಬಟ್ಟೆ ಅಂಗಡಿ, ಹಾಲಿನವನ ಬಳಿ ಸಾಲ, ಮನೆಬಾಡಿಗೆ ಬಾಕಿ, ಹಣ ವಸೂಲಿಗೆ ಬರುವವರ ನಿರ್ದಾಕ್ಷಿಣ್ಯದ ಕಠೋರ ನುಡಿಗಳು ನಮ್ಮನ್ನು ಕಿತ್ತು ತಿನ್ನುತ್ತಿದ್ದವು. ಇಂಥ ಸಂದರ್ಭಗಳಲ್ಲಿ ಅಪ್ಪ ಅಮ್ಮನನ್ನು ಮುಂದೆ ಮಾಡಿಬಿಡುತ್ತಿದ್ದರು. ಸಾಲ ತರಲು ಅಮ್ಮ ಹೆಣಗಾಡಬೇಕಿತ್ತು. ಮನೆಯಲ್ಲಿದ್ದ ಕೆಲವು ಬೆಳ್ಳಿ ಪಾತ್ರೆಗಳು, ಕಡೆಗೆ ತಮ್ಮ ಮಾಂಗಲ್ಯವನ್ನು ಸಹ ಅಡವಿಟ್ಟು ಅಮ್ಮ ಹಣ ಹೊಂದಿಸಿದ್ದನ್ನು ನಾನು ನೋಡಿದ್ದೇನೆ. ಆದುದರಿಂದ ನನ್ನ ಬಳಿ ಇರುವ ಅಮ್ಮನ ಕೈನಲ್ಲಿ ಸದಾ ಹಣ ಇರುವಂತೆ, ಮನೆಗೆ ಬೇಕಾದ ಸಾಮಾನುಗಳು ಸಮೃದ್ಧಿಯಾಗಿರುವಂತೆ, ಊಟ-ತಿಂಡಿಗೆ, ಬಟ್ಟೆಬರೆಗೆ, ಹಣ್ಣುಹಂಪಲಿಗೆ, ಔಷಧಿ ಖರ್ಚಿಗೆ– ಯಾವುದಕ್ಕೂ ಕೊರತೆ ಇಲ್ಲದಂತೆ ನಾನು ನೋಡಿಕೊಳ್ಳುತ್ತಿದ್ದೇನೆ. ಅಪ್ಪನ ಮುಖಾಂತರ ಬರುತ್ತಿರುವ ಫ್ಯಾಮಿಲಿ ಪೆನ್ಷನ್ ಹಣದ ಬಗ್ಗೆ ಅಮ್ಮನಿಗೆ ಬಹಳ ಅಭಿಮಾನವಿದೆ. ನಾನಿರುವುದು ಸ್ವಂತ ಮನೆ. ಬಾಡಿಗೆ ಮನೆಗಳಲ್ಲಿ ಬಾಧೆ ಪಟ್ಟ ಅಮ್ಮ ತಮ್ಮ ಇಳಿವಯಸ್ಸಿನಲ್ಲಿ ಒಳ್ಳೆಯ ಪರಿಸರವಿರುವ ತಾಣದಲ್ಲಿ ನನ್ನ ಕಣ್ಣೆದುರು ಇರುವುದು ನನಗೆ ತುಂಬಾ ಸಂತೋಷ ನೀಡಿದೆ. ಅಪ್ಪನನ್ನು ನೆನೆಸಿಕೊಂಡು 'ಇನ್ನಿನಿಸು ಅಪ್ಪಾ... ನೀ ಬದುಕಬೇಕಿತ್ತು' ಎಂದುಕೊಳ್ಳುತ್ತೇನೆ.

■ ಕೆ. ಪಿ. ಉಭಯಭಾರತಿ : # ೧೮೦/೨೮, ಇಂಚರ, ೧೫ ನೇ ಮೇನ್, ೩ ನೇ ಕ್ರಾಸ್, ಡಾ. ಅಂಬೇಡ್ಕರ್ ಕಾಲೇಜು ಬೀದಿ, ಕುರುಬರಹಳ್ಳಿ, ಮಹಾಲಕ್ಷ್ಮಿಪುರಂ, ಬೆಂಗಳೂರು-೫೬೦ ೦೮೬ ■

ಮೂರು ಕವಿತೆಗಳು

ವಿಜಯ ಧಾರವಾಡ

---

೧. ಸಂಕಲ್ಪ

ಕಚ್ಚಿ ನಿಲ್ಲಬೇಕು ಸಿಕ್ಕ ಕೊಂಚ ನೆಲದಲ್ಲಿ
ಬೇರನಿಳಿಸಿ
ತಲೆಯ ಮೇಲಣ ಮುಗಿಲಗಲ
ಪಸರಿಸಿ ರೆಂಬೆಕೊಂಬೆಗಳ
ಬಿಡಬೇಕು ಫಲ ಗೊಂಚಗೊಂಚಲಾಗಿ
ಕುಕ್ಕಿ ತಿನ್ನಲಿ ಒಂದಿಷ್ಟು ಕಾಗೆ ಗುಬ್ಬಿಗಳು
ನುಂಗಿದ ಬೀಜಗಳನೊಯ್ದು
ಚೆಲ್ಲಿದ ಮಲದೊಂದಿಗೆ ಮಣ್ಣಲ್ಲಿ ಬೆರೆತು
ಮೊಳಕೆಯೊಡೆದು ಮೇಲೆದ್ದು ನಿಲ್ಲಬೇಕು.

ಅಜ್ಜ ನೆಟ್ಟ ಆಲದೆದುರೇ ಮಾವಾಗಿ, ಬೇವಾಗಿ
ತಾಯಬೇರನು ಅಂತರಾಳದಲಿ ಇಳಿಸಿ
ಇಳಿಬಿದ್ದು ಹುರಿಗೊಂಡ ಬೇರುಗಳ
ಕಲ್ಲುಗಳ ಮಧ್ಯ ಮೆತ್ತಗೆ ತೂರಿ
ಸಡಿಲಗೊಳಿಸುತ್ತ ಅಂತರ್‌ಜಲ ಹೀರಿ
ಹೊರಗಡೆಯ ಕಾಂಡದ ಟೊಂಗೆ ಟಿಸಿಲುಗಳಿಗೆ
ಜೀವಶಕ್ತಿ ರವಾನಿಸಬೇಕು.
ತೊಗಟೆ ದಪ್ಪಗೊಳಿಸುತ್ತ ಉರುಟೊರಟ ಜಿಗುಟ
ಮೈಸುತ್ತ ಸುತ್ತಿಕೊಳ್ಳುತ್ತ
ಸೂರ್ಯ ಕಿರಣಗಳ ಹೀರಿ ಹಸಿರಾಗಿ
ಚಿಗುರುಗಳ ಚಿಗರೆಗಂಗಳಿಗೆ ರೆಪ್ಪೆಯಾಗಿ
ನಾಳೆಗಳಿಗೆ ನಿನ್ನೆಗಳ ನಿಧಾನವಾಗಿ
ಉಳಿಯಬೇಕು.

ಅದಕ್ಕಾಗಿ
ಕಪ್ಪು ಮೋಡದ ದಟ್ಟ ಮಳೆಯಾಗಿ
ಮಣ್ಣ ಒಡಲಲಿ ಹರಿವ ಹೊಳೆಯಾಗಿ
ನೆಲಕಚ್ಚಿ ಬುವಿಯ ಎದೆ ಮೇಲೆ ನಿಲ್ಲಬೇಕು.
ಮುಗಿಲ ನಕ್ಷತ್ರಗಳು ಕಣ್ಣು ಬಿಡುವಂತೆ
ಬೆಳಕ ನಾಲಗೆ ಕತ್ತಲ ಮೈ ನೆಕ್ಕುವಂತೆ.

೨. ನನ್ನ ಹಾದಿ

ಗುಡ್ಡ ಸುತ್ತುವ ಮೈಲಾರಲಿಂಗನ ಹಾದಿ
ಗುರುತೇ ಸಿಗದ ದಟ್ಟ ಕಾಡಿನ ಹಾದಿ
ಬಂಡಿಗಾಲಿಯುರುಳಿದ ಕೆಂಪು ಹಾದಿ
ಸಾವಿರ ಚಕ್ರಗಳ ಭಾರಕೆ ಸಪಾಟಾದ ಡಾಂಬರು ಹಾದಿ
ಒಂದೇ ಎರಡೇ ಹುಡುಕು ಹೆಜ್ಜೆಗೆ ನೂರೆಂಟು ಹಾದಿ
ಅಟ್ಟಣಕೇರಬಯಸಿದ ಹೃದಯದಟ್ಟಣೆಯಲ್ಲೂ
ಅಡ್ಡಗಟ್ಟಿ ಕೇಳಿತು
ನಿನ್ನ ಹಾದಿಯೆಲ್ಲಿ?
ಭೂಮ್ಯಾಕಾಶವನೊಂದು ಮಾಡಿ
ಮೋಡಗಳ ವರ್ಷಾಧಾರೆಯ ಗಟ್ಟಿ ಹಿಡಿದು
ಮೇಲಕೇರಿ ಬೇಟೆಗಾರ ಸೂರ್ಯರಥದ
ಸಾರಥಿಗೆ ಕೇಳಲೇ
ನನ್ನ ಹಾದಿಯೆಲ್ಲಿ?

ಕಂಡದ್ದು ದೃಶ್ಯವಲ್ಲ, ಕೇಳಿದ್ದು ಧ್ವನಿಯಲ್ಲ
ಮಿಥ್ಯದ ಹುಟ್ಟು ನಿತ್ಯವಲ್ಲ
ಸತ್ಯದ ಸುಖ ಹಪಹಪಿಸಿ
ತಪಕೆ ನಡೆದ ವೇದಾಂತಿಯ ಕೇಳಲೇ
ನನ್ನ ಹಾದಿಯೆಲ್ಲಿ?
ಗರ್ಭದೊಳಗೆ ಅಂಕುರ, ಗೋರಿಯೊಳಗೆ ಸಂಕರ
ನಡುವಿನ ಸಂಗರಕೆ ನಾನೇ ಶಂಕರ
ನಾಕ-ನರಕಗಳು ಇಲ್ಲೆ ಸಾಕಾರ
ವಿಕಾರಕ್ಕೆ ಆಕಾರ ಕೊಡುವ ಚಾಣಕೆ
ಹುಡುಕಿ ಹೊರಟ ನಿರೀಶ್ವರ ಜಾಣನ ಕೇಳಲೇ
ನನ್ನ ಹಾದಿಯೆಲ್ಲಿ?
ಹಕ್ಕಿಯ ಹಾಡಿಗೆ, ನೆಲದ ನಾಡಿಗೆ ಬಡಿವ ಹೃದಯ
ಹಿಂದು ಇಂದು ಮುಂದುಗಳ ಕಣ್ಣಿಗೆ ಅಂಜನಾ ಹಚ್ಚಿ
ಕನಸು ಮನಸು ಶ್ರುತಿಗೊಳಿಸಿ
ವಾಗ್ದೇವಿ ಭಾಂಡಾರದ ಬೀಗಮುದ್ರೆ ಒಡೆಯ ಹೊರಟ
ಕವೀಶ್ವರರ ಕೇಳಲೇ ನನ್ನ ಹಾದಿಯೆಲ್ಲಿ?
ಸೂರ್ಯರಶ್ಮಿ ಕುಡಿದು
ನೆಲದ ಮೇಲೊಂದು ಚಂದಿರನ ಮೇಲಿನ್ನೊಂದು
ಮೂರನೆಯ ಪಾದ ಕತ್ತಲ ಸಮ್ರಾಟನ ಮೇಲಿರಿಸಿ
ದಾಹ ತೀರದ ವಾಮನ ಚತುಷ್ಪಾದವಿರಿಸಲು
ಜಾಗ ಹುಡುಕುವ ವಿಜ್ಞಾನಿಯ ಕೇಳಲೇ
ನನ್ನ ಹಾದಿಯೆಲ್ಲಿ?
ಜೋಡು ತೊಡೆಗಳ ಮುಂದೆ ಮೊಣಕಾಲೂರಿ
ಸೊಂಟದ ತಿರುವಲಿ ಕೈಗಳ ಸಾರಿ
ಬೇಟದೊಳು ಮುಳುಗಿ, ನಲ್ಲೆಯ ಕಣ್ಣ ಕೇಳಲೇ
ನನ್ನ ಹಾದಿಯೆಲ್ಲಿ?
ಸುಸ್ತಾಗಿ ಮರಳಿದರೆ
ಗೂಡೊಳು ತೆರೆದ ಬಾಯಿಗೆ
ಗುಟುಕು ನೀಡುವ ತಾಯ ಹಕ್ಕಿ ಕಂಡೆ
ಮೊಲೆಹಾಲು ಕುಡಿದು ತೊಟ್ಟಿಲೊಳು
ಮಲಗಿದ ಶಿಶುವ ಕಂಡೆ
ತಟ್ಟಿ ಚಪ್ಪಾಳೆ ಕುಣಿವ ಕುಪ್ಪಳಿಸುವ ಕೇಕೆ
ಆಟದೊಳು ನಿಮಗ್ನ ಬೀದಿ ಚಿಣ್ಣರ
ನಗುವ ಕಂಡೆ
ಮಹಂತರ ಕಂಡು ನನ್ನ ಪ್ರಶ್ನೆ
ಗಂಟನು ಬಿಡಿಸುವ ಪರಿಯ ಕಂಡೆ.

೩. ಹೆಣದ ಸುತ್ತ ಮುತ್ತ

ಒಂದು ಮುಂಜಾವು
ಬೈಲುದೆಸೆಗೆ ಹೊರಟ ಹುಡುಗ
ಊರಗಸಿಯಾಚೆ ಹಾಳುಬಾವಿಯ ಕಟ್ಟೆ ಮೇಲೆ
ಎಲೆಯಡಿಕೆ ಜಗಿಯಲೆಂದು ಕುಳಿತವ
ಕೆಳಗಿಣುಕಿ ಹೌಹಾರಿ ತಂಬಿಗೆ ಬಿಟ್ಟು
ಅಡಕೆ ಬೆಟ್ಟ ಗಟ್ಟಿಯಾಗಿ ಅದಮುತ್ತ
ಊರೊಳು ಕೆಟ್ಟೆನೆಂದು ದಿಕ್ಕಾಪಾಲು
ಓಡತೊಡಗಿದ.

ಓಣಿಗುಂಟ ಸುದ್ದಿ ನುಗ್ಗುತ್ತ
ಮುಚ್ಚಿದ ಬಾಗಿಲುಗಳ ಒದೆಯುತ್ತ
ಕ್ಷಣಾರ್ಧದಲಿ ಕಣ್ಣುಜ್ಜುತ್ತ
ಕಂಕುಳ ಕೂಸು ಕುನ್ನಿಗಳ ಹಿಡಿದ ಹೆಂಗಸರು
ಕಚ್ಚೆ ಬಿಗಿಯಾಗಿಸುತ ಗಂಡಸರು
ಲಾಡಿ ಕಟ್ಟುತಲೆ ಓಡಿದ ಚಡ್ಡಿಗಳು
ಕೋಲೂರಿದ ಮುದುಕ ಮುದುಕಿಯರು
ನೆರೆಯಿತು ಬಾವಿ ಸುತ್ತ ಜಾತ್ರೆ.

ತಳದಲ್ಲಿ ಇದ್ದ ಬಿದ್ದ ನೀರಲ್ಲೇ
ಹಣೆಯ ಮೇಲೆ ಕಾಸಗಲ ಕುಂಕುಮ,
ಕಿವಿಯ ಬೆಂಡೋಲೆ, ಹೊಳೆಹೊಳೆವ ಮೂಗುತಿ,
ಹರವಾದ ಎದೆಯ ಮೇಲೆ ಬಿದ್ದು ಒದ್ದಾಡುವ
ಮಂಗಳಸೂತ್ರ ಮುತ್ತೈದೆ
ತೇಲುತಿದ್ದಳು ನೀರ ಮೇಲೆ.

ಉಟ್ಟ ಸೀರೆ ಉಟ್ಟಂತೆ
ಕಣ್ಣುಗಳೊ ಧ್ಯಾನದಲ್ಲಿದ್ದಂತೆ
ಕೆಳಗಿನಿಂದ ಸರಿದ ಸೆರಗು
ಮಲಗಿತ್ತು ನೀರ ಮೇಲೆ
ಕೇಸರಿ-ಬಿಳಿ-ಹಸಿರು ಅಂಚಿನ ದಡಿ ಮಧ್ಯ
ತಿರುಗದೆ ನಿಂತ ನೀಲಿ ಚಕ್ರ.

ಜೋಲಾಡುವ
ಚಲಿಸಲಾಗದ ಕಾಲು
ನಾದ ಹೊರಡಿಸದ ಗೆಜ್ಜೆ
ಅವಳನ್ನೆ ನಿಟ್ಟಿಸುತ ಸುತ್ತ
ಜೋತಾಡುವ ಕುರುಡು ಬಾವಲಿಗಳು.

ಮೇಲೆ ಕಣ್ಣೀರೂ ಬತ್ತಿ ಒಣಗಿ ನಿಂತ ಹಣ್ಣು ತಲೆಗಳು
ತಲೆಗೊಂದು ಕಾರಣದ ತೋರಣದ ಜತೆಗೆ
ಸತ್ತ ಭಾವಕೆ ಶಬ್ದಗಳ ಗುಡಿ ಕಟ್ಟಿ
ಆಕಾಶ ನಿಟ್ಟಿಸುತ ನಿಂತ ಪಂಚರ ಟೋಳಿ
ಸಿಕ್ಕ ಸುದ್ದಿಯ ಚೆಂಡ ಒದೆಯುತ್ತ
ಬಯಲೊಳಗೆ ಆಟವಾಡಿದ ಪಡ್ಡೆಗಳು
ಭವಿಷ್ಯದ ಕೂಸು ಕುನ್ನಿಗಳ ಎದೆಗವಚಿ
ಹೆಣದ ಕಣ್ಣಲಿ ಕುಣಿವ ಭೂತಕೆ ನಡುಗಿದ ಹೆಂಗಸರು.

ಪಂಚನಾಮೆಗೂ ಕಾಯದೆ
ಪ್ರಾತರ್ವಿಧಿಗಳಿಗಾಗಿ ಮನೆಯ ಕಡೆ
ಅರಿವಿಲ್ಲದೆ ಸರಿದ ಕಾಲುಗಳು
ವಿಧಾನಸಭೆ ಸಂಸತ್ತುಗಳಲ್ಲಿ
ಪೋಸ್ಟ್‌ಮಾರ್ಟಮ್, ತನಿಖೆ,
ಆಯೋಗಗಳ ಸಂಭ್ರಮ
ಅಮೇರಿಕಾದ ಸೆಟಲೈಟುಗಳಲ್ಲೂ
ಸಿಕ್ಕು
ಬಿಡಿಸದ ಚಿತ್ರಮಾಲೆ.

■ ವಿಜಯ ಧಾರವಾಡ : ಕನ್ನಡ ಉಪನ್ಯಾಸಕರು, ಕೆಎಲ್ಇ ಸಂಸ್ಥೆಯ ಜಿ. ಆಯ್. ಬಾಗೇವಾಡಿ ಮಹಾವಿದ್ಯಾಲಯ, ನಿಪ್ಪಾಣಿ (ಬೆಳಗಾವಿ) ■

'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ: ಕೃತಜ್ಞತೆ- ೨೪

ನನ್ನ ಅವ್ವ ನನ್ನ ಅಪ್ಪ

ಪಾಂಡುರಂಗ ಕೋಟಿ

ನನ್ನ ಪೂಜ್ಯ ಅಜ್ಜಂದಿರು ಚಿಕ್ಕಪ್ಪನವರು ನೇಕಾರ ಮನೆತನದ ರೇಶ್ಮೀ ಮಡಿ ನೆಯ್ಯುವವರೊಂದಿಗೆ ಆಯುರ್ವೇದ ಔಷಧವನ್ನು ಕೊಡುತ್ತಿದ್ದರು. ಇದು ಅವರ ಕಸುಬಾಗಿತ್ತು. ರಾಣೇಬೆನ್ನೂರ ತಾಲೂಕಿನ ಹಲಗೇರಿ ಗ್ರಾಮದ ರಹವಾಸಿಗಳಾಗಿದ್ದರು. ಅನೇಕ ಸಣ್ಣ ಪುಟ್ಟ ರೋಗಗಳಿಗೆ ಔಷಧ ಕೊಡುವವರೊಂದಿಗೆ ಹೆಸರು ಗಳಿಸಿದ್ದರು. ಡಾ. ಪಾಪು ಅವರ ತಾಯಿ ಮಲ್ಲಮ್ಮನವರಿಗೆ ಇಬ್ಬರೇ ಮಕ್ಕಳು. ಮತ್ತೆ ಮಕ್ಕಳಾಗಲಿಲ್ಲ. ಚಿಂತಿಸಿ ಕಡೆಗೆ ನಮ್ಮ ಅಜ್ಜ ಚಿಕ್ಕಪ್ಪನವರ ಕಡೆಗೆ ಔಷಧ ತೆಗೆದುಕೊಂಡು ೪ ಮಕ್ಕಳನ್ನು ಪಡೆದರು. ಅಜ್ಜ ಸ್ವಂತ ಆಯುರ್ವೇದ ಡಾಕ್ಟರ ಎನಿಸಿದ್ದರೂ ಕೆಟ್ಟ ತಂಬಾಕು ಸೇವನೆಯಿಂದ ಥ್ರೋಟ್ ಕ್ಯಾನ್ಸರ್ ಆಗಿ ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಿಂಗಳಲ್ಲಿ ೩ ಸಾರೆ ಶಸ್ತ್ರಚಿಕಿತ್ಸೆ ಪಡೆದರೂ, ಗುಣವಾಗದೆ ಊರಿಗೆ ಬಂದು ೮ ದಿನಗಳಲ್ಲಿ ಪ್ರಾಣ ಬಿಟ್ಟರು.

ಹಲಗೇರಿಯಲ್ಲಿ ನಮ್ಮ ಸ್ವಂತ ಮನೆ ಇತ್ತು. ಈಗಲೂ ಸಹ ಕೋಟಿಯವರ ಮನೆಯೆಂದೇ ಕರೆಯುವರು. ತಂದೆ ಲಿಂಗಪ್ಪನವರು ಸಮ್ಮಂಧಗಳಿಂದ ಕಠಿಣ ಪರಿಸ್ಥಿತಿಯಲ್ಲಿ ಹಣ

ತೆಗೆದುಕೊಂಡು ಮನೆ ಒತ್ತಿ ಹಾಕಿದರು. ಅದನ್ನು ಬಿಡಿಸಿಕೊಳ್ಳಲಾಗದೆ, ಅದು ಸಮ್ಮಂಧಿಗಳ ಪಾಲಾಯಿತು. ತಂದೆಯವರು ೩ ನೇ ಇಯತ್ತೆ ಕಲಿತು ಶಾಲೆಗೆ ಶರಣು ಹೊಡೆದು ನಾಟಕ ಕಂಪನಿ ಸೇರಿ ಅಲೆಮಾರಿಯಂತೆ ಜೀವನ ಸಾಗಿಸಿದರು. ಅದು ಅವರ ಮನಸ್ಕೆ ಒಗ್ಗದೆ ದಾವಣಗೇರಿಯಲ್ಲಿ ಕೆಲ ಕಾಲ ಗುಮಾಸ್ತರಾಗಿ ಕೆಲಸ ಮಾಡಿದರು. ನನ್ನ ಮೊದಲ ತಾಯಿ ಹುಬ್ಬಳ್ಳಿಯವಳು. ಅವಳು ತಂದೆಗಿಂತಲೂ ಹೆಚ್ಚು ಓದಿದವಳು. ತಂದೆಯ ಸಂಗಡ ೨ ತಿಂಗಳ ಬಾಳ್ವೆ ಮಾಡಿ ತವರಿಗೆ ಹೋಗಿ ಯಾವದೋ ಕಾಯಿಲೆಯಿಂದ ಅಸುನೀಗಿದಳು. ತಂದೆಯವರು ಅಲ್ಲಿ ಇಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸುತ್ತ ವ್ಯಾಪಾರದ ಹೈಬು ಹತ್ತಿ ಬ್ಯಾಡಿಗಿಗೆ ಬಂದು ನೆಲಸಿದರು. ಮೊದಲ ಹೆಂಡತಿ ತೀರಿಕೊಂಡದ್ದರಿಂದ ಬಾಳ ಸಂಗಾತಿಗಾಗಿ ಇದ್ದ ಊರಲ್ಲಿಯೇ ಶ್ರೀಮಂತ ಮನೆತನದಲ್ಲಿ ರುದ್ರಪ್ಪನವರು ವರದಣ್ಣನವರಿಗೆ ಹೆಣ್ಣು ಕೊಡಲು ವಿನಂತಿಸಿಕೊಂಡರು. ೧೫೦/- ರೂ. ವಧುದಕ್ಷಿಣೆಯೆಂದು ಸಾಮಾನ್ಯವಾಗಿ ಒಡವೆ ಹಾಕುವದೆಂದು ನಿಶ್ಚಯವಾಯಿತು. ತಂದೆಯವರು ಮೇಲಿಂದ ಮೇಲೆ ಅಜಾರೆ ಬೀಳುತ್ತಿದ್ದರು. ಇದರಿಂದ ಕೆಲವರ ಮಾತು ಕಟ್ಟಿಕೊಂಡು ಹೆಣ್ಣು ಕೊಡುವದಿಲ್ಲವೆಂದು ಹೇಳಿಕಳಿಸಿದರು. ನಿಶ್ಚಯ ಕಾರಣಕ್ಕೆ ಹಾಕಿದ ದಾಗಿನ ಕೇಳಲು ಹೋದರೆ, ನನ್ನ ತಾಯಿ 'ದಾಗಿನ ಕೊಡುವದಿಲ್ಲ'ವೆಂದು ಹಟ ಹಿಡಿದರು. ಅವರನ್ನೆ (ತಂದೆಯನ್ನೆ) ಮದುವೆಯಾಗುವೆಯೆಂದು ಹಟ ಹಿಡಿದರು. ಪಂಚಾಯಿತಿ ಕೂಡಿದಲ್ಲಿಯೇ ಸಾಗರಹಾವೇ ಬಂದು ತಲೆ ಅಲ್ಲಾಡಿಸಿ ದಾಗಿನ ಕೊಡಬೇಡವೆಂದು ತಲೆಮರೆಯಾಗಿಕೊಂಡಿತು. ಮದುವೆಯಾಯಿತು. ತಂದೆಯು ೧೦೦/- ರೂ. ತೆರ ಕೊಟ್ಟು ಇನ್ನುಳಿದ ೫೦/- ರೂ.ಗಳಿಗೆ ಪಂಗನಾಮ ಹಾಕಿದರು. ಅದಕ್ಕೆ ತಾಯಿಯು ಹುಸಿನಗೆಯಿಂದ ತಂದೆಯೊಡನೆ ಜಗಳ ಕಾಯುವುದನ್ನು ಕಂಡು ನೋಡಿ ನಾನು ನಲಿಯುತ್ತಿದ್ದೆ.

ತಂದೆಯವರು ಬ್ಯಾಡಿಗಿಯಲ್ಲಿ ಬೇಳಕೇರಿ, ನೆಲೊಗಲ್ಲ, ಉಪಾಸಿ, ದಂದೂರ, ಕುರವತ್ತೆಪ್ಪ ಶೆಟ್ರರಲ್ಲಿ ಗುಮಾಸ್ತರಾಗಿ ಕೆಲಸ ಮಾಡಿದರು. ವ್ಯಾಪಾರದಲ್ಲಿ ಚೂಟಿ ಇದ್ದರಿಂದ ಇವರನ್ನು ನಂಬಿ ಮಾಲಿಕರು ಮಾಲು ಖರೀದಿಗೆ ಆಗ್ರಾ, ದಿಲ್ಲಿ, ಖಾನಪುರ, ಅಹಮ್ಮದಾಬಾದ, ಹೈದ್ರಾಬಾದ, ನಂದ್ಯಾಲ, ಮುಂಬಯಿ ಈ ಎಲ್ಲ ಸ್ಥಳಗಳಿಗೆ ಕಳಿಸುತ್ತಿದ್ದರು. ಒಮ್ಮೆ ಮಾಲು ಖರೀದಿಗೆ ಹೋದರೆ ಊರಿಗೆ ೬ ತಿಂಗಳಾದರೂ ಬರುತ್ತಿರಲಿಲ್ಲ.

ತಂದೆಯವರ ಮದುವೆಯಾದ ೬ ವರ್ಷಗಳ ನಂತರ ನಾನು ೧೯೩೪ ರಲ್ಲಿ ದಾವಣಗೇರಿಯಲ್ಲಿ ಜನಿಸಿದೆ. ತಂದೆತಾಯಿಗಳು ಧಾರ್ಮಿಕರು. ಪೂಜೆ ಪುನಸ್ಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಶ್ರಾವಣ ಮಾಸದಲ್ಲಿ ೫ ಜನ ಮುತ್ತೈದೆಯರಿಗೆ ಕರೆಸಿ ಉಡಿ ತುಂಬಿ ಊಟ ಹಾಕುವ ಪದ್ಧತಿ ಮೊದಲಿನಿಂದಲೂ ನಡೆದಿತ್ತು. ವರ್ಷದಲ್ಲಿ ಒಮ್ಮೆಯಾದರೂ ಫಂಡರಪುರ ಜಾತ್ರೆಗೆ ಏಕಾದಶಿಗೆ ಹೋಗಿಬರುವ ವಾಡಿಕೆ. ತಿನ್ನುಣ್ಣಲು ಯಾವ ಕೊರತೆಯೂ ಇಲ್ಲ. ಬಡ ವಿದ್ಯಾರ್ಥಿ ಇಬ್ಬರ ವಾರದ ಮನೆ ಊಟವೆಂದು ೪-೬ ವರುಷ ಸತತ ನಡೆಯಿತು. ನಾನು ಒಳ್ಳೇ ಪರಿಸರದಲ್ಲಿ ಬೆಳೆದೆ. ಸಣ್ಣವನಿದ್ದಾಗ ಹೊಸ ಅಂಗಡಿ ಮುರಿಗೆಪ್ಪನವರು ನನಗೆ 'ಓಣಿ ವಜೀರ' ಎಂದು ಸಂಬೋಧಿಸಿ ನಕ್ಕುನಲಿಯುತ್ತಿದ್ದರು. ನನ್ನ ಸೋದರಮಾವನ ಕಿರಾಣಿ ಅಂಗಡಿ ಊರಲ್ಲಿಯೇ ಇದ್ದದ್ದರಿಂದ ಒಂದೇ ತಿಂಗಳಲ್ಲಿ ೩೦ ಪಾಟಿಗಳನ್ನು ಶಾಲೆಯಲ್ಲಿ

ಒಡೆದ ನೆನಪಿದೆ. ಆದರೂ ಮಾವ ಚಂದ್ರಶೇಖರಪ್ಪ ನನ್ನ ಅಳಿಯ ಕಲಿಯಲಿ ಎಂದು ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ. ಸ್ವಚ್ಛವಾದ ಪರಿಸರದಲ್ಲಿ ಡಾ. ಬಳವಳ್ಳಿ, ಮಗಳು ಮರ್ಗಾಬಾಯಿ. ತಮ್ಮ ರತ್ನಾಕರ ಮತ್ತು ಸ್ವಾತಂತ್ರ್ಯಯೋಧರು ಲಿಂಗರಾಜ ಮುದ್ದಣ್ಣನವರ ಮಾರ್ಗದರ್ಶನದಲ್ಲಿ ನಾನು ಆಗಿನ ಮುಂಬಯಿ ಸರಕಾರದ ಎಸ್‌ಎಸ್‌ಸಿ ಬೋರ್ಡಿನಿಂದ ೧೯೫೫ ರಲ್ಲಿ ಎಸ್‌ಎಸ್‌ಸಿ ತೇರ್ಗಡೆಯಾದೆ.

ಇಷ್ಟರಲ್ಲಿಯೇ ನನ್ನ ತಾಯಿ ತಂಗಿ ಸುಶೀಲಾಳಿಗೆ ಜನ್ಮ ನೀಡಿದಳು. ನಾನು ಶಾಲೆಗೆ ಹೋದಾಗ, ತಾಯಿಯು ಇಲ್ಲದಾಗ, ಹೊರಗಡೆಹೋದಾಗ ಕಾಕದೃಷ್ಟಿಯ ಕರ್ಮಿಗಳು ತಂಗಿಯ ಕುಂಡಿಯಲ್ಲಿ ಗೇರು ಹಾಕಿದರು. ಇದನ್ನು ತಾಯಿಯು ನೋಡದದ ಕಾರಣ ಸುಶೀಲಾಳು ಅಸುನೀಗಿದಳು.

೧೯೪೪ ರಲ್ಲಿ ನನ್ನ ತಮ್ಮ ಶಂಕರ ಹುಟ್ಟಿದ. ಬಹಳ ಜಾಣ, ಶ್ರಮಜೀವಿ. ಎಸ್‌ಎಸ್‌ಸಿ ವರೆಗೆ ಕಲಿತಪ. ನನ್ನ ತುಂದೆ ವ್ಯಾಪಾರದಲ್ಲಿ ಮೇಲುಗೈ. ಶೇಂಗಾ ಎಣ್ಣೆ ವ್ಯಾಪಾರದಲ್ಲಿ ಇಡೀ ಊರಿಗೆ ಆಯಿಲ್‌ಕಿಂಗ್ ಎಂದು ಎನಿಸಿಕೊಂಡವರು. ಸೋಗಿಯವರೊಂದಿಗೆ ಹಿಸೇದಿಂದ ಕಿರಾಣಿ ಅಂಗಡಿ ಸ್ಥಾಪಿಸಿದರು. ಕಿರಾಣಿ ಅಂಗಡಿ ಊರಿಗೇ ೧ ನೇ ನಂಬರ್ ಇತ್ತು. ಸೋಗಿಯವರು ಬೇರೆ ಹತ್ತಿ ಅರಳಿ ವ್ಯಾಪಾರದಲ್ಲಿ ಹಾನಿ ತಟ್ಟಿ, ಅದರ ಬಿಸಿಯು ಕಿರಾಣಿ ಅಂಗಡಿಗೂ ತಟ್ಟದೆ ಬಿಡಲಿಲ್ಲ. ಇದರಿಂದ ೧೯೫೪ ರಲ್ಲಿ ೫೦ ಸಾವಿರ ರೂಪಾಯಿ ನಮಗೆ ಹಾನಿಯಾಯಿತು.

ತಂದೆಯವರು ಉಪಜೀವನಕ್ಕೆ ಹಳ್ಳಿಹಳ್ಳಿಗೆ ಹೋಗಿ ಚಹಾಪುಡಿ ವ್ಯಾಪಾರ ಮಾಡಹತ್ತಿದರು. ಕೆಲವು ಕಾಲ ಅರಳಿಕಟ್ಟಿ(ಹಿರೇಕೆರೂರ ತಾಲೂಕ)ಯಲ್ಲಿ ಸಣ್ಣ ಕಿರಾಣಿ ಅಂಗಡಿ ಸಹ ಇಟ್ಟಿದ್ದರು. ಅಲ್ಲಿಯ ರಹವಾಸಿ ಕುಲಕರ್ಣಿ ಚಿಕ್ಕಪ್ಪನು ನನ್ನ ಆತ್ಮೀಯ ಸ್ನೇಹಿತನಾಗಿದ್ದನು. ಈಗಲೂ ಸ್ನೇಹಿತರಾಗಿದ್ದೇವೆ. ತಂದೆಯವರೊಂದಿಗೆ ನಾನು ಚಹಾಪುಡಿ ವ್ಯಾಪಾರ ಮಾಡಲು ಹೋಗುತ್ತಿದ್ದೆ, ಮತ್ತು ಒಮ್ಮೊಮ್ಮೆ ತಮ್ಮ ಶಂಕರನು ಮಳೆ ಚಳಿ ಗಾಳಿ ಎನ್ನದೆ ನನ್ನೊಂದಿಗೆ ಸಹಕರಿಸಿ ಬರುತ್ತಿದ್ದನು.

ಆರ್ಥಿಕ ಅಡಚಣೆ, ಮನೆತನದ ಭಾರದಿಂದ ತಂದೆಯವರೂ ಬಳಲಿದರು. ಅಂದೇ ನಾನು ಶಿಕ್ಷಣ ಮೊಟಕುಗೊಳಿಸಿದೆ. ಉದ್ಯೋಗ ಅರಸಿ ಅನೇಕ ಕಡೆ ಅರ್ಜಿ ಹಾಕಿದೆ.

ನಮ್ಮ ಮನೆತನದ ಪರಿಸ್ಥಿತಿ ಕಂಡ ಗೂಳಪ್ಪ ಮಠದ ಇವರ ಸಹಾಯದಿಂದ ಇಲ್ಲಿಯ ತಾಲೂಕ ಕಚೇರಿಯಲ್ಲಿ copiest ಎಂದು ಕೆಲಸ ಸಿಕ್ಕಿತು. ತಕ್ಕಮಟ್ಟಿನ ಜೀವನ ನಿರ್ವಹಣೆಗೆ ಮನೆಗೆ ಸಹಾಯಕನಾದೆ. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡಲು ನನಗೆ ಮನಸು ಹಿಡಿಸಲಿಲ್ಲ. ಬೇರೆ ಕಡೆಗೆ ಅರ್ಜಿ ಹಾಕಿದ್ದೆ. ಗ್ರಾಮಸೇವಕ ನೇಮಣೂಕಿಯಾದರೂ ಹೋಗಲಿಲ್ಲ.

ನನ್ನ ಮನದ ಇಚ್ಛೆಯಂತೆ ಸೇವಾಭಾವನೆಗೆ ಓಗೊಟ್ಟು ಜನರಲ್ ನರ್ಸಿಂಗ್ ಟ್ರೇನಿಂಗ್ ಸೇರಿದೆ. ನರ್ಸಿಂಗ್ ಟ್ರೇನಿಂಗ್ ಸೇರಿದ ೬ ತಿಂಗಳಲ್ಲಿ ನಮ್ಮ ಸಮ್ಮಂಧಿಗಳ ಮದುವೆಯ ಸಮಾರಂಭ ಧಾರವಾಡದಲ್ಲಿತ್ತು. ಅದಕ್ಕೆ ತಂದೆಯವರು ನನ್ನ ತಮ್ಮ ಶಂಕರನನ್ನು ಕಳಿಸಿದ್ದರು. ಅವನು ಮದುವೆಗೆ ಬರಲೇ ಇಲ್ಲ. ಎಲ್ಲಿಯೋ ತಪ್ಪಿಸಿಕೊಂಡನೊ, ಯಾರಾದರೂ ಅಪಹರಿಸಿದರೊ, ಹಣದ ಆಮಿಷ ಒಡ್ಡಿ ಮತಾಂತರಿಸಿದರೊ ತಿಳಿಯಲಿಲ್ಲ. ಪೇಪರದಲ್ಲಿ ಇವನು ಕಳೆದ ಬಗ್ಗೆ ಕೊಟ್ಟಾಯಿತು, ಸಿಕ್ಕಲಿಲ್ಲ. ಈವರೆಗೂ ಶಂಕರ ಬಂದಿರುವದಿಲ್ಲ. ಹುಡುಕುವ ಶ್ರಮ ವ್ಯರ್ಥವಾಗಿ ತಾಯಿ ತಂದೆಗಳು ಕೊರಗಿ ಕೊರಗಿ ಸೋತು ಸುಣ್ಣವಾದರು.

ಇಳಿವಯಸ್ಸಿನಲ್ಲಿ ನನ್ನ ತಾಯಿ ದೇವಕ್ಕನಿಗೆ ಬ್ರೆಸ್ಟ್ ಕ್ಯಾನ್ಸರ್ ಆಯಿತು. ಸಪದತ್ತಿಯಲ್ಲಿಯೇ ವಿಧಿವಶರಾದರು. ಅದರಂತೆ ತಂದೆಯು ಚಿಂತೆಯಿಂದ ೩ ವರ್ಷಗಳ ತರುವಾಯ ಗುಳೇದಗುಡ್ಡದಲ್ಲಿ ವಿಧಿವಶರಾದರು.

ತಂದೆತಾಯಿಗಳು ಉದಾರ ಜೀವಿಗಳು. ಸಹಾಯ ಅರಸಿ ಬಂದವರಿಗೆ ಎಂದೂ ಬರಿಗೈಯಿಂದ ಕಳಿಸುತ್ತಿರಲಿಲ್ಲ. ತಂದೆಯವರು ಸ್ವಂತ ಮನೆ ಮಾಡಲಿಲ್ಲ. ಭಾಡಿಗೆ ಮನೆಯಲ್ಲಿಯೇ ಜೀವಿಸಿದ್ದೆವು.

ತಂದೆ ತಾಯಿ ಗುರುಹಿರಿಯರು, ಬ್ಯಾಡಿಗಿ ಪ್ರಮುಖ ನಾಗರಿಕರ ಪುಣ್ಯಫಲದಿಂದ ನನ್ನ ಜೀವನ ಸಾರ್ಥಕವಾಯಿತು. ನಾನು ಜೀವನದಲ್ಲಿ ನನ್ನ ಮಕ್ಕಳಿಗೆ ವಿದ್ಯೆ ಕೊಟ್ಟು ಒಂದು ದಾರಿ ತೋರಿಸಿರುವೆ. ಆರೋಗ್ಯ ಇಲಾಖೆಯಲ್ಲಿ ೨೯ ವರ್ಷಗಳ ಕಾಲ ಸ್ಟಾಫ್ ನರ್ಸ್, ಸೀನಿಯರ್ ಸ್ಟಾಫ್ ನರ್ಸ್ ಎಂದು ಕೆಲ್ಸ ನಿಭಾಯಿಸಿರುವೆ.

■ ಪಾಂಡುರಂಗ ಎಸ್. ಕೋಟಿ : ಬಸವೇಶ್ವರನಗರ,ಗುಮ್ಮನಹಳ್ಳಿರೋಡ್,ಬ್ಯಾಡಗಿ (ಹಾವೇರಿ) ■

ನೀ ನನಗೆ ಬೇಡ, ಕಣೆ!

ಶ್ರೀವತ್ಸ ದೇಸಾಯಿ

೧. ಚೀನಕ್ಕೆ ಹೋಗಬೇಕಿದ್ದರೂ
ಸೈಕಲ್ಲ ಮೇಲೇ ಹೋಗುವ ನನ್ನಪ್ಪ
ಇದಿರು ಬೀದಿಗೂ ತನ್ನ ಸೈಕಲ್ಲೇ
ಕೊಟ್ಟು "ಹೋಗಪ್ಪಾ" ಎನ್ನುವ
ಅಂಥ ಅಪ್ಪನ ಬಿಟ್ಟು
ನಿನ್ನೊಡನೆ ಓಡಿ ಬರುವದೇ?

೨. ಪರೀಕ್ಷೆಯ ಸಮಯದಲ್ಲಿ
ಹಗಲಿರುಳು ರಟ್ಟು ಹೊಡೆಯುವದು ನಾನು
ನಿದ್ರೆ ಕೆಟ್ಟು ಸಂಕಟ ಪಡುವದೋ ನನ್ನಮ್ಮ
ಅವಳ ಬಿಟ್ಟು
ನಿನ್ನೊಡನೆ ಕಂಬಿ ಕೀಳುವದೇ?

೩. ಆಫೀಸಿಗೆ ಕೆಲಸಕ್ಕೆ ಹೋಗುವ ಅಣ್ಣನ
ಮಡಿಕೆ ಇಸ್ತ್ರಿ ಅಂಗಿಯ ಕದ್ದು ಧರಿಸಿ
ಊರುತುಂಬ ಮೆರೆಯುವ
ಉಂಡಾಡಿ ತಿರುಗಾಲು ತಿಪ್ಪ ನಾನು
ಕೋಪಿಸದೆ ಸಂತೋಷಿಸುವ
ಅಂಥ ಅದ್ಭುತ ಅಣ್ಣನ ಬಿಟ್ಟು
ನಿನ್ನೊಡನೆ ಕಾಲು ಕಿತ್ತುವದೇ?

೪. ನಾನು 'ಪಾಕೆಟ್ ಮನಿ' ಕೇಳಿದಾಗೆಲ್ಲ
ತನ್ನ ಒಡವೆಗೆ ಬಚ್ಚಿಟ್ಟ ಹಣವ
ಹಸನ್ಮುಖದಿಂದ ಕೈಯೆತ್ತಿ ಕೊಡುವಳು
ನನ್ನ ಪ್ರೀತಿಯ ತಂಗಿ
ಆ ರತ್ನಗೊಂಬೆಯನಗಲಿ
ನಿನ್ನೊಡನೆ ಓಡಿ ಬರಲೇ?

೫. ಕಿಡಿದೆದ್ದು ತಮ್ಮನ ಕಪಾಳಕ್ಕೆ
ಎರಡೇಟು ಏರಿಸಿದ್ದಾಗ್ಯೂ
ಅಪ್ಪ ಬರುವ ಸಮಯವೆಂದು
ಕಣ್ಣೀರ ಹತ್ತಿಕ್ಕಿಸುವ
ವಿಧೇಯ ಅನುಜನ ಕೈಬಿಟ್ಟು
ನಿನ್ನೊಡನೆ ಪಲಾಯನಗೈವುದೇ?

೬. ಹೀಗೆ ನನ್ನ ಅಳಲಿಗೆ ಕಣ್ಣೀರಿಡಲು
ಇಷ್ಟೊಂದು ಕರುಳಬಳ್ಳಿ ಸುತ್ತಲಿರುವಾಗ
ನನ್ನನ್ನು ಅಳಿಸುವ ನೀ
ನನಗೆ ಬೇಡ, ಕಣೆ!

■ ಡಾ. ಶ್ರೀವತ್ಸ ದೇಸಾಯಿ : ಕನ್ಸಲ್ಟಂಟ್ ಆಯ್ ಸರ್ಜನ್, ಡಾನ್‌ಕ್ಯಾಸ್ಟರ್ ರಾಯಲ್ ಇನ್‌ಫರ್‌ಮರಿ, ೧, ಬರ್ನ್‌ಹ್ಯಾಮ್ ಕ್ಲೋಜ್, ಬೆಸ್ಸಾಕರ್, ಡಾನ್‌ಕ್ಯಾಸ್ಟರ್, ಡಿಎನ್೪ ೭ಆರ್‌ಜಿ ■

ಸಾಂಸ್ಕೃತಿಕ ಪಠ್ಯವಾಗಿ ಯಶೋಧರ ಚರಿತೆ

ಎಚ್. ಎಸ್. ರಾಘವೇಂದ್ರ ರಾವ್

ಭಾಗ - ೧

ಒಂದು ಸಾಹಿತ್ಯಕೃತಿಯನ್ನು ಕೇವಲ ಸಾಹಿತ್ಯಕ ಅಧ್ಯಯನದ ವಸ್ತುವಾಗಿ ಪರಿಗಣಿಸಿ ವಿಮರ್ಶೆಯ ಚೌಕಟ್ಟಿನೊಳಗೆ ಪರಿಶೀಲಿಸುವುದಕ್ಕೂ ಅದೇ ಆಕರವನ್ನು ಸಂಸ್ಕೃತಿಯ ಅಧ್ಯಯನದ ಮೂಲವಾಗಿ ಪರಿಶೀಲಿಸುವುದಕ್ಕೂ ಕೆಲವು ಮುಖ್ಯ ವ್ಯತ್ಯಾಸಗಳಿವೆ. ಕನ್ನಡ ವಿಮರ್ಶೆಯಲ್ಲಿ ಇಂಥ ಸಾಂಸ್ಕೃತಿಕ ಅಧ್ಯಯನದ ಹಲವು ನಿದರ್ಶನಗಳನ್ನು ನೋಡಬಹುದು. ಆದರೂ ಅಂಥ ವಿಧಾನದ ತಾತ್ವಿಕ ನೆಲೆಗಟ್ಟು ಮತ್ತು ಅದು ಬಳಸುವ ಪರಿಕರಗಳನ್ನು ಕುರಿತ ಸ್ಪಷ್ಟವಾದ ಚಿಂತನೆಯ ಅಗತ್ಯವಿದೆ. "ಯಶೋಧರ ಚರಿತೆ"ಯನ್ನು ಅಂಥ ಅಧ್ಯಯನಕ್ಕೆ ಒಳಪಡಿಸುವುದಕ್ಕಿಂತ ಮೊದಲು ಆ ಕುರಿತು ಕೆಲವು ಮಾತುಗಳನ್ನು ಹೇಳಲಾಗಿದೆ.

ಸಾಹಿತ್ಯಕ ಆಕರಗಳನ್ನು ಅವುಗಳ ಆಕೃತಿಸೂಕ್ಷ್ಮತೆಗಳಿಂದ ಹೊರತುಪಡಿಸಿ ಕೇವಲ ಮಾಹಿತಿ ಮೂಲವೆಂದು ಪರಿಗಣಿಸುವ ರೂಕ್ಷ ಬಗೆಯೊಂದು ಮೊದಲಿನಿಂದಲೂ ರೂಢಿಯಲ್ಲಿದೆ. ದುರದೃಷ್ಟದಿಂದ ಇಂದಿನ ಶೈಕ್ಷಣಿಕ ಸಂದರ್ಭದಲ್ಲಿ ಸಾಹಿತ್ಯವು ವಿದ್ಯಾರ್ಥಿಗಳಿಗೆ ಸಂವಹನವಾಗುವ ಬಗೆಯೂ ಹೀಗೆ ಅಸೂಕ್ಷ್ಮವಾದುದೇ ಆಗಿದೆ. ಚರಿತ್ರೆ, ಸಮಾಜಶಾಸ್ತ್ರ ಮುಂತಾದ ಮಾನವಿಕ ಶಿಸ್ತುಗಳ ವಿದ್ಯಾರ್ಥಿಗಳು ಅಪರೂಪವಾಗಿ ಸಾಹಿತ್ಯವನ್ನು ಬಳಸಿಕೊಂಡಾಗಲೂ ಅದೇ ದಾರಿಯನ್ನು ಹಿಡಿಯುತ್ತಾರೆ.

ಆದರೆ ಸಾಂಸ್ಕೃತಿಕ ಅಧ್ಯಯನವು ಸಾಹಿತ್ಯಕ ಆಕೃತಿಗಳನ್ನು ಗ್ರಹಿಸುವ ಬಗೆಯು ಬೇರೆಯಾದುದು. ಭಾಷೆಯಲ್ಲಿರುವ ಎಲ್ಲ "ಕಥನ"ಗಳಿಗೂ ಅದರದೇ ಆದ ಆಕೃತಿಯಿದ್ದು, ಅವು ಕೂಡಾ ಅನೇಕ ಬಗೆಯ ಸಾಹಿತ್ಯಕ ತಂತ್ರಗಳನ್ನು ಬಳಸಿಕೊಳ್ಳುವುದರಿಂದ, ಸಾಂಸ್ಕೃತಿಕ ಅಧ್ಯಯನವು "ಸಾಹಿತ್ಯಕ ಆಕೃತಿ"ಗಳ ಅನನ್ಯತೆಯನ್ನು ಅಲ್ಲಗಳೆಯುತ್ತದೆ. ಅಂತಿಮವಾಗಿ ಆ ಕ್ಷಣದಲ್ಲಿ ನಿರ್ಮಾಣವಾಗುವ ಪಠ್ಯವು ಓದುಗನೇ ಕಟ್ಟಿಕೊಳ್ಳುವ "ರಚನೆ" (ಕನ್ಸ್ಟ್ರಕ್ಟ್) ಆಗಿರುವುದರಿಂದ ಅದು "ವಿಶಿಷ್ಟ ಕಲೆ"ಯೆಂದು ಹೇಳುವ ಅಗತ್ಯವಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ನಿರಾಕರಿತವಾಗುತ್ತಿರುವುದು "ಆಕೃತಿ"ಯಲ್ಲ, ಅದಕ್ಕೆ ಕೊಡಲಾಗುವ "ಅತಿಮಾನವ" ಸ್ಥಾನಮಾನ. ಏಕೆಂದರೆ ಆಕೃತಿಯಲ್ಲಿ ಆಗುವ ಪರಿವರ್ತನೆಗಳೂ ಸಂಸ್ಕೃತಿ ವಿಶ್ಲೇಷಣೆಯ ವ್ಯಾಪ್ತಿಯಲ್ಲಿಯೇ ಬರುತ್ತದೆ ಎನ್ನುವುದು ಇವರಿಗೆ ಗೊತ್ತು. ಅವೆರಡನ್ನೂ ಏಕ ಕಾಲದಲ್ಲಿ ಪರಿಶೀಲಿಸುವುದರಿಂದ ಸಂಸ್ಕೃತಿಯ ಅಧ್ಯಯನವನ್ನು ಅದರ ಸಾಮಾಜಿಕವಾದ ಕಾರಣಮೀಮಾಂಸೆಯ ಸಂಗಡವೇ ನಡೆಸಲು ಸಾಧ್ಯವಾಗುತ್ತದೆ. ಒಂದು ಪಠ್ಯಕ್ಕೆ ಅದು ರಚಿತವಾದ ಕಾಲದಲ್ಲಿ ಒದಗಿ ಬಂದ ಆಕೃತಿಯ ಹಿಂದೆಯೂ ಶಕ್ತಿರಾಜಕೀಯದ ಮೀಮಾಂಸೆಯಿರುತ್ತದೆ. ಅಷ್ಟೇ ಅಲ್ಲ, ಅಂಥ ಕೃತಿಯ ಯಾವ ನಿರ್ದಿಷ್ಟ ಆಶಯಗಳು ಸೋಸಿಹೋಗಿವೆ ಮತ್ತು ಯಾವ ಆಶಯಗಳು ನಮ್ಮ ಕಾಲದ ವರೆಗೆ ಹರಿದುಬಂದಿವೆ ಎನ್ನುವುದರ ವಿಶ್ಲೇಷಣೆ ಕೂಡ ರಾಜಕೀಯ ಚಲನಶೀಲತೆಗೆ ಹಿಡಿದ ಕನ್ನಡಿಯೇ ಆಗುತ್ತದೆ. ಅಂತಿಮವಾಗಿ ಯಾವುದೇ

"ಸಾಂಸ್ಕೃತಿಕ ಪಠ್ಯ"ದ ವಿಶ್ಲೇಷಣೆಯು ನಮ್ಮ ಕಾಲದ ಅಗತ್ಯಗಳಿಂದಲೇ ರೂಪಿತವಾಗಿರುತ್ತದೆ. ಅಥವಾ ನಮ್ಮ ಕಾಲದ ಬೇರೆ ಬೇರೆ ರಾಜಕೀಯ ನಿಲುವುಗಳು ಒಂದೇ ಪಠ್ಯವನ್ನು ತಮ್ಮ ಅಜೆಂಡಾಗಳಿಗೆ ಅನುಗುಣವಾಗಿ ಕಟ್ಟಿರುವ ಸಾಧ್ಯತೆಯಿದೆ. ಜನ್ನನ "ಯಶೋಧರ ಚರಿತೆ"ಯ ವಿಮರ್ಶೆಯ ಇತಿಹಾಸ ಕೂಡ ಈ ಮಾತಿಗೆ ಸಾಕ್ಷಿಯಾಗಿದೆ. ಹಾಗಲ್ಲದೆ ಸಾಂಸ್ಕೃತಿಕ ಅರ್ಥವಂತಿಕೆಯು ರಾಜಕೀಯದಿಂದ ಅಲಾಯಿದವಾದ ಸ್ವಯಂಭೂ ಪರಿಕಲ್ಪನೆಯೆಂದು ತಿಳಿಯುವ ಅಗತ್ಯವಿಲ್ಲ. ಈ ರೀತಿಯ ಓದು ಸಾಹಿತ್ಯಕೃತಿಯ ಸೂಕ್ಷ್ಮ ಓದನ್ನು (ಕ್ಲೋಸ್ ರೀಡಿಂಗ್) ನಿರಾಕರಿಸುವುದೆಂದು ತಿಳಿಯಲು ಯಾವ ಕಾರಣವೂ ಇಲ್ಲ. ಬದಲಾಗಿ ಕೃತಿಯನ್ನು ಅರ್ಥ, ಭಾಷೆ, ಸಾಂಕೇತಿಕತೆ, ಡಿಸ್‌ಕೋರ್ಸ್ ಮುಂತಾದ ಹಲವು ನೆಲೆಗಳಲ್ಲಿ ನೋಡುವ ಪ್ರಯತ್ನವು ಖಂಡಿತವಾಗಿಯೂ ಸಾಂಸ್ಕೃತಿಕವಾದ ಒಳನೋಟಗಳನ್ನೇ ನೀಡುತ್ತದೆ. ಇತ್ತೀಚಿನ ದಶಕಗಳಲ್ಲಿ ಸ್ತ್ರೀವಾದೀ ವಿದ್ವಾಂಸರು ಮಹಾನ್ ಲೇಖಕರೆಂದು ಪರಿಗಣಿತರಾದ ಸಾಹಿತಿಗಳ ಪಠ್ಯಗಳನ್ನು ಲಿಂಗಾಧರಿತ ತಾತ್ವಿಕತೆಯ ನೆಲೆಗಟ್ಟಿನಿಂದ ಮರುವ್ಯಾಖ್ಯಾನ ಮಾಡಿರುವ ಬಗೆಯು ಈ ಮಾತಿಗೆ ಸಾಕ್ಷಿ. ಯಶೋಧರ ಚರಿತೆಯಂಥ ಕೃತಿಯು ಖಂಡಿತವಾಗಿಯೂ ಇಂಥ ಸಬ್‌ವರ್ಸೀವ್ ಅರ್ಥೈಸುವಿಕೆಗೆ ಅವಕಾಶ ಮಾಡಿಕೊಡುತ್ತದೆ. ಹಾಗೆ ನೋಡಿದರೆ ಗಿರೀಶ ಕಾರ್ನಾಡರ "ಹಿಟ್ಟಿನಹುಂಜ"ವು ಈ ರೀತಿಯ ಸೃಜನಶೀಲ ಮರುವ್ಯಾಖ್ಯಾನವೇ ಆಗಿದೆ. ಸಾಹಿತ್ಯಕ ತಾತ್ವಿಕತೆಯ ಉಗಮವಿರುವುದು ಸಾಮಾಜಿಕ-ರಾಜಕೀಯ ಸ್ಥಿತ್ಯಂತರಗಳಲ್ಲೇ ಆಗಿರುವುದರಿಂದ ಮೇಲುನೋಟಕ್ಕೆ ಕೇವಲ ಸಾಹಿತ್ಯಕವೆಂದು ತೋರುವ ವಿಧಾನಗಳ ಹಿಂದೆಯೂ ಸಾಂಸ್ಕೃತಿಕವಾದ ನೆಲೆಗಳು ಇದ್ದೇ ಇರುತ್ತವೆ. ಯಶೋಧರ ಚರಿತೆಯ ಮೂಲ ಆಶಯವು ಕಾಲದಿಂದ ಕಾಲಕ್ಕೆ ಬೆಳೆದುಬಂದಿರುವ ಬಗೆಯಲ್ಲಿ, ಆ ಕಥೆಯಿಂದ ಲುಪ್ತವಾಗಿರುವ ಅಥವಾ ಅದಕ್ಕೆ ಸೇರಿಕೊಂಡಿರುವ ಘಟಕಗಳಲ್ಲಿ, ಆ ಕಾವ್ಯವನ್ನು ಸಂಕಲನ ಮಾಡಿರುವ ಮತ್ತು ಸಂಗ್ರಹಿಸಿರುವ ರೀತಿಯಲ್ಲಿ, ಅಂತೆಯೇ ಜನ್ನನ ಕಾವ್ಯದ ವಿಮರ್ಶೆಯಲ್ಲಿ ಈ ಸಾಂಸ್ಕೃತಿಕ ಅನುಸಂಧಾನದ ಹಲವು ಮುಖಗಳನ್ನು ಗುರುತಿಸಬಹುದು.

ಭಾಗ-೨

"ಯಶೋಧರ ಚರಿತೆ"ಯನ್ನು ನಾವು ಕೇವಲ ಜನ್ನನ ಕೃತಿಯಾಗಿ ನೋಡುವ ಬದಲು ಸೋಮದೇವನ "ಕಥಾಸರಿತ್ಸಾಗರ", ವಾದಿರಾಜನ "ಯಶೋಧರ ಚರಿತೆ", ಇವೆಲ್ಲಕ್ಕೂ ಮೂಲವಾಗಿರಬಹುದಾದ ಜಾನಪದ ಕಥೆ ಮುಂತಾದ ಆಕರಗಳ ಸಂಗಾತದಲ್ಲಿ ನೋಡುವುದು ಬಹಳ ಫಲಪ್ರದವಾದ ಕೆಲಸ. ಜನ್ನನು ಕೈಬಿಡುವ, ಹಿನ್ನೆಲೆಯಲ್ಲಿಯೇ ಉಳಿಸಿಬಿಡುವ, ಮೆಲುದನಿಯಲ್ಲಿಯೇ ಹೇಳಿ ಸುಮ್ಮನಾಗುವ ವಿವರಗಳು ಕೃತಿಯ ಸಾಂಸ್ಕೃತಿಕ ಗ್ರಹಿಕೆಗೆ ನೆರವಾಗುತ್ತವೆ. ಹಾಗೆ ನೋಡಿದಾಗ ಅ-ವೈದಿಕ, ಅ-ಶೈವ ಹಾಗೂ ಅ-ಜೈನ ಸಮುದಾಯಗಳನ್ನು ಜೈನೀಕರಿಸುವ ಪ್ರಕ್ರಿಯೆಯ ಫಲವಾದ ತಲ್ಲಣಗಳು ಕೃತಿಯ ತುಂಬಾ ಹರಡಿಕೊಂಡಿವೆ. ಯಶೋಧರನ ಕುಟುಂಬದ ಬೇರೆ ಬೇರೆ ಘಟಕಗಳನ್ನು ಎಷ್ಟರ ಮಟ್ಟಿಗೆ ಯಾಕೆ ಜೈನರೆಂದು ಕರೆಯಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ಆ ಕುಟುಂಬದ ದೈನಿಕಗಳು, ಆಚರಣೆಗಳು ಮತ್ತು ಪ್ರವೃತ್ತಿಜನ್ಯ ವರ್ತನೆಗಳನ್ನು ವಿವರವಾಗಿ ಗಮನಿಸಿದಾಗ ಅಲ್ಲಿ ಜೈನಸಹಜ

ವಿವರಗಳು ಬಹಳ ಕಡಿಮೆಯೆಂದು ತೋರುತ್ತವೆ. ಚಂದ್ರಮತಿಯು ಮೂಲದಲ್ಲಿ ಜೈನವಲ್ಲದ ಯಾವುದೋ ಕೆಳಧರ್ಮದಿಂದ ಬಂದಿರಬೇಕೆನ್ನುವುದರಲ್ಲಿ ಅನುಮಾನವೇ ಇಲ್ಲ. ಅವಳ ಮಾತು ಹಾಗಿರಲಿ. ಯಶೋಧರನ ಮಗನಾದ ಯಶೋಮತಿಯ ವರ್ತನೆಯು ಇಡೀ ಕಾವ್ಯದಲ್ಲಿ ಒಂದಿನಿತಾದರೂ ಜೈನನಂತೆ ಮೂಡಿಬಂದಿದೆಯೇ? ಅತ್ಯಂತ ಕ್ರೂರವಾದ ಪ್ರಾಣಹಿಂಸೆಯಲ್ಲಿ ತೊಡಗಿಕೊಳ್ಳುವ, ತಾಯಿಯ ವರ್ತನೆಯನ್ನು ಸಹಿಸಿಕೊಳ್ಳುವ, ಶ್ರಾದ್ಧಕರ್ಮಗಳನ್ನು ಬಹಳ ನಿಷ್ಠೆಯಿಂದ ನೆರವೇರಿಸುವ ಇವನನ್ನು ಜೈನನೆಂದು ಕರೆಯುವುದಾದರೂ ಹೇಗೆ? ಅಷ್ಟೇಕೆ, ಯಶೋಧರನಿಂದ ಕಥೆ ಕೇಳುತ್ತಿರುವ ಹಿಂಸಾರಭಸಮತಿಯಾದ ಮಾರಿದತ್ತನೂ ಯಶೋಧರನ ನಂಟನೇ ಅಲ್ಲವೇ? ಅವನೂ ಕೂಡ ಜೈನನಲ್ಲ. ಹಾಗಾದರೆ ಇಡೀ ಕುಟುಂಬದಲ್ಲಿ ಯಶೋಧರನು ನಿಯಮವೋ, ಅಪವಾದವೋ? ಅವನ ಕತ್ತಿಯು ಕೂಡ ಯುದ್ಧದಲ್ಲಿ ಶತ್ರುಗಳನ್ನು ಇರಿಯಲು ಬಳಕೆಯಾಗುತ್ತಿದ್ದ ಭುಜಾಸಿಯೇ ಅಲ್ಲವೇ? ಅಷ್ಟೇಕೆ, ಸಾಕ್ಷಾತ್ ಚಂಡಮಾರಿ ದೇವತೆಯನ್ನೇ ಒಂದು ಪಾತ್ರವಾಗಿ ಚಿತ್ರಿಸಿ ಆಕೆಯಲ್ಲಿಯೂ ಪರಿವರ್ತನೆಯಾಗುವುದನ್ನು ಹೇಳಲಾಗಿದೆ. ಇಂಥ ಜೈನೀಕರಣ ಪ್ರಕ್ರಿಯೆಯ ಫಲವಾದ ತಲ್ಲಣಗಳು ಹಾಗೂ ಇಕ್ಕಟ್ಟುಗಳನ್ನು ಇಡೀ ಕಾವ್ಯದಲ್ಲಿ ಗುರುತಿಸಬಹುದು. ಆ ಸಾಹಿತ್ಯಕ ವಿದ್ಯಮಾನವು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಪ್ರತಿಫಲನವೇ ಆಗಿರುತ್ತದೆ.

ಎರಡನೆಯದಾಗಿ ಯಶೋಧರ ಚರಿತೆಯ ಮೂಲ ಆಶಯವು ಜಾನಪದ ಕಥೆಯಾಗಿ ವಿಶ್ವವ್ಯಾಪಿಯಾಗಿದೆ. ಗಂಡನಿಗೆ ದ್ರೋಹ ಬಗೆಯುವ ಹೆಣ್ಣಿನ ಈ ರಿಕರೆಂಟ್ ಮೋಟಿಫ್ ಯಾವುದೇ ವಿಧವಾದ ಧಾರ್ಮಿಕ ಆವರಣವನ್ನು ಪಡೆದಿರುವುದಿಲ್ಲ. ಉದಾಹರಣೆಗೆ ಅರೇಬಿಯನ್ ನೈಟ್ಸ್ ಕಥೆಗಳಲ್ಲಿ, ತನ್ನ ಗಂಡನನ್ನು ಸೊಂಟದ ವರೆಗೆ ಕಲ್ಲಾಗಿ ಪರಿವರ್ತಿಸಿ ಅವನ ಕಣ್ಣೆದುರಿಗೆ, ಪ್ರಿಯಕರನೊಂದಿಗೆ ವ್ಯಭಿಚಾರದಲ್ಲಿ ತೊಡಗುವ ಹೆಣ್ಣಿನ ಕಥೆ ಬರುತ್ತದೆ. ಆದರೆ ಆ ಕಥೆಯನ್ನು ಜೈನಧರ್ಮದ ತಾತ್ವಿಕತೆಯು ತನ್ನದಾಗಿ ಅಪ್ರೊಪ್ರಿಯೇಟ್ ಮಾಡಿಕೊಂಡಿರುವಂತೆ ತೋರುತ್ತದೆ. ಈ ಜೈನೀಕರಣ ಪ್ರಕ್ರಿಯೆಯನ್ನು ಯಶೋಧರ ಚರಿತೆಯ ಹಲವು ಅವತಾರಗಳಲ್ಲಿ ಕಾಣಬಹುದು. ಹಾಗೆಯೇ ಅಂಥ ತಾತ್ವಿಕತೆಯ ಬಂಧನದಿಂದ ಬಿಡಿಸಿಕೊಳ್ಳುವ ಬಗೆಯನ್ನೂ ಇಪ್ಪತ್ತನೆಯ ಶತಮಾನದ ಅನೇಕ ಪುನರವತಾರಗಳಲ್ಲಿ ನೋಡಬಹುದು. ಪ್ರಾಕೃತ, ಸಂಸ್ಕೃತ, ಕನ್ನಡ, ನೋಂಪಿಯ ಕಥೆ, ಕೊನೆಗೆ ಆಧುನಿಕ ಕೃತಿಗಳಾದ "ಹಿಟ್ಟಿನ ಹುಂಜ", "ಕಾನೂರು ಹೆಗ್ಗಡಿತಿ" ಹಾಗೆಯೇ ವಿವಾಹಬಾಹಿರ ಸಂಬಂಧಗಳನ್ನು ಪರಿಶೀಲಿಸುವ ಹಲವು ಕೃತಿಗಳಲ್ಲಿ ಈ ನೆಲೆಗಳನ್ನು ಗುರುತಿಸಬಹುದು. ಮೊದಮೊದಲು ಸಮುದಾಯದ ವರ್ತನೆಯನ್ನು ಸಮರ್ಥಿಸುವ, ಅದಕ್ಕೆ ಮಾದರಿಯಾಗುವ ರಾಜರುಗಳು ಕ್ರಮೇಣ ತಮ್ಮ ಮೇಲೆ ಇರಬಹುದಾದ ಧಾರ್ಮಿಕ, ಆರ್ಥಿಕ ಒತ್ತಡಗಳಿಗೆ ಸಿಲುಕಿ ತಮ್ಮ ಆಚರಣೆ-ನಿಲುವುಗಳನ್ನು ಬದಲಾಯಿಸಿಕೊಳ್ಳುವ ಪ್ರಕ್ರಿಯೆಯೂ ಈ ಕೃತಿಯಲ್ಲಿ ಕಾಣುತ್ತದೆ. ಮಾರಿದತ್ತ, ಚಂಡಕರ್ಮ, ಯಶೋಮತಿಯರ ಮೇಲಿನ ಒತ್ತಡಗಳು ನಮಗೆ ಹೇಳುವ ಸತ್ಯಗಳು ಯಾವುವು? ಹಾಗೆಯೇ ಮಾರಿಗುಡಿಯ ಭಕ್ತರ ವರ್ತನೆ ಮತ್ತು ಯಶೋಮತಿಯ "ಹಿಂಸಾರಭಸಮತಿ"ಗಳು ಎಂಥ ಸಮುದಾಯಗಳು ಹಾಗೂ ರಾಜರನ್ನು ಸೂಚಿಸುತ್ತವೆ? ಮಾರಿದತ್ತನ ಪರಿವರ್ತನೆಯು ಸಂಭಾವ್ಯ ವಾಸ್ತವವೋ ಅಥವಾ ಕವಿಯ ಆಶಾಚಿಂತನವೋ?

ಹಾಗೆ ನೋಡಿದರೆ ಜನ್ನನು ಯಾವುದನ್ನು ವಾಸ್ತವವೆಂದು ಚಿತ್ರಿಸುತ್ತಿರುವನೋ ಅದು ವಾಸ್ತವವಲ್ಲ. ಚಂಡಮಾರಿ ಮತ್ತು ಸುದತ್ತಾಚಾರ್ಯರು ಪ್ರತಿಪಾದಿಸುವ ಮೌಲ್ಯಗಳ ನಡುವಿನ ಸಂಘರ್ಷವಷ್ಟೇ ವಾಸ್ತವ. ಕೊನೆಗೂ ಮಾರಿಗುಡಿಯ ಹಿಂಸಾಮಯವಾದ ವಾಸ್ತವವು ಎಲ್ಲೋ ಕಡೆ ರಾಜಧಾನಿಯ ಆಗುಹೋಗುಗಳನ್ನು ನಿಯಂತ್ರಿಸುವ ಮನುಷ್ಯನ ಆದಿಮ ಪ್ರವೃತ್ತಿಗಳ ಲೌಕಿಕವೇ ಹೌದು. ಈ ಸಂಗತಿಗಳು ರಾಜೇಂದ್ರ ಚೆನ್ನಿಯವರ ಲೇಖನದಲ್ಲಿ ಚೆನ್ನಾಗಿ ಪ್ರತಿಪಾದಿತವಾಗಿವೆ. ಜನ್ನನ ಕಾಲದಲ್ಲಿಯೇ ಕ್ಷತ್ರಿಯರಲ್ಲದ, ಅನ್ಯ ಶೂದ್ರ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳು ರಾಜ್ಯಸ್ಥಾಪನೆ ಮಾಡುವ ಪ್ರವೃತ್ತಿಯು ಜಾರಿಯಲ್ಲಿ ಬಂದಿತ್ತೆನ್ನುವುದನ್ನು ಗಮನಿಸಿದಾಗ ಈ ಮಾತಿಗೆ ಇನ್ನಷ್ಟು ಮಹತ್ವವು ಬರುತ್ತದೆ. ಒಂದು ರೀತಿಯಲ್ಲಿ ಇದು ವರ್ಣವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಪಲ್ಲಟಗಳ ಪ್ರತಿಫಲನವೂ ಹೌದು.

ಹಾಗೆಯೇ ಸೋಮದೇವನ ಕೃತಿಯಲ್ಲಿ, ಪ್ರಾಣಬಲಿ ಮಾಡಲೇಬೇಕೆಂದು ಮಾರಿದತ್ತನಿಗೆ ಪ್ರಚೋದನೆ ಮಾಡುವ ಭೈರವಾನಂದನೆಂಬ ಶೈವಯೋಗಿಯ ಪ್ರಸ್ತಾಪ ಬರುತ್ತದೆ. ವಾದಿರಾಜ ಮತ್ತು ಜನ್ನರು ಈ ಪ್ರಸ್ತಾಪವನ್ನು ಕೈಬಿಡುತ್ತಾರೆ. ಜನ್ನನ ಆಶ್ರಯದಾತರಾದ ಬಲ್ಲಾಳ ಮತ್ತು ನರಸಿಂಹರ ಶೈವಧರ್ಮವು ಇದಕ್ಕೆ ಎಷ್ಟು ಮಟ್ಟಿಗೆ ಕಾರಣವೆಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಅಲ್ಲಿಯೇ ಬರುವ ಇನ್ನೊಂದು ಪ್ರಶ್ನೆಯೆಂದರೆ ತನ್ನ ತಂದೆಯ ಸಾವಿಗೆ ಕಾರಣರಾದ ಅಮೃತಮತಿ ಮತ್ತು ಅಷ್ಟಾವಂಕರನ್ನು ರಾಜನಾದ ಯಶೋಮತಿಯು ಸಹಿಸಿಕೊಳ್ಳುವ ರೀತಿ. ಕಾವ್ಯದ ಕೊನೆಯ ವರೆಗೂ ಅಮೃತಮತಿಯು ತನ್ನ ಪ್ರಿಯಕರನ ಸಂಗಡ ಅ-ಜೈನವಾಗಿ ಬದುಕಿಯೇ ಇರುತ್ತಾಳೆ. ಅವಳ ಮಗನು ಆಕೆಯ ಬಗ್ಗೆ ಅನಾದರವನ್ನೂ ತೋರಿಸುವುದಿಲ್ಲ. ತಾಯಿಗೆ ಬೇಕಾದ ಬಾಡು, ಕಳ್ಳುಗಳನ್ನು ಸರಬರಾಜು ಮಾಡಲು ಮಗನು ಹಿಂದೆಗೆಯುವುದಿಲ್ಲ. ಹಾಗಾದರೆ ಆ ವಂಶದಲ್ಲಿ ಯಶೋಧರನದು ಅಲ್ಪಸಂಖ್ಯಾತವೂ ಅಲಕ್ಷಿತವೂ ಆದ ಸ್ಥಾನಮಾನಗಳೇ?

ಇನ್ನು ಮುಂದೆ ನಾನು ಹೊಸದಾಗಿ ಪ್ರಸ್ತಾಪಿಸುತ್ತಿರುವ ಕೆಲವು ಸಂಗತಿಗಳನ್ನು ವಿವರಿಸಲಾಗಿದೆ :

ಮೊದಲನೆಯದಾಗಿ ನಾನು "ಡೀವಿಯನ್ಸ್" ಎನ್ನುವ ಪರಿಕಲ್ಪನೆಯನ್ನು ತೆಗೆದು ಕೊಳ್ಳುತ್ತೇನೆ. ಇದನ್ನು ಮಾರ್ಗಪಲ್ಲಟ ಎಂದು ಕರೆಯಬಹುದು. ಇದು, ಸಮಾಜದಿಂದ ಸ್ವೀಕೃತವಾದ, ಒಪ್ಪಿತವಾದ ವರ್ತನೆಗಿಂತ ಭಿನ್ನವಾಗಿ, ಬೇರೊಂದು ಅತಿಯನ್ನು ತಲುಪಿದಾಗ ಮನುಷ್ಯನಿಗೆ ಬರಬಹುದಾದ ಹೊಸ ತಿಳಿವಳಿಕೆಗಳನ್ನು ಪ್ರಸ್ತಾಪಿಸುತ್ತದೆ. ಸಾಹಿತ್ಯದಲ್ಲಿ ಹಾಗೆಯೇ ಜೀವನದಲ್ಲಿ ಮಾರ್ಗಪಲ್ಲಟದ ಪ್ರಕ್ರಿಯೆಯು ಇಡೀ ಸಮುದಾಯದ ಜೀವನಕ್ರಮವನ್ನು ಪರಿಶೀಲಿಸುವ ಪರೀಕ್ಷಿಸುವ ಕೆಲಸದಲ್ಲಿ ತೊಡಗುತ್ತದೆ. ಅಂಥ ಪರಿಶೀಲನೆಯ ಮೂಲಕವಾಗಿಯೇ ಸಂಸ್ಕೃತಿಯನ್ನು ಕುರಿತಾಗಿ, ಮನುಷ್ಯಸ್ವಭಾವವನ್ನು ಕುರಿತು ಒಳನೋಟಗಳು ಲಭಿಸುತ್ತವೆ. ಉದಾಹರಣೆಯಾಗಿ ಸಂನ್ಯಾಸಿಯಾಗುವ ಮಾರ್ಗಪಲ್ಲಟವು ಗೃಹಸ್ಥಜೀವನವನ್ನು ಪರೀಕ್ಷೆಗೆ ಒಡ್ಡಬಹುದು. ಮೇರಿ ಡಗ್ಲಾಸ್ ಎಂಬ ಸಾಂಸ್ಕೃತಿಕ ಸಮಾಜಶಾಸ್ತ್ರಜ್ಞೆಯು ಇವುಗಳನ್ನು ಸಾಂಸ್ಕೃತಿಕ ಗಡಿಗೆರೆಗಳೆಂದು (Cultural Boundaries) ಕರೆಯುತ್ತಾಳೆ. ಯಾವುದಾದರೊಂದು ವ್ಯಕ್ತಿ, ಸಮುದಾಯ, ಅಥವಾ ಕಾಲ್ಪನಿಕ ಪಾತ್ರವು

ಸಾಂಸ್ಕೃತಿಕ ಗಡಿಗೆರೆಯನ್ನು ತಲುಪಿದಾಗ ಅಥವಾ ದಾಟಿದಾಗ ಪಡೆಯುವ ಅನುಭವಗಳು ಹಾಗೂ ತಲ್ಲಣಗಳು ಅಸಾಮಾನ್ಯವಾದವು. ಅಂಥ ಸನ್ನಿವೇಶವು ಸಾಹಿತ್ಯಕೃತಿಯಲ್ಲಿ ಬಂದಾಗಲೂ ನಮಗೆ ಅಪರೂಪದ ತಿಳಿವಳಿಕೆ ಬರುತ್ತದೆ. ನಾವು ಯಾವುದನ್ನು ಆಬ್ವಿಯಸ್ ಎಂದು ತಿಳಿದಿದ್ದೆವೋ ಅದು ಅಷ್ಟೊಂದು ಆಬ್ವಿಯಸ್ ಅಲ್ಲವೆಂದು ಗೊತ್ತಾಗುತ್ತದೆ. ಉದಾಹರಣೆಗೆ ದಾಂಪತ್ಯದ ಬಗ್ಗೆ, ಪ್ರೇಮ-ಕಾಮಗಳ ಬಗ್ಗೆ ಅಥವಾ ಗಂಡು ಹೆಣ್ಣುಗಳ ಸಂಬಂಧದ ಬಗೆಗಿನ ವಾಸ್ತವವು ನಾವು ನಂಬಿರುವ ಆದರ್ಶಗಳು ಹಾಗೂ ಪೋಷಿಸಿಕೊಂಡು ಬಂದಿರುವ ಭ್ರಮೆಗಳಿಗಿಂತ ಬೇರೆಯೇ ಆದ ಸಾಧ್ಯತೆಗಳನ್ನು ಹೊಂದಿರಬಹುದು ಎಂಬ ಸತ್ಯವು ಅಂಥ ಸಂಬಂಧಗಳನ್ನು ಅಂಚಿನ ತನಕ ತೆಗೆದುಕೊಂಡು ಹೋಗಿ ಅಲ್ಲಿ ನೋಡಿದಾಗ ತಿಳಿದುಬರುತ್ತದೆ. ಸಾಮಾನ್ಯವಾಗಿ ಕಾಣುವ ಮಾರ್ಗಪಲ್ಲಟವೆಂದರೆ ಲೈಂಗಿಕ ಅಪವರ್ತನೆ. ಹಾಗೆಯೇ ಹುಚ್ಚು, ರೋಗ, ಸೆರೆ, ಹಿಂಸೆ, ಬಂಧನ ಮುಂತಾದ ಡೀವಿಯಂಟ್ ಸನ್ನಿವೇಶಗಳ ಬಗ್ಗೆ ಹೇಳುತ್ತಿರುವ ಬರವಣಿಗೆಯು ಕೇವಲ ಡೀವಿಯಂಟ್ ಆದುದರ ಬಗ್ಗೆ ಮಾತನಾಡದೆ ಯಾವುದನ್ನು ನಾವು ನಾರ್ಮಲ್ ಎಂದು ಕರೆಯುವೆವೋ ಅದನ್ನು ಕುರಿತೂ ಮಾತನಾಡುತ್ತದೆ. ಹೀಗೆ ನೋಡಿದಾಗ "ನೋಡುವ ಕಣ್ಗಳ ಸಿರಿ, ಕೂಡುವ ತೋಳ್ಗಳ ಪುಣ್ಯ, ಮಾತಾಡುವ ಬಾಯ್ಗಳ ರಸಾಯನ"ವಾದ ಕುವರ ವಿದ್ಯಾಧರನ ರೂಪವು ಯಾಕೆ ಅಮೃತಮತಿಗೆ ಹಿಡಿಸಲಿಲ್ಲವೆಂಬ ಪ್ರಶ್ನೆಯು ಸಹಜವಾಗಿಯೇ ಮೂಡುತ್ತದೆ. ಅಷ್ಟಾವಂಕನ ಕುರೂಪ, ಯಶೋಮತಿಯ ಕ್ರೌರ್ಯ ಮತ್ತು ಅಮೃತಮತಿಯ ಇಂದ್ರಿಯಾನುಭವಲೀನತೆಗಳನ್ನು ಮಾರ್ಗಪಲ್ಲಟದ ಗಡಿಗೆರೆಯೆಂದೇ ನೋಡುವ ಸಾಧ್ಯತೆಯಿದೆ. ಆ ಇಂದ್ರಿಯಾನುಭವಲೀನತೆಗೋಸ್ಕರ ಅವಳು ಯಾವ ತ್ಯಾಗವನ್ನು ಬೇಕಾದರೂ ಮಾಡಲು ಸಿದ್ಧಳಾಗಿದ್ದಾಳೆ. ಅವಳ ದೃಷ್ಟಿಯಲ್ಲಿ ಅದು ತ್ಯಾಗವಲ್ಲ. ಕುಷ್ಠರೋಗ ಬಂದು ಮೈಯೆಲ್ಲ ರಸಿಕೆ ಒಸರುತ್ತಿದ್ದರೂ, "ನನ್ನ ಬಾಡು, ನನ್ನ ಕಳ್ಳು, ನನ್ನ ಗಂಡು ನನಗೆ ಬೇಕು. ಅವು ನನಗೆ ಸುಖ ಕೊಡುತ್ತವೆ" ಎಂಬ ತಿಳಿವಳಿಕೆಯನ್ನು ಡೀವಿಯಂಟ್ ಬಿಹೇವಿಯರ್ ಎಂದು ಯಾಕೆ ಕರೆಯಬೇಕು ಎಂಬ ಪ್ರಶ್ನೆಯನ್ನು ಕೂಡ ನಾವು ಕೇಳಿಕೊಳ್ಳಬೇಕಾಗುತ್ತದೆ. ಯಾಕೆಂದರೆ ನಾವು ಯಾವುದನ್ನು ಡೀವಿಯಂಟ್ ಎಂದು ಕರೆಯುತ್ತೇವೆಯೋ ಅದು ಅನಿವಾರ್ಯತೆಯೂ ಆಗಿರಬಹುದು, ಆಯ್ಕೆಯೂ ಆಗಿರಬಹುದು. ಅಥವಾ ಆ ಹಂತವನ್ನು ತಲುಪಿದಾಗಲೇ ಇತರ ರೀತಿಯ ವರ್ತನೆಗಳಿಗೆ ಹೊಸ ಅರ್ಥಗಳು, ಆಯಾಮಗಳು ಗೋಚರಿಸಬಹುದು. "ಸಂಸ್ಕಾರ"ದ ಪ್ರಾಣೇಶಾಚಾರ್ಯರಿಗೆ ಚಂದ್ರಿಯ ಸಂಗದಿಂದಲೂ ಒದಗುವ ಹೊಸ ಮೌಲ್ಯಸಂಹಿತೆಯನ್ನು ನೆನಪು ಮಾಡಿಕೊಳ್ಳಿ. ಅಷ್ಟೇ ಅಲ್ಲ, ಡೀವಿಯಂಟ್ ಎನ್ನುವುದು ನಿಜವಾಗಿಯೂ ನಿಯಮಭಂಗವಾಗದೆ, ಸಮಾಜದಲ್ಲಿ ಪ್ರಚಲಿತವಾಗಿರುವ, ಆದರೆ ನೈತಿಕ ಮನ್ನಣೆಯನ್ನು ಪಡೆಯದ ವರ್ತನವಿಧಾನವೂ ಆಗಿರಬಹುದು. ಹಾಗೆ ಕಂಡಾಗ, ನೀತಿಯಿಂದ ಬದ್ಧವಾದ ವರ್ತನೆಯೇ ಡೀವಿಯೇಶನ್ ಆಗಿರಬಹುದು. ಉದಾಹರಣೆಗೆ ಆರ್ಥಿಕ ನೈತಿಕತೆಯ ಬಗ್ಗೆ ನಾವು ಮಾಡುವ ಬಾಯಿಬಡಾಯಿಗಳೆಲ್ಲ ನಿಜವಾಗಿದ್ದರೆ ಸಮಾಜದಲ್ಲಿ ಭ್ರಷ್ಟತೆಯೇ ಇರುತ್ತಿರಲಿಲ್ಲ.

ಸಾಂಸ್ಕೃತಿಕ ಗಡಿಗೆರೆಗಳು ಎಂಬ ಪರಿಕಲ್ಪನೆಯ ಸಂಗಡವೇ ಬಳಸಬಹುದಾದ ಇನ್ನೊಂದು ಪರಿಕಲ್ಪನೆಯೆಂದರೆ ಪ್ರತೀಕಾತ್ಮಕ ಗಡಿಗೆರೆಗಳು (Symbolic Boundaries) ಎನ್ನುವುದು.

ಅವನಿಗೆ ಯಾವ ಆತಂಕವೂ ಇಲ್ಲ. (ತೀರ ಇತ್ತೀಚೆಗೆ ಪ್ರಾಣಿಗಳನ್ನು ಕೊಂದು ತಿನ್ನುವವರ ಬಗ್ಗೆ ಯಾವುದೇ ಆಕ್ಷೇಪಣೆಯೂ ಇಲ್ಲದ ವಿಚಾರವಾದಿಗಳು ಮಂತ್ರಿಯೊಬ್ಬರು ಕುರಿಗಳನ್ನು ಬಲಿಕೊಡುವ ಜಾಗದಲ್ಲಿ ಇದ್ದರೆನ್ನುವುದಕ್ಕೆ ತೀವ್ರವಾದ ಪ್ರತಿಭಟನೆಯನ್ನು ತೋರಿಸಿದ ಸನ್ನಿವೇಶವನ್ನು ನೆನಪು ಮಾಡಿಕೊಳ್ಳಬಹುದು. ಅಂಥ ವರ್ತನೆಯ ಹಿಂದಿನ ಸಾಂಸ್ಕೃತಿಕ ಒತ್ತಾಯಗಳು ಯಾವ ಬಗೆಯವು?)

ಹೀಗೆಯೇ ಮಾರಿಗುಡಿಯ ಸನ್ನಿವೇಶವನ್ನೇ ಗಮನಿಸಿ. ಮಾರಿದತ್ತನ ಪ್ರಜೆಗಳೇ ಆದ ಅನೇಕರು ಅನ್ಯಹಿಂಸೆ ಹಾಗೂ ಆತ್ಮಹಿಂಸೆಗಳಲ್ಲಿ ಬಹಳ ಸಂತೋಷವಾಗಿ ತೊಡಗಿಕೊಂಡಿದ್ದಾರೆ. ಇದರ ಬಗ್ಗೆ ಅವರಿಗೆ ಭಯ, ಸಂಕೋಚ, ಆತ್ಮನಿಂದೆ ಮುಂತಾದ ಯಾವುದೇ ಭಾವನೆಯೂ ಇಲ್ಲ. ಅಸಹ್ಯ ಅಸಹನೆಗಳನ್ನು ತೋರಿಸುವವರು ಜೈನರಾದ ಮಕ್ಕಳು ಮತ್ತು ಜೈನನಾದ ಕವಿ ಇಬ್ಬರೇ? ಓದುಗರ ಮೇಲೂ ಕವಿಪರವಾದ ಒತ್ತಾಯವನ್ನೇ ತರಲಾಗಿದೆ.

ಹೀಗೆ ಒಂದು ಕಾವ್ಯದ ಸಾಂಸ್ಕೃತಿಕ ಬಹುಮುಖತೆಯನ್ನು ಅಲ್ಲಿನ ಪ್ರತೀಕಲೋಕಕ್ಕೆ ದೊರೆಯುವ ಪ್ರತಿಕ್ರಿಯೆಗಳ ವೈವಿಧ್ಯದಿಂದಲೂ ತಿಳಿಯಬಹುದು.

ವ್ಯಕ್ತಿಗಳ ಅಂತರಂಗದ ಆಗುಹೋಗುಗಳ ವಿಶ್ಲೇಷಣೆಗಿಂತ ಭಿನ್ನವಾಗಿ ಸಮುದಾಯಗಳ ವರ್ತನೆಯ ಸಂಕೀರ್ಣ ಸಾಧ್ಯತೆಗಳನ್ನು ಅರಸುವುದು ಸಾಂಸ್ಕೃತಿಕ ಅಧ್ಯಯನದ ಇನ್ನೊಂದು ಸಾಧ್ಯತೆ. "ಯಶೋಧರ ಚರಿತೆ"ಯಲ್ಲಿ ಹೆಣ್ಣುಮಕ್ಕಳದು ಒಂದು ಗುಂಪು. ರಾಜವರ್ಗಕ್ಕೆ ಸೇರಿದವರದು ಇನ್ನೊಂದು ಗುಂಪು. ಜೈನಯತಿಗಳು ಹಾಗೂ ಅವರ ಶಿಷ್ಯವರ್ಗದ್ದು ಮತ್ತೊಂದು ಗುಂಪು. ಹಿಂಸಾರಭಸಮತಿಗಳಾದ ಜನರದು ನಾಲ್ಕನೆಯ ಗುಂಪು. ಇವರು ಒಟ್ಟಾಗಿ ವರ್ತಿಸುವ ಬಗೆಯನ್ನು ವಿವರಿಸುವಾಗ ಕವಿಯು ವೈಯಕ್ತಿಕವಾದ ವಿವರಗಳನ್ನು ನೀಡುವುದಿಲ್ಲ. ಬದಲಾಗಿ ಗುಂಪುಗಳ ವರ್ತನೆಯಲ್ಲಿ ಕೆಲವು ಸಮಾನ ಅಂಶಗಳಿಗೆ ಒತ್ತು ಕೊಡುತ್ತಾನೆ. ಅವೂ ಕೂಡ ತಮ್ಮ ತಮ್ಮ ಅನುಭವಲೋಕಗಳ ಅಂಚಿನ ವರೆಗೆ ಹೋಗಿ ಬದಲಾಗಿ ಅಥವಾ ಆಗದೆ ಹಿಂದಿರುಗುತ್ತವೆ. ಮಾರಿಗುಡಿಯಲ್ಲಿ ಸೇರಿರುವ ಭಕ್ತವರ್ಗದ ಅನ್ಯಹಿಂಸೆ ಹಾಗೂ ಆತ್ಮಹಿಂಸೆಗಳ ಅತಿರೇಕವನ್ನೂ ಹೀಗೆ ನೋಡಬಹುದು. ಅಂತ್ಯದಲ್ಲಿ ಕಾಣಿಸಿಕೊಳ್ಳುವ ಚಂಡಮಾರಿ ದೇವತೆಯು ಸಸ್ಯಾಹಾರಿಯಾಗುವ ಕ್ರಿಯೆಯು ಜೈನರ ಆಶಾಚಿಂತನೆಯೋ ವಾಸ್ತವದಲ್ಲಿ ನಡೆಯುತ್ತಿದ್ದ ಸಂಗತಿಗಳ ಪ್ರತೀಕಾತ್ಮಕ ಪ್ರತಿನಿಧೀಕರಣವೋ ಹೇಗೆ ಹೇಳುವುದು? ಇಂಥ ಗುಂಪುಗಳ ಒಟ್ಟಂದದ ವರ್ತನೆಯನ್ನು ಹೇಳುವಂತೆಯೇ ಅದರ ನಡುವೆ ಇರುವ ಒಂದು ಸಂಕೀರ್ಣ ಪಾತ್ರವನ್ನು ಆರಿಸಿಕೊಂಡು ಅದರ ವರ್ತನೆಯ ಮೂಲಕ ಒಟ್ಟು ಗುಂಪಿಗೆ ಇರುವ ಸಾಧ್ಯತೆಗಳ ಮೇಲೆ ಬೆಳಕು ಚೆಲ್ಲುವುದು ಇನ್ನೊಂದು ಬಗೆ. ಅವು ಈಗಾಗಲೇ ಹೇಳಿರುವಂತೆ ತಮ್ಮ ತಮ್ಮ ಅನುಭವಲೋಕಗಳ ಅಂಚಿನ ವರೆಗೆ ತೆರಳಿ ಹೊಸ ತಿಳಿವಳಿಕೆ, ಅನುಭವ ಹಾಗೂ ತಾತ್ವಿಕತೆಗಳನ್ನು ಪಡೆದುಕೊಳ್ಳುತ್ತವೆ. ಈ ಗಡಿಗೆರೆಯನ್ನು ದಾಟಿದ ಅಮೃತಮತಿಯು ನವಜನ್ಮವನ್ನು ಪಡೆಯುತ್ತಾಳೆ. ಹೀಗೆ ಆವಾಗ ಅವಳು ಬದುಕುವ ರೀತಿಯೇ ಬದಲಾಗುತ್ತದೆ. ಕುತೂಹಲದ ಸಂಗತಿಯೆಂದರೆ ಇವರ ಸಂಗಡವೇ ಅವಳ ಪ್ರತೀಕಾತ್ಮಕ ವಾಸ್ತವತೆಯೂ ಜೊತೆಜೊತೆಗೆ ಬದಲಾಗುತ್ತ ಹೋಗುತ್ತದೆ. ಇಲ್ಲಿ ಬದಲಾವಣೆ ಎನ್ನುವುದು ಯಶೋಧರನನ್ನು ಬಿಟ್ಟು ಅಷ್ಟಾವಂಕನನ್ನು ಸ್ವೀಕರಿಸಿದ್ದು ಮಾತ್ರವಲ್ಲ. ವಿವರಗಳನ್ನು ಗಮನಿಸಿದಾಗ ಅದು

ಜೀವನಕ್ರಮದ ಹಾಗೂ ವಾಸ್ತವವನ್ನು ಗ್ರಹಿಸುವ ರೀತಿಯು ಬದಲಾವಣೆಯೂ ಆಗಿರುತ್ತವೆ. ಆದ್ದರಿಂದಲೇ ಮೊದಲು ತಾನು ಇಷ್ಟಪಟ್ಟ ವ್ಯಕ್ತಿಯು ಕುರೂಪಿಯೆಂದು ಗೊತ್ತಾದಾಗ ಒಂದು ಕ್ಷಣ ಆತಂಕದ ಗೆರೆಗಳು ಕಾಣಿಸಿಕೊಂಡರೂ ಮರುಕ್ಷಣವೇ ಮತ್ತೆ ಸಮಾಧಾನ ಪಡೆಯುತ್ತಾಳೆ. ಕೆಲವರು ಹೇಳುವ ಹಾಗೆ ಅದು ಕ್ಷಣದಲ್ಲಿ ಸಂಭವಿಸಿದ ಆಕಸ್ಮಿಕವಾದ ಘಟನೆಯಲ್ಲ. ಅವಳದು ಬುದ್ಧಿಪೂರ್ವಕವಾದ ಆಯ್ಕೆಯೇ ವಿನಾ ಅನಿವಾರ್ಯ ಆಕಸ್ಮಿಕವಲ್ಲ. ಏಕೆಂದರೆ ಅದು ಆ ಕ್ಷಣಕ್ಕೆ, ಆ ದಿನಕ್ಕೆ ಸೀಮಿತವಾದ ಆಯ್ಕೆಯಲ್ಲ. ಅವಳು ಅದನ್ನು, ತನ್ನ ಬದುಕಿನ ಕೊನೆಯ ನಿಮಿಷದ ವರೆಗೆ ಆ ಪ್ರಣಯವನ್ನು ಮುಂದುವರಿಸುವಳೆಂಬ ಸಂಗತಿಯನ್ನು ಗಮನಿಸಿದರೆ ಅದು ಎಷ್ಟರಮಟ್ಟಿಗೆ ಅನಿವಾರ್ಯ ನಿಯತಿಯೋ ಅಷ್ಟರ ಮಟ್ಟಿಗೆ ಬುದ್ಧಿಪೂರ್ವಕ ಆಯ್ಕೆಯೂ ಆಗಿತ್ತೆಂಬ ಅಂಶವು ಮನದಟ್ಟಾಗುತ್ತದೆ. ಆದರೆ ಅವಳ ವರ್ತನೆಗೆ ವಿರುದ್ಧವಾಗಿ ಯಶೋಧರನದು ದುರ್ಬಲವಾದ ಒತ್ತಾಯ-ಒತ್ತಡಗಳಿಂದ ನಿಯಂತ್ರಿತವಾದ ಚಲನೆ. ಅವನದು ಒಂದು ಕಡೆ ಆತ್ಮವಂಚನೆ ಇನ್ನೊಂದು ಕಡೆ ವಿನಾಶಮುಖಿಯಾದ ಚಲನೆ. ಅಮೃತಮತಿಯಲ್ಲಿ ಪಶ್ಚಾತ್ತಾಪದ ಅಗತ್ಯವಾಗಲೀ ಸೂಚನೆಯಾಗಲೀ ಇಲ್ಲ. ಯಶೋಧರನದು ಇಬ್ಬಂದಿಯಾದ ಸ್ಥಿತಿ.

ಇಲ್ಲಿಯೇ ಗಮನಿಸಬೇಕಾದ ಇನ್ನೊಂದು ಕುತೂಹಲಕಾರಿಯಾದ ಸಂಗತಿಯೆಂದರೆ, ಈ ಗುಂಪುಗಳು ತಮ್ಮನ್ನು ತಾವು ವರ್ಣಿಸಿಕೊಳ್ಳುವ ರೀತಿಗೂ ಇತರ ವರ್ಗಗಳು ಅವರನ್ನು ವರ್ಣಿಸುವ ರೀತಿಗೂ ಇರುವ ವ್ಯತ್ಯಾಸ. ಜೈನರನ್ನು ಜೈನರೇ ವರ್ಣಿಸಿಕೊಳ್ಳುವ ಬಗೆಗಿಂತ ಇತರ ಗುಂಪುಗಳು ವರ್ಣಿಸುವ ಬಗೆಯು ಭಿನ್ನವಾಗಿಯೇ ಇರುತ್ತದೆ. ಪ್ರಾಣಿಲೋಕದ ಸಹಜ ವಿದ್ಯಮಾನಗಳ ವರ್ಣನೆಯಲ್ಲಿ ಮೂಡಿಬರುವ ಭೀಭತ್ಸಕ್ಕೂ ಪ್ರಾಣಿಸಮರೆಂದು ಕವಿಯು ತಿಳಿಯುವ ಮನುಷ್ಯರ ವರ್ತನೆಯಲ್ಲಿ ಮೂಡುವ ಬೀಭತ್ಸಕ್ಕೂ ಹೆಚ್ಚಿನ ಅಂತರವೇನೂ ಇಲ್ಲ. ಬಹಳ ಕುತೂಹಲಕಾರಿಯಾದ ಸಂಗತಿಯೆಂದರೆ ಈ ಕಾವ್ಯದಲ್ಲಿ ಆಗಿರುವ ಮಾತು ಮತ್ತು ಮೌನಗಳ ಹಂಚಿಕೆ. ಇಲ್ಲಿ ಅಮೃತಮತಿಯು ಬಹುಮಟ್ಟಿಗೆ ಮೌನಿ. ಅಷ್ಟೇ ಅಲ್ಲ, ಇಡೀ ಕಾವ್ಯವನ್ನು ಅಷ್ಟಾವಂಕನ ಮೌನವು ಆವರಿಸಿಕೊಂಡಿದೆ. ಅಷ್ಟೇ ಅಲ್ಲ, ಮಾರಿಗುಡಿಯನ್ನು ತುಂಬಿಕೊಂಡು ಹತ್ತು ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಾರಿಯ ಭಕ್ತರ ಮೌನವೂ ಗಮನೀಯವಾದುದು. ಅವರು ಏನೇನು ಮಾಡುತ್ತಿರುವರೆಂದು ಕವಿಯು ಹೇಳುತ್ತಿರುವನೇ ವಿನಾ ಅವರಿಗೆ ಏನೆನ್ನಿಸುತ್ತಿದೆ ಎನ್ನುವುದನ್ನು ಹೇಳುವ ಪ್ರಯತ್ನವೇ ಇಲ್ಲಿ ನಡೆದಿಲ್ಲ. ಹಾಗಾಗಿ ಇಡೀ ಕಾವ್ಯದಲ್ಲಿ ಮೌನಗಳು ಮಾತು ಪಡೆಯದ ಉಪಸಮುದಾಯಗಳ ಮೌನವಾದರೆ ಮಾತುಗಳೆಲ್ಲವೂ ಅವರ ವರ್ತನೆಯನ್ನು ವ್ಯಾಖ್ಯಾನ ಮಾಡುತ್ತಿರುವ, ಅವರ ವರ್ತನೆಯನ್ನು ನಿಯಂತ್ರಿಸಲು ಯತ್ನಿಸುವ ಜೈನ ತಾತ್ವಿಕತೆಯ ನಿಲುವುಗಳಾಗಿರುವುದನ್ನು ಗಮನಿಸಬಹುದು.

ಇಲ್ಲಿ ಕವಿ-ನಿರೂಪಕನು ತಾನು ಹೇಳಬೇಕಾದ ವಿವರಗಳನ್ನು ಕಟ್ಟಿಕೊಡುವ ರೀತಿಗೂ ಬೆಲೆಕಟ್ಟುವ ರೀತಿಗೂ ಇರುವ ಅಂತರವನ್ನು ಗಮನಿಸಬಹುದು. ಜನ್ನನು ಒಂದು ಪಾತ್ರದ ವರ್ತನೆಯ ವಿವರವನ್ನು ಕೊಡುತ್ತಾನೆ. ಆಮೇಲೆ ಅದರ ಬಗ್ಗೆ ಟೀಕೆ ಮಾಡುತ್ತಾನೆ ಅಥವಾ ಮಾಡುವುದಿಲ್ಲ. ಅಮೃತಮತಿಯ ವರ್ತನೆಯನ್ನು ಕುರಿತು ಹೆಜ್ಜೆಹೆಜ್ಜೆಗೂ ಟೀಕೆ ಮಾಡುವ ಕವಿಯು ಯಶೋಧರನ ಮಗನಾದ ಯಶೋಮತಿಯ ವರ್ತನೆಯ ಬಗ್ಗೆ ಯಾಕೆ ಮೌನ ವಹಿಸುತ್ತಾನೆ ಎಂಬ ಪ್ರಶ್ನೆಯು ಸಹಜವಾಗಿಯೇ ಏಳುತ್ತದೆ. ಮಾರಿಗುಡಿಯ ಹಾಗೂ

ಅಲ್ಲಿರುವ ಭಕ್ತರ ವರ್ಣನೆಯು ಸಹಜವಾಗಿಯೇ ಬಂದಿದ್ದರೂ ಕವಿಯು ಅವುಗಳ ಬಗ್ಗೆ ಮಾಡುವ ವ್ಯಾಖ್ಯಾನದ ಮೂಲಕ ತನ್ನ ನೈತಿಕ ತೀರ್ಮಾನಗಳನ್ನು ಕೊಡುತ್ತಾನೆ. ಅಮೃತಮತಿ ಮತ್ತು ಯಶೋಧರರ ಪ್ರತಿಯೊಂದು ಚರ್ಯೆಗೂ ಕವಿದತ್ತವಾದ ಗುಣವಾಚಕವು ಅನಿವಾರ್ಯವೆಂಬಂತೆ ಬಂದಿದೆ. ಹೆಂಗಸರ ಸ್ವಭಾವದ ಬಗ್ಗೆ ಕಾವ್ಯದಲ್ಲಿ ಮತ್ತೆ ಮತ್ತೆ ಬರುವ ಉದ್ಗಾರಗಳ ಸ್ವರೂಪವು ಇಡೀ ಸಮಾಜದ ಚಿಂತನೆಯ ನೆಲೆಗಳಿಗೆ ಹಿಡಿದ ಕನ್ನಡಿಯೂ ಹೌದು. ಅವರಲ್ಲಿಯೂ ಧಾರ್ಮಿಕ ನೆಲೆಗಟ್ಟುಗಳನ್ನು ಸಮರ್ಥಿಸುವ ಕ್ರಿಯೆಯು ನಿಂದೆಗೆ ಗುರಿಯಾಗುವುದಿಲ್ಲ. ಅಂತೆಯೇ ದಾಂಪತ್ಯದ ಚೌಕಟ್ಟನ್ನು ನಿರಾಕರಿಸುವುದಕ್ಕೆ ನಡುಗನ್ನಡ ಕಾವ್ಯಪರಿಸರದಲ್ಲಿ ಮೂರು ನಿದರ್ಶನಗಳು ದೊರೆಯುತ್ತವೆ : ಅಮೃತಮತಿ, ಅಕ್ಕಮಹಾದೇವಿ ಹಾಗೂ "ಕುಮಾರರಾಮನ ಸಾಂಗತ್ಯ"ದ ರತ್ನಾಜಿ. ಇವರಿಗೆ ಸಂಬಂಧಪಟ್ಟ ಕವಿಗಳು ಹಾಗೂ ಪರಿಸರ ತೋರಿಸಿದ ಪ್ರತಿಕ್ರಿಯೆಗಳು ಕುತೂಹಲಕಾರಿಯಾಗಿವೆ. ಕಂಪಿಲರಾಯನ ಹೆಂಡತಿಯೂ ಕುಮಾರರಾಮನ ಚಿಕ್ಕಮ್ಮನೂ ಆದ ರತ್ನಾಜಿ ಅವನನ್ನು ಇಷ್ಟಪಡುತ್ತಾಳೆ. ಅಕ್ಕಮಹಾದೇವಿಯನ್ನು ಅಲ್ಲಮ ಮತ್ತು ಕಿನ್ನರಿ ಬೊಮ್ಮಯ್ಯರು ಪರೀಕ್ಷಿಸುವ ಬಗೆಯಲ್ಲಿಯೂ ಒಂದು ಬಗೆಯ ಅಸಹನೆಯು ಸ್ಪಷ್ಟವಾಗಿದೆ. ಈ ಮೂರೂ ನಿದರ್ಶನಗಳಿಗೆ ಸಮಾನವಾಗಿರುವುದು ಪುರುಷಪ್ರಧಾನವಾದ ಸಂಸ್ಕೃತಿಯ ನೆಲೆಗಳಿಗೆ ವಿರುದ್ಧವಾದ ಪ್ರತಿಭಟನೆ ಹಾಗೂ ಅದನ್ನು ಸಮಾಜವು ಮಟ್ಟಹಾಕಿದ ಅಥವಾ ಮಟ್ಟಹಾಕದ ರೀತಿ. ಹಾಗೆಯೇ ನಿಜವಾಗಿಯೂ ಹಿಂಸೆಯಲ್ಲಿ ಮುಳುಗಿ ತೇಲುವ ಯಶೋಮತಿಯ ವರ್ತನೆಯ ಬಗ್ಗೆ ಕವಿ ಮತ್ತು ಆ ರಾಜನ ಸುತ್ತಲಿನ ಜನಸಮುದಾಯವು ವಹಿಸುವ ಮೌನವು ಧ್ವನಿಪೂರ್ಣವಾಗಿದೆ. ಮಾರಿದತ್ತನು ಮಾಡುವ ಹಿಂಸೆಯು ಸಮುದಾಯದ ಆಚರಣೆಗಳನ್ನು ಲೆಜಿಟಮೈಸ್ ಮಾಡುವ ಕ್ರಿಯೆ. ಅವನು ರಾಜ. ಆ ರಾಜ್ಯದ ಪ್ರಜೆಗಳು ಮಾರಿಗುಡಿಯಲ್ಲಿ ಬಲಿಯ ಆಚರಣೆಗಳಲ್ಲಿ ತೊಡಗಿದ್ದಾರೆ. ಅವರ ಪ್ರತಿನಿಧಿಯಾಗಿ ರಾಜನು ಮಾಡುವ ಹಿಂಸೆಗೆ ಸಾಂಕೇತಿಕವಾದ ಮೌಲ್ಯವಿದೆ. ಆದರೆ ಯಶೋಮತಿಯದು ನಿಷ್ಕಾರಣವಾದ ಪ್ರವೃತ್ತಿಜನ್ಯವಾದ ಕ್ರೌರ್ಯ. ಅವನು ತೊಡಗುವ ಬಗೆಬಗೆಯ ಹಿಂಸೆಯ ವಿವರಗಳನ್ನು ಕವಿಯು ಅತ್ಯಂತವಾಗಿ ಚಿತ್ರಿಸಿದ್ದಾನೆ. ನಿಸ್ಸಂದೇಹವಾಗಿ ಅವು ಮಧ್ಯಕಾಲೀನ ಕರ್ನಾಟಕದಲ್ಲಿ ಅಂತೆಯೇ ಮೂಲಕಥೆ ನಡೆದಿರಬಹುದಾದ ಕಾಲದಲ್ಲಿ ವ್ಯಾಪಕವಾಗಿ ಪ್ರಚುರವಾಗಿದ್ದ ಹಿಂಸೆಯ ಮಾದರಿಗಳು. ಅವನು ಎಲ್ಲೋ ಬೇಟೆಗೆಂದು ಹೋಗುತ್ತಾನೆ. ಬೇಟೆ ಕಾಣಿಸಲಿಲ್ಲ, ಹೋತ ಕಾಣಿಸಿತು. ಸರಿ, ಅದಕ್ಕೇ ಬಾಣಪ್ರಯೋಗ. ಬೇಟೆಗೆ ಹೋದ. ಪ್ರಾಣಿಗಳು ಸಿಗಲಿಲ್ಲ. ಜೈನಗುರುಗಳು ಕಾಣಿಸಿದರು. ಅವರಿಂದಲೇ ಹೀಗಾಯಿತು ಎಂದು ಅವರ ಮೇಲೆ ನೂರು ನಾಯಿಗಳನ್ನು ಛೂ ಬಿಟ್ಟ. ತಾಯಿ ಅಮೃತಮತಿಯಂತೆಯೇ ರಾಜನ ವರ್ತನೆಯೂ ಯಾವುದೇ ತರ್ಕ, ವ್ಯಾಖ್ಯಾನ-ವಿಶ್ಲೇಷಣೆಗಳ ಹಿಡಿತಕ್ಕೆ ಸಿಗುವುದಿಲ್ಲ. ಆದರೂ ಮನುಷ್ಯಸ್ವಭಾವದ ಸಾಧ್ಯತೆಗಳಿಗೆ ಅದೂ [illegible]ವೆಂದು ತೋರಿಸುವುದ[illegible]ವೆಂದು ತೋರುತ್ತದೆ.

ಈಗ ನಾನು ಪ್ರತೀಕಗಳನ್ನು ಕುರಿತ ಚರ್ಚೆಯನ್ನು ಮುಂದುವರಿಸುತ್ತೇನೆ. "ಯಶೋಧರ ಚರಿತೆ"ಯಲ್ಲಿ ಪ್ರತೀಕಾತ್ಮಕತೆಯು ಪ್ರಕೃತಿವರ್ಣನೆಗಳಿಂದಲೇ ಪ್ರಾರಂಭವಾಗುತ್ತದೆ. ಮಾರಿಗುಡಿಯ ಪರಿಸರದ ವರ್ಣನೆಗಳಿಂದ ನಿಬಿಡವಾಗಿದೆ. ಆದರೆ ಸುದತ್ತಾಚಾರ್ಯರ

ವನಕ್ಕೆ ಬರುವ ವಸಂತವು ವೆಜಿಟೇರಿಯನ್ ವಸಂತವಾಗಿದೆ. ಈ ಎರಡು ವಸಂತವರ್ಣನೆಗಳ ನಡುವಿನ ವ್ಯತ್ಯಾಸಕ್ಕೆ ಕಾರಣವು ವಾಸ್ತವ ಸತ್ಯವಂತೂ ಅಲ್ಲ. ಸಹಜವಾಗಿಯೇ ಇಂಥ ವಸಂತವನ್ನು ಹೀಗೆ ವರ್ಣಿಸಬೇಕು ಎಂಬ ಆಯ್ಕೆಯ ಮೂಲಕವಾಗಿ ಕವಿ ಅದನ್ನು ಪ್ರತೀಕವಾಗಿಸಿದ್ದಾನೆ. ಅದೇ ರೀತಿಯಲ್ಲಿ ಏಳೇಳು ಜನ್ಮಗಳಲ್ಲಿಯೂ ಯಶೋಧರನ "ಪ್ರಾಣದೇಹ-ಮಾನವಪ್ರಜ್ಞೆಗಳು" ಪಡುವ ಅಳಲಿಗೂ ಚಂದ್ರಮತಿಯ "ಪ್ರಾಣದೇಹ-ಪ್ರಾಣಪ್ರಜ್ಞೆಗಳ" ನೆನಪಿಲ್ಲದ ಯಾತನೆಗೂ ಅಂತರವಿದೆ. ಮೊದಲಿನಿಂದ ಕೊನೆಯ ವರೆಗೂ ತಾಯಿ ಮತ್ತು ಮಗನ ಸಂವೇದನೆಯ ವಲಯಗಳು ವಿಭಿನ್ನವಾಗಿವೆ. ಇಡೀ ಕಾವ್ಯವನ್ನು ತುಂಬಿಕೊಂಡಿರುವ ಶಾರೀರಿಕ ಹಾಗೂ ಮಾನಸಿಕ ಯಾತನೆಗಳ ವಾಸ್ತವವನ್ನು ಅಲ್ಲಗಳೆಯಲು ಪ್ರಯತ್ನಿಸುವ ಜೈನ ತಾತ್ವಿಕತೆಯ ನಿಯಂತ್ರಣವು ಬಹಳ ದುರ್ಬಲವಾಗಿದೆ. ಇದಕ್ಕೆ ಪೂರಕವಾಗಿ ಕನಸು, ಪೂಜೆ ಮತ್ತು ಪುನರ್ಜನ್ಮಗಳನ್ನು ತುಂಬಿಕೊಂಡಿರುವ ವಿವರಗಳು ಹಿಂಸಾತ್ಮಕವೇ ಆಗಿವೆ. ಏಕೆಂದರೆ ಕಥೆಗೆ ಸಮಕಾಲಿಕವಾದ ಹಾಗೆಯೇ ಕವಿಗೆ ಸಮಕಾಲಿಕವಾದ ಲೋಕಗಳೆರಡೂ ಕವಿ ಬೇಕೆನ್ನಲಿ, ಬೇಡವೆನ್ನಲಿ, ಹಿಂಸಾಮಯವೇ ಆಗಿವೆ. ಆದ್ದರಿಂದಲೇ ಕಾವ್ಯದ ಕೊನೆಯಲ್ಲಿ ಮಾರಿದೇವತೆಯೂ ಸೇರಿದಂತೆ ಎಲ್ಲರೂ ಅಹಿಂಸಾವಾದಿಗಳಾಗುವುದು ಆಶಾಚಿಂತನೆಯ ಪರಾಕಾಷ್ಠೆಯೇ ಸರಿ. ಇವೆರಡೂ ಕಾಲಗಳಲ್ಲಿಯೂ ಜೈನಧರ್ಮದ ಒಳಗಡೆ ಮಲಿನತೆ ಅಥವಾ ಅಶೌಚಗಳು ಪ್ರವೇಶವಾಗುತ್ತಿದ್ದವು.

ನಮ್ಮ ಇಂದಿನ ಬದುಕನ್ನು ತುಂಬಿಕೊಂಡಿರುವ ಆತಂಕಗಳಲ್ಲಿ ದ್ವಂದ್ವಾತ್ಮಕವಾದ ಮೌಲ್ಯವ್ಯವಸ್ಥೆಗಳಿಗೆ ಹೊಂದಿಕೊಳ್ಳಲಾಗದ ಆತಂಕವೂ ಒಂದು. ಪರಸ್ಪರ ವಿರುದ್ಧವಾದ ಎರಡು ಸಂಗತಿಗಳ ನಡುವೆ ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆ ಅದು. ಅದು ಯಾವುದೋ ಒಂದನ್ನು ಆರಿಸಿಕೊಂಡು ನಿರಾಳವಾಗಿ ಇರುವುದು ಸಾಧ್ಯವಿಲ್ಲದ ವಾಸ್ತವ. ಒಂದು ಕಡೆ ಜಾಗತೀಕರಣದ ಒತ್ತಡಗಳನ್ನು ಒಳಗೊಳ್ಳುತ್ತಲೆ ಇನ್ನೊಂದು ಕಡೆ ಧಾರ್ಮಿಕ ಮೂಲಭೂತವಾದದ ಜೊತೆಗೂ ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆಯನ್ನು ಸಮುದಾಯದ ಒಂದು ಭಾಗ ಹಾಗೂ ರಾಜಕೀಯ ಶಕ್ತಿ ಕೇಂದ್ರಗಳು ಅನುಭವಿಸುತ್ತಿರುತ್ತವೆ. ಮೇಲುನೋಟಕ್ಕೆ ಬದಲಾದಂತೆ ಕಾಣುವ ಆದರೆ ವಾಸ್ತವದಲ್ಲಿ ಹೆಚ್ಚೇನೂ ಬದಲಾಗದ ಸಮುದಾಯಗಳು ನಮ್ಮವು. ಈಗ ಹಳೆಯ ಪ್ರತೀಕಗಳು ಕೇವಲ ರೆಸಿಡ್ಯುಯಲ್(ಪಳೆಯುಳಿಕೆ) ಆಗಿ ಉಳಿದುಕೊಂಡಿವೆ. ಅವು ತಮ್ಮ ಅರ್ಥಪೂರ್ಣತೆಯನ್ನು ಕಳೆದುಕೊಂಡಿವೆ. ಆದರೆ ಹೊಸ ಪ್ರತೀಕಗಳು ಇನ್ನೂ ರೂಪು ಪಡೆದಿಲ್ಲ. ಇಂಥ ಸಂಧಿಕಾಲದಲ್ಲಿ ಕೆಲವು ಬಿಕ್ಕಟ್ಟುಗಳು ತಲೆದೋರುವುದು ಹಾಗೂ ಒಂದು ಬಗೆಯ ಶೂನ್ಯಭಾವ ಆವರಿಸಿಕೊಳ್ಳುವುದು ಕೇವಲ ಸಹಜ. ಇವು ಆಧುನಿಕ ಸಾಹಿತ್ಯದಲ್ಲಿ ದಾಖಲೆಯಾಗಿವೆ. ಉದಾಹರಣೆಗೆ "ಸಂಕ್ರಾಂತಿ" ನಾಟಕದ ಕೆಂಚ, ಉಜ್ಜ ಮುಂತಾದ ದಲಿತರ ಪಡಿಪಾಟಲುಗಳನ್ನು ಗಮನಿಸಬಹುದು. ಅಂತೆಯೇ "ಕಾನೂರು ಹೆಗ್ಗಡಿತಿ" ಕಾದಂಬರಿಯಲ್ಲಿ ಬರುವ ಕೃಷಿಕಾರ್ಮಿಕರು ಮತ್ತು ಬಲೀಂದ್ರ ಹೋತದ ಪ್ರಸಂಗವನ್ನು ನೆನಪು ಮಾಡಿಕೊಳ್ಳಿ. ಕುವೆಂಪು ಅವರು "ಜೈನೆಡೆ" ಎಂಬ ಪದವನ್ನೇ ಬೇರೊಂದು ಕಡೆ ಹೆಸರಿಸುತ್ತಾರೆ. ತಮ್ಮ ಮನೆಯಲ್ಲಿ ಮಾಂಸಾಹಾರವನ್ನು ತಯಾರಿಸಬಹುದಾದ ಅಡಿಗೆಯ ಮನೆಯಲ್ಲದೆ ಮಾಂಸಾಹಾರವಲ್ಲದ ಇತರ ಅಡಿಗೆಗಳನ್ನು ಮಾಡುವ ಪ್ರತ್ಯೇಕ ಜಾಗ

ಇದ್ದುದಾಗಿಯೂ ಅದನ್ನು "ಜೈನಡೆ" ಎಂದು ಕರೆಯುತ್ತಿದ್ದರೆಂದೂ ಅವರು ಹೇಳುತ್ತಾರೆ. ಇದು ಕುತೂಹಲಕಾರಿಯಾದ ಒಂದು ರೆಸಿಡ್ಯೂ. ಅಷ್ಟೇಕೆ, "ಚೋಮನ ದುಡಿ"ಯ ಪಾತ್ರಗಳೂ ಇಂತಹ ಬಿಕ್ಕಟ್ಟುಗಳನ್ನು ಅನುಭವಿಸಿದವರೇ. "ಯಶೋಧರ ಚರಿತೆ"ಯಲ್ಲಿಯೂ ಇಂತಹ ನಂಬಿಕೆಯ "ಕ್ರೈಸಿಸ್"ಗಳನ್ನು, ಸ್ಥಿತ್ಯಂತರ ಕಾಲದ ತಲ್ಲಣಗಳನ್ನು ಗುರುತಿಸಬಹುದು. ತಾಯಿ-ಮಗ, ರಾಜ-ಪ್ರಜೆಗಳು, ಗಂಡ-ಹೆಂಡತಿ ಮುಂತಾದವರ ನಡುವೆ ಉಂಟಾಗುವ ಸಾಂಸ್ಕೃತಿಕ ದೂರ(ಕಲ್ಚರಲ್ ಲ್ಯಾಗ್)ಗಳು ಹಲವು ಸಮಸ್ಯೆಗಳ ಉಗಮಕ್ಕೆ ಕಾರಣವಾಗುತ್ತವೆ. ಅಲ್ಲಿನದು ಕೇವಲ ಎರಡು ಅಥವಾ ಅನೇಕ ಧರ್ಮಗಳ ನಡುವಿನ ಸಂಘರ್ಷ ಮಾತ್ರವಲ್ಲ, ಬದಲಾಗಿ ಪ್ರವೃತ್ತಿಜನ್ಯವೂ ಸಹಜವೂ ಆದ ವರ್ತನವಿಧಾನವು **"ಮೇಲಿನಿಂದ ಆರೋಪಿತವಾದ"** ಮೌಲ್ಯವ್ಯವಸ್ಥೆಯ ಸಂಗಡ ನಡೆಸಬೇಕಾಗುವ ಸಂಘರ್ಷ. ಬೇರೆ ಮಾತುಗಳಲ್ಲಿ ಹೇಳುವುದಾದರೆ ವ್ಯವಸ್ಥೆಯು ಯಾವುದನ್ನು ಲೆಜಿಟ್‌ಮೈಸ್ ಮಾಡುತ್ತದೆಯೋ (ಅಧಿಕೃತವೆಂದು ಹೇಳುತ್ತದೆಯೋ) ಆ ವರ್ತನೆ ಮಾತ್ರವೇ ಸರಿಯೆಂದಾಗ ವ್ಯಕ್ತಿಸ್ವಾತಂತ್ರ್ಯವು ಎದುರಿಸಬೇಕಾಗುವ ಬಿಕ್ಕಟ್ಟಿನ ಪ್ರಶ್ನೆಯೂ ಇಲ್ಲಿದೆ. ದಾಂಪತ್ಯದ ಚೌಕಟ್ಟಿನೊಳಗೆ ಇರುವ ಕಾಮವು ಲೆಜಿಟ್‌ಮೈಸ್ ಆಗಿ ಅದರಾಚೆಗೆ ಇರುವ ಲೈಂಗಿಕತೆಯು ನೀತಿಬಾಹಿರ ವರ್ತನೆಯೆನ್ನಿಸಿಕೊಳ್ಳುತ್ತದೆ. ಅಮೃತಮತಿಯ ವರ್ತನೆಯು ದಾಂಪತ್ಯವೆನ್ನುವ ಸಂಸ್ಥೆಯಲ್ಲಿ ತಲ್ಲಣಗಳನ್ನು ತಂದಿತೆನ್ನುವುದನ್ನು ಹೊರತುಪಡಿಸಿದರೆ ಉಳಿದಂತೆ ಸಾಮಾಜಿಕ ಅಪರಾಧವೇನೂ ಅಲ್ಲ. ಅದೂ ಅಲ್ಲದೆ ಸ್ವತಃ ಅಮೃತಮತಿಯು ಅನುಭವಿಸಿದ ತಲ್ಲಣ ಹಾಗೂ ಸ್ಥಿತ್ಯಂತರದ ತೊಡಕುಗಳನ್ನು ಕಾವ್ಯವು ಹೇಳುವುದಿಲ್ಲವೆಂದ ಮಾತ್ರಕ್ಕೆ ಅವು ಇರಲೇ ಇಲ್ಲವೆಂದು ಅರ್ಥವಲ್ಲ. ಯಶೋಧರನ ನೋವಿಗೆ ಸ್ಪಂದಿಸುವ ಸಮುದಾಯವು ಅಮೃತಮತಿಯ ನೋವುಗಳಿಗೆ ಅಸಹಿಷ್ಣುವಾಗಿದೆ. ಕವಿ ಕೂಡ ಸಮುದಾಯದ ಮರುದನಿಯೇ ಆಗಿದ್ದಾನೆ. ಅಷ್ಟೇಕೆ, ಇಂದಿನ ಸನ್ನಿವೇಶದಲ್ಲಿಯೂ ಯಶೋಧರ ಅಮೃತಮತಿಯರ ಯಾತನೆಗಳ ಬೆಲೆ ಕಟ್ಟುವ ಮಾನದಂಡಗಳಲ್ಲಿ ಅಂತರಗಳು ಇದ್ದೇ ಇವೆ.

ಸಂಕಲ್ಪ ಹಿಂಸೆಯು ಹಿಂಸೆಯಷ್ಟೇ ದೊಡ್ಡ ಅಪರಾಧವೆನ್ನುವ ಮಾತನ್ನು ಯಶೋಧರ ಚಂದ್ರಮತಿಯರಿಗೆ ಮಾತ್ರ ಅನ್ವಯಿಸುವಂತೆ ಕಾಣುವ ಈ ಸಮುದಾಯವು ಉಳಿದವರ ಬಗ್ಗೆ ಮೌನವಾಗಿದೆ. ಕೋಳಿಗಳಾಗಿ ಹುಟ್ಟಿದಾಗ ಅಕಂಪನ ಮುನಿಗಳ ಉಪದೇಶವನ್ನು ಕೇಳಿ ತಮ್ಮ ಮನಸ್ಸಿನಲ್ಲಿ ಬದಲಾವಣೆ ಮಾಡಿಕೊಂಡುದರ ಫಲವಾಗಿ ತಾಯಿ-ಮಗ ಜೋಡಿಗೆ ಸ್ವರ್ಗಕ್ಕೆ ಹೋಗಲು ರಹದಾರಿ ಸಿಕ್ಕಿಬಿಡುತ್ತದೆ. ಜೈನಧರ್ಮಕ್ಕೆ ಶರಣಾಗುವುದರಿಂದಲೇ ಪಾಪ ಪರಿಮಾರ್ಜನೆಯಾಗುವಂತೆ ಕಾಣುವ ಈ ಸಮಾಜದಲ್ಲಿ ನರಕಕ್ಕೆ ಹೋಗುವವಳು ಅಮೃತಮತಿ ಮಾತ್ರವೇ. ಕೊನೆಗೆ ಅಷ್ಟಾವಂಕನೂ ಅಲ್ಲ. ಹಾಗೆ ನೋಡಿದರೆ, ಗಿರಡ್ಡಿ ಗೋವಿಂದರಾಜ ಮತ್ತು ಗಿರೀಶ ಕಾರ್ನಾಡರು ಸರಿಯಾಗಿಯೇ ಪ್ರಶ್ನಿಸಿರುವಂತೆ ಇಲ್ಲಿನದು ನಿರಪರಾಧಿಗಳ ಯಾತನೆಯ ಪ್ರಶ್ನೆ. ಕೊನೆಗೂ "ಆತ್ಮ"(?) ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುವುದು ದೇಹವೇ. ಇಲ್ಲವಾದರೆ ಭವಾವಳಿಗಳಲ್ಲಿ ಬರುವ ಪ್ರಾಣಿದೇಹಗಳ ಯಮಯಾತನೆಯನ್ನು ಹೇಗೆ ವಿವರಿಸುವುದು? ದೇಹ ಮತ್ತು ಮನಸ್ಸುಗಳ ನಡುವಿನ ಕಾರ್ಯಕಾರಣ ಸಂಬಂಧವು ಎಲ್ಲ ಕಾಲದಲ್ಲಿಯೂ ಗಮನ ಸೆಳೆದಿರುವ ಮುಖ್ಯ ಪ್ರಶ್ನೆ. ದೇಹದ ನಿಯತಿಯನ್ನು ಮನಸ್ಸು ಕೂಡ ತನ್ನದಾಗಿ ಸ್ವೀಕರಿಸುತ್ತದೆಯೇ. ಹಾಗೆ ದೇಹದ ಒತ್ತಡಗಳಿಗೆ ಒಳಗಾದ ವ್ಯಕ್ತಿಯು

ತನ್ನ ಮನಸ್ಸಿನಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಂಡುತ್ತಾನೆಯೇ ಎನ್ನುವುದು ಒಂದು ಪ್ರಶ್ನೆ. ಅಥವಾ ಮನಸ್ಸಿನಲ್ಲಿ ನಡೆಯುವ ಪರಿವರ್ತನೆಗಳಿಗೆ ದೇಹವು ತನ್ನ ಸಮ್ಮತಿಯ ಮುದ್ರೆಯನ್ನು ಒತ್ತಿಬಿಡುತ್ತದೆಯೇ? ಉತ್ತರಗಳನ್ನು ಹುಡುಕಬೇಕು. "ಹಯವದನ"ದಲ್ಲಿ ಕಾರ್ನಾಡರು ಇಂತಹುದೇ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾರೆ.

ಭಾಗ-೩

ಒಂದು ಸಾಹಿತ್ಯಕೃತಿಯಲ್ಲಿ ಬರುವ ಜೀವನವಿವರಗಳ ಸಾಹಿತ್ಯಕವಾದ ಪರಿಶೀಲನೆಯನ್ನು ಮಾಡುವಂತೆಯೇ ಸಾಹಿತ್ಯೇತರವಾದ ಪರಿಶೀಲನೆಯನ್ನೂ ಮಾಡಬಹುದು. ಹೀಗೆ ಮಾಡಲು ಹೊರಟಾಗ "ಯಶೋಧರ ಚರಿತೆ"ಯಲ್ಲಿ ಬರುವ ಪೂಜೆ, ಬೇಟೆ, ಆಹಾರ, ಕಾಮ, ಕಲೆ ಮುಂತಾದ ಸಂಗತಿಗಳನ್ನು ಕುರಿತ ವಿವರಗಳು ಮೌಲಿಕವಾಗುತ್ತವೆ. ಸಾಂಸ್ಕೃತಿಕವಾದ ಸಂಗತಿಗಳಿಗೆ ಆಕರವಾಗುತ್ತವೆ.

ಉದಾಹರಣೆಗೆ ಕಲೆಗಳನ್ನು ತೆಗೆದುಕೊಂಡರೆ, ಈ ಕಾವ್ಯದಲ್ಲಿ ಸಂಗೀತ, ನೃತ್ಯ, ಚಿತ್ರ ಮತ್ತು ಶಿಲ್ಪಕಲೆಗಳಿಗೆ ಸಂಬಂಧಿಸಿದ ವಿವರಗಳಿವೆ. ಈ ವಿವರಗಳನ್ನು ಬಳಸಿಕೊಂಡು ಕೃತಿರಚನೆಯ ಕಾಲದಲ್ಲಿ ಕಲೆಗಳು ತಲುಪಿದ ಪ್ರಬುದ್ಧತೆಯನ್ನು ಕುರಿತ ಮಾಹಿತಿಯನ್ನು ಕಲೆಹಾಕಬಹುದು. ಅಧಿಕೃತವೆನ್ನಲಾದ ಸಾಹಿತ್ಯೇತರ ದಾಖಲೆಗಳೊಂದಿಗೆ ಅವನ್ನು ತಾಳೆನೋಡಬಹುದು. ಜ್ಞಾನಶಿಸ್ತುಗಳ ಇತಿಹಾಸವನ್ನು ಮರುನಿರ್ಮಿಸುವ ದಾರಿಯಲ್ಲಿ ಇಂಥ ಮಾಹಿತಿಗಳು ನೆರವಾಗುತ್ತವೆ. ನನ್ನ ಗೆಳೆಯರೊಬ್ಬರು ಅಷ್ಟಾವಕ್ರನು ಹಾಡಿದ ರಾಗಗಳ ಹಿನ್ನೆಲೆಯಲ್ಲಿ ತಲುಪಿದ ತೀರ್ಮಾನಗಳು ನೆನಪಾಗುತ್ತಿವೆ. ಇಂಥ ಕೆಲಸಗಳನ್ನು ಸಾಹಿತ್ಯ ವಿಮರ್ಶಕರಿಗಿಂತ ಹೆಚ್ಚಾಗಿ ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರು ಮಾಡಬೇಕು. ಅದು ಸಾಧ್ಯವಾಗಬೇಕಾದರೆ ಚಂಪೂ ಕಾವ್ಯಗಳ ಸರಳ ಗದ್ಯಾನುವಾದಗಳು ಅಧಿಕೃತವಾಗಿ ದೊರೆಯುವಂತಾಗಬೇಕು. ಸೋಮದೇವನ ಕಾವ್ಯಕ್ಕೆ ಬರೆಯಲಾಗಿರುವ ವಿಸ್ತಾರವಾದ ಪೀಠಿಕೆಯಲ್ಲಿ ಇಂಥ ಪ್ರಯತ್ನವನ್ನು ಗಮನಿಸಬಹುದು.

ಕಾವ್ಯದ ಆಕೃತಿಯನ್ನಷ್ಟೇ ಗಮನಿಸಿದಾಗ ಬೇರೆ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಲು ಸಾಧ್ಯ. ಉದಾಹರಣೆಗೆ ಈ ಕಾವ್ಯವು ನಡುಗನ್ನಡ ಭಾಷೆ ಹಾಗೂ ವಚನ, ರಗಳೆ ಮತ್ತು ಷಟ್ಪದಿಗಳಂತಹ ರೂಪಗಳನ್ನು ನಿರಾಕರಿಸಿ ಚಂಪೂ ರೂಪ ಹಾಗೂ ಹಳಗನ್ನಡವನ್ನು ಆರಿಸಿಕೊಳ್ಳುತ್ತದೆ. ಶ್ರಾವಕ ಜನರಿಗೆ ಪ್ರಿಯವಾಗಬಹುದಾದ ಗೇಯತೆಯು ಇದರ ಹತ್ತಿರವೂ ಸುಳಿಯುವುದಿಲ್ಲ. ಹಾಗೆಂದು ಚಂಪೂ ಕಾವ್ಯಕ್ಕೆ ಸಹಜವಾದ ಖ್ಯಾತ ಕರ್ನಾಟಕ ವೃತ್ತಗಳಾಗಲೀ ಸಂಸ್ಕೃತಭೂಯಿಷ್ಠವಾದ ಗದ್ಯವಾಗಲೀ ಇಲ್ಲಿ ಕಾಣಿಸುವುದಿಲ್ಲ. ಬದಲಾಗಿ ಕೇವಲ ಮಾತ್ರಾಗಣಘಟಿತವಾದ ಕಂದಪದ್ಯಗಳನ್ನು ಆರಿಸಿಕೊಳ್ಳುವ ವಿವೇಕವನ್ನೂ ಕವಿಯು ತೋರಿಸಿದ್ದಾನೆ. ಅದೂ ಅಲ್ಲದೆ ಸಮಗ್ರ ಜನಸಮುದಾಯವನ್ನೇ ಕುರಿತು ಬರೆಯುವಾಗಲೂ ಆಡುಮಾತೆಂದು ಕರೆಯಲಾಗುವ ಭಾಷೆಯ ಬಳಕೆ ಇಲ್ಲಿ ಅಪರೂಪವೇ. ಇದೆಲ್ಲವೂ

“ಯಶೋಧರ ಚರಿತೆ”ಗೆ ಸೀಮಿತವಾದ ಸಂಗತಿಗಳು. ಇದೇ ಕವಿಯ “ಅನಂತನಾಥ ಪುರಾಣ”ದಲ್ಲಿ ಮೇಲೆ ಹೇಳಿದ ಸಂಗತಿಗಳನ್ನು ಕಾಣಬಹುದು. ಸಹಜವಾಗಿಯೇ ಈ ಕಾವ್ಯದ ಓದುಗರು ಅಥವಾ ಶ್ರೋತೃಗಳು ಯಾರು ಎಂಬ ಪ್ರಶ್ನೆಯು ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ವಾಚಕವರ್ಗದ ಸ್ವರೂಪವನ್ನು ಕುರಿತ ಚರ್ಚೆಯು ಸಾಂಸ್ಕೃತಿಕ ಅಧ್ಯಯನದ ಇನ್ನೊಂದು ನಿಟ್ಟಿನಲ್ಲಿ ನಮ್ಮನ್ನು ಕರೆದೊಯ್ಯುತ್ತದೆ.

ಇಂಥ ಅಧ್ಯಯನಗಳು ಹಲವು ದಿಕ್ಕುಗಳ ಬೆಳಕನ್ನು ಬಳಸಿಕೊಂಡು ಹಲವು ಸಾಹಿತ್ಯಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆದಾಗ ಸಂಸ್ಕೃತಿಯನ್ನು ಕುರಿತಾದ ಚರ್ಚೆಗೆ ಹೊಸ ವಿಸ್ತಾರಗಳನ್ನು ನೀಡಬಲ್ಲವು. ಹೀಗೆ ಮಾಡಿದಾಗ ಸಾಹಿತ್ಯಕೃತಿಯ ಅನನ್ಯತೆಯು ಹೊಸ ನೆಲೆಗಳನ್ನು ಪಡೆದುಕೊಳ್ಳುವುದೇ ವಿನಾ ನಿರಾಕರಿತವಾಗುವುದಿಲ್ಲ. “ಯಶೋಧರ ಚರಿತೆ”ಗೆ ಸಂಬಂಧಿಸಿದಂತೆಯೂ ಪ್ರಸ್ತುತ ಲೇಖನವು ಕೇವಲ ಒಂದು ಹೆಜ್ಜೆ ಮಾತ್ರವೆಂಬ ತಿಳಿವಳಿಕೆಯು ನನಗಿದೆ. ಏಕೆಂದರೆ ಇವೆಲ್ಲವೂ ಕೂಡುಕೆಲಸಗಳು.

■ **ಡಾ. ಎಚ್. ಎಸ್. ರಾಘವೇಂದ್ರ ರಾವ್ :**
೭, ಶ್ರೀಮಾತಾ, ೧೫ನೇ ಕ್ರಾಸ್, ೫ನೇ ಹಂತ, ಜೆ. ಪಿ. ನಗರ, ಬೆಂಗಳೂರು-೫೬೦ ೦೭೮ ■

ನಾಲ್ಕು ಕವಿತೆಗಳು — ಬಸವರಾಜ ವಕ್ಕುಂದ

೧. ಜಾಗ

ಜಗತ್ತಿನ ಜೀವಗಳೆಲ್ಲ
ತಮ್ಮ ನೋವುಗಳನ್ನು ಸುರಿದರೆ
ಹಿಡಿಸಲೆಂದು
ಬಯಲು ಅನಂತವಾಗಿದೆ

ಹಾಗೆಯೇ ಆ ಜೀವಗಳು
ತಮ್ಮ ಆನಂದವನ್ನು
ಸುರಿದರೂ ಜಾಗವಿದೆ
ಆಕಾಶದಲ್ಲಿ

ನಕ್ಷತ್ರಗಳೇ ನೀವು
ಯಾರ ನೋವಿನ ಕೆಂಡಗಳು
ಯಾರ ಕಣ್ಣೀರ ಮುತ್ತುಗಳು

ಯಾರ ಆನಂದದ
ಮಿಣುಕು ಹುಳುಗಳು
ಯಾರ ಎದೆ ಬೆಳಗುತ್ತಿರುವ
ದೀಪಗಳು

೨. ಕಣ್ಣಾಲಿ

ಆಕಾಶದ ನೀಲಿ
ಗಡಿಯಲ್ಲ
ಕಣ್ಣು ಹಾಕಿಕೊಂಡ ಬೇಲಿ

ಅಗಣಿತ ನಕ್ಷತ್ರಗಳ
ಹಾಲು ಹಾದಿಗಳ
ಅನಂತ ಕೋಟಿ ಮೈಲಿ
ದಾಟಿ ಹಬ್ಬಿರುವ ನೀಲಿ
ಸಣ್ಣ ಕಣ್ಣೊಳಗೆ
ಮೂಡುತ್ತ

ಅದೆಂಥ ಖಾಲಿ!
ಅದೆಂಥ ಬೇಲಿ!
ಅದೆಂಥ ಕಣ್ಣಾಲಿ!

೩. ಕನಕನ ಕಿಂಡಿ

ಕಿಂಡಿ ಕೃಷ್ಣನಿಗಲ್ಲ
ನಿಜ ತೂಗುತಿರುವ ಗರ್ಭಗುಡಿ ತೊಟ್ಟಿಲಕೆ
ಕೃಷ್ಣ ರಂಧ್ರಗಳಿರುವ ಮುಗಿಲ ಬಟ್ಟಲಕೆ
ಒಳಗಿಂದ ಹೊರಗೆ
ಹೊರಗಿಂದ ಒಳಗೆ ಆರುಪಾರು
ಇದು ಕನಕನ ಕಿಂಡಿ
ಎಷ್ಟೊಂದು ಗೋಡೆಗಳು ಮುಚ್ಚಿರುವ ಬಾಗಿಲುಗಳು
ಮಡಿಯ ಕತ್ತಲೆಯೊಳಗೆ ಮಡಿದಿರುವ ನಿಜಗಳು
ಹೆದ್ದಾರಿಯಲ್ಲಿ ಹೆಬ್ಬಾಗಿಲಲ್ಲಿ ಓಡಾಡಿಯು
ಹೆಣವಾಗಿ ಕೊಳೆವ ಸೂತಕಿಗಳು ಪಾತಕಿಗಳು
ಈ ಕಿಂಡಿಯೊಳಗಿಂದಲೆ ಬರಲಿ ಹೊರಗೆ
ಕನಕ ಬಂದದ್ದೇ ಕುರಿಗಳ ಬಿಡುಗಡೆಗೆ
ಯಾರಿಗೆ ಬೇಕು ಪ್ರವೇಶ ಕೃಷ್ಣಪಕ್ಷದ ಕತ್ತಲೆಗೆ
ಶುಕ್ಲಪಕ್ಷದ ಬೆಳದಿಂಗಳಿನ ಹಾಲು ಕುಡಿವವರಿಗೆ
ಕತ್ತಲೆಯ ಕಂಬಳಿ ಮಾಡಿ ಹೊದ್ದವರಿಗೆ
ಬೆಳಕ ದಾರಿಯಗುಂಟ ನಡೆವ ಜಂಗಮರಿಗೆ
ಕಿಂಡಿ ಕೃಷ್ಣನಿಗಲ್ಲ
ಗುಡಿಯ ಗೋರಿಗಳಿಂದ ಹೊರಬರುವ ಜೀವಕ್ಕೆ
ಮೈಮನದ ಗೋಡೆಗಳ ಸೀಳಿ ಒಳಗಿಳಿವ ಬೆಳಕಿಗೆ
ರಾಗಿಯಲ್ಲರಳುವ ನೆಲದ ಅನುರಾಗಕ್ಕೆ.

೪. ಯಾರು

ಗೋಡೆಗಳ ಕೆಡವಿದ ನಿನಗೆ ಗೋಡೆಗಳ ಕಟ್ಟಿದರು
ಗೋಡೆಯೊಳಗಡೆ ನಿನ್ನ ಕಟ್ಟುವರು ಯಾರು
ಒಡಲ ಗೋಡೆಗಳಲ್ಲಿ ಸಂಗಮನ ಜಂಗಮ ರೂಪ
ತೋರಿಸಿದವನ ಕಲ್ಲ ಗೋಡೆಗಳಲ್ಲಿ ಕೆಡುವವರು ಯಾರು
ನಿನ್ನ ರೂಪ ಕಲ್ಪನೆಗಳ ಕಲ್ಲೊಳಗೆ ಕೆತ್ತಿ
ನಿಲ್ಲಿಸಿದರು ಮಠ ಮಂದಿರ ಕೂಟಗಳಲಿ
ಸಕಲ ರೂಪಗಳ ಜೀವರೂಪ ವಿರೂಪನ ಹೊತ್ತು ತಿರುಗುವ
ಕ್ಷಣ ನಿಲ್ಲದ ನಿನ್ನ ಕಲ್ಲೊಳಗೆ ಕಟೆದು ನಿಲ್ಲಿಸುವವರು ಯಾರು
ಸಾವಿನೊಳಗೂ ಯಾರ ಕೈಗೆ ಸಿಗದವನ
ಸಂಗಮದ ಹೊಳೆಯಲ್ಲಿ ಜಿಗಿದವನ
ನಿತ್ಯ ಜಂಗಮದೊಳಗೆ ಮೃತ್ಯುವನು ಗೆದ್ದವನ
ಸಮಾಧಿಯಲಿ ಹಿಡಿದಿಡುವ ಸೂತಕಿಗಳು ಯಾರು

ಸಕಲ ಭೂತಗಳ ಜೀವಕೇಂದ್ರಗಳೊಳಗೆ
ಇವ ನಮ್ಮವ ಎಂದು ಮಿಡಿವ ಲಿಂಗನುಡಿ ಕೇಳಿಸಿದವನ
ಇವ ಬರಿ ನಮ್ಮವ ಎಂದು ಮೆರವಣಿಗೆ ಮಾಡುವ
ಇವನವರವ ಎಂದು ಉರವಣಿಗೆ ಮಾಡುವ ಭೂತಗಳು ಯಾರು

೫. ಕೌದಿ

ಅರ್ಧಾಂಗಿಯಾದರೂ ಪೂರ್ಣಾಂಗ ವ್ಯಾಪಿಸುವ
ಮಿಂಚುಳ್ಳ ಮೋಡಗಳ ಪಾಲುಗಾರ್ತಿ
ಬಯಲ ಕಟ್ಟೆಯ ಮೇಲೆ ಕೂತು
ಶತಮಾನಗಳ ನೆನಪ ದಾರ ಸೂಜಿಯ ಮಾಡಿ
ಕೌದಿ ಹೊಲಿಯುತ್ತಿರುವ ಕಣ್ಣು ಕಾಣದ ಗರತಿ
ಬೆಳಕು ಕತ್ತಲೆಗಳ ಚಿಂದಿಗಳನಾಯ್ದು
ನಿದ್ದೆ ಎಚ್ಚರಗಳ ಚಿತ್ತಾರ ಬಿಡಿಸಿ
ಬಗೆ ಬಗೆಯ ಬಣ್ಣದೊಳಗೆದ್ದಿ
ಕಣ್ಣು ಕೀಳುವ ಎದೆಯ ಸೀಳುವ
ನೋವುಗಳ ಹತ್ತಿಯ ಹಾಗೆ ತುರುಕಿ
ನವಿರು ಮುಳ್ಳುಗಳ ಕಚಗುಳಿಯನೊಳಗಿರಿಸಿ
ಕೌದಿ ಹೊಲಿಯುವಳು ಮುಪ್ಪರಿಯದ ಮುದುಕಿ
ಚಳಿಗೆ ಬೆಚ್ಚಗೆ ಬಿಸಿಗೆ ತಣ್ಣಗೆ
ಸ್ಥಿತಿಸ್ಥಾಪಕ ರಕ್ಷೆಯಾಗುವ ಕೌದಿಯ ತುಂಬ
ಒಳಗಿನ ಹೊರಗಿನ ಬೆಳಕು ಕತ್ತಲೆಗಳು ತೂರಿ ಬರಲು
ಕಣ್ಣಿಗೆ ಕಾಣದ ತೂತುಗಳಿವೆ

■ ಬಸವರಾಜ ವಕ್ಕುಂದ : ಕೆಂಡದಮಠ ಬಿಲ್ಡಿಂಗ್, ೧೦ ನೇ ಕ್ರಾಸ್, ಸಪ್ತಾಪುರ, ಧಾರವಾಡ-೧ ■

ಕುವೆಂಪು ಮತ್ತು ದಲಿತ ಪ್ರಜ್ಞೆ

ಸಿ. ಪಿ. ಕೃಷ್ಣಕುಮಾರ್

ರಾಷ್ಟ್ರಕವಿ ಕುವೆಂಪು ಆಧುನಿಕ ಕನ್ನಡ ಸಾಹಿತ್ಯದ ಮೊತ್ತಮೊದಲ ಬಂಡಾಯ ಸಾಹಿತಿ; ಕ್ರಾಂತಿಮುಖಿ ಲೇಖಕ. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ವರ್ತಮಾನಕ್ಕೆ ಇಷ್ಟರ ಮಟ್ಟಿಗೆ ಪ್ರಸ್ತುತನಾದ ಬರಹಗಾರ ಮತ್ತೊಬ್ಬನಿಲ್ಲ.[೧] ಹಾಗೆ ನೋಡಿದರೆ, ಕುವೆಂಪು ಅವರೊಡನೆ ಹೋಲಿಸಬಹುದಾದವರು ಇಡೀ ಕನ್ನಡ ಸಾಹಿತ್ಯದಲ್ಲಿ ಮತ್ತೊಬ್ಬರಿಲ್ಲ, ಬಸವೇಶ್ವರರನ್ನು ಬಿಟ್ಟರೆ. ವ್ಯಕ್ತಿತ್ವ, ವಾಙ್ಮಯಗಳಲ್ಲಿ ಬಸವಣ್ಣನವರಿಗೂ ಕುವೆಂಪು ಅವರಿಗೂ ಸಾಂದ್ರ ಸಾಮ್ಯಗಳಿವೆ.

ಎಲ್ಲ ಬಗೆಯ ಶೋಷಣೆಯನ್ನೂ ಅಪ್ರತಿಹತವಾಗಿ ಪ್ರತಿಭಟಿಸಿದವರು. ಕುವೆಂಪು. ನವಸಮಾಜನಿರ್ಮಾಣಕ್ಕೆ ಬೇಕಾದುದನ್ನೆಲ್ಲ ಅವರು ಕೊಟ್ಟಿದ್ದಾರೆ; ಅವರ ಸಾಹಿತ್ಯದಲ್ಲಿ

ನವಸೃಷ್ಟಿಯ ಬೀಜಗಳಿವೆ. ಆಧುನಿಕ ಯುಗವನ್ನು ಅನನ್ಯವಾಗಿ ವ್ಯಾಖ್ಯಾನಿಸಿದವರು, ಕುವೆಂಪು; ಇಂದಿನ ಯುಗಧರ್ಮವನ್ನು– ಸರ್ವೋದಯವನ್ನು– ಅವರು ಗ್ರಹಿಸಿದರು; 'ನವಯುಗವಾಣಿ'ಯನ್ನು ಹಿಡಿದಿಟ್ಟರು; "ಜ್ಞಾನದ ವಿಜ್ಞಾನದ ಮತಿಖಡ್ಗದಿ ಮೈದೋರುವ ನವಕಾಳಿ"ಯನ್ನು ಸಂದರ್ಶಿಸಿದರು.

ಕುವೆಂಪು ಅವರ ಸಮಸ್ತ ಸಾಹಿತ್ಯ ಬಹುಬಾಹುಸಮನ್ವಿತವಾದ ಸಂಸ್ಕೃತಿಯ ವಿರಾಟ್ ಪ್ರತಿಮೆ (ಕೇವಲ ಪ್ರತಿಕೃತಿಯಲ್ಲ). ಇದಕ್ಕೆ ಕಾರಣ, ಅವರ ಸರ್ವಂಕಷ ಪ್ರತಿಭೆ ಹಾಗೂ ಪೂರ್ಣದೃಷ್ಟಿ. ನಾವು ನೆನಪಿಡಬೇಕು, ಕುವೆಂಪು ಮಹಾಲೇಖಕರಾಗಿರುವುದು ಪ್ರತಿಭೆಯಿಂದಷ್ಟೇ ಅಲ್ಲ, ಪೂರ್ಣದೃಷ್ಟಿಯಿಂದ ಹಾಗೂ ವಿಶ್ವಪ್ರಜ್ಞೆಯಿಂದ ಕೂಡ.

ಅವರ ವಿಶಿಷ್ಟತೆಯೇನೆಂದರೆ, ಅವರು ಪ್ರಕೃತಿ, ಸಂಸ್ಕೃತಿ ಎರಡನ್ನೂ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ; ಇನ್ನೊಂದು ದೃಷ್ಟಿಯಿಂದ ನೋಡಿದರೆ, ಮಾನವಪ್ರಕೃತಿ, ಆರಣ್ಯಕ ಸಂಸ್ಕೃತಿ ಎರಡನ್ನೂ ಚಿತ್ರಿಸಿದ್ದಾರೆ. ('ಶ್ರೀರಾಮಾಯಣದರ್ಶನ'ದಲ್ಲಿ ಪರಾಪ್ರಕೃತಿಯ ಕಾಣ್ಕೆಯೂ ಇದೆ.)

ಇಂದಿನ ವಿಚಾರಗೋಷ್ಠಿಯಲ್ಲಿ ಕುವೆಂಪು ಚಿತ್ರಿತ ಸಂಸ್ಕೃತಿಯ ನಾಲ್ಕು ಮುಖಗಳನ್ನು– ಶೂದ್ರ ಸಂಸ್ಕೃತಿ, ಕೃಷಿ ಸಂಸ್ಕೃತಿ, ಮಹಿಳಾ ಸಂಸ್ಕೃತಿ, ಮತ್ತು ದಲಿತ ಸಂಸ್ಕೃತಿ– ಕುರಿತು ನಾಲ್ವರು ಮಿತ್ರರು ಉಪಯುಕ್ತ ರೀತಿಯಲ್ಲಿ ಉಪನ್ಯಾಸಗಳನ್ನು ಮಂಡಿಸಿದ್ದಾರೆ.[೨] ಹಾಗೆಯೆ, ಕುವೆಂಪು ಸಾಹಿತ್ಯದಲ್ಲಿ ಬಂದಿರುವ ಬೇಟೆ ಸಂಸ್ಕೃತಿ, ಬ್ರಾಹ್ಮಣ ಅರ್ಥಾತ್ ಪುರೋಹಿತಶಾಹಿ ಸಂಸ್ಕೃತಿ, ಮುಸ್ಲಿಂ ಸಂಸ್ಕೃತಿ, ಕ್ರೈಸ್ತ ಸಂಸ್ಕೃತಿ ಇತ್ಯಾದಿಗಳನ್ನೂ ಕುರಿತು ವಿಚಾರ ಮಾಡುವ ಅವಕಾಶವಿದೆ.

ಕುವೆಂಪು ಸಾಹಿತ್ಯದಲ್ಲಿ ಮುಖ್ಯವಾದುದು, ಇಂದಿಗೆ ಹೆಚ್ಚು ಪ್ರಸ್ತುತವಾದುದು, ದಲಿತ ಸಂಸ್ಕೃತಿ. (ಶೂದ್ರರೂ ಒಂದರ್ಥದಲ್ಲಿ ದಲಿತರೇ! ಈ ಅರ್ಥದ ಮಾತೊಂದನ್ನು ಗಾಂಧೀಜಿ ಒಂದೆಡೆ ಆಡಿದ್ದಾರೆ.) ಆದ್ದರಿಂದ, ಕುವೆಂಪು ಅವರ ದಲಿತಪ್ರಜ್ಞೆಯನ್ನು ಇಲ್ಲಿ ತುಸು ಗಂಭೀರವಾಗಿ ಗಮನಿಸಬಹುದು.

ಈ ಸಂಬಂಧವಾಗಿ, ದಿ. ಬಿ. ಕೃಷ್ಣಪ್ಪನವರು ತಮ್ಮೊಂದು ಲೇಖನದಲ್ಲಿ[೩] ಮಾಡಿರುವ ಆರೋಪಗಳನ್ನು ಉಲ್ಲೇಖಿಸಬಹುದು. ಅದೊಂದು ಪೂರ್ವಗ್ರಹಗ್ರಸ್ತ ಬರಹವಾದರೂ, ಲಕ್ಷಿಸಬೇಕಾದುದು, ಪ್ರಾಯಶಃ ಪ್ರಾತಿನಿಧಿಕವಾದುದರಿಂದ. ಅದರ ಕೆಲವು ಭಾಗಗಳನ್ನು ಇಲ್ಲಿ ಉದ್ಧರಿಸಬೇಕು :

"ತಮಗಿಂತ ಮೇಲಿರುವ ಬ್ರಾಹ್ಮಣಶಾಹಿಯನ್ನು ಪ್ರತಿಭಟಿಸುವ ಭರದಲ್ಲಿ ಕುವೆಂಪು ಅವರಿಗೆ ಶೂದ್ರರಿಗಿಂತ ಕೆಳಮಟ್ಟದಲ್ಲಿರುವ ದಲಿತರು ಕಾಣದೆ ಹೋದರು. ಒಂದು ಕಡೆ ಶೋಷಣೆಯನ್ನು ಪ್ರತಿಭಟಿಸಿದ ಕವಿ ಮತ್ತೊಂದು ಕಡೆ ಶೋಷಣೆಯನ್ನು ಮೌನವಾಗಿ ಒಪ್ಪಿಕೊಂಡರು."

"ಅವರ ಅಂತಃಕರಣವೆಲ್ಲ ಊಳಿಗಮಾನ್ಯ ಜಮೀನುದಾರರ, ಗೌಡರ ಪರವಾಗಿದ್ದು, ಬ್ರಾಹ್ಮಣವಿರೋಧಿಯಾಗಿದೆಯೆ ಹೊರತು ದಲಿತಪರವಾಗಿಲ್ಲ."

"ಕುವೆಂಪು 'ಒಡೇರ ದಿಣ್ಣೆ'ಯ ಮೇಲೆ ನಿಂತು ದಲಿತರ ಬದುಕನ್ನು ನೋಡಲು ಸಾಧ್ಯವೆ ಹೊರತು, ಹೊಲೆಯರ ಗುಡಿಸಲಿನಲ್ಲಿ ನಿಂತು ನೋಡಲಾರರು."

"ಕುವೆಂಪು ಅವರಲ್ಲಿರುವ ಸಂದಿಗ್ಧತೆಗಳು, ಮಿತಿಗಳು, ವರ್ಗ ಹಿತಾಸಕ್ತಿಗಳು, ದಲಿತ ಜೀವನಚಿತ್ರಕ್ಕೆ ಅಥೆಂಟಿಸಿಟಿಯನ್ನೂ ಸಮತೋಲನವನ್ನೂ ತಂದುಕೊಡದೆ ಹೋಗುತ್ತವೆ... ನನ್ನ ಈ ಆರೋಪಕ್ಕೆ ಇತ್ತೀಚಿನ ದಿನಗಳಲ್ಲಿ ವಸ್ತು, ಭಾಷೆ, ಶೈಲಿಗಳ ದೃಷ್ಟಿಯಿಂದ ವಿಶಿಷ್ಟವಾಗಿ ಬೆಳೆಯುತ್ತಿರುವ ದಲಿತರೆ ರಚಿಸುತ್ತಿರುವ ದಲಿತ ಸಾಹಿತ್ಯ ಉತ್ತರವಾಗಿದೆ."

ಒಂದು ವರ್ಗದವರ ಬದುಕನ್ನು ಆಯಾ ವರ್ಗದ ಲೇಖಕ ಮಾತ್ರ ಯಶಸ್ವಿಯಾಗಿ ಚಿತ್ರಿಸಬಲ್ಲ ಎಂಬ ವಾದ ಎಷ್ಟರ ಮಟ್ಟಿಗೆ ಸರಿ? ಅದನ್ನೊಪ್ಪುವುದಾದರೆ ಪ್ರತಿಭೆಯ ಕಾರ್ಯವೇನು? ಎಲ್ಲ ಉಪಾಧಿಗಳನ್ನೂ ಮೀರಬಲ್ಲುದು, ಪ್ರತಿಭೆ. ಕಾಳಿದಾಸನ 'ಶಾಕುಂತಲ' ನಾಟಕದ ಉಕ್ತಿಯೊಂದನ್ನು ಪರಿಭಾವಿಸಬೇಕು. ಶಕುಂತಲೆ ಪತಿಗೃಹಕ್ಕೆ ಹೊರಟು ನಿಂತ ಸನ್ನಿವೇಶ. ಆಗ ಕಣ್ವರು ಹೇಳುತ್ತಾರೆ : "ವತ್ಸೆ, ನಿನಗೆ ಬುದ್ಧಿಯ ಮಾತು ಹೇಳುವುದಿದೆ. ನಾವು ವನವಾಸಿಗಳು, ಆದರೆ ಲೋಕದ ಸ್ವಭಾವವನ್ನು ಬಲ್ಲೆವು!" ಅದಕ್ಕೆ ಶಾರ್ಙ್ಗರವನ ಪ್ರತಿಕ್ರಿಯೆ : "ಧೀಮತಾಂ ನ ಕಶ್ಚಿದವಿಷಯೋ ನಾಮ" (= ಬುದ್ಧಿಶಾಲಿಗಳಿಗೆ– ಪ್ರತಿಭಾಶಾಲಿಗಳಿಗೆ– ಅಗೋಚರವಾದ ವಿಷಯ ಯಾವುದು ತಾನೇ ಇದೆ?).

ತನ್ನ ವರ್ಗದ ಜೀವನದ ಬಾಹ್ಯ ವಿವರಗಳನ್ನು ಒಬ್ಬ ಲೇಖಕ ಅಧಿಕೃತವಾಗಿ ಕೊಡಬಲ್ಲ, ದಿಟ; ಆದರೆ ಅಂತರಂಗವನ್ನು ಅಷ್ಟೇ ಅಧಿಕೃತವಾಗಿ ಚಿತ್ರಿಸುತ್ತಾನೆಂಬ ಭರವಸೆಯಿಲ್ಲ. ಅಷ್ಟೆ ಅಲ್ಲ, ಅವನು ರಾಗದ್ವೇಷವಶನಾಗುವ ಸಂಭವವೂ ಉಂಟು. ಆದರೆ ಪ್ರತಿಭಾವಂತನಾದ ಅನ್ಯವರ್ಗದ ಲೇಖಕ ವಸ್ತುನಿಷ್ಠವಾದ, ಕಲಾತ್ಮಕವಾದ ಚಿತ್ರಣವನ್ನು ಕೊಡಬಲ್ಲ; ಪರಕಾಯ, ಪರಹೃದಯಗಳನ್ನು ಸಮರ್ಥವಾಗಿ ಪ್ರವೇಶಿಸಬಲ್ಲ.[೪]

ಕುವೆಂಪು ದಲಿತ ಜೀವನವನ್ನು ಒಟ್ಟಿನ ಮೇಲೆ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ ಎಂಬುದು ಮುಖ್ಯವಾದ ಸಂಗತಿ.[೫] 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಒಬ್ಬಳು ದಲಿತ ಮಹಿಳೆ– ಸೇಸಿ– ಭೂಮಾನುಭೂತಿಯನ್ನು ಉಂಟುಮಾಡಬಲ್ಲವಳಾಗುತ್ತಾಳೆ. (ಅದನ್ನೂ ಕೃಷ್ಣಪ್ಪನವರು ಟೀಕಿಸಿದ್ದಾರೆ.) ಆ ಪ್ರಸಂಗದ ಎಲ್ಲ ಮಗ್ಗುಲುಗಳನ್ನೂ ಕುವೆಂಪು ಪೂರ್ಣದೃಷ್ಟಿಯಿಂದ ಚಿತ್ರಿಸಿದ್ದಾರೆ. ಸೇಸಿ ವಾಸ್ತವವಾಗಿ ಒಬ್ಬ ಸಾಮಾನ್ಯ ಯಃಕಶ್ಚಿತ್ ಮಹಿಳೆಯಲ್ಲ; ಕುವೆಂಪು ಅವರ ದೃಷ್ಟಿಯಲ್ಲಿ 'ಶ್ರೀಸಾಮಾನ್ಯೆ'. ಎಂತಲೇ ಭೂಮಾನುಭೂತಿ ಅವಳಿಗೂ ಲಭ್ಯ.

'ಶ್ರೀರಾಮಾಯಣ ದರ್ಶನ'ದಲ್ಲಿ ಬರುವ ಮಂಥರೆಯೊಬ್ಬ ದಲಿತ, ದಸ್ಯು ಸ್ತ್ರೀ. ಆದರೆ ಅವಳು 'ಮಂಥರಾ ಲಕ್ಷ್ಮಿ'ಯಾಗಿ ಉದ್ಧಾರಗೊಳ್ಳುತ್ತಾಳೆ ಮಾತ್ರವಲ್ಲ, ರಾಮನ ವಿಕಾಸಕ್ಕೆ ನೆರವಾಗುತ್ತಾಳೆ.

'ಜಲಗಾರ' ನಾಟಕವನ್ನೂ ಇಲ್ಲಿ ಸ್ಮರಿಸಬೇಕು. ಅಲ್ಲಿ ದೇಗುಲಕ್ಕೆ ಹೊರಟ ರೈತ ಜಲಗಾರನನ್ನೂ ಕರೆಯುತ್ತಾನೆ. ಆದರೆ ತನ್ನ ಪಾಲಿಗೆ ಕಾಯಕವೆ ಪೂಜೆಯೆಂದು ನುಡಿಯುತ್ತಾನೆ, ಜಲಗಾರ. ಆಗ ರೈತನ ಪ್ರತಿಕ್ರಿಯೆಯಿದು :

ಸೊಗದ ಮೋರೆಯನೆ ಕಂಡರಿಯನೀ ಜಲಗಾರ.
ಪೂಜೆಯೆಂಬುದನರಿಯ; ದೇವನೆಂಬುದನರಿಯ;
ಹುಟ್ಟುಗುಣ ಸುಟ್ಟರೂ ಹೋಗುವುದೆ?

ರೈತ. ಅರ್ಥಾತ್ ಶೂದ್ರನಿಗಿಂತ ಜಲಗಾರ ಮೇಲು, ದೊಡ್ಡವನು ಎಂಬುದು ಇಲ್ಲಿಯ ಧ್ವನಿ.

ದಲಿತರ ಬಗೆಗಿನ ಕುವೆಂಪು ಅವರ ಕಳಕಳಿಗೆ 'ಆವ ಕಾಲದ ಶಾಸ್ತ್ರವೇನು ಹೇಳಿದರೇನು?' ಕವನದ ಈ ಸಾಲುಗಳೂ ಸುಸಾಕ್ಷಿ :

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ,
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು?

ಶೂದ್ರವರ್ಗದ ಮೌಢ್ಯ, ಅನಾಚಾರಗಳನ್ನೂ ಕುವೆಂಪು ಬಯಲು ಮಾಡಿರುವುದು ಗಣನೀಯ. 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಅವರು ತಮ್ಮದೇ ಮನೆತನದ ದೌರ್ಬಲ್ಯಗಳನ್ನೂ ಮುಚ್ಚಿಟ್ಟುಕೊಂಡಿಲ್ಲ.

ಕುವೆಂಪು ಸಾಹಿತ್ಯ ಬಹಳ ಸಂಕೀರ್ಣವಾದದ್ದು; ಅನಂತ ಮುಖಗಳನ್ನುಳ್ಳದ್ದು. ಅದನ್ನು ಎಚ್ಚರಿಕೆಯಿಂದ, ಶ್ರದ್ಧೆಯಿಂದ, ಮುಕ್ತ ಮನಸ್ಸಿನಿಂದ ಅನುಶೀಲನ ಮಾಡುವ ಸಮ್ಯಗ್‌ವಿಮರ್ಶೆ ಇನ್ನೂ ಸಾಕಷ್ಟು ಬರಬೇಕಿದೆ.[೬]

ಅಡಿಟಿಪ್ಪಣಿಗಳು :

೧. ಕೆಲವರು ಬುದ್ಧಿವಂತ ವಿಮರ್ಶಕರು ಕುವೆಂಪು ಬರವಣಿಗೆಯ ಸಾಹಿತ್ಯಕ ಮಹತ್ತ್ವವನ್ನು ತಗ್ಗಿಸುವುದಕ್ಕಾಗಿ ಅದರ ಸಾಂಸ್ಕೃತಿಕ ಮಹತ್ತ್ವದ ಮೇಲೆ ಹೆಚ್ಚು ಒತ್ತು ಹಾಕುವುದುಂಟು! ಈ ತಂತ್ರದ ಬಗ್ಗೆ ಎಚ್ಚರದಿಂದಿರಬೇಕು. ವಾಸ್ತವವಾಗಿ, ಸಾಂಸ್ಕೃತಿಕ, ಸಾಹಿತ್ಯಕ ಎರಡೂ ದಿಶೆಗಳಲ್ಲಿ ದೊಡ್ಡದು, ಕುವೆಂಪು ವಾಙ್ಮಯ.

೨. ಕುವೆಂಪು ಕೃಷಿ ಸಂಸ್ಕೃತಿ, ಋಷಿ ಸಂಸ್ಕೃತಿ ಎರಡನ್ನೂ ನಿರೂಪಿಸಿದ್ದಾರೆ ಎಂದರು, ಪ್ರೊ. ಸಿ. ನಾಗಣ್ಣ. ಪುರೋಹಿತಶಾಹಿಗೆ ಸಂಬಂಧಿಸಿದಂತೆ ಹುಸಿಸಂಸ್ಕೃತಿಯನ್ನೂ ಚಿತ್ರಿಸಿದ್ದಾರೆ, ಕುವೆಂಪು!

೩. ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನಚಿತ್ರ, 'ಶ್ರೀ ಕುವೆಂಪು', ಸಂ. ಜಿ. ಎಸ್. ಶಿವರುದ್ರಪ್ಪ.

೪. ಕೃಷ್ಣಪ್ಪನವರ ವಾದವನ್ನು ಒಪ್ಪುವುದಾದರೆ, ಗಂಡಿನ ಹೃದಯವನ್ನು ಹೆಣ್ಣು, ಹೆಣ್ಣಿನ ಹೃದಯವನ್ನು ಗಂಡು ಅನಾವರಣ ಮಾಡುವುದೆ ಶಕ್ಯವಿಲ್ಲ. ಆದರೆ ಷೇಕ್ಸ್‌ಪಿಯರ್ ಒಬ್ಬ ಪುರುಷನಾಗಿ ಲೇಡಿ ಮ್ಯಾಕ್‌ಬೆತ್, ಡೆಸ್ಡೆಮೊನ, ಕ್ಲಿಯೋಪಾತ್ರ ಮೊದಲಾದ ಸ್ತ್ರೀಯರ ಬಗೆಗೆ ಎಂತಹ ಒಳನೋಟಗಳನ್ನು ಕೊಟ್ಟಿದ್ದಾನೆಂಬುದನ್ನೂ ನೆನೆಯಬೇಕು.

೫. ವಿಚಿತ್ರವೆಂದರೆ, ಕುವೆಂಪು ನಿಲುವು ವೈದಿಕಶಾಹಿಯ ಪರವಾದದ್ದು ಎಂಬ ಆರೋಪವೂ ಉಂಟು! (ಇಂಥವೆಲ್ಲ ಖಂಡದೃಷ್ಟಿಪ್ರೇರಿತ ಖಂಡನೆಗಳು.)

೬. ಇದು ವಿಚಾರಗೋಷ್ಠಿಯೊಂದರ ಅಧ್ಯಕ್ಷ ಭಾಷಣ.

■ **ಡಾ. ಸಿ. ಪಿ. ಕೃಷ್ಣಕುಮಾರ್ :**
೨೨೬೫/೧೯, ಭಾರತಿ, ೬ನೇ ಕ್ರಾಸ್, ವಿನಾಯಕನಗರ, ಮೈಸೂರು-೫೭೦ ೦೧೨ ■

ಮಹಾನವಮಿ ಮಹೋತ್ಸವ

ಷ. ಶೆಟ್ಟರ್

ವಿದೇಶಿ ಪ್ರವಾಸಿಗರು ವಿಜಯನಗರದಲ್ಲಿ ಕಂಡ ಹಬ್ಬದಾಚರಣೆ

ತಾವು ಅನುಭವಿಸಿ ಆನಂದಿಸಿದ ವಿಜಯನಗರ ಸಾಮ್ರಾಜ್ಯದ ಮೂರು ನಾಡಹಬ್ಬಗಳ ಬಗ್ಗೆ ವಿದೇಶಿ ಪ್ರವಾಸಿಗರು ವಿವರವಾದ ವರದಿ ಕೊಟ್ಟಿರುವರು. ಅವು ಹೋಳಿ, ದೀಪಾವಳಿ ಮತ್ತು ಮಹಾನವಮಿ. ಇವುಗಳಲ್ಲಿ ಅತ್ಯಂತ ವಿಜೃಂಭಿತವೂ ವಿಶಿಷ್ಟವೂ ಆದುದು ಮಹಾನವಮಿ ಮಹೋತ್ಸವ. ಆ ಹಿಂದೆ ಧಾರ್ಮಿಕ ಆಚರಣೆ ಮಾತ್ರವಾಗಿದ್ದ ಈ ಉತ್ಸವವು ವಿಜಯನಗರದ ಕಾಲದಲ್ಲಿ ನಾಡಹಬ್ಬವಾಯಿತು. ಈ ಅವಕಾಶವನ್ನು ಬಳಸಿಕೊಂಡು ಸಾಮ್ರಾಜ್ಯದ ಸಂಪತ್ತು, ಸಾರ್ವಭೌಮತ್ವ, ಸೇನಾಶಕ್ತಿ ಹಾಗೂ ಪ್ರತಿಷ್ಠೆಯನ್ನು ವಿಜಯನಗರದ ಅರಸರು ಲೋಕಕ್ಕೆಲ್ಲ ಪ್ರದರ್ಶಿಸಿದರು. ಸಡಗರದ ಈ ಉತ್ಸವಗಳು ವಿದೇಶಿ ಪ್ರವಾಸಿಗರನ್ನು ಬೆರಗುಗೊಳಿಸಿದ್ದವು. ಅವರಲ್ಲಿ ಇಟಲಿಯ ನಿಕೋಲ-ದ-ಕೊಂತಿ (೧೪೨೦-೨೧), ಪರ್ಶಿಯಾದ ಅಬ್ದುಲ್ ರಜಾಕ್ (೧೪೪೩) ಈ ಹಬ್ಬಗಳನ್ನು ೧೫ ನೆಯ ಶತಮಾನದ ಪೂರ್ವಾರ್ಧದಲ್ಲಿ ಕಂಡರೆ, ಪೋರ್ತುಗಲ್ಲಿನ ಡೊಮ್ಯಾಂಗೋ ಪ್ಯಾಸ್ (೧೫೨೦-೨೨) ಹಾಗೂ ಫೆರ್ನೊ ನೂನಿಜ್ (೧೫೩೫-೩೭) ಅವುಗಳನ್ನು ೧೬ ನೆಯ ಶತಮಾನದ ಪೂರ್ವಾರ್ಧದಲ್ಲಿ ಗಮನಿಸಿದ್ದರು.

ವಿಜಯಸೌಧ :

ಮಹಾನವಮಿಯು ವಿಜಯನಗರದರಸರ ಪ್ರತಿಷ್ಠೆಯನ್ನು ಪ್ರದರ್ಶಿಸುವ ಹಬ್ಬವಾಗಿತ್ತೆಂಬುದನ್ನು ಅಬ್ದುಲ್ ರಜಾಕ್ ಅರಿತಿದ್ದ. ದಂಡನಾಯಕರಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಲೆಂದೇ ಈ ಹಬ್ಬವನ್ನು ಅವರು ಆಚರಿಸುತ್ತಿದ್ದರೆಂದು ನೂನಿಜ್ ಕೂಡ ಕೇಳಿದ್ದ. ಈ ಹಬ್ಬಕ್ಕೆ ಅವರು ಎಷ್ಟು ಮಹತ್ವ ಕೊಟ್ಟಿದ್ದರೆಂದರೆ, ಇದರ ಆಚರಣೆಗಾಗಿಯೇ ಒಂದು ಮಹಾಮಂಟಪವನ್ನು ಕಟ್ಟಿ, ಅದಕ್ಕೆ 'ವಿಜಯಸೌಧ' ಎಂಬ ಹೆಸರು ಕೊಟ್ಟಿದ್ದರು. ಇದು ವಿಜಯದಶಮಿ (ಮಹಾನವಮಿ) ಹಬ್ಬದಾಚರಣೆಯ ಕೇಂದ್ರಬಿಂದುವಾಗಿತ್ತು. ಈ ಸೌಧದ ಅವಶೇಷಗಳು ಇಂದಿಗೂ ಉಳಿದು ಬಂದಿದ್ದು, ಅದನ್ನು 'ಮಹಾನವಮಿ ದಿಬ್ಬ' ಮತ್ತು 'ವಿಜಯಮಂಟಪ' ಎಂದು ಈಗ ಕರೆಯಲಾಗುತ್ತಿದೆ. ಕೃಷ್ಣದೇವರಾಯನ ಆಮುಕ್ತಮಾಲ್ಯ(ಅ-೨)ದಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಗೊಂಡಿರುವ 'ಗೋಪುರ ವೇದಿಕೆ'ಯು ಇದಾಗಿರಲು ಸಾಧ್ಯ.

ಈ ಹಬ್ಬದ ಒಂಬತ್ತು-ಹತ್ತು ದಿನಗಳಲ್ಲಿ ಸಾಮ್ರಾಜ್ಯವೇ ಮಹಾರಾಜಧಾನಿ ಪಟ್ಟಣದಲ್ಲಿ ಸಮ್ಮಿಳಿತಗೊಳ್ಳುತ್ತಿತ್ತು. ತಮ್ಮ ತಮ್ಮ ಪ್ರದೇಶದ ಚತುರ ನೃತ್ಯಗಾರ್ತಿಯರನ್ನು, ಕ್ರೀಡಾಪಟುಗಳನ್ನು, ಕಡುಗಲಿಗಳನ್ನು ಇಲ್ಲಿಗೆ ಕರೆತಂದು, ಈ ಉತ್ಸವದಲ್ಲಿ ಪಾಲ್ಗೊಳ್ಳಬೇಕೆಂಬ ಕಡ್ಡಾಯದ ಕರೆಯು ಅಧೀನ ಅರಸರಿಗೆ, ದಂಡನಾಯಕರಿಗೆ, ಸಾಮಂತರಿಗೆ ಅರಸನಿಂದ ಹೋಗುತ್ತಿತ್ತು. ರಾಜ್ಯದ ಪರ ಯುದ್ಧನಿರತರಾದವರನ್ನು ಮತ್ತು ರಾಜ್ಯದ ಗಡಿರಕ್ಷಣೆಯಲ್ಲಿ ತೊಡಗಿಸಿಕೊಂಡ ದಂಡನಾಯಕರನ್ನು ಬಿಟ್ಟು ಉಳಿದೆಲ್ಲ ಪ್ರತಿಷ್ಠಿತರು ಇದರಲ್ಲಿ ಪಾಲ್ಗೊಳ್ಳುತ್ತಿದ್ದರೆಂಬುವರಲ್ಲಿ ಸಂಶಯವಿಲ್ಲ. ಇವರಲ್ಲಿ ಹಲವರು ಮೂರು-ನಾಲ್ಕು ತಿಂಗಳ ದಾರಿ ತುಳಿದು, ದೂರದೂರದ ಪ್ರದೇಶಗಳಿಂದ ಬರುತ್ತಿದ್ದರೆಂದು ಪ್ರವಾಸಿಗರು ವರದಿ ಮಾಡಿರುವರು. ಇವರಾರೂ ಬರಿಗೈಯಲ್ಲಿ ಬರುತ್ತಿರಲಿಲ್ಲ; ತಮ್ಮ ಪರಿವಾರ ಹಾಗೂ ಪ್ರತಿಷ್ಠಿತ ಪ್ರಜಾಮಂಡಳಿಯೊಡಗೂಡಿ, ಅರಸನಿಗೆ ಅರ್ಪಿಸಲು ಅಮೂಲ್ಯ ವಸ್ತು-ಒಡವೆ-

ವನಿತೆಯರನ್ನು ತರುತ್ತಿದ್ದರು. ಯುದ್ಧ ಕವಚ ಹಾಗೂ ಹೌದಾಗಳಿಂದ ವಿಶೇಷವಾಗಿ ಅಲಂಕರಿಸಿಕೊಂಡ ಗಜಗಳು ಗಾರುಡಿಗರನ್ನು ಮತ್ತು ಪಂಜುಪಟುಗಳನ್ನು ಹೊತ್ತು ಘೋರ್ಗರೆವ ಮೋಡಗಳಂತೆ ಘರ್ಜಿಸುತ್ತಾ ಸಾಗರೋಪಾದಿಯಲ್ಲಿ ಬರುತ್ತಿದ್ದುದನ್ನು ಅಬ್ದುಲ್ ರಜಾಕ್ ಗಮನಿಸಿದ್ದ. ಇದೊಂದು ವಾಸ್ತವ ದೃಶ್ಯವಾಗಿತ್ತೆಂದು ತೋರುವುದು. ಏಕೆಂದರೆ ವಿಜಯನಗರದ ಕವಿಯಾದ ಚಂದ್ರಶೇಖರನೂ 'ನೀಲದ ನೆಲಗಟ್ಟಿನರಂಗ' ವನ್ನು ರಜಾಕ್ ಬರುವುದಕ್ಕಿಂದ ಒಂದೂವರೆ ದಶಕದ ಮುಂಚೆ(ಕ್ರಿ.ಶ. ೧೪೩೦)ಯೇ ಇಲ್ಲಿ ಕಂಡಿದ್ದನು ಎಂಬುದಕ್ಕೆ (ಪಂಪಾಸ್ಥಾನ ವರ್ಣನಂ ೮೬-೮) ಸಾಕ್ಷಿ ನುಡಿದಿರುವನು.

ಉತ್ಸವದ ತೆರೆದಂಗಳ :

ಸೆಪ್ಟಂಬರ್ ೧೪೪೩ ರ ಉತ್ಸವದಲ್ಲಿ ಪಾಲ್ಗೊಂಡ ಅಬ್ದುಲ್ ರಜಾಕ್ ತನ್ನ ಅನುಭವವನ್ನು ಮುಕ್ತ ಮನಸ್ಸಿನಿಂದ ಹಂಚಿಕೊಂಡಿರುವನು. 'ರಾಜ್ಯದ ಮೂಲೆಮೂಲೆಯ ದಣ್ಣಾಯಕರು, ಅಧಿರಾಜರು, ಸಾಮಂತರು ಮತ್ತು ಬ್ರಾಹ್ಮಣರು ಗುಂಪುಗೊಂಡು ಅರಮನೆಯ ಪ್ರಾಂಗಣದಲ್ಲಿ ನೆರೆದಾಗ, ಅದು 'ಪಚ್ಚೆರಾಗದ ಸಾಗರದಂತೆ ತೊಯ್ದಾಡುವಂತೆ' ಅವನಿಗೆ ಗೋಚರಿಸಿತಂತೆ. 'ಈ ಹಬ್ಬದ ನಿಮಿತ್ತ ಇಲ್ಲಿ ಹಲವಾರು ಡೇರಾಮಂಟಪಗಳನ್ನು ನಿರ್ಮಿಸಲಾಗಿತ್ತು. ಅವುಗಳಲ್ಲಿ ಹಲವು ಎರಡರಿಂದ ಐದು ಅಂತಸ್ತಿನವಾಗಿದ್ದರೆ, ಇನ್ನು ಕೆಲವು ತಮ್ಮ ಸುತ್ತಲೂ ಸುತ್ತುವ ತಿರುಗಣೇ ಮನೆಗಳಾಗಿದ್ದವು. ಅತ್ಯಂತ ನಾಜೂಕಿನಿಂದ ಮೂಡಿಸಿದ ಸುಂದರವಾದ ವರ್ಣಚಿತ್ರಗಳಿಂದ, ಕಲ್ಪನಾತೀತವಾದ ಪಶು, ಪಕ್ಷಿ, ಪ್ರಾಣಿ ಮಾತ್ರವಲ್ಲದೇ ನೊಣ-ನೊರಜುಗಳ ಸೂಕ್ಷ್ಮ ಚಿತ್ರಗಳಿಂದ ಈ ಡೇರೆಗಳು ಅಲಂಕಾರ ಗೊಂಡಿದ್ದವು.' ಮಹಾರಾಜಧಾನಿ ಪಟ್ಟಣದಲ್ಲಿ ಮಾತ್ರವಲ್ಲದೆ ರಾಜ್ಯದ ರಹದಾರಿಗಳಲ್ಲೆಲ್ಲಾ ನೆಟ್ಟು, ಕಟ್ಟುಬಟ್ಟೆಯಿಂದ ಅಲಂಕರಿಸಿದ್ದ, ದೊಡ್ಡ ದೊಡ್ಡ ಮರದಿನ್ನೆಗಳ ಮಂಟಪಗಳು ಹಡಗಿನ ಘಟಸ್ತಂಭವನ್ನು ನೆನಪಿಸಿಕೊಡುತ್ತಿದ್ದವೆಂದು ಇಟಲಿಯ ಪ್ರವಾಸಿ ನಿಕೋಲ-ದ-ಕೊಂತಿ ಹೇಳಿರುವನು. ಈ ಆವರಣದ ಮುಂಭಾಗದಲ್ಲಿ ಒಂಭತ್ತು ಅಂತಸ್ತಿನ ಒಂದು ಅರಮನೆಯನ್ನೂ ಅಲ್ಲಿಂದ ಡೇರಾಮಂಟಪದ ವರೆಗೆ ವಿಸ್ತರಿಸಿದ್ದ ತೆರೆದಂಗಳವನ್ನೂ ಅಬ್ದುಲ್ ರಜಾಕ್ ನೋಡಿದ್ದರೆ, ಇದಕ್ಕಿಂತ ಹೆಚ್ಚಿನ ವಿಶೇಷತೆಗಳನ್ನು ಪ್ಯಾಸ್ ಕಂಡಿದ್ದನು.

ಒಂದರ ಹಿಂದೆ ಒಂದು ನಿಂತಿದ್ದ ಎರಡು ಬೃಹತ್ ದ್ವಾರಗಳನ್ನು, ವಿಜಯಸೌಧದ ಎರಡು ಬದಿಯಲ್ಲಿದ್ದ ಕಿರುಎತ್ತರದ ಮೊಗಸಾಲೆಗಳನ್ನು ಇದರ ಉತ್ತರ ದಿಕ್ಕಿನಲ್ಲಿದ್ದ ಒಂದಂಕಣದ ಸ್ತಂಭಸೌಧವನ್ನು ವಿಜಯಸೌಧದ ಆವರಣದಲ್ಲಿ ಪ್ಯಾಸ್ ಗುರುತಿಸಿದ್ದ. ಇದರ ಮುಂದೆ ಸೋಪಾನಮಾರ್ಗವಿದ್ದರೆ ಅದರ ಸುತ್ತಲೂ ಉಬ್ಬುಶಿಲ್ಪಗಳಿಂದ ಅಲಂಕರಿಸಲ್ಪಟ್ಟ ಜಗತಿ ಇತ್ತು. ಕಳಿಂಗ ರಾಜ್ಯದ ವಿರುದ್ಧ ಜಯ ಸಾಧಿಸಿದ ನಂತರ ಈ ಸೌಧವನ್ನು ಕಟ್ಟಿ, ಅದಕ್ಕೆ 'ವಿಜಯಸೌಧ' ಎಂಬ ಹೆಸರು ಕೊಡಲಾಯಿತೆಂಬ ಅಭಿಮತವುಂಟು. ಇಲ್ಲಿಯ ಅರಮನೆಗಳ ಹಾಗೂ ವಿಜಯಸೌಧದ ಮಧ್ಯೆ ಒಂದು ದ್ವಾರಮಂಟಪವಿತ್ತು. ಆ ವಿಶಾಲವಾದ ಆವರಣವನ್ನು ಮೂವತ್ನಾಲ್ಕು ಓಣಿದಾರಿಗಳು ವಿಭಜಿಸಿದ್ದವು. ಇಲ್ಲಿಯ ಕಿರುಎತ್ತರದ ಮೊಗಸಾಲೆಗಳು (ಬಹುಶಃ ಅಬ್ದುಲ್ ರಜಾಕ್ ಗುರುತಿಸಿದ ತಿರುಗು ಡೇರಾಮಂಟಪ) ಪ್ಯಾಸ್‌ನ ವಿಶೇಷ ಗಮನ ಸೆಳೆದವು. ಇವು ಅಡಿಯಿಂದ ಮುಡಿಯ ವರೆಗೂ ಶೃಂಗಾರಗೊಂಡಿದ್ದನ್ನು ರಕ್ತಗೆಂಪು ಹಾಗೂ ಮರಕತ ಮಕಮಲ್ಲಿನ ಬಟ್ಟೆಗಳಿಂದ ವಿಶೇಷ ಬಗೆಯಲ್ಲಿ ಅಲಂಕೃತಗೊಂಡಿದ್ದನ್ನು ಅವನು ಕಂಡಿದ್ದನು.

ಇಂತಹ ಇನ್ನೆರಡು ಕಟ್ಟಡಗಳು ಈ ಅಂಗಳದ ಪೂರ್ವಬಾಗಿಲಿನೆದುರು ಇದ್ದುದನ್ನು ಪ್ಯಾಸ್ ನೋಡಿದ್ದನು. ಈ ಸೌಧದ ಸೋಪಾನಮಾರ್ಗ, ಎರಡು ಮಜಲಿನ ಜಗತಿ, ಪ್ರಧಾನ ಸ್ತಂಭಕಟ್ಟಡ, ಭಿತ್ತಿ, ಭುವನೇಶ್ವರಿ ಮೊದಲಾದವುಗಳನ್ನೆಲ್ಲ ಬೆಲೆ ಬಾಳುವ ಕಸೂತಿ ಬಿಡಿಸಿದ ಬಟ್ಟೆಯಿಂದ ಶೃಂಗರಿಸಲಾಗಿತ್ತಲ್ಲದೆ ಇದರ ಹೊರಭಿತ್ತಿಯನ್ನೂ ಸುಂದರವಾದ ಉಬ್ಬುಶಿಲ್ಪಗಳಿಂದ ಅಲಂಕರಿಸಲಾಗಿತ್ತು. ಇವುಗಳಲ್ಲಿ ಒಂದನ್ನು ಸಿಂಹಾಸನ ಸೌಧ ಎಂದು ಕರೆಯಲಾಗಿತ್ತು.

ವಿರೂಪಾಕ್ಷ ಸಿಂಹಾಸನ-ವಿಜಯನಗರ ರಾಜಾಸನ :

ವಿಜಯಸೌಧವು ಪ್ರಾಂಗಣದ ಹೆಗ್ಗುರುತಾಗಿದ್ದರೆ, ಅದರ ಮೇಲೆ ರಾರಾಜಿಸುತ್ತಿದ್ದ ಒಂದು ಸಿಂಹಾಸನವು ವಿಜಯದಶಮಿ ಉತ್ಸವದ ಹೃದಯವಾಗಿತ್ತು. ನವರಾತ್ರಿ ಹಬ್ಬದಾಚರಣೆಯ ನಿಮಿತ್ತ ವಿಶೇಷವಾಗಿ ಸಜ್ಜುಗೊಳಿಸಲಾಗುತ್ತಿದ್ದ ವಿಜಯಸೌಧದ ವೇದಿಕೆಯ ಮೇಲಿರುತ್ತಿದ್ದ ಐದು ವಿಶೇಷತೆಗಳನ್ನು ಇಲ್ಲಿ ಗಮನಿಸುವುದಗತ್ಯ. ಅವು : ೧. ವೇದಿಕೆಯ ಒಂದು ಪಾರ್ಶ್ವದಲ್ಲಿದ್ದ (ಸೋಪಾನದ ಸಮೀಪ) **ವಿರೂಪಾಕ್ಷನ ಪಟಗುಡಿ;** ೨. ವೇದಿಕೆಯ ನಟ್ಟನಡುವೆ ಇದ್ದ **ವಿರೂಪಾಕ್ಷ (ಕರ್ನಾಟಕ) ಸಿಂಹಾಸನ;** ೩. ಸಿಂಹಾಸನದ ಒಂದು ಬದಿಯಲ್ಲಿ ಮಣೆಯ ಮೇಲಿರಿಸಿದ್ದ **ವಿರೂಪಾಕ್ಷಮುಕುಟ;** ೪. ಮತ್ತೊಂದು ಬದಿಯಲ್ಲಿ ಇನ್ನೊಂದು ಮಣೆಯ ಮೇಲಿರಿಸಿದ್ದ **ವಿರೂಪಾಕ್ಷ ಪಾದುಕೆ** ಮತ್ತು ೫. ವೇದಿಕೆಯ ಮುಂಭಾಗದಲ್ಲಿ ರಾರಾಜಿಸುತ್ತಿದ್ದ **ರಾಜಾಸನ.**

ವಿಜಯನಗರ ರಾಜ್ಯದ ನಿಜವಾದ ಸಮ್ರಾಟ ವಿರೂಪಾಕ್ಷ. ಮೊದಲ ಮೂರು ವಂಶದ ಅರಸರು ಈ ದೇವತೆಯ ಪರವಾಗಿ, ಅವನ ಸೇವಕರಾಗಿ, ರಾಜ್ಯವನ್ನು ಆಳುತ್ತಿದ್ದರೆಂಬುದನ್ನು ಅವರ ದಾಖಲೆಗಳಂತೆ ಮಹಾನವಮಿ ಉತ್ಸವವೂ ಸಮರ್ಥವಾಗಿ ಸಾಧಿಸಿ ತೋರಿಸುವುದು. ಬಹುಶಃ ಈ ಕಾರಣಕ್ಕಾಗಿ ಪಂಪಾಸ್ಥಾನ ವರ್ಣನಂ ಕವಿಯು ಇದನ್ನು 'ವಿರೂಪಾಕ್ಷನ ಒಡ್ಡೋಲಗ' ಎಂದು ಗುರುತಿಸಿದನೆಂದು ಕಾಣುವುದು. ವಿಜಯಸೌಧದ ಮಧ್ಯದಲ್ಲಿ ರಾರಾಜಿಸುತ್ತಿದ್ದ ಅನರ್ಘ್ಯವೂ ಅದ್ಭುತವೂ ಆದ ಸುವರ್ಣ ಸಿಂಹಾಸನವು ವಾಸ್ತವವಾಗಿ ವಿರೂಪಾಕ್ಷ ಮೂರ್ತಿಯ ಪೀಠವಾಗಿತ್ತು. ಸುವರ್ಣದಿಂದ ಮಾಡಿದ ನಾಲ್ಕು ಸಿಂಹಗಳು ಹೊತ್ತು ನಿಂತಿದ್ದ ಈ ಮಣಿಮಯ ಸಿಂಹಾಸನದ ಯೋನಿ(ರಂಧ್ರ)ಭಾಗದಲ್ಲಿ ವಿರೂಪಾಕ್ಷನ (ಲಿಂಗ)ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಒಂದು ಮೊಳ ಎತ್ತರದ ಮಣಿಮಯ ಮುಕುಟವನ್ನು ಒಂದು ಮಣೆಯ ಮೇಲೆ ಇರಿಸಿದರೆ, ಅನರ್ಘ್ಯ ರತ್ನಗಳ ಕಾಲ್ತೊಡರಿನಿಂದ ಅಲಂಕೃತಗೊಂಡಿದ್ದ, ರಟ್ಟೆಗಾತ್ರದ ಸುವರ್ಣ ಪಾದುಕೆಗಳನ್ನು ಇನ್ನೊಂದು ಮಣೆಯ ಮೇಲೆ ಇರಿಸಲಾಗಿತ್ತು. ಇವೆರಡೂ ವಿರೂಪಾಕ್ಷ ದೈವೀ ಸಂಕೇತಗಳಾಗಿದ್ದವು. 'ಈ ಸಿಂಹಾಸನವನ್ನೇರುವ ಅರ್ಹತೆ ಅತ್ಯಂತ ಸಾತ್ವಿಕನಾದ ದೈವೀಪುರುಷನಿಗೆ ಮಾತ್ರ ಉಂಟೆಂಬ ನಂಬಿಕೆ ಇದ್ದುದರಿಂದ ವಿಜಯನಗರದ ಅರಸರಾರೂ ಇದನ್ನು ಏರುವ ಸಾಹಸ ಮಾಡುವುದಿಲ್ಲ' ಎಂದು ನೂನಿಜ್, ಪ್ಯಾಸ್ ಮೊದಲಾದವರು ಸಾಕ್ಷಿ ನುಡಿದಿರುವರು. ಈ ಕಾರಣದಿಂದಾಗಿ ಆಳುವ ಅರಸನಿಗೆ ಪ್ರತ್ಯೇಕ ರಾಜಾಸನವನ್ನು ಸಿದ್ಧಗೊಳಿಸಲಾಗುತ್ತಿತ್ತು. ಈ ರಾಜಾಸನವನ್ನು ಮಕಮಲ್ಲಿನ ಮೆತ್ತೆಯಿಂದ ಮಾಡಿ, ಮುತ್ತು-ರತ್ನಗಳಿಂದ ಅಲಂಕರಿಸಲಾಗಿತ್ತು. ಅರಸನ ವಿಶೇಷ ಅನುಗ್ರಹಕ್ಕೆ ಒಳಗಾದ ನೂನಿಜ್ ಇದನ್ನು ಸನಿಹದಿಂದ ನೋಡಿ ನಿಬ್ಬೆರಗಾದಾಗ, ಒಡ್ಡೋಲಗದವನೊಬ್ಬ 'ಈ ಸುಂದರ ಆಸನದ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಪ್ರಶ್ನಿಸಿದನಂತೆ! 'ಇಂತಹುದನ್ನು ನಿಮ್ಮ ದೇಶದವರು ಮಾಡಲು ಸಾಧ್ಯವೇ?' ಎಂಬ ಈ ಮಾತಿನ ಒಳಾರ್ಥವನ್ನು ಗ್ರಹಿಸಿದ ನೂನಿಜ್ 'ಈ ಬಗೆಯ

ಆಸನವನ್ನು ನಮ್ಮಲ್ಲಿಯೂ ಮಾಡಲು ಸಾಧ್ಯ. ಆದರೆ, ಇದರ ಆವಶ್ಯಕತೆ ನಮಗಿಲ್ಲ' ಎಂದು ಉತ್ತರಿಸಿದನಂತೆ.

ಸುವರ್ಣದ ಎಳೆಗಳಿಂದ ಗುಲಾಬಿಹೂಗಳ ಕಸೂತಿ ಹಾಕಿ ಅಲಂಕರಿಸಿದ, ಪದರು ಪದರಿನ ಶ್ವೇತೋಸ್ತ್ರವನ್ನು ತೊಟ್ಟು, ಬಗೆಬಗೆಯ ಆಭರಣಗಳಿಂದ ಅಲಂಕರಿಸಿಕೊಂಡು, ಈ ರಾಜಾಸನದಲ್ಲಿ ಕಂಗೊಳಿಸುತ್ತಿದ್ದ ವಿಜಯನಗರದ ಅರಸನನ್ನು ಪ್ಯಾಸ್ ಸ್ವತಃ ಕಂಡಿದ್ದ.

ಮಹಾನವಮಿ ಸಮಾರಂಭದ ಆಚರಣೆಗಳು :

ಮಹಾನವಮಿಯನ್ನು ಒಂಬತ್ತು ದಿನ ಆಚರಿಸುತ್ತಿದ್ದುದರಿಂದ ಅದನ್ನು ನವರಾತ್ರಿಯ ಹಬ್ಬವೆಂದೂ ದುಷ್ಟಶಕ್ತಿಯ ವಿನಾಶವು ಈ ಹಬ್ಬದ ಪೌರಾಣಿಕ ಹೇತುವಾಗಿದ್ದುದರಿಂದ 'ವಿಜಯದಶಮಿ' (ಹತ್ತನೆಯ ದಿನ) ಎಂದೂ ಕರೆಯಲಾಗುತ್ತಿತ್ತು. ದಿನವಿಡೀ ಉಪವಾಸವಿದ್ದು ಈ ಹಬ್ಬವನ್ನು ವಿಧಿವತ್ತಾಗಿ ವಿಜಯನಗರದ ಅರಸರು ಆಚರಿಸುತ್ತಿದ್ದರು. ವಿಜಯಸಾಧನೆಯ ಸಂಕೇತವಾಗಿದ್ದ ತಮ್ಮ ಶಕ್ತಿ, ಸಾಹಸ, ಸಂಪತ್ತನ್ನು ವಿಜೃಂಭಣೆಯಿಂದ ಕೊನೆಯ ದಿನ ಪ್ರದರ್ಶಿಸಿ, ದಶಮಿಯ ದಿನವನ್ನು ಅರ್ಥಪೂರ್ಣಗೊಳಿಸುತ್ತಿದ್ದರು.

ಒಂಬತ್ತು ದಿನಗಳನ್ನು ವಿಜಯದಶಮಿಯ ಉತ್ಸವಕ್ಕಾಗಿ ಮೀಸಲಿಡುತ್ತಿದ್ದ ಅರಸರು, ಬೆಳಗಿನ ಅರ್ಧ ದಿನವನ್ನು ಪೂಜೆ, ಯಜ್ಞ, ಯಾಗ, ಬಲಿ ಮುಂತಾದವಕ್ಕೂ ಮಧ್ಯಾಹ್ನದ ಉಳಿದರ್ಧವನ್ನು ವೈಭವ ಪ್ರದರ್ಶನಕ್ಕೂ ವಿನಿಯೋಗಿಸುತ್ತಿದ್ದರು. ಬೆಳಗಿನ ಪೂಜೆಯು ವಿಜಯಸೌಧದ ಮೇಲೆ ಕಟ್ಟಿದ ಪಟಗುಡಿಯಲ್ಲಿ ಆರಂಭಗೊಂಡು, ಗಜರಾಜ-ರಾಜಾಶ್ವಗಳ ಪೂಜೆ, ಕುರಿಕೋಣಗಳ ಬಲಿ, ಯಜ್ಞ-ಯಾಗಾದಿಗಳ ಆಚರಣೆಗಳನ್ನು ಒಳಗೊಂಡಿರುತ್ತಿತ್ತು. ಇವನ್ನು ಆಚರಿಸುವಾಗ ಹಲವಾರು ಪುರೋಹಿತರ ಮಾರ್ಗದರ್ಶನವೂ ಪರಿವಾರದವರ ಸಹಯೋಗವೂ ಅರಸನಿಗಿರುತ್ತಿತ್ತು. ಮಧ್ಯಾಹ್ನ ಅರಸನು ವಿಶ್ರಮಿಸಿದರೂ ಆಹಾರ ಸೇವಿಸುತ್ತಿರಲಿಲ್ಲ; ರಾತ್ರಿಯ ಕಾರ್ಯಕ್ರಮಗಳೆಲ್ಲವೂ ಮುಗಿದ ನಂತರವೇ ಉಪವಾಸ ಮುರಿದು ಅವನು ಉಪಾಹಾರ ಸೇವಿಸುತ್ತಿದ್ದನು.

ಎರಡನೆಯ ಸುತ್ತಿನ ಕಾರ್ಯಕ್ರಮವು ಮಧ್ಯಾಹ್ನ ಮೂರಕ್ಕೆ ಆರಂಭವಾಗಿ ಮಧ್ಯರಾತ್ರಿಯ ವರೆಗೂ ಮುಂದುವರಿಯುತ್ತಿತ್ತು. ರಾಜವೈಭವ, ಸೇನಾಶಕ್ತಿ, ಕಲೆ ಮತ್ತು ಸಾಹಸ ಪ್ರದರ್ಶನಗಳೇ ಪ್ರಧಾನವಾಗಿದ್ದ ಈ ಕಾರ್ಯಕ್ರಮದಲ್ಲಿ ರಾಜ್ಯದ ಅತ್ಯಂತ ಪ್ರತಿಷ್ಠಿತ ವರ್ಗದವರು, ನಿಪುಣ ಕಲಾವಿದರು, ಆಪ್ತ ಪರಿವಾರದವರು, ಅಧೀನ ಅರಸರು, ದಂಡನಾಯಕರು, ಬ್ರಾಹ್ಮಣರು, ಚತುರ ಕ್ರೀಡಾಪಟುಗಳು, ವಿಖ್ಯಾತ ನಾಟ್ಯ-ಸಂಗೀತ-ವಾದ್ಯವೃಂದಗಳು, ವಿಶೇಷ ಗೌರವಾನ್ವಿತರು, ವಿದೇಶಿಯರು ಪಾಲ್ಗೊಳ್ಳುತ್ತಿದ್ದರು. ಆದರೆ ಅರಸನ ಅಂಗರಕ್ಷಕರನ್ನು ಬಿಟ್ಟು ಬೇರಾವ ಆಯುಧಧಾರಿಯೂ ಈ ಅಂಗಳದೊಳಗೆ ಆಗ ಕಾಲಿಡುವಂತಿರಲಿಲ್ಲ; ಅಲ್ಲದೆ, ಆವರಣದೊಳಗೆ ನಡೆಯುತ್ತಿದ್ದ ಹಬ್ಬದಾಚರಣೆಯ ದೃಶ್ಯಭಾಗ್ಯವು ಜನಸಾಮಾನ್ಯನಿಗೆ ಗಗನಕುಸುಮವಾಗಿತ್ತು. ಏಕೆಂದರೆ ಅರಮನೆಯ ಆಹ್ವಾನವಿಲ್ಲದವರಾರಿಗೂ ಈ ಅಂಗಳಕ್ಕೆ ಪ್ರವೇಶವಿರಲಿಲ್ಲ.

ದರಬಾರು :

ವಿಜಯಸೌಧದ ವೇದಿಕೆಯ ಮೇಲಿರಿಸಿದ ರಾಜಾಸನದಲ್ಲಿ ಅರಸನು ಕುಳಿತಾಗ, ಅವನಿಗೆ ಅತ್ಯಂತ ಆಪ್ತ ಬಂಧುವರ್ಗದವರಲ್ಲಿ ಮೂರು-ನಾಲ್ಕು ಪ್ರತಿಷ್ಠಿತರು ಮಾತ್ರ ಅವನ ಹಿಂದೆ ಕುಳಿತುಕೊಳ್ಳಲು ಆಸನಗಳ ಏರ್ಪಾಡಿರುತ್ತಿತ್ತು. ಖಡ್ಗಧಾರಿ ಅಂಗರಕ್ಷಕರು, ಹಡಪದವನು,

ರಾಜಲಾಂಛನ ಹೊತ್ತವರು, ಚಾಮರಧಾರಿಗಳು ಅರಸನ ಹಿಂದೆ ನಿಂತಿರುತ್ತಿದ್ದರು. ವಿರೂಪಾಕ್ಷ ಸಿಂಹಾಸನವನ್ನು ಸುತ್ತುವರಿದು ನಿಂತಿರುತ್ತಿದ್ದ ಬ್ರಾಹ್ಮಣರು ಈ ದೇವತೆಯ ಚಾಮರಸೇವೆಯಲ್ಲಿ ನಿರತರಾಗಿರುತ್ತಿದ್ದರು. ಇಷ್ಟು ಜನರನ್ನು ಬಿಟ್ಟರೆ, ಅರಸಿಯರು ಮತ್ತು ಅಮಾತ್ಯರನ್ನೊಳಗೊಂಡು ಉಳಿದವರಾರಿಗೂ ಈ ವೇದಿಕೆಯ ಮೇಲೆ ಸ್ಥಾನವಿರಲಿಲ್ಲ. ನಾಡಿನ ಮೂಲೆಮೂಲೆಗಳಿಂದ ಬಂದಿದ್ದ ದಂಡನಾಯಕರಿಗೆ, ಸಾಮಂತರಿಗೆ ಆವರಣದಲ್ಲಿ ನಿವೇಶನಗಳನ್ನು ಕಾಯ್ದಿರಿಸಲಾಗುತ್ತಿತ್ತು. ಸಾಮಾನ್ಯವಾಗಿ ಡೇರಾಮಂಟಪ ಅಥವ ಮೊಗಸಾಲೆಗಳಲ್ಲಿ ಅವರಿಗೆ ಈ ಅನುಕೂಲತೆಯನ್ನು ಮಾಡಿಕೊಡಲಾಗುತ್ತಿತ್ತು. ರಾಜಕುಮಾರರಿಗೆ ವಿಜಯಸೌಧದ ಎದುರಿನಲ್ಲಿದ್ದ ಎರಡು ಅರಮನೆಗಳಲ್ಲಿ (ಸಿಂಹಾಸನ ಸೌಧ?) ಏರ್ಪಾಟು ಮಾಡಲಾಗುತ್ತಿತ್ತು. ವಿಜಯಸೌಧದ ಪ್ರಾಂಗಣವನ್ನೆಲ್ಲ ವಾದ್ಯಸಂಗೀತಗಾರರು, ನೃತ್ಯಗಾರ್ತಿಯರು, ಜಟ್ಟಿಗಳು, ಕುದುರೆ, ಆನೆ, ಒಂಟೆ, ಕಾಲ್ದಳದ ಭಟಾಗ್ರರು ಹಂಚಿಕೊಂಡು ನಿಲ್ಲುತ್ತಿದ್ದರು. ಹದಿನೈದನೆಯ ಶತಮಾನದಲ್ಲಿ ವಿಜಯಸೌಧವನ್ನು ಒಂಬತ್ತು ಅಂತಸ್ತುಗಳಲ್ಲಿ ಕಟ್ಟಲಾಗಿತ್ತೆಂದೂ ಅತ್ಯಂತ ಮೇಲಿನ ವೇದಿಕೆಯನ್ನು ಅರಸನು ಅಲಂಕರಿಸಿದ್ದರೆ ಏಳನೆಯ ಅಂತಸ್ತಿನಲ್ಲಿ ವಿದೇಶಿಯರಿಗೆ ಸ್ಥಾನಾವಕಾಶ ಮಾಡಿಕೊಡಲಾಗಿತ್ತೆಂದೂ ತಿಳಿದುಬರುವುದು. ೧೬ ನೆಯ ಶತಮಾನದಲ್ಲಿ ಇದು ಬದಲಾವಣೆಗೊಂಡು, ವಿದೇಶಿಯರಿಗೆ ರಾಜಪುತ್ರರ ಅರಮನೆಯಲ್ಲಿ ಸ್ಥಳಾವಕಾಶ ಮಾಡಿಕೊಡಲಾಯಿತೆಂದು ತಿಳಿದುಬರುವುದು. ಅರಸಿಯರಿಗಾಗಿ ಮೀಸಲಾದ ಸ್ಥಳದ ಸುಳಿವು ನಮಗೆ ಸಿಗುತ್ತಿಲ್ಲ. ಬಹುಶಃ ಅರಮನೆಯ ಮಾಡದ ಮೇಲೆ ಅಥವಾ ಅವರಿಗಾಗಿ ಪ್ರತ್ಯೇಕವಾಗಿ ನಿರ್ಮಿಸಿದ ಮಂಟಪಗಳಲ್ಲಿ ಅವರಿಗೆ ಆಸನದ ಏರ್ಪಾಟು ಮಾಡಲಾಗಿರುತ್ತಿತ್ತೆಂದು ತೋರುವುದು.

ಸಾಮಂತರ ಕಾರ್ಯಕ್ರಮ :

ಸಾಮಂತರು, ನಾಯಕರು, ದಂಡಾಧಿಪರು ಈ ಮುಂತಾದ ರಾಜ್ಯದ ಹಿರಿಯ ಅಧಿಕಾರಿಗಳು ಕಪ್ಪಕಾಣಿಕೆಗಳನ್ನು ಒಪ್ಪಿಸಿ ತಮ್ಮ ನಿಷ್ಠೆಯನ್ನು ವಿರೂಪಾಕ್ಷನ ಸಮ್ಮುಖದಲ್ಲಿ ಪ್ರದರ್ಶಿಸಿ, ಅರಸನ ಅನುಗ್ರಹ ಸಂಪಾದಿಸಿಕೊಳ್ಳುವುದು ಸಂಜೆ ಕಾರ್ಯಕ್ರಮದ ಪ್ರಧಾನ ಉದ್ದೇಶವಾಗಿತ್ತು. ಆಗ ಅವರು ಆಯುಧಗಳನ್ನಾಗಲೀ ಪಾದರಕ್ಷೆಗಳನ್ನಾಗಲೀ ತೊಟ್ಟು, ವೇದಿಕೆಯನ್ನು ಏರುವಂತಿರಲಿಲ್ಲ. ವೇದಿಕೆಯ ಪಕ್ಕದಲ್ಲಿ ಸಾಲುಗೊಂಡು ನಿಲ್ಲುತ್ತಿದ್ದ ಇವರನ್ನು, ವೇದಿಕೆಯನ್ನೇರಲು ಅವರವರ ಅಂತಸ್ತಿಗನುಗುಣವಾಗಿ ಒಬ್ಬರ ನಂತರ ಒಬ್ಬರನ್ನು ಬಿಡಲಾಗುತ್ತಿತ್ತು. ವೇದಿಕೆಯನ್ನು ಹತ್ತಿ, ಅರಸನಿಗೆ ಅವರು ಗೌರವವನ್ನೂ ಕಪ್ಪವನ್ನೂ ಸಲ್ಲಿಸುತ್ತಿದ್ದರು. ವಿದೇಶಿ ಯಾತ್ರಿಕರು ಹೇಳಿರುವಂತೆ ಅವರೆಲ್ಲರೂ ಕೈಕಟ್ಟಿ, ತಲೆಬಾಗಿ, ನೆಲ ನೋಡುತ್ತಾ ಅರಸನೆದುರು ನಿಲ್ಲುತ್ತಿದ್ದರು; ಗೌರವ ಪ್ರದರ್ಶಿಸಲು ಮಾತ್ರ ಅವರು ತಮ್ಮ ಎರಡೂ ಕೈಗಳನ್ನು ಮೇಲೆತ್ತಿ ದೀರ್ಘ ನಮಸ್ಕಾರ ಮಾಡುತ್ತಿದ್ದರು. ಅರಸನೊಡನೆ ಸಂಭಾಷಣೆಗಿಳಿಯುವ ಧೈರ್ಯವಾಗಲೀ ಅವನನ್ನು ನೇರವಾಗಿ ನೋಡುವ ಧಾರ್ಷ್ಟ್ಯವಾಗಲೀ ಇವರಾರಿಗೂ ಇರುತ್ತಿರಲಿಲ್ಲವಂತೆ!

ಎರಡು ನೂರಕ್ಕೂ ಹೆಚ್ಚು ಸಾಮಂತರು ತಮ್ಮ ಸೇನೆಯೊಡನೆ ಮಹಾರಾಜಧಾನಿ ಪಟ್ಟಣದಲ್ಲಿ ಈ ಸಂದರ್ಭದಲ್ಲಿ ನೆರೆಯುತ್ತಿದ್ದ ಬಗೆ ಪಾಯಿಸನು ನಿರೂಪಿಸುವನು. ಇವರಲ್ಲಿ ಕೆಲವರು ದೂರದ ಗಡಿಪ್ರದೇಶದಿಂದ ಮೂರು ನಾಲ್ಕು ತಿಂಗಳ ಹಾದಿ ತುಳಿದು ರಾಜಧಾನಿಯನ್ನು ನವರಾತ್ರಿಯ ಮುನ್ನಾದಿನಗಳಲ್ಲಿ ಮುಟ್ಟುತ್ತಿದ್ದರು. ಆಯ್ದು ಅಲಂಕರಿಸಿದ ಹಲವೇ ಹಲವು ಯುದ್ಧ ಪಶು-ಪಟುಗಳನ್ನು

ಅವರೊಡನೆ ಆವರಣದೊಳಗೆ ಬಿಡಲಾಗುತ್ತಿತ್ತು; ಅರಸನಿಗೆ ಅವರು ಕಪ್ಪ ಒಪ್ಪಿಸುವಾಗ, ಅವರ ಸಂಜೋಗ ಸೇನಾಪಡೆಯ ಒಂದು ತುಕುಡಿಯು ಮುಸ್ಸಂಗಳಲ್ಲಿ ಸಾಲುಗೊಂಡು ನಿಂತು ಶಿಸ್ತಿನ ಕವಾಯತನ್ನು ಪ್ರದರ್ಶಿಸುತ್ತಿತ್ತು. ಆ ನಾಯಕನ ಉಳಿದ ಸೇನೆಯು ರಾಜಧಾನಿಗೆ ಬಂದಿದ್ದರೂ ಅರಸನ ದರ್ಶನ ಪಡೆಯಲು ಹಬ್ಬದ ಹತ್ತನೆಯ ದಿನದ ವರೆಗೂ ಅದು ಕಾಯಬೇಕಾಗಿರುತ್ತಿತ್ತು.

ಕಪ್ಪ ಒಪ್ಪಿಸುವ ಒಂದು ಸಮಾರಂಭದಲ್ಲಿ ಸ್ವಂತ ಪಾಲ್ಗೊಂಡಿದ್ದ ನೂನಿಜ್, ಅರಸನು ಈ ಸಂದರ್ಭದಲ್ಲಿ ಪಡೆಯುತ್ತಿದ್ದ ಸಂಪತ್ತಿನ ಬಗ್ಗೆ ವಿವರ ಕೊಟ್ಟಿರುವನು. ಈ ಎಲ್ಲಾ ನಾಯಂಕಾರರು ರಾಜ್ಯದ ಬೇರೆ ಬೇರೆ ಭಾಗಗಳ ಮೇಲಿನ ಅಧಿಕಾರ-ಆದಾಯ ಹೊಂದಿದ್ದರು. ಅವರಲ್ಲಿ ತಮಿಳು ಪ್ರದೇಶದ (ಶ್ರೀರಂಗಪಟ್ಟಣದಿಂದ ಶ್ರೀಲಂಕೆಯ ವರೆಗಿನ) ಸಾಮಂತನಾದ ಸಾಳ್ವನಾಯಕನೇ ಅಗ್ರಗಣ್ಯನಾಗಿದ್ದನು. ಅವನಿಗೆ ಬರುತ್ತಿದ್ದ ೧೧.೦೦.೦೦೦ ಬಂಗಾರದ ನಾಣ್ಯಗಳ (ಪಾರ್ದೋ) ಆದಾಯದಲ್ಲಿ ೧/೩ ಭಾಗ(ಸು. ೩,೬೬.೬೬೬)ವನ್ನು ಪ್ರತಿ ವರ್ಷ ಅರಸನಿಗೆ ಕಪ್ಪ ರೂಪದಲ್ಲಿ ಅವನು ಒಪ್ಪಿಸುತ್ತಿದ್ದನು. ಉಳಿದವರ ವಾರ್ಷಿಕ ಸಂದಾಯ ಹೀಗಿತ್ತು :

೧) ಒರಿಸ್ಸಾ ಗಡಿ ಭಾಗದ ನಾಯಕನಾದ `ಅಜಪರ್ತಿಮಪ'(ಅಜ್ಜಪ್ಪ-ತಿಮ್ಮಪ್ಪ)ನು ತನ್ನ ೮,೦೦,೦೦೦ ವಾರ್ಷಿಕ ವರಮಾನದಲ್ಲಿ ೩.೦೦.೦೦೦ ಪಾರ್ದೋಸ್‌ಗಳನ್ನು ಅರಸನಿಗೆ ಒಪ್ಪಿಸುತ್ತಿದ್ದ.

೨) ಕೊಂಕಣನಾಡಿನ 'ಗಪನಾಯ್ಕ' (ಗೋಪನಾಯಕ) ೬,೦೦,೦೦೦ ವರಮಾನದಲ್ಲಿ ೧,೫೦,೦೦೦ನ್ನು ಸಲ್ಲಿಸುತ್ತಿದ್ದ.

೩) ಮಹಾರಾಜಧಾನಿ ಪಟ್ಟಣದ ಹೊರಪ್ರದೇಶದ 'ನರ್ವರಿ' (ನರಹರಿ) ತನ್ನ ೪.೦೦.೦೦೦ ವರಮಾನದಿಂದ ೨.೦೦.೦೦೦; 'ಮುಂಡಬಗೋಲ್' (ಮುದಗಲ್) `ಬಿಜಪನಾಯ್ಕ' (ವೈಜಪನಾಯಕ) ೪.೦೦.೦೦೦ ವರಮಾನದಿಂದ ೧.೫೦.೦೦೦ ಸಂದಾಯ ಮಾಡುತ್ತಿದ್ದರು.

೪) ೩,೦೦.೦೦೦ ವರಮಾನ ಗಳಿಸಿಕೊಳ್ಳುತ್ತಿದ್ದ 'ಕಲಲಿ'(ಕಳಲಿ)ಯ `ಚಿನಪನ್ಯೆಕ' (ಚಿನ್ನಪ್ಪ ನಾಯಕ), 'ಬೊದಿಅಲ್-ಗುಯುನ'(ಬಂಟ್ವಾಳ-ಗೋವೆ)ಯ `ಬಿಜಪನ್ಯೆಕ' (ಬಸಪ್ಪ ನಾಯಕ), 'ಗತೆ'(ಗುತ್ತಿ)ಯ 'ಅದಪನ್ಯೆಕೆ' (ಆದಪ್ಪ ನಾಯಕ) ಸಕ್ರಮವಾಗಿ ೧,೦೦.೦೦೦, ೧೦.೦೦೦ ಮತ್ತು ೧.೦೦.೦೦೦ ವಾರ್ಷಿಕ ಕಪ್ಪವನ್ನು ಕೊಡುತ್ತಿದ್ದರು. ಅಲ್ಲದೆ ವಜ್ರಗಣಿ ಪ್ರದೇಶದ ಒಡೆಯನಾದ ಗುತ್ತಿಯ ನಾಯಕನು ತನ್ನ ಉತ್ಪಾದನೆಯಿಂದ ೪೦.೦೦೦ಕ್ಕೂ ಹೆಚ್ಚಿನ ಹಣವನ್ನು ಅರಸನಿಗೆ ಸಂದಾಯ ಮಾಡುತ್ತಿದ್ದನು.

೫) ಅತ್ಯಂತ ಅಲ್ಪ ವರಮಾನದ 'ಅಪ್ಪೋಲ್' (ಹೊಯ್ಸಳ) ನಾಡಿನ 'ಕ್ರಿಸ್ನಪನಾಇಕೆ' (ಕೃಷ್ಣಪ್ಪ ನಾಯಕ) ಮತ್ತು 'ಅವಲಿ'(ಆವಣಿ)ಯ 'ಮಲ್ಲಪನಾಯಕ'ರು ತಮ್ಮ ವಾರ್ಷಿಕ ವರಮಾನವಾದ ೨೦.೦೦ ಮತ್ತು ೧೫,೦೦೦ ದಲ್ಲಿ ಸಕ್ರಮವಾಗಿ ೬.೦೦೦ ಮತ್ತು ೫.೦೦೦ ಸಲ್ಲಿಸುತ್ತಿದ್ದರು.

ಅರಸನಿಗೆ ಸಂದಾಯವಾಗುತ್ತಿದ್ದ ವಾರ್ಷಿಕ ಕಪ್ಪದ ಮೊತ್ತವು ಸಾಮಂತರ ಆದಾಯವನ್ನು ಅವಲಂಬಿಸಿದಷ್ಟೇ ಅವರ ಮಿಲಿಟರಿ-ಶಕ್ತಿ ಮತ್ತು ಸಾಮ್ರಾಜ್ಯದೊಂದಿಗಿನ ರಾಜಕೀಯ-ಸೈನಿಕ ಸಂಬಂಧವನ್ನು ಅವಲಂಬಿಸಿತ್ತೆಂಬುದರಲ್ಲಿ ಸಂಶಯವಿಲ್ಲ. ಸ್ಥೂಲವಾಗಿ ಹೇಳುವುದಾದರೆ, ನಾಯಕರು ತಮ್ಮ ವಾರ್ಷಿಕ ವರಮಾನದ ೧/೩ ಭಾಗವನ್ನು ಅರಸನಿಗೆ ಕಪ್ಪದ ರೂಪದಲ್ಲಿ

ಕೊಡುತ್ತಿದ್ದರೆನ್ನಬಹುದು. ಇದು ಏನೇ ಇರಲಿ. ವಾರ್ಷಿಕ ಸಂದಾಯವು ಅರಸನ ಅಭೀಷ್ಟೆಯ ಮೇರೆಗೆ ತೀರ್ಮಾನವಾಗುತ್ತಿತ್ತು. ಆದರೆ ನಾಯಂಕಾರರು ಕಟ್ಟಲೇಬೇಕಾದ ಸೈನ್ಯಬಲದಲ್ಲಿ ಯಾವ ಬಗೆಯ ರಿಯಾಯತಿಯನ್ನೂ ಅವರಿಗೆ ತೋರಿಸಲಾಗುತ್ತಿರಲಿಲ್ಲ. ಇದನ್ನು ದೃಢಪಡಿಸಿಕೊಳ್ಳಲೆಂದೇ ನವರಾತ್ರಿಯ ಮರುದಿನವಾದ ದಶಮಿಯನ್ನು ಮೀಸಲಾಗಿಡಲಾಗುತ್ತಿತ್ತು. ಅಂದು ಎಲ್ಲ ಸಾಮಂತರ ಸೈನ್ಯವನ್ನು ಮಹಾರಾಜಧಾನಿ ಪಟ್ಟಣದ ಸುತ್ತಮುತ್ತಲ ಪ್ರದೇಶದಲ್ಲಿ ನಿಲ್ಲಿಸಿದಾಗ, ಈ ಶಿಸ್ತುಪ್ರದರ್ಶನದ ಪರಿವೀಕ್ಷಣೆಯನ್ನು ಸ್ವಂತ ಅರಸನೇ ಮಾಡುತ್ತಿದ್ದನು. ಅಂದರೆ ನವರಾತ್ರಿಯ ಸಮಾರಂಭವು ಒಂಬತ್ತನೆಯ ದಿನ ಮುಕ್ತಾಯಗೊಳ್ಳದೆ ದಶಮಿಯ ದಿನ ಸೈನ್ಯ ಕವಾಯತಿನ ಕಾರ್ಯಕ್ರಮದೊಂದಿಗೆ ಕೊನೆಗೊಳ್ಳುತ್ತಿತ್ತೆಂದು ಅರ್ಥ.

ಮನರಂಜನಾ ಕಾರ್ಯಕ್ರಮ :

ಕಪ್ಪ ಒಪ್ಪಿಸುವುದು ಮುಗಿದೊಡನೆ ಮನರಂಜನಾ ಕಾರ್ಯಕ್ರಮ ಆರಂಭಗೊಳ್ಳುತ್ತಿತ್ತು. ಆಗ ವಾರಾಂಗನೆಯರ ನೃತ್ಯ, ಪೈಲ್ವಾನರ ಪಟ್ಟಿನ ಪ್ರದರ್ಶನ, ವಾದ್ಯ-ಸಂಗೀತಗಾರರ ಸೋಂಪು, ಗಾರುಡಿಗರ ಗತ್ತು, ಪಂಜಿನಾಳುಗಳ ಕೈಚಳಕ, ಪಶುಗಳ ಸಾಹಸದಾಟ, ವಿವಿಧ ವೇಷಧಾರಿಗಳ ಬೆಡಗಿನಾಟ, ವಿದೂಷಕರ ನಗೆನಾಟಕ ಮೊದಲಾದವು ಆವರಣದಲ್ಲೆಲ್ಲ ಅನಾವರಣಗೊಳ್ಳುತ್ತಿದ್ದವು. ಈ ಸಾಂಸ್ಕೃತಿಕ ಕಾರ್ಯಕ್ರಮದ ವೈವಿಧ್ಯತೆ ವರ್ಷದಿಂದ ವರ್ಷಕ್ಕೆ ಅಲ್ಪಸ್ವಲ್ಪ ಬದಲಾಗುತ್ತಿದ್ದುದು ಸಹಜ, ಏಕೆಂದರೆ ಇದರಲ್ಲಿ ಪಾತ್ರ ವಹಿಸುವವರು ಬೇರೆ ಬೇರೆ ರಾಜ್ಯದವರಾಗಿರುತ್ತಿದ್ದು, ಅವರವರ ಪ್ರದೇಶಗಳ ವಿಶೇಷ ಕಲೆಗಳನ್ನಿಲ್ಲಿ ಪ್ರದರ್ಶಿಸಲೆಂದೇ ಆಯ್ಕೆಗೊಂಡವರಾಗಿರುತ್ತಿದ್ದರು. ಒಂದಾದ ಮೇಲೆ ಮತ್ತೊಂದು, ಒಂದರ ಪಕ್ಕದಲ್ಲಿ ಇನ್ನೊಂದು, ಆಟಗಳು ಪ್ರದರ್ಶನಗೊಳ್ಳುತ್ತಿದ್ದಾಗ ತಾಳ, ಹಲಗೆ, ಮದ್ದಳೆ, ಕಹಳೆಗಳನ್ನು ದಣಿವರಿಯದಂತೆ ವಾದ್ಯಗಾರರು ಮೊಳಗಿಸುತ್ತಿದ್ದರು. ಸೂರ್ಯ ಮುಳುಗಿದೊಡನೆ ಸಾವಿರಾರು ಪಂಜುಗಳನ್ನು ಬೆಳಗಿಸಿ, ಅಂಗಳ, ಆಕಾಶ, ಕೋಟೆ, ಕೊತ್ತಳ, ಮಂದಿರ, ಮಂಟಪಗಳನ್ನೆಲ್ಲಾ ಪ್ರಜ್ವಲಿಸಿ ಹಗಲು-ರಾತ್ರಿಯ ಅಂತರವನ್ನು ಅಳಿಸಿಹಾಕಲಾಗುತ್ತಿತ್ತು. ಆಗ ಬಿರುಸುಬಾಣ ಸಿಡಿಸಿ, ಮದ್ದು ಹೊತ್ತಿಸಿ, ಪಟಾಕಿಗಳನ್ನು ಪುಟಿಸಿ, ಅಗ್ನಿಪುಷ್ಪಗಳನ್ನು ಚಿಮ್ಮಿಸಿ, ಕೃತಕ ಮಿಂಚಿನ ಅಲೆಗಳಿಂದ ಭೂಮ್ಯಾಕಾಶವನ್ನೆಲ್ಲಾ ಭರಿಸಲಾಗುತ್ತಿತ್ತು.

ಈ ಮನರಂಜನಾ ಕಾರ್ಯಕ್ರಮದ ಕೊನೆಯ ಘಟ್ಟದಲ್ಲಿ ಸಾರೋಟ ಸಾಮಂತರು ಸಾಲುಗೊಂಡು ಬಂದು ವಿಜಯಸೌಧದ ಮುಂದೆ ನಿಲ್ಲುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ಸಾಳುವ ನಾಯಕನ ರಥವು ಮುಂಚೂಣಿಯಲ್ಲಿ ಇದ್ದುದನ್ನೂ ರಾಜ್ಯದ ಉಳಿದ ಪ್ರತಿಷ್ಠಿತರ ರಥಗಳು ಅದನ್ನು ಹಿಂಬಾಲಿಸಿ ಬಂದು ಈ ಅಂಗಳವನ್ನು ಹಂಚಿಕೊಂಡು ನಿಂತು ಅರಸನಿಗೆ ಗೌರವ ಸಲ್ಲಿಸಿದುದನ್ನೂ ಪ್ರವಾಸಿಗನೊಬ್ಬ ಕಂಡಿದ್ದನು.

ಕ್ರೀಡೆಗಳು :

ಕುಸ್ತಿಪಟುಗಳ ವರಸೆ ನವರಾತ್ರಿ ಹಬ್ಬದ ಪ್ರಧಾನ ಮನರಂಜನಾ ಕಾರ್ಯಕ್ರಮವಾಗಿತ್ತು. ನಾಡಿನ ಚತುರ ಜಗಜಟ್ಟಿಗಳು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ಸುಕರಾಗಿ ಇಲ್ಲಿ ನೆರೆಯುತ್ತಿದ್ದರು. ವಿಜಯನಗರದ ಅರಸರು ಸ್ವತಃ ಕುಸ್ತಿಪಟುಗಳಾಗಿದ್ದರಲ್ಲದೆ ಒಂದು ಸಾವಿರ ಪೈಲ್ವಾನರನ್ನು ಪೋಷಿಸಿದ್ದರೆಂಬ ವರದಿ ಇದೆ. ಮಹಾಸಾಮಂತರಾರಿಗೂ ದೊರಕದ ಸೌಲತ್ತು-ಸಲುಗೆಯನ್ನು ಇವರಿಗೆ ಕೊಡಲಾಗಿತ್ತೆಂದೂ ಹೇಳಲಾಗುತ್ತದೆ. ಅರಸನ ಮುಂದೆ ಕುಳಿತುಕೊಳ್ಳುವ

ಮತ್ತು ಅವನ ಸಮ್ಮುಖದಲ್ಲಿ ತಾಂಬೂಲ ಜಗಿಯುವ ಸ್ವಾತಂತ್ರ್ಯ ಇವರನ್ನು (ಹಾಗೂ ವಾರಾಂಗನೆಯರನ್ನು) ಹೊರತುಪಡಿಸಿ ಮತ್ತಾರಿಗೂ ಈ ರಾಜ್ಯದಲ್ಲಿ ಇರಲಿಲ್ಲವೆಂಬುದನ್ನು ವಿದೇಶಿ ಪ್ರವಾಸಿಗರು ಗುರುತಿಸಿದ್ದರು. ವರ್ಷವಿಡೀ ಕಸರತ್ತು ಮಾಡುವುದೇ ಜಟ್ಟಿಗಳ ಉದ್ಯೋಗವಾಗಿತ್ತು. ಕಾರಣ ಮತ್ತಾವ ಕೆಲಸ ಮಾಡಲು ಇವರನ್ನು ಬಲವಂತಪಡಿಸಲಾಗುತ್ತಿರಲಿಲ್ಲವಂತೆ. ಇವರಿಗೆ ತರಬೇತಿ ಕೊಟ್ಟು, ದಕ್ಷ ಜಟ್ಟಿಗಳನ್ನಾಗಿ ಮಾಡಲು ಅವರ ಮೇಲೆ ಒಬ್ಬ ಉಸ್ತಾದನಿರುತ್ತಿದ್ದ. ಇವರೆಲ್ಲರಿಗೂ ನೇರ ಹಾಗೂ ಧಾರಾಳ ರಾಜಪೋಷಣೆ ದೊರೆಯುತ್ತಿತ್ತು.

ಈ ಜಟ್ಟಿಗಳ ಸೆಣೆಸಾಟವನ್ನು ನ್ಯೂನಿಜ್ ಸ್ವತಃ ನೋಡಿದ್ದ. ಇವರು ಮೈ ವರಸೆಯನ್ನು ಮಾತ್ರ ಪ್ರದರ್ಶಿಸದೆ ಎದುರಾಳಿಗಳ ಮುಖವನ್ನು ಒಡೆದು ತಮ್ಮ ಹಿರಿಮೆಯನ್ನು ಪ್ರದರ್ಶಿಸುತ್ತಿದ್ದರೆಂದು ಅವನು ಹೇಳಿರುವನು.

ಕರಿಗಳ ಕೌಶಲ್ಯ :

ಈ ವಾರ್ಷಿಕ ಕಾರ್ಯಕ್ರಮದಲ್ಲಿ ಪಶುಗಳ ಆಟಗಳು ವಿಶಿಷ್ಟವೆನಿಸಿದ್ದವು. ಇದರಲ್ಲಿ ಆನೆಗಳ ಎರಡು ಅಸದೃಶ ಸಾಹಸದಾಟಗಳು ಅಬ್ದುಲ್ ರಜಾಕ್‌ನ ವಿಶೇಷ ಗಮನವನ್ನು ಸೆಳೆದಿದ್ದವು. ಅಟ್ಟದ ಮೇಲಿನ ಇಕ್ಕಟ್ಟಿನ ಸ್ಥಳದಲ್ಲಿ ನಿಂತು, ತಮ್ಮ ಜಾಣ್ಮೆಯನ್ನೂ ಸಾಹಸವನ್ನೂ ಪ್ರದರ್ಶಿಸುತ್ತಿದ್ದ ಆನೆಗಳನ್ನು ಕಂಡು ಅವನು ಬೆರಗಾಗಿದ್ದನು. ಒಂದು ಆನೆ ಅಟ್ಟದ ಮೂರು ಮಜಲನ್ನು ಏರಿದಂತೆಲ್ಲ ಅಟ್ಟಕ್ಕೆ ಆಧಾರವಾಗಿಟ್ಟಿದ್ದ ಚಟ್ಟನ್ನು ಪ್ರದರ್ಶಕರು ಹಿಂತೆಗೆದುಕೊಂಡು ಅದು ಒಂದಕ್ಕೆ ಬಾರದಂತೆ ಮಾಡಿದಾಗ, ಪಾದಗಳನ್ನು ಊರಲು ಮಾತ್ರ ಇದ್ದ ಫಲಕದ ಮೇಲೆ ನಿಂತು ಕೆಳಗೆ ನುಡಿಸುತ್ತಿದ್ದ ವಾದ್ಯಗಳ ಲಯಕ್ಕೆ ತಕ್ಕಂತೆ ತಾಳ ಹಾಕುತ್ತ ಈ ಆನೆಯು ಸೊಂಡಿಲನ್ನು ಗಾಳಿಯಲ್ಲಿ ತೂರಾಡುತ್ತಿದ್ದುದನ್ನು ಈ ಯಾತ್ರಿಕ ನೋಡಿ ವಿಸ್ಮಯಪಟ್ಟಿದ್ದ. ಮತ್ತೊಂದು ಆಟದಲ್ಲಿ ಹತ್ತು ಮೊಳ ಎತ್ತರದ ಸ್ತಂಭದ ಮೇಲಿರಿಸಿದ ಅಡ್ಡ ತೊಲೆಯ ಒಂದು ಭಾಗಕ್ಕೆ ಆನೆಯನ್ನು ಏರಿಸಿ, ಅದೇ ತೊಲೆಯ ಇನ್ನೊಂದು ಭಾಗದಲ್ಲಿ ಅದರ ತೂಕದ ಬಂಡೆಗಲ್ಲನ್ನು ಪೇರಿಸಿ. ಆನೆಯು ದಂಡಿನುಯ್ಯಾಲೆಯನ್ನು ಮಾಡಿಸಿದ್ದನ್ನು ಇವನು ಕಂಡಿದ್ದ. ವಾದ್ಯಗಳ ಲಯಕ್ಕೆ ತಕ್ಕಂತೆ ಸೊಂಡಿಲನ್ನು ತೇಲಾಡಿಸಿ ಈ ಆನೆಯು ತನ್ನ ಸಂಗೀತಪ್ರಜ್ಞೆಯನ್ನು ಪ್ರದರ್ಶಿಸುತ್ತಿತ್ತಂತೆ! ಅಂತರದಲ್ಲಿ ನಿಂತು ತನ್ನ ಅಪಾರ ಭಾರವನ್ನು ನಿಗ್ರಹಿಸಿದ್ದಲ್ಲದೇ ಈ ಪಶುಗಳು ಸಂಗೀತಪ್ರಜ್ಞೆಯನ್ನೂ ಮೆರೆದ ಕಾರಣ ಇದೊಂದು ಅತ್ಯಂತ ಮೋಜಿನ ಆಟವೆನಿಸಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.

ವಾರಾಂಗನೆಯರ ಪಾತ್ರ :

ಪಂಜುಪಡೆಯ ಕೈಚಳಕ, ಜಟ್ಟಿಗರ ವರಸೆ. ಕಟ್ಟಾಳುಗಳ ಖಡ್ಗಕೌಶಲ್ಯ. ಯುದ್ಧ ಪಶುಗಳ ಶಿಸ್ತುಪ್ರದರ್ಶನ, ಜಾಲಗಾರರ ಜೂಲಾಟ. ಡೊಂಬರ ಚಮತ್ಕಾರ. ಕಹಳೆ-ಡೊಳ್ಳು-ತಮ್ಮಟೆಯವರ ವರಸೆ, ವಾದ್ಯಗಾರರ ವೈಖರಿ. ಕೀರ್ತನಕಾರರ ಗೋಷ್ಠಿ ಮುಂತಾದವುಗಳನ್ನೆಲ್ಲ ಮೀರಿ ಗಮನ ಸೆಳೆಯುತ್ತಿದ್ದುದು ವಾರಾಂಗನೆಯರ ನೃತ್ಯ. ಧಾರ್ಮಿಕ ಹಾಗೂ ಮನರಂಜನಾ ಕಲಾಪಗಳೆರಡರಲ್ಲೂ ಇವರಿಗೆ ಪ್ರಮುಖ ಪಾತ್ರವಿತ್ತು. ಪ್ರಾತಃಕಾಲದಿಂದ ಆರಂಭಗೊಂಡು ಮಧ್ಯರಾತ್ರಿಯ ವರೆಗೂ ದೇವಾಲಯ, ಮಂಟಪ. ದ್ವಾರ. ಅರಮನೆ. ರಸ್ತೆಯ ಚೌಕ. ವಿಜಯಸೌಧದ ಪ್ರಾಂಗಣ ಈ ಮೊದಲಾದ ಕೇಂದ್ರಗಳಲ್ಲಿ ಗುಂಪುಗಟ್ಟಿಗೊಂಡು ಕುಣಿಯುತ್ತಿದ್ದ ಈ ನಿತ್ಯಸುಮಂಗಲೆಯರು ಮನಸೂರೆಗೊಳ್ಳದ ವ್ಯಕ್ತಿಯೇ ಇರಲಿಲ್ಲ. ತಮ್ಮ ಪ್ರದೇಶದ ಅತ್ಯಂತ ಸುಂದರಾಂಗಿಯರನ್ನು

ಕರೆತಂದು, ಅವರ ಬೆಡಗು ಬಿನ್ನಾಣಗಳನ್ನು ಉತ್ಸವ ಕಣದಲ್ಲಿ ಪ್ರದರ್ಶಿಸಲು ನಾಯಂಕಾರರು ಪೈಪೋಟಿ ನಡೆಸುತ್ತಿದ್ದರೆಂದು ತಿಳಿದುಬರುವುದು.

ವಿಜಯನಗರದ ಅರಸರು ಈ ವಾರನಾರಿಯರಿಗೆ ವಿಶೇಷ ಸ್ಥಾನಮಾನ ಕಲ್ಪಿಸಿಕೊಟ್ಟಿದ್ದರು. ಅರಮನೆಗಳ ಆವರಣದಲ್ಲಿಯೇ ಅವರಿಗೆ ವರ್ಣಮಯ ಮನೆಗಳ ಬಡಾವಣೆಗಳನ್ನು ನಿರ್ಮಿಸಲಾಗಿತ್ತು. ಅರಸನ ಸಮ್ಮುಖದಲ್ಲಿ ಕುಳಿತು ವೀಳ್ಯೆ ಜಗಿಯುವ ಧಾರ್ಷ್ಟ್ಯ ಯಾವ ಸಾಮಂತನಿಗಿರದಿದ್ದರೂ ಇವರಿಗಿತ್ತು ಎಂದು ಪ್ಯಾಸ್ ತಿಳಿಸಿರುವನು. ಅಲ್ಲದೆ, ಈ ವಾರಾಂಗನೆಯರ ಅಪಾರ ದ್ರವ್ಯಸಂಪತ್ತನ್ನು ವರ್ಣಿಸಲು ತನ್ನ ಶಬ್ದಭಂಡಾರದ ಬಡತನದ ಬಗ್ಗೆ ಅವನು ದೂರಿಕೊಂಡಿದ್ದನು. ಬಾರ್ಬೋಸ ಕೂಡಾ ಇವರಲ್ಲಿದ್ದ ಅಪಾರ ಸಂಪತ್ತನ್ನು ಕಂಡು ಬೆರಗಾಗಿದ್ದನು. ಸಂತಾನವಿಲ್ಲದ ಒಬ್ಬ ವಾರಾಂಗನೆಯು ಮರಣ ಸನ್ನಿಹಿತವಾದಾಗ ಅವಳು ತನ್ನ ಸಖಿಗೆ ಹನ್ನೆರಡು ಸಾವಿರ ಮತ್ತು ಅರಸನಿಗೆ ಎಪ್ಪತ್ತು ಸಾವಿರ ಪಾರ್ದೋಗಳನ್ನು ಬಿಟ್ಟುಕೊಟ್ಟುದ್ದನ್ನು ಅವನೇ ಸ್ವತಃ ಕಂಡಿದ್ದನು. ರಾಜಧಾನಿಯ ವಾರಾಂಗನೆಯೊಬ್ಬಳ ಬಳಿ ಒಂದು ಲಕ್ಷ ಪಾರ್ದೋಗಳಿವೆ ಎಂಬುದನ್ನು ಕೇಳಿದ್ದ ಪ್ಯಾಸ್ 'ಇವರನ್ನು ಸಾಕಷ್ಟು ಬಲ್ಲ ನನಗೆ ಈ ಮಾತಿನಲ್ಲಿ ನಂಬಿಕೆ ಇದೆ' ಎಂದು ಸಾಕ್ಷಿ ನುಡಿದಿರುವನು.

ಬೆಳಗಿನ ಕಾರ್ಯಕ್ರಮದಲ್ಲಿ ಪಶುಪೂಜೆಯನ್ನು ಪುರೋಹಿತರು ಮುಗಿಸಿದೊಡನೆ 'ಒಂದು ಸಹಸ್ರ ಅಂಗನೆಯರು ಅರಸನ ಮುಂದೆ ನಿಂತು ನೃತ್ಯ ಮಾಡುತ್ತಿದ್ದುದನ್ನು, ಸಂಜೆಯ ಕಪ್ಪ ಕಾಣಿಕೆಯ ಕಾರ್ಯಕ್ರಮ ಮುಗಿದೊಡನೆ ವಿಜಯಸೌಧದ ಮುಂದೆ ಗುಂಪುಗುಂಪಾಗಿ ನೆರೆದು ಅವರು ಸಾಮೂಹಿಕವಾಗಿ ನರ್ತಿಸುತ್ತಿದ್ದುದನ್ನು, ನೂನಿಜ್ ಪ್ರತ್ಯಕ್ಷ ಕಂಡಿದ್ದ. ನಿಕೋಲ-ದ-ಕೊಂತಿಯಾಪರೋ ಈ ಪದಿಹರೆಯದ ವಾರಾಂಗನೆಯರ ಬೆಡಗಿಗೆ ಬೆವೆತು, ಬಾಯಾರಿ, ಅವರ ಸೌಂದರ್ಯವನ್ನು ಆತುರದಲ್ಲಿ ಆಸ್ವಾದಿಸಲು ಪ್ರಯತ್ನಿಸಿದಂತೆ ಕಾಣುವುದು. 'ಚಂದ್ರನಂತಹ ಕಪೋಲ ಮತ್ತು ವಸಂತದ ಅಲರನ್ನು ಉಪೇಕ್ಷಿಸುವಂತಹ ಮುಖದ ಈ ಸಿಂಗಾರಿಗಳ ಮೈಮಾಟವು ಶುಭ್ರೋಜ್ವಲ ಗುಲಾಬಿ ಪುಷ್ಪದಂತೆ ಸಮ್ಮೋಹಿತವಾಗಿತ್ತು', ಎಂದು ಅವನು ಹೊಗಳಿರುವನು. ಅವರನ್ನು ಮರೆಮಾಡಿದ ಜವನಿಕೆಯನ್ನು ಜಾರಿಸಿದಾಗ, ಮೆಲ್ಲಮೆಲ್ಲನೆ ಹೆಜ್ಜೆ ಇಡುತ್ತಾ ತೂಗುತ್ತಾ ಬಳುಕುತ್ತಾ ಅವರು ಮುಂಬರುವುದನ್ನು ಬಯಲಂಗಳದಲ್ಲಿ ನಿಂತು ನೋಡಿದ ಅವನು, ಮದೋನ್ಮತ್ತನಾದುದನ್ನೂ ಬುದ್ಧಿಭ್ರಮೆಗೀಡಾದುದನ್ನೂ ಒಪ್ಪಿಕೊಂಡಿರುವನು.

ವಿದೇಶಿ ಪ್ರವಾಸಿಗರು ಇಷ್ಟೆಲ್ಲಾ ವಿವರಗಳನ್ನು ಒದಗಿಸಿದ್ದರೂ ಅಪೂರ್ಣವೆನಿಸುವ ಈ ನೃತ್ಯಗಾರ್ತಿಯರ ಚಿತ್ರವನ್ನು ಪೂರ್ತಿಗೊಳಿಸಿಕೊಳ್ಳಲು ಸ್ಥಳೀಯ ಕವಿಗಳನ್ನು ನಾವು ಮೊರೆಹೋಗಬೇಕಾಗಿದೆ. ಪ್ರವಾಸಿಗರಂತೆ ಇವರಲ್ಲಿ ಕೆಲವರು ತಾವು ಸ್ವತಃ ಕಂಡದ್ದನ್ನೂ ಅನುಭವಿಸಿದ್ದನ್ನೂ ನಿಷ್ಠೆಯಿಂದ ದಾಖಲಿಸಿರುವರು; ಇದರಿಂದಾಗಿ ಇವರು ರಚಿಸಿದ ಕಾವ್ಯಗಳಿಗೆ ಐತಿಹಾಸಿಕ ಆಕರದ ಋಜುತ್ವವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಇತಿಹಾಸ ಪ್ರಜ್ಞೆಯನ್ನು ಸಮರ್ಥವಾಗಿ ಮೈಗೂಡಿಸಿಕೊಂಡದ್ದಲ್ಲದೆ ವಿಜಯನಗರ ಮಹಾರಾಜಧಾನಿ ಪಟ್ಟಣದೊಡನೆ ಗಹನವಾಗಿ ಗುರುತಿಸಿಕೊಂಡ ಈ ಕಾಲದ ಕವಿಗಳಲ್ಲಿ ಪ್ರಮುಖನಾದವನು ಪಂಪಾಸ್ಥಾನ ವರ್ಣನಂ ಕರ್ತೃ. ಪ್ರವಾಸಿಗರ ವರದಿಯನ್ನು ಚಂದ್ರಶೇಖರನು ಎಷ್ಟು ಸಮರ್ಥಿಸುವನು ಮತ್ತು ಹೇಗೆ ವಿಸ್ತರಿಸುವನು ಎಂಬ ಅಂಶವನ್ನು ಅವನ ಕಾವ್ಯದಲ್ಲಿ ಕಂಡುಕೊಳ್ಳಬಹುದು.

ಚಂದ್ರಶೇಖರನು ಮಹಾನವಮಿ ಮಹೋತ್ಸವವನ್ನು ನೇರವಾಗಿ ಉಲ್ಲೇಖಿಸದಿದ್ದರೂ ಅದಕ್ಕಿಂತಲೂ ಅರ್ಥಪೂರ್ಣವಾದ `ವಿರೂಪಾಕ್ಷ ಒಡ್ಡೋಲಗ'ದ ಪ್ರಸ್ತಾಪ ಮಾಡುತ್ತಾ ಅಲ್ಲಿ ನಡೆಯುತ್ತಿದ್ದ ಕಲಾಕಲಾಪಗಳನ್ನು, ವಿಶೇಷವಾಗಿ ವಾರವಿಲಾಸಿನಿಯರ ನೃತ್ಯಗಳನ್ನು, ಸಮಗ್ರವಾಗಿ ಚಿತ್ರಿಸಿರುವನು. ಈ ಕಾಲಕ್ಕಾಗಲೇ ನಾಟ್ಯಕಲೆಯು ಪ್ರಾದೇಶಿಕ ಛಾಪು ಪಡೆದುಕೊಂಡಿತ್ತಲ್ಲದೇ ಅದು ಮಾರ್ಗಶೈಲಿಯ ಗುಣಮಟ್ಟವನ್ನು ಸರಿಗಟ್ಟುವುದಲ್ಲದೆ ಅದನ್ನು ಮೀರಿ ಏರುವ ಪ್ರಯತ್ನಕ್ಕೆ ಶ್ರಮಿಸುತ್ತಿತ್ತೆಂದು ತೋರುವುದು. ಪ್ರೇಕ್ಷಕರನ್ನು ಮರುಳು ಮಾಡಬಲ್ಲ 'ನಿಜ್ಜವಣೆ', ವಾರಾಂಗನೆಯ ಲಾವಣ್ಯವನ್ನು ಪ್ರದರ್ಶಿಸುವ 'ಸಳಿ', ಅಂಗಾಂಗ ಚಲನೆಯಿಂದ ರೋಮಾಂಚನಗೊಳಿಸುವ 'ಝುಂಕಾ', ಸ್ತನ ಮತ್ತು ಬಾಹುಕಂಪನಗಳಿಂದ ಮನಸೂರೆಗೊಳ್ಳುವ 'ತರಹರ'– ಈ ಮೊದಲಾದ ವೈಖರಿಗಳನ್ನು ವಿಜಯನಗರ ಕಾಲದ ಹಲವು (ಉದಾ. ಪದ್ಮಣಾಂಕ ಮತ್ತು ಚಾಮರಸ) ಕವಿಗಳು ಗುರುತಿಸಿದ್ದರು. ಇವರಲ್ಲೆಲ್ಲಾ ಅತ್ಯಂತ ಹೆಚ್ಚಿನ ಅನುಭವವನ್ನು ಪಡೆದ ನಾಟ್ಯ ಶಾಸ್ತ್ರಜ್ಞನೆಂದರೆ ಚಂದ್ರಶೇಖರ.

ವಿರೂಪಾಕ್ಷ ಒಡ್ಡೋಲಗದಲ್ಲಿ ಜರುಗುತ್ತಿದ್ದ ಮೂರು ನಾಟ್ಯಪ್ರಭೇದಗಳನ್ನು ಚಂದ್ರಶೇಖರನು ಗುರುತಿಸಿರುವನು. ಇವುಗಳನ್ನು 'ಮಾರ್ಗ', 'ಪ್ರದೇಶ' ಮತ್ತು 'ದೇಸಿ' ಶೀರ್ಷಿಕೆಯಡಿ ತರಬಹುದು. ಇವುಗಳಲ್ಲಿ ಮಾರ್ಗದಡಿ ಗುರುತಿಸಿಕೊಂಡ ಸಾಂಪ್ರದಾಯಿಕ ಮತ್ತು ಶಾಸ್ತ್ರನಿಯಂತ್ರಿತ ನೃತ್ಯವು ಈ ಒಡ್ಡೋಲಗದ ಕಾರ್ಯಕ್ರಮದಲ್ಲಿ ಅಗ್ರಸ್ಥಾನ ಪಡೆದಿತ್ತು. ಆಂಗಿಕ, ಆಹಾರ್ಯ, ಸಾತ್ವಿಕ ಮತ್ತು ವಾಚಕಾಭಿನಯವನ್ನು ಸ್ಥಾಯೀ ಮತ್ತು ಸಂಚಾರಿ ರಸಧಾರೆಯನ್ನು, ಅಂಗಹಾರ, ಕರಣ, ಸ್ಥಾನಕ, ಚಾರಿ ಬಂಧಗಳನ್ನು, ವೈಜ್ಞಾನಿಕವಾಗಿಯೂ ಕಲಾತ್ಮಕವಾಗಿಯೂ ನಿರೂಪಿಸುವುದೇ ಈ ಶಾಖೆಯ ನೃತ್ಯಗಾರ್ತಿಯ ಹಿರಿಮೆ. ಕಾಂಡಪಟವನ್ನು ಜಲಕ್ಕನೇ ಜಾರಿಸಿದಾಗ, 'ಮೇಣದ ಸಜ್ಜರಸ ಪುತ್ಥಳಿ, ಮಿಂಚಿನ ಬೊಂಬೆಯಂದ'ದ, ಚೆಲ್ವುಗಂಗುಳ, ವೈಯಾರಿಯು 'ಕಡೆಗಣ್ಣ ಕಾಂತಿಯನತ್ತಿತ್ತ ಚಿತ್ತರಿಸುತ್ತಾ ಕಿಱುನಗೆಯಂ ಬೀರುತ್ತಾ' ಓರೆನಡೆಯ ಹೆಜ್ಜೆ ಹಾಕುತ್ತಾ 'ನೀಲನೆಲಗಟ್ಟಿನ ರಂಗ'ವನ್ನು ಪ್ರವೇಶಿಸಿದಾಗ `ಮುಗಿಲಮಿಂಚಿನ ಕುಡಿ' ಸ್ಫೋಟಿಸಿದಂತಾದುದನ್ನು ಈ ಕವಿ ಗಮನಿಸಿದ್ದ. ಪ್ರವಾಸಿಗನೊಬ್ಬನು ಅಲ್ಲಲ್ಲಿ ಕಂಡ `ರುಘೊಇಪ್ಪಲ ಗುಲಾಬಿ ಪುಷ್ಪ'ದ ಪ್ರಕಾಶವನ್ನು ಕಂಡರೆ ಚಂದ್ರಶೇಖರನು ಕುಡಿಮಿಂಚಿನ ಪ್ರಕಾಶವನ್ನು ಕಂಡಿದ್ದನು. ಅದು ಏನೇ ಇರಲಿ, ಅವಳ ನೃತ್ಯಸೌಂದರ್ಯವು ಒಂದಲ್ಲೊಂದು ಬಗೆಯಲ್ಲಿ ಇವರಿಬ್ಬರನ್ನೂ ಸರಿಪ್ರಮಾಣದಲ್ಲಿ ಪುಳಕಿತಗೊಳಿಸಿತ್ತೆನ್ನುವುದರಲ್ಲಿ ಅನುಮಾನವಿಲ್ಲ. ಈ ನೃತ್ಯವನ್ನು ನೋಡಲು ಸೇರಿದ್ದ ರಸಿಕ ಸಭಿಕರ ಅನುಭವವೂ ಇದೇ ಬಗೆಯದ್ದಾಗಿತ್ತೆಂಬುದನ್ನು ಅವರು ಸಭಾಂಗಣದಿಂದ ಉದ್ಘೋಷಿಸಿದ ನುಡಿಗಳಿಂದ ಅರಿತುಕೊಳ್ಳಬಹುದು. 'ಇದು ಲೇಸು ಲೇಸು' ಎಂದು ಒಮ್ಮೆ ಅವಳ ನೃತ್ಯದ ಪರಿಶುದ್ಧತೆಯನ್ನು ಅವರು ಹೊಗಳಿದರೆ, 'ಇದು ಪೊಸತಯ್ಯಯ್ಯಾ' ಎಂದು ಅವರಲ್ಲಿಯ ನವ್ಯತೆಯನ್ನು ಕಂಡವರು ಹೊಗಳಿ, 'ಛಾಪು' ಎಂದು ಕೂಗಿ ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಿದ್ದರಂತೆ!

ಮೊದಲ ಸುತ್ತಿನ ನೃತ್ಯವು ಮುಕ್ತಾಯಗೊಂಡೊಡನೆ, ಈ ನರ್ತಕಿಗಿಂತ ಭಿನ್ನ ಉಡುಪು ತೊಟ್ಟು ಭಿನ್ನ ಶೈಲಿಯ ನೃತ್ಯವನ್ನು ಪ್ರದರ್ಶಿಸಲು ಮತ್ತೊಬ್ಬಳು ರಂಗಕ್ಕಿಳಿದಳಂತೆ. ಪ್ರಾದೇಶಿಕ ನೃತ್ಯ ಪ್ರಭೇದದ ಪರಿಕಾರಳಂತೆ ತೋರುತ್ತಿದ್ದ ಇವಳು 'ತಾಂಡವ', 'ಶಬ್ದ' ಮತ್ತು 'ಗೀತ'

ಪ್ರಬಂಧಗಳನ್ನಲ್ಲದೆ ಅತ್ಯಂತ ಸಾಹಸಪೂರ್ಣವಾದ 'ಅವಗಡದ ಅಡವು'ಗಳನ್ನು ಕರಗತ ಮಾಡಿಕೊಂಡವಳಾಗಿದ್ದಳು. ವಿಸ್ಮಯಕಾರೀ ಪಟ್ಟುಗಳನ್ನೂ ಕಸರತ್ತುಗಳನ್ನೂ ಒಳಗೊಂಡ ಈ ನೃತ್ಯದ ಪ್ರಧಾನ ಅಂಶಗಳೆಂದರೆ ಜಿಗಿಯುವುದು, ಲಾಗಹಾಕುವುದು, ಗಿರಿಗಿರಿ ದೇಹ ಗಿರಿಗಿಟ್ಟುಸುವುದು, ಒಂಟಿಕಾಲಿನ ಮೇಲೆ ನಿಂತು ಬಿಲ್ಲಿನಂತೆ ದೇಹವನ್ನೂ-ದೇಹಾಂಗಗಳನ್ನೂ ಮಣಿಸುವುದು, ಮಂಡಿಯೂರಿ ದಿಂಡಿಹಾಕುವುದು, ಮೊಳಕಾಲೂರಿ ಬುಗುರಿಯಾಡುವುದು ವಿರುದ್ಧ ದಿಕ್ಕಿನಲ್ಲಿ ಪಾದಗಳನ್ನು ತೂರುತ್ತಾ ಗಾಳಿಯಲ್ಲಿ ಹಾರಿ ನೆಲಕ್ಕಿಳಿಯುವುದು ಮುಂತಾದವುಗಳಾಗಿದ್ದವು. ಮಾರ್ಗವನ್ನು ಪೂರ್ಣ ಕೈಬಿಡದೆ ದೇಸಿಯ ಹಿರಿಮೆಯನ್ನು ಮೆರೆಯುವುದು ಈ ನೃತ್ಯದ ಗುರಿಯಾಗಿತ್ತೆಂದು ತೋರುವುದು. ಇದರಲ್ಲಿ ದೇಸಿ ಪ್ರಭೇದಗಳಾದ 'ಕತರ', 'ಸುಳುಹು', 'ತರಹರ', 'ಒತ್ತುಮಾನ-ಬೆಟ್ಟಮಾನ' ಮೊದಲಾದವು ಪ್ರಾಧಾನ್ಯತೆ ಪಡೆದುಕೊಂಡಿದ್ದವು.

ಪ್ರಾದೇಶಿಕ ನೃತ್ಯವು ಅಂತ್ಯಗೊಂಡೊಡನೆ, ಚಲ್ಲಣ ತೊಟ್ಟ 'ದೇಸಿಕಾರ್ತಿ'ಯ ಅಪ್ಪಟ ದೇಸಿ ನೃತ್ಯಕ್ಕೆ ರಂಗವು ತೆರವಾಯಿತಂತೆ. ಈ ನೃತ್ಯವನ್ನು ವಿಶೇಷವಾಗಿ ಮೆಚ್ಚುವವರು ಸ್ಥಳೀಯರಾಗಿದ್ದರು. ಪ್ರಧಾನವಾಗಿ ಕನ್ನಡ, ತೆಲುಗು, ತಮಿಳು ನಾಡಿನ ರಸಿಕರನ್ನು ಓಲೈಸಲು ಇದು ಸಮರ್ಥವಾಗಿತ್ತು. ಇಲ್ಲಿ ನೃತ್ಯ ಮತ್ತು ವಾದ್ಯಕ್ಕೆ ಪ್ರಥಮ ಸ್ಥಾನ, ಸಂಗೀತಕ್ಕೆ ನಂತರದ ಸ್ಥಾನ. ಮಿಂಚಿನ ಹೊಳಪು ಮತ್ತು ನಾಗನಾಲಿಗೆಯ ಸೆಳಕುಗಳನ್ನು ಮೈಗೂಡಿಸಿಕೊಂಡವಳಿಗೆ ಮಾತ್ರ ಈ ನೃತ್ಯ ಸಾಧ್ಯವೆನಿಸಿತ್ತು. ಇದು ನೆಲದ ಗುಣವನ್ನು ಪ್ರತಿಬಿಂಬಿಸುವ ಕಲೆಯಾಗಿದ್ದು ಮಾತಂಗಿ (ಬುಡಕಟ್ಟು), ಶಬರಿ (ಅಟವಿಕ), ಯೋಗಿಣಿ (ಮಾದಕ), ಯವನಿಕ (ಪಾರಸಿಕ) ಮುಂತಾದ ಪ್ರಭೇದಗಳನ್ನು ಒಳಗೊಂಡಿತ್ತು.

ಸಾಮ್ರಾಜ್ಯದ ನಾಯಂಕಾರರೆಲ್ಲರೂ ತಮ್ಮ ತಮ್ಮ ಪ್ರದೇಶದ ಚತುರ ಕಲಾವಿದರನ್ನು ಕರೆತಂದು ಮಹಾನವಮಿ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದುದನ್ನು ಈಗಾಗಲೇ ಗಮನಿಸಿದ್ದೇವೆ. ಇವರಲ್ಲಿ ಬೆಟ್ಟಗಾಡು, ಬುಡಕಟ್ಟು, ಘಟ್ಟಪ್ರದೇಶ, ಬಯಲುನಾಡಿನ (ವಿಶೇಷವಾಗಿ ತಮಿಳು, ಸಿಂಹಳ, ಒರಿಯಾ ಪ್ರಾಂತಗಳ) ಕಲಾವಿದರು ಒಳಗೊಂಡಿದ್ದರೆಂಬುದನ್ನೂ ಗಮನಿಸಿದ್ದೇವೆ. ಈ ಪ್ರದೇಶಗಳಿಂದ ಬಂದ ಜನರನ್ನೆಲ್ಲಾ ಖುಷಿಪಡಿಸಲು ಈ ನೃತ್ಯವು ತಕ್ಕುದಾಗಿರಲು ಸಾಕು. ಚಂದ್ರಶೇಖರನು 'ಚಿಂದು' ಎಂಬ ತಮಿಳು ಮತ್ತು ಆಂಧ್ರದವರಿಗೆ ಪ್ರಿಯವಾದ ನಾಟ್ಯವನ್ನೂ ಕವಿಲು (ಖಿವ್ವಾಲಿ), ಗಜಲು (ಗಜಲ್), ಭ್ಯೆತು, ತುರಿಗೆ, ಆಂದೋಳಿತ ಮುಂತಾದ ಯವನ-ಪಾರಸಿಕ ಶೈಲಿಗಳ ಪಟ್ಟುಗಳನ್ನೂ ಸೂಕ್ಷ್ಮವಾಗಿ ಚರ್ಚಿಸುವನು. ವಿಜಯನಗರ ಮಹಾರಾಜಧಾನಿ ಪಟ್ಟಣದಲ್ಲಿ ತುರುಕರ ಬಡಾವಣೆಗಳಿದ್ದುದು ಮಾತ್ರವಲ್ಲದೆ, ಅವರದೇ ಆದ ಪ್ರಸಿದ್ಧ ಸೇನಾ ತುಕಡಿಯೂ ಇದ್ದಿತು. ಫಿರಂಗಿ ಮತ್ತು ಅಶ್ವದಳಗಳಲ್ಲಿದ್ದ ನಿಷ್ಣಾತ ತುರುಕರ ಸಮರ್ಥತೆಯ ಬಗ್ಗೆ ವಿಜಯನಗರದರಸರು ಹೆಮ್ಮೆ ಹೊಂದಿದ್ದರು. ಈ ತುಕಡಿಗಳು ದಶಮಿಯ ದಿನದಂದು ಅರಸನ ಎದುರು ತಮ್ಮ ತಮ್ಮ ಪ್ರೈಪಿಂಗಳನ್ನು ಪ್ರದರ್ಶಿಸಲು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದ ವೆಂಬುದನ್ನು ಅರಿತುಕೊಳ್ಳಲು ದಶಮಿಯ ದಿನ ನಡೆಯುತ್ತಿದ್ದ ಸೇನಾಶಕ್ತಿಯ ಪರಿವೀಕ್ಷಣಾ ಕಾರ್ಯಕ್ರಮದೆಡೆ ನಮ್ಮ ಗಮನವನ್ನು ಹರಿಸಬೇಕು.

ಮುಕ್ತಾಯ ಕಾರ್ಯಕ್ರಮ :

ಮಹಾನವಮಿಯ ಹಬ್ಬದಲ್ಲಿ ವಾರಾಂಗನೆಯರಿಗಲ್ಲದೆ ಅಂತಃಪುರ ಪರಿವಾರಕ್ಕೂ ಅರಸುಕುವರಿಯರಿಗೂ ವಿಶಿಷ್ಟ ಪಾತ್ರವಿತ್ತು. ವಾಸ್ತವವಾಗಿ ಪ್ರತಿ ಸಂಜೆಯ ಮನರಂಜನಾ ಕಲಾಪವು

ಅರಸಿಯರ ಆರತಿ ಕಾರ್ಯಕ್ರಮದೊಂದಿಗೆ ಮುಕ್ತಾಯಗೊಳ್ಳುತ್ತಿತ್ತು. ಇದು ಸಾರೋಟ ಸಾಮಂತರ ಗೌರವಾರ್ಪಣೆಯಾದ ನಂತರ ಪ್ರಾರಂಭವಾಗುತ್ತಿತ್ತು.

ಆರತಿ ತಟ್ಟೆಗಳನ್ನು ಹಿಡಿದ ಅಂತಃಪುರದ ಸುಮಂಗಲಿಯರು ಅಂಗಳಕ್ಕೆ ಬರುವ ಮುನ್ನ ಚಾಟಿಯನ್ನು ಹೆಗಲಿಗೇರಿಸಿಕೊಂಡ ದಂಡಧಾರಿಣೀ ದೌವಾರಿಕೆಯರು, ಅರ್ಧಪುರುಷರು, ಸಂಗೀತ-ವಾದ್ಯಗಾರ್ತಿಯರು, ರಜತದೊಡನೆ ತೊಟ್ಟ ಹೊರೆಯಾಳುಗಳು, ಆಪ್ತ ಪರಿಚಾರಿಕೆಯರು, ಒಬ್ಬೊಬ್ಬರಾಗಿ ಬಂದು ಅಂಗಳವನ್ನು ಅಲಂಕರಿಸುತ್ತಿದ್ದರು. ಆಗ ಅತ್ಯಂತ ಸುಂದರಿಯರಾದ ಮೂವತ್ತಾರು ಅರಸಿಯರು ಬಂಗಾರದ ಕಳಸಗಳನ್ನು ಕೈಯಲ್ಲಿ ಹಿಡಿದು, ಮಣಭಾರದ ಒಡವೆಗಳ ಒತ್ತಡಕ್ಕೆ ಮಣಿದು ಬಾಗಿ, ಅಡಿ ಮುಂದಿಡಲಾರದೆ ತಮ್ಮ ಸಖಿಯರೊಡಗೂಡಿ ಮೆಲ್ಲಮೆಲ್ಲಗೆ ನಡೆದು ಬರುತ್ತಿದ್ದುದನ್ನು ನೂನಿಜ್ ನೋಡಿದ್ದ. ಈ ಕೊನೆಯ ಅಂಕಣದ ಕಾರ್ಯಕ್ರಮವನ್ನು ಪ್ಯಾಸ್ ತುಂಬಾ ಆಸಕ್ತಿಯಿಂದ ಅವಲೋಕಿಸಿದ್ದನಲ್ಲದ ಇದರಲ್ಲಿ ಪಾಲ್ಗೊಂಡಿದ್ದ 'ಹದಿನಾರರಿಂದ ಇಪ್ಪತ್ತು ವರ್ಷಗಳ ಅರವತ್ತು ಅರಸಿಯರನ್ನು' ಅವನು ಎಣಿಕೆ ಮಾಡಿದ್ದ. ಅಲ್ಲದೇ ಅವರು ತೊಟ್ಟ ರೇಶ್ಮೆಯ ಪೀತಾಂಬರ, ಸುವರ್ಣದ ಮುಡಿ ಹೂ, ರತ್ನ-ಪಚ್ಚೆ-ಮಾಣಿಕ್ಯ-ವಜ್ರಗಳ ಕಂಠಾಭರಣ, ಮುತ್ತಿನೆಳೆಗಳ ಸರ, ಬೃಹತ್ ಗಾತ್ರದ ಭುಜಕೀರ್ತಿ, ಮುಂಗೈಯನ್ನೆಲ್ಲ ಮುಚ್ಚಿದ್ದ ಕಂಕಣಗಳು, ವಜ್ರದೊಂಕಿ, ಮಣಿಮಯ ಸುವರ್ಣಮೇಖಲೆಯಿಂದ ಜೋಲಾಡುತ್ತಾ ನಡುತೊಡೆ ತಟ್ಟುತ್ತಿದ್ದ ಮಣಿಗುಚ್ಛ, ಸಾಲುಮುತ್ತಿನ ನೂಪುರ– ಹೀಗೆ ಅಡಿಯಿಂದ ಮುಡಿಯ ವರೆಗೂ ಅವರನ್ನು ಅಲಂಕರಿಸಿದ್ದ ಆಭರಣಗಳ ಪಟ್ಟಿ ಮಾಡಿ ಇವನು ನಮ್ಮ ಮುಂದಿಟ್ಟಿರುವನು. 'ಇವರು ತೊಟ್ಟ ಒಡವೆಗಳ ಬೆಲೆಯನ್ನು ಕಟ್ಟುವವರಾರು?' ಎಂಬ ಪ್ರಶ್ನೆ ಕೇಳಿಕೊಂಡ ಅವನು, ಅವರ ಬೆಡಗು ಜೀವನದಲ್ಲಿ ಅಡಗಿದ್ದ ಬವಣೆಯನ್ನೂ ಗುರುತಿಸಿದ್ದನು. 'ತೊಟ್ಟ ರತ್ನಾಭರಣಗಳ ಭಾರದಿಂದ ಕುಸಿದಿದ್ದ ಅರಸಿಯರಿಗೆ ಭುಜಕೊಟ್ಟು ಆಧಾರಸ್ತಂಭದಂತೆ ಅವರ ಸಖಿಯಂದಿರು' ನಿಂತಿದ್ದರು, ಎಂಬ ಅವನ ಅನುಕಂಪದ ಮಾತು ಮಾರ್ಮಿಕವಾಗಿದೆ.

ಅರಸನು ರಾಜಾಸನದಿಂದ ಎದ್ದು, ದಿನದ ಉಪವಾಸ ವ್ರತ ಮುರಿದು ರಾತ್ರಿಯ ಒಂದು ಹೊತ್ತಿನ ಉಪಾಹಾರ ಮಾಡಲು, ವೇದಿಕೆಯ ಹಿಂಬಾಗಿಲ ಮೂಲಕ ಅಂತಃಪುರ ಸೇರಿದಾಗ, ಒಡ್ಡೋಲಗವು ಕರಗಿ, ದರಬಾರಿನ ಒಂದು ದಿನದ ಕಾರ್ಯಕ್ರಮವು ಮುಕ್ತಾಯಗೊಳ್ಳುತ್ತಿತ್ತು. ಆದರೆ ಬೇಡರ ಬೆಡಗಿಯರ ಕುಣಿತ, ವಾದ್ಯಗಾರರ ಆರ್ಭಟ, ರಾಜಾಂಗಳದ ಹೊರ ಅಂಚನ್ನೆಲ್ಲಾ ಹಂಚಿಕೊಂಡು, ಕತ್ತಲನ್ನು ಕೂಡಿಕೊಂಡು, ಮಹಾರಾಜಧಾನಿ ಪಟ್ಟಣದಲ್ಲೆಲ್ಲಾ ಮರುಧ್ವನಿಸಿ, ಉತ್ಸವದ ಸೊಡರನ್ನು ಸೂಸುತ್ತಲೇ ಮತ್ತೊಂದು ಮುಂಜಾವನ್ನು ಬರಮಾಡಿಕೊಳ್ಳುತ್ತಿತ್ತು.

ದಶಮಿಯ ಮುಕ್ತಾಯ ಸಮಾರಂಭ :

ನವರಾತ್ರಿ ಬರಿ ಮೋಜಿನ ಹಬ್ಬವಾಗಿರಲಿಲ್ಲ. ವ್ಯವಸ್ಥಿತವಾಗಿ ಯೋಜಿಸಿದ, ರಾಜ್ಯದ ಸೇನಾಶಕ್ತಿಯ ಪರಿವೀಕ್ಷಣಾ ಕಾರ್ಯಕ್ರಮವಾಗಿತ್ತೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ದಸರೆಯ ಉತ್ಸವ ಕಾಲದಲ್ಲಿ ರಾಜ್ಯದ ಸಾಮಂತರೆಲ್ಲರೂ ತಮ್ಮ ಸೈನ್ಯವನ್ನು ಕರೆತಂದು, ಅರಸನೆದುರು ಅದನ್ನು ಪ್ರದರ್ಶಿಸಿ, ತಮಗೆ ವಹಿಸಿದ್ದ ಜವಾಬ್ದಾರಿಯನ್ನು ಪೂರೈಸಿರುವುದರ ಬಗ್ಗೆ ಮನದಟ್ಟು ಮಾಡಿಕೊಡುತ್ತಿದ್ದರೆಂಬುದನ್ನೂ ಗಮನಿಸಿದ್ದೇವೆ. ಅರಸನಾದರೋ ಪ್ರತಿ ಸಾಮಂತನ ಸೇನಾಬಲದ ಸತ್ವಾಸತ್ವತೆಯನ್ನು ಸ್ವತಃ ಮನದಟ್ಟು ಮಾಡಿಕೊಂಡು, ಅವರೆಷ್ಟು ನಿಷ್ಠರಾಗಿರುವರೆಂಬುದನ್ನು

ನಿಷ್ಕರ್ಷಿಸಿಕೊಳ್ಳುತಿದ್ದನು. ಸಮರ್ಥರಿಗೆ-ನಿಷ್ಠಾವಂತರಿಗೆ ಪುರಸ್ಕಾರ, ಮೋಸಗಾರರಿಗೆ-ಅಸಮರ್ಥರಿಗೆ ಶಿಕ್ಷೆ ಈ ದಶಮಿ ಕಾರ್ಯಕ್ರಮದ ಪ್ರಧಾನ ಗುರಿಯಾಗಿತ್ತೆಂಬುದರಲ್ಲಿ ಅನುಮಾನವಿಲ್ಲ.

ಬಾಹ್ಯಶತ್ರುಗಳಿಂದ ರಕ್ಷಿಸಿಕೊಂಡು, ರಾಜ್ಯದ ಆಂತರಿಕ ಶಾಂತಿಯನ್ನು ಕಾಪಾಡಿಕೊಳ್ಳಲು ಮಾತ್ರವಲ್ಲದೆ ತಮ್ಮ ರಾಜ್ಯದ ಗಡಿಯನ್ನು ಕಾಲಕಾಲಕ್ಕೆ ವಿಸ್ತರಿಸಿಕೊಳ್ಳಲೂ ವಿಜಯನಗರದ ಅರಸರು ಅಪಾರ ಸೈನ್ಯವನ್ನು ಕಟ್ಟಿದ್ದರೆಂಬುದರಲ್ಲಿ ಅನುಮಾನವಿಲ್ಲ. ಈ ಸೈನ್ಯವನ್ನು ಎರಡು ಗುಂಪಿನಡಿ ತರಬಹುದು : ಒಂದು, ಅರಸರೇ ಸಂಬಳ ಕೊಟ್ಟು ತಮ್ಮ ನೇರ ಅಂಕಿತದಲ್ಲಿಟ್ಟುಕೊಂಡ ಪಡೆ; ಇನ್ನೊಂದು, ಅರಸರ ಪರವಾಗಿ ಅವರ ನಾಯಂಕಾರರು ಕಟ್ಟಿ ಒದಗಿಸುತ್ತಿದ್ದ ಪಡೆ. ಈ ಎರಡು ಪಡೆಗಳೂ ದಶಮಿಯ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಿದ್ದವು.

ಬಖೈರ್‌ನಲ್ಲಿ ದೊರೆಯುವ ವಿವರಗಳ ಆಧಾರದ ಮೇಲೆ ವಿಜಯನಗರ ಸೈನ್ಯದಲ್ಲಿದ್ದ ಆರು ಶಾಖೆಗಳನ್ನು ಗುರುತಿಸಬಹುದು. ಅವು : ಕಾಲ್ದಳ, ಅಶ್ವದಳ, ಗಜದಳ, ಫಿರಂಗಿದಳ, ಒಂಟೆದಳ ಮತ್ತು ನಂದಿದಳ. ಈ ಸೈನ್ಯ ಪ್ರಮಾಣದ ಅಂದಾಜು ಕಟ್ಟಲು ಹಲವಾರು ಪ್ರಯತ್ನಗಳು ನಡೆದಿದ್ದು ಅವುಗಳಲ್ಲಿ ಕೆಲವು ನೈಜತೆಗೆ ಸಮೀಪವಾಗಿರಬಹುದೆನಿಸುವುವು. ಇದು ಪ್ರಾರಂಭಗೊಳ್ಳುವುದು ಇಟಲಿ ದೇಶದ ನಿಕೋಲ-ದ-ಕೊಂತಿಯಿಂದ; ಈತನು ಮಹಾರಾಜಧಾನಿ ಪಟ್ಟಣದಲ್ಲಿ ಕಂಡದ್ದು ೯೦,೦೦೦ ಶಸ್ತ್ರಧಾರಿಗಳನ್ನು. ಬಹುಶಃ ಇದು ಅರಸನ ನೇರ ಅಂಕಿತದಲ್ಲಿದ್ದ ಪಡೆಯಾಗಿರಬಹುದು. ನಗದು ಸಂಬಳ ಕೊಟ್ಟು ಬೆಳೆಸಿದ್ದ ಕೃಷ್ಣದೇವರಾಯನ ಸೈನ್ಯದಲ್ಲಿ ೧,೦೦,೦೦೦ ಕಾಲಾಳುಗಳನ್ನು, ೨೦,೦೦೦ ಅಶ್ವಯೋಧರನ್ನು ಮತ್ತು ೯೦೦ ಗಜದಳದವರನ್ನು ಪೋರ್ತುಗಲ್ಲಿನ ಬಾರ್ಬೋಸ, ಪ್ಯಾಸ್ ಮತ್ತು ನೂನಿಜರು ನೋಡಿದ್ದರು. ರಷ್ಯಾ ದೇಶದ ನಿಕಿಟನ್ ಕಂಡಿದ್ದು ೧,೦೦,೦೦೦ ಕಾಲಾಳು, ೫೦,೦೦೦ ಅಶ್ವದಳ, ೩೦೦ ಗಜದಳವನ್ನು. *ಕೃಷ್ಣರಾಯ ವಿಜಯಮು* ಎಂಬ ತೆಲುಗು ಗ್ರಂಥದಲ್ಲಿ ರಾಯನ ನೇರ ಅಧೀನದಲ್ಲಿದ್ದ ೬,೦೦೦ ಅಶ್ವಪಡೆಯ ಪ್ರಸ್ತಾಪ ಬರುವುದು. ಇವನ ನೇರ ಅಂಕಿತದಲ್ಲಿದ್ದ ಗಜದಳದ ಪ್ರಮಾಣವು ಸುಮಾರು ೯೦೦ ಎಂದು ಬಾರ್ಬೋಸ ತಿಳಿದಿದ್ದನು.

ರಾಜ್ಯದ ವಿವಿಧ ಭಾಗಗಳ ಮೇಲಿನ ಆಡಳಿತಾಧಿಕಾರವನ್ನು ಪಡೆದುಕೊಂಡಿದ್ದ ಸಾಮಂತರು ಅವರವರಿಗೆ ವಹಿಸಿಕೊಟ್ಟಿದ್ದ ಸೈನಿಕ ಹೊಣೆಗಾರಿಕೆಯನ್ನು ಪೂರೈಸಿಕೊಡುವುದು ನಾಯಂಕಾರ ವ್ಯವಸ್ಥೆಯ ಪ್ರಮುಖ ಅಂಗವಾಗಿತ್ತು. ಅಬ್ದುಲ್ ರಜಾಕ್‌ನ ಅಂದಾಜಿನಂತೆ ಇದು ೧೧,೦೦,೦೦೦ ಯೋಧರನ್ನಲ್ಲದೆ ಗುಡ್ಡಗಾತ್ರದ ಮತ್ತು ಹಿಡಂಬಿಯಾಕಾರದ ೧,೦೦೦ ಗಜಗಳನ್ನೊಳಗೊಂಡಿತ್ತು. ಪ್ಯಾಸ್ ಕೂಡ ೧೦,೦೦,೦೦೦ ಬಲವನ್ನು ಗುರುತಿಸಿದ್ದ. ಕೃಷ್ಣದೇವರಾಯನು ರಾಯಚೂರನ್ನು ಮುತ್ತಿದಾಗ ಅವನ ಸೈನ್ಯದಲ್ಲಿ ೩,೦೦,೩೦೦ ಕಾಲಾಳುಗಳನ್ನು, ೩೨,೦೦೦ ಅಶ್ವದಳವನ್ನು, ೫೫೦ ಗಜದಳವನ್ನು ತೊಡಗಿಸಿದ್ದುದನ್ನು ನೂನಿಜ್ ಕಂಡಿದ್ದ. ಕೌಟಾ ಮತ್ತು ಸೌಸಾರ ಅಂದಾಜಿನಂತೆ ಈ ಬಲವು ೬೦,೦೦೦ ಕಾಲಾಳು ಮತ್ತು ೧,೦೦,೦೦೦ ಅಶ್ವದಳವನ್ನು ಒಳಗೊಂಡಿತ್ತು. *ರಾಯವಾಚಕಮು* ಎಂಬ ತೆಲುಗು ಗ್ರಂಥದಲ್ಲಿ ೫,೦೦,೦೦೦ ಕಾಲಾಳು, ೬೩,೦೦೦ ಅಶ್ವದಳ ಮತ್ತು ೧೨೦ ಘಟ್ಟಿಮ್ (೧೦ ಆನೆಗಳನ್ನೊಳಗೊಂಡದ್ದು ಒಂದು ಘಟ), ಅಥವಾ ೧,೨೦೦ ಗಜದಳವನ್ನು ಉಲ್ಲೇಖಿಸಲಾಗಿದೆ.

ಈ ಎಲ್ಲಾ ವರದಿಗಳನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ವಿಜಯನಗರ ಸೈನ್ಯದ ಅಪಾರ ಪ್ರಮಾಣವನ್ನು ಅವರ ಸಂಖ್ಯಾಬಲವು ಕಾಲಕಾಲಕ್ಕೆ ಬದಲಾಗುತ್ತಿದ್ದುದನ್ನು ಗುರುತಿಸಬಹುದು.

ಇದು ಏನೇ ಇದ್ದರೂ, ಕನಿಷ್ಠ ೫,೦೦,೦೦೦ ಕಾಲ್ದಳ, ೩೦,೦೦೦ ರಿಂದ ೬೦,೦೦೦ ಅಶ್ವದಳ, ೩೫೦ ರಿಂದ ೧,೦೦೦ ಗಜದಳಗಳನ್ನು ವಿಜಯನಗರದ ಸೇನೆಯು ಒಳಗೊಂಡಿತ್ತೆಂಬುದರಲ್ಲಿ ಅನುಮಾನವಿಲ್ಲ. ಇದಕ್ಕೆ ಒಂಟೆಗಳ ದಳವನ್ನೂ ಸರಕು-ಸರಂಜಾಮನ್ನು ಸಾಗಿಸುತ್ತಿದ್ದ ನಂದಿದಳವನ್ನೂ ಸೇರಿಸಬೇಕಾಗುವುದು; ಆದರೆ ಅವುಗಳ ಸರಿಯಾದ ಪ್ರಮಾಣವು ನಮಗೆ ದೊರಕುತ್ತಿಲ್ಲ. ಅತಿ ವೇಗದಿಂದ ಓಡುವ ಒಂಟೆಯ ದಳವನ್ನು ವಾರ್ಥೆಮ್ ಸ್ವತಃ ನೋಡಿದ್ದನು. ಇಮ್ಮಡಿ ದೇವರಾಯನ ದಳವಾಯಿಯೊಬ್ಬನು ೧೦,೦೦೦ ಒಂಟೆಗಳ ಪಡೆಯನ್ನು ದಕ್ಷಿಣದ ದಂಡಯಾತ್ರೆಯಲ್ಲಿ ತೊಡಗಿಸಿದ್ದ ಬಗ್ಗೆ ಮತ್ತು ರಕ್ಕಸತಂಗಡಿಗೆಯ ಕದನದಲ್ಲಿ ಸಾವಿರಾರು ಒಂಟೆಗಳನ್ನು ಬಳಸಿದ್ದ ಬಗ್ಗೆ ಆಧಾರಗಳು ದೊರೆಯುವುವು.

ದಶಮಿದಿನದ ಸೇನಾಪರಿವೀಕ್ಷಣಾ ಕಾರ್ಯಕ್ರಮವು ಅರಮನೆಯ ಆವರಣದಲ್ಲಿ ಜರುಗದೆ ಮಹಾರಾಜಧಾನಿ ಪಟ್ಟಣ ಪರಿಸರದ ಆರೆಂಟು ಮೈಲು ವಿಸ್ತಾರದ ಪ್ರದೇಶದಲ್ಲಿ ನಡೆಯುತ್ತಿತ್ತು. ಈ ದಿನದ ಸಂಜೋತ ಸೈನ್ಯದ ಶಿಸ್ತಿನ ಪ್ರದರ್ಶನವನ್ನು ಪ್ಯಾಸ್ ಹೆಚ್ಚು ಸಮರ್ಥವಾಗಿ ದಾಖಲಿಸಿರುವನು, ಏಕೆಂದರೆ ಅದರಲ್ಲಿ ಅವನು ಸ್ವತಃ ಪಾಲ್ಗೊಳ್ಳಲು ಸಾಧ್ಯವಾಗಿತ್ತು. 'ರಾಜಧಾನಿಯಿಂದ ಒಂದು ಲೀಗ್ ದೂರದಲ್ಲಿ ಮೊದಲೇ ನಿಶ್ಚಿತಗೊಳಿಸಿದ ಸ್ಥಳದಲ್ಲಿ, ಮೆಕ್ಕಾಮಕಮಲ್ಲಿನ ಒಂದು ಡೇರೆಯನ್ನು ಎತ್ತಿ, ಅಲ್ಲಿ ಮೊದಲು ವಿರೂಪಾಕ್ಷ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಅರಮನೆಯಿಂದ ಈ ಡೇರೆಯ ವರೆಗಿನ ಭೂಪ್ರದೇಶವನ್ನೆಲ್ಲ ಶಿಸ್ತಿನ ಸೇನಾಪ್ರದರ್ಶನಕ್ಕೆ ಮೀಸಲಿಡಲಾಗಿತ್ತು. ತಮ್ಮ ತಮ್ಮ ಸೇನೆಯೊಡನೆ ಬಂದು, ತಮ್ಮ ಅಂತಸ್ತಿಗೆ ತಕ್ಕಂತೆ ನಿರ್ಧರಿಸಲಾಗಿದ್ದ ಸ್ಥಳದಲ್ಲಿ ಒಬ್ಬರ ಹಿಂದೆ ಮತ್ತೊಬ್ಬ ಯೋಧನನ್ನು ನಿಲ್ಲಿಸಿ, ತಾವೂ ನಿಂತು, ಸುತ್ತಲ ಪ್ರದೇಶವನ್ನೆಲ್ಲ ಸಾಮ್ರಾಜ್ಯದ ಸಾಮಂತರು ತುಂಬಿದ್ದರು. ಅಲ್ಲಲ್ಲಿ ಕೆರೆಗಳು ಅಡ್ಡಬಂದಾಗ ಅವನ್ನು ಸುತ್ತುವರಿದು, ರಸ್ತೆ ಇಕ್ಕಟ್ಟಾಗಿದ್ದಾಗ ಸನಿಹದ ಬಯಲು ಪ್ರದೇಶಗಳನ್ನು ಬಳಸಿಕೊಂಡು, ಸೈನ್ಯದ ತುಕಡಿಗಳು ನಿಂತಿದ್ದವು. ಹೀಗೆ ಬಯಲು, ಬೆಟ್ಟ, ಕೆರೆ, ಕಣಿವೆಗಳೆಲ್ಲವನ್ನೂ ತುಂಬಿ ನಿಂತ ಸೇನೆಯಿಂದ ನೆಲವೇ ನೋಡಸಿಗದಂತಾಗಿತ್ತು. ಕಾಲಾಳುಗಳನ್ನು ಕುದುರೆ ಸಾಲಿನ ಮುಂದೆ, ಕುದುರೆಗಳನ್ನು ಆನೆಸಾಲಿನ ಮುಂದೆ ನಿಲ್ಲಿಸಿ, ಪ್ರತಿಯೊಬ್ಬ ನಾಯಕನು ತನ್ನ ಬಲವನ್ನು ಪ್ರದರ್ಶಿಸುತ್ತಿದ್ದನು. ಇದು ರಾಜ್ಯದ ಬೇರೆ ಬೇರೆ ಭಾಗದಿಂದ ಬಂದವರ ಬಗೆಯಾದರೆ ಮಹಾರಾಜಧಾನಿ ಪಟ್ಟಣದ ದಂಡನಾಯಕರಾದರೋ ವಿಶೇಷವಾಗಿ ಸಜ್ಜುಗೊಳಿಸಿ ರಸ್ತೆಯ ಬಳಿ ಕಟ್ಟಿದ ಅಟ್ಟದ ಮೇಲೆ ತಮ್ಮ ಸೇನೆಯನ್ನು ನಿಲ್ಲಿಸಿ, ಪಟ್ಟಣದ ದ್ವಾರಗಳೆಲ್ಲವೂ ಅದರಿಂದ ತುಂಬಿ ತುಳುಕುವಂತೆ ಮಾಡಿದ್ದರು. ಸೈನ್ಯ ಪ್ರದರ್ಶನಕ್ಕಾಗಿ ಇಂತಹ ವಿಶೇಷ ಅಟ್ಟಗಳನ್ನು ನಿರ್ಮಿಸುವುದು ಅನಿವಾರ್ಯವಾಗಿತ್ತು, ಏಕೆಂದರೆ ಚಪ್ಪಟೆಯಾದ [ಮಣ್ಣಿನ] ಮನೆಯ ಮಾಳಿಗೆಯ ಮೇಲೆ ಸೈನ್ಯವನ್ನು ನಿಲ್ಲಿಸುವುದು ಸುರಕ್ಷಿತವಾಗಿರಲಿಲ್ಲ', ಎಂದು ಈ ಯಾತ್ರಿಕನು ವರ್ಣಿಸಿರುವನು.

ಗಜ, ಅಶ್ವ, ಕಾಲ್ದಳ, ಬಿಲ್ಲಾಳು ಹಾಗೂ ತುರುಕ-ಪಡೆಗಳು ತಮ್ಮ ಪಶುಗಳನ್ನು ವಿಶೇಷವಾಗಿ ಅಲಂಕರಿಸಿ, ತಾವೂ ಸಿಂಗರಿಸಿಕೊಂಡು, ಥಳಥಳ ಹೊಳೆಯುವ ಆಯುಧಗಳನ್ನು ಹಿಡಿದು ನಿಂತ ಶಿಸ್ತಿನ ಸೊಬಗನ್ನು ಪ್ಯಾಸ್ ತುಂಬಾ ಮೆಚ್ಚಿದ್ದ.

'ಸುಂದರ ಹಾಗೂ ಜೆಲೆಬಾಳುವ, ಅನೇಕ ಪದರುಗಳ ಶುಭ್ರ ಬಿಳಿ ವಸ್ತ್ರಗಳನ್ನು ಧರಿಸಿ, ಅನರ್ಘ್ಯ ರತ್ನಗಳ ಮಾಲೆಗಳಿಂದ ಅಲಂಕರಿಸಿಕೊಂಡು, ರಕ್ತಗೆಂಪು ಮಕಮಲ್ಲಿನ ಹೊಳೆವ ಛತ್ರದ್ವಯ

ಸಮೇತನಾಗಿ ಅರಮನೆಯಿಂದ ಹೊರಟು, ಸಾಮಂತರೂ ದಳನಾಯಕರೂ ಸಜ್ಜುಗೊಂಡು ಶಿವಿಯಲ್ಲಿ ನಿಂತಿರುವುದನ್ನು ಪರಿವೀಕ್ಷಿಸಲು ಬರುತ್ತಿದ್ದ ಅಶ್ವಾರೂಢ ಅರಸನ ಶೊಬಗನ್ನೆಲ್ಲ ನಾನು ವರ್ಣಿಸಲಾರೆ. ಅದನ್ನು ವರ್ಣಿಸಬಲ್ಲೆನಾದರೂ ನಾನು ಹೇಳುವುದನ್ನು ನಂಬುವವರಾದರೂ ಯಾರು?... 'ನಾನು ನೋಡಿದುದನ್ನೆಲ್ಲ ಹೇಳಲು ನನ್ನಲ್ಲಿ ಶಬ್ದಗಳಿಲ್ಲ ನಿಜ; ಆದರೆ, ಇಲ್ಲಿ ನಡೆಯುತ್ತಿರುವುದೆಲ್ಲವನ್ನು ನೋಡಲು ನನಗೂ ಸಾಧ್ಯವಾಗುತ್ತಿಲ್ಲ. ಕಾಣುತ್ತಿರುವುದನ್ನೆಲ್ಲ ಹೇಳುವ ನನ್ನ ಪ್ರಯತ್ನವೇ ನಿರರ್ಥಕ ಸಾಹಸವೆನಿಸುವುದು. ಒಮ್ಮೆ ಆಚೆ. ಒಮ್ಮೆ ಈಚೆ, ರುಂಡವನ್ನು ಹೊರಳಿಸುತ್ತಾ ಇದೆಲ್ಲವನ್ನು ನೋಡುತ್ತಿರುವಾಗ ನನ್ನ ತಲೆ ಸುತ್ತುಗಟ್ಟಿದಂತಾಗಿ, ಕುದುರೆಯ ಮೇಲೆ ನಾನು ಬೆನ್ನು ಮೇಲಾಗಿ ಬಿದ್ದುಬಿಡುವೆನೇನೋ ಅನಿಸುತ್ತಿತ್ತು. ಮೈಯನ್ನೆಲ್ಲಾ ಅಲಂಕರಿಸಿಕೊಂಡು ಹೌದಾಗಳನ್ನು ಪೇರಿಸಿಕೊಂಡ ಆನೆಗಳು ಅರಸನ ಮುಂಚೂಣಿ ನೆಲವನ್ನು ತುಳಿಯುತ್ತಿದ್ದವು. ಅವುಗಳ ಹಿಂದೆ ರತ್ನಖಚಿತ ಸುವರ್ಣದ ಒಡವೆಗಳಿಂದ ಅಲಂಕೃತಗೊಂಡ, ರಾಜ್ಯ ಗೌರವದ ಸಂಕೇತದಂತಿದ್ದ, ಸುಮಾರು ಇಪ್ಪತ್ತು ಜೊತೆ ಪಲ್ಲಣಪೋಷಿತ ರಾಜಾಶ್ವಗಳಿದ್ದವು. ಬೃಹತ್ ಪ್ರಮಾಣದ (ವಿರೂಪಾಕ್ಷ)ವಿಗ್ರಹವನ್ನೊಳಗೊಂಡ ರಜತ ಸಿಬಿಕೆಯನ್ನು ಹೊತ್ತ ಹದಿನಾರು ಜನ ಬೋವಿಗಳೊಡನೆ ಸೈನ್ಯವನ್ನು ಪರಿವೀಕ್ಷಿಸುತ್ತಾ ಅರಸನು ಮುನ್ನಡೆದಾಗ, ತಮ್ಮ ಖೇಟಕಗಳನ್ನು ಕುಟ್ಟಿ ಪಡೆಯಾಳುಗಳು ಮಾಡುತ್ತಿದ್ದ ಜಯಕಾರದ ಆರ್ಭಟ, ಕೆನೆಯುತ್ತಿದ್ದ ಅಶ್ವಗಳ ಹೇಷಾರವ, ಹೊರಹೊಮ್ಮುತ್ತಿದ್ದ ಗಜಘಟಾಳಿಯ ಘರ್ಜನೆ, ಬೆಟ್ಟ ಕಣಿವೆಗಳನ್ನೆಲ್ಲಾ ನಡುಗುಟ್ಟಿಸುವಂತೆ, ಪಟ್ಟಣವನ್ನೆಲ್ಲ ಪಲ್ಲಟಗೊಳಿಸುವಂತೆ ತೋರಿದವು. ಆಗ ಸಿಡಿಸಿದ ಬಾಣಬಿರುಸು, ಮದ್ದು ಗುಂಡು, ಪೆಟಲು-ರಾಟಳಗಳಿಂದ ತೂರಿಬಂದ ಅಗ್ನಿಪುಷ್ಪಗಳ ಸುರಿಮಳೆಯ ಸೊಬಗನ್ನು ಸವಿಯಲು ಲೋಕವೇ ಅಲ್ಲಿ ನೆರೆದಿದೆಯೇನೋ ಎಂಬಂತೆ' ಈ ಯಾತ್ರಿಕನಿಗೆ ಗೋಚರಿಸಿತು.

ಆಕರಗಳು :

ವಿದೇಶಿ ಪ್ರವಾಸಿಗರ ವರದಿಗಳು :

೧. ಡೇಮ್ಸ್, ಎಂ. ಎಸ್. (ಸಂ.), *ದಿ ಬುಕ್ ಆಫ್ ಡುಆರ್ಟೆ ಬಾರ್ಬೋಸ,* (ದಿ ಹ್ಯಾಕ್ಲುಟ್ ಸೊಸೈಟಿ, ಲಂಡನ್, MCMXVIII).

೨. ಇಲಿಯಟ್, ಎಚ್. ಎಂ., ಮತ್ತು ಡೌಸನ್, *ಹಿಸ್ಟರಿ ಆಫ್ ಇಂಡಿಯಾ ಆ್ಯಸ್ ಟೋಲ್ಡ್ ಬೈ ಇಟ್ಸ್ ಓನ್ ಹಿಸ್ಟೋರಿಯನ್ಸ್,* ಸಂ.೨, (ಲಂಡನ್, ೧೮೬೭-೭೭).

೩. ಫಿಲ್ಲಿಯೋಜ, ಪಿ., *ವಿಜಯನಗರ ಆ್ಯಸ್ ಸೀನ್ ಬೈ ಡೊಮಿಂಗೋಸ್ ಪಯಾಸ್ ಅಂಡ್ ಫೆರ್ನಾವೊ ನೂನಿಜ್ (ಸಿಕ್ಸ್‌ಟೀಂತ್ ಸೆಂಚುರಿ ಪೋರ್ಚುಗೀಸ್ ಕ್ರಾನಿಕಲ್ಸ್) ಆ್ಯಂಡ್ ಅದರ್ಸ್* (ದೆಹಲಿ, ೧೯೯೯).

೪. ಲಾಖ್, ಡಿ., *ಇಂಡಿಯಾ ಇನ್ ದಿ ಐಯ್ಸ್ ಆಫ್ ಯುರೋಪ್,* (ಚಿಕಾಗೊ, ೧೯೬೮).

೫. ಸಿವೆಲ್, ಆರ್., *ಎ ಫರ್ಗಾಟನ್ ಎಂಪೈರ್* (ದೆಹಲಿ, ೧೯೬೨).

೬. ಟೆಂಪಲ್, ಆರ್. ಸಿ., *ದಿ ಐಟಿನೆರರೀ ಆಫ್ ಲುಡೋವಿಕೊ ವಾರ್ಥೆಮ ಆಫ್ ಬೊಲೋನ, ಫ್ರಮ್ ೧೫೦೨ ಟು ೧೫೦೮,* (ಲಂಡನ್, ೧೯೨೮).

ಕನ್ನಡ ಕಾವ್ಯ

ಚಂದ್ರಶೇಖರ, ಪಂಪಾಸ್ಥಾನ ವರ್ಣನಂ (ಸಂ. ಕೃಷ್ಣ ಜೋಯಿಸ್ ಎಸ್. ಎನ್., ತರಣ ಗ್ರಂಥಮಾಲಾ. ೧೯೫೫)

■ **ಡಾ. ಷ. ಶೆಟ್ಟರ್ :** ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■

ಅನನ್ಯ ಭಾಷೋಪಾಸಕ, ಅನುವಾದಕ ಬಿ. ಆರ್. ನಾರಾಯಣ್

ತಿಪ್ಪೇಸ್ವಾಮಿ

ಕನ್ನಡ ಸಾಹಿತ್ಯವನ್ನು ಭಾರತದ ಮೂಲೆ ಮೂಲೆಗೂ ತಲುಪಿಸುವ ನಿಟ್ಟಿನಲ್ಲಿ ಈವರೆಗೆ ಯಾರೂ ಮಾಡಿರದಷ್ಟು ಹಿಂದೀ ಅನುವಾದಗಳನ್ನು ಮಾಡಿ, ನಿಜವಾದ ಅರ್ಥದಲ್ಲಿ ಕನ್ನಡದ ಸಾಹಿತ್ಯಿಕ-ಸಾಂಸ್ಕೃತಿಕ ರಾಯಭಾರಿಯಾಗಿ ಉತ್ತರ ಭಾರತದಲ್ಲಿ ಕಾರ್ಯ ನಿರ್ವಹಿಸಿದ ಬಿ. ಆರ್. ನಾರಾಯಣ್ ಅನುವಾದ ಕ್ಷೇತ್ರದ ಏಕಮೇವಾದ್ವಿತೀಯ ಸಾಧಕ. ನಾರಾಯಣ್ ದೂರದ ದೆಹಲಿಯಲ್ಲಿದ್ದುಕೊಂಡು ಯಾವೊಂದೂ ಸದ್ದು-ಗದ್ದಲ, ಅಬ್ಬರ-ಆರ್ಭಟಗಳಿಲ್ಲದೆ, ಪ್ರಚಾರದ ಬೆನ್ನೂ ಏರದೆ ತಮ್ಮ ಪಾಡಿಗೆ ತಾವು ಅನುವಾದವನ್ನು ಒಂದು ವ್ರತದಂತೆ ಮಾಡುತ್ತ ಕನ್ನಡದ ಬಹುತೇಕ ಮಹತ್ವದ ಲೇಖಕರ ಮುಖ್ಯ ಕೃತಿಗಳನ್ನು ಹಿಂದಿಗೆ ಪರಿಚಯಿಸಿದ ಅನನ್ಯ ಸಂಸ್ಕೃತಿ ಪ್ರೇಮಿ. ನಾರಾಯಣ್ ಅವರು ಅನುವಾದವನ್ನು ತಮ್ಮ ಜೀವದ ಜೀವವಾಗಿ ತೆಗೆದುಕೊಳ್ಳದೇ ಹೋಗಿದ್ದಿದ್ದರೆ ಬಹುಪಾಲು ಕನ್ನಡ ಲೇಖಕರು ಬರೀ ಕನ್ನಡ ಲೇಖಕರಾಗಿಯೇ ಉಳಿದುಬಿಡುತ್ತಿದ್ದರು, ಅಖಿಲ ಭಾರತ ಮಟ್ಟದಲ್ಲಿ ಚರ್ಚೆಯಾಗುತ್ತಿರಲಿಲ್ಲ. ಕನ್ನಡ ಲೇಖಕರಿಗೆ ಅಖಿಲ ಭಾರತದ ವ್ಯಾಪ್ತಿಯನ್ನು ತಂದುಕೊಟ್ಟ ಹೆಗ್ಗಳಿಕೆ ನಾರಾಯಣ್‌ರಿಗೆ ಸಲ್ಲಬೇಕು. ನಾರಾಯಣ್‌ರ ಅನುವಾದಗಳಿಂದಾಗಿ ತೌಲನಿಕ ಅಧ್ಯಯನದ ಅವಕಾಶಗಳು ತೆರೆದುಕೊಂಡಿವೆ. ಅಂತೆಯೇ ಭಾರತೀಯ ಸಾಹಿತ್ಯಕ್ಕೆ ಮಹತ್ವದ ಆಯಾಮ ದೊರೆತಿದೆ. ಈ ದೃಷ್ಟಿಯಿಂದ ಕನ್ನಡೇತರ ಭಾಷಿಕರಿಗೆ ಹಿಂದಿಯ ಮೂಲಕ ತೆರೆದ ಕನ್ನಡ ಗವಾಕ್ಷಗಳು ಇವರ ಅನುವಾದಗಳು.

ಬೆಂಗಳೂರು ಸಮೀಪದ ಕಂಬೀಪುರ ಗ್ರಾಮದಲ್ಲಿ ೧೯೨೮ ರಲ್ಲಿ ಜನಿಸಿದ ನಾರಾಯಣ್‌ರ ಪ್ರಾರಂಭದ ಶಿಕ್ಷಣ ಬೆಂಗಳೂರಿನಲ್ಲಿಯೇ ಆದರೂ ೧೯೪೨ ರ ಕ್ವಿಟ್ ಇಂಡಿಯಾ ಚಳವಳಿ ಯಲ್ಲಿ ಭಾಗವಹಿಸಲು ಶಾಲಾ ಶಿಕ್ಷಣಕ್ಕೆ ವಿದಾಯ ಹೇಳಿದರು. ಮುಂದೆ ನಾಲ್ಕು ವರ್ಷ ಲಾಹೋರಿನಲ್ಲಿದ್ದುಕೊಂಡು ವೈದಿಕ ಸಾಹಿತ್ಯದ ಅಧ್ಯಯನ ನಡೆಸಿದರು. ಲಾಹೋರಿನಿಂದ ದೆಹಲಿಗೆ ಬಂದು ದೆಹಲಿ ವಿಶ್ವವಿದ್ಯಾಲಯದಿಂದ ೧೯೫೬ ರಲ್ಲಿ ಹಿಂದೀ ಎಂ.ಎ. ಮಾಡಿದರು. ನಾರಾಯಣ್ ಹಿಂದೀ ಅಧಿಕಾರಿಯಾಗಿ ಕೇಂದ್ರ ಸರಕಾರದ ಸೇವೆಗೆ ಸೇರಿದರು. ಪಂಜಾಬ್ ಹಾಗೂ ದೆಹಲಿಯಲ್ಲಿ ಕಾರ್ಯ ನಿರ್ವಹಿಸಿದರು. ಕ್ಯಾಬಿನೆಟ್ ಸೆಕ್ರೆಟರಿಯೇಟ್‌ನಲ್ಲಿ ಸಹಾಯಕ ನಿರ್ದೇಶಕರಾಗಿ ೧೯೮೬ ರಲ್ಲಿ ನಿವೃತ್ತರಾದರು. ನಂತರ ಬೆಂಗಳೂರಿಗೆ ಬಂದು ವಿಶ್ರಾಂತ ಜೀವನ ನಡೆಸುತ್ತಿದ್ದರು.

ನಾರಾಯಣ್ ಹಿಂದೀ ಭಾಷಿಕರ ಮಧ್ಯೆ ಇದ್ದುಕೊಂಡು ಹಿಂದೀ ಭಾಷೆಯ ಮೇಲೆ ಎಂಥ ಪ್ರಭುತ್ವವನ್ನು ಸಾಧಿಸಿದ್ದರೆಂದರೆ, ಕನ್ನಡದಷ್ಟೇ ಸರಾಗವಾಗಿ ಸುಲಲಿತವಾಗಿ ಹಿಂದಿಯಲ್ಲಿ ವ್ಯವಹರಿಸುವ ಹಾಗೂ ಅಭಿವ್ಯಕ್ತಿಸುವ ಪ್ರಾವೀಣ್ಯವನ್ನು ಹೊಂದಿದ್ದರು. ಬಹಳಷ್ಟು ವರ್ಷಗಳ ಕಾಲ ದೆಹಲಿಯಲ್ಲಿ ನೆಲೆಸಿದ್ದರೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಲೇಖಕರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ತಮ್ಮ ಅನುವಾದಗಳನ್ನು ಒಂದಾದ ಮೇಲೊಂದರಂತೆ ನೀಡಿ ತಾಯ್ನುಡಿಯ ಋಣ ತೀರಿಸಿದ ನಾರಾಯಣ್ ನಮ್ಮ ಅನುವಾದಕರಿಗೆ ಆದರ್ಶಪ್ರಾಯರಾಗಿದ್ದಾರೆ.

ಬಿ. ಆರ್. ನಾರಾಯಣ್ ಕನ್ನಡದ ಬಹುತೇಕ ಪ್ರಮುಖ ಲೇಖಕರ ಒಟ್ಟು ೬೧ ಕೃತಿಗಳನ್ನು ಹಿಂದಿಗೆ ಅನುವಾದಿಸಿ ದಾಖಲೆ ನಿರ್ಮಿಸಿದ್ದಾರೆ. ನನಗೆ ತಿಳಿದಿರುವಂತೆ ಯಾವುದೇ ಭಾಷೆಯ ಯಾವನೇ ಒಬ್ಬ ಅನುವಾದಕ ಇಷ್ಟು ಕೃತಿಗಳನ್ನು ಅನುವಾದ ಮಾಡಿಲ್ಲ. ನಾರಾಯಣ್ ಅನುವಾದಕ್ಕೆಂದು ಕಾದಂಬರಿ, ಕತೆಗಳು, ನಾಟಕ, ಜಾನಪದ ಹಾಗೂ ವೈಚಾರಿಕ ಕೃತಿಗಳನ್ನು ಆಯ್ದುಕೊಂಡು ಸದಭಿರುಚಿಯನ್ನು ಮೆರೆದಿದ್ದಾರೆ. ಸಾಮಾನ್ಯ ಓದಿಗೇ ಎಷ್ಟೋ ತಿಂಗಳುಗಳು ಬೇಕಾಗಿರುವಂಥ ಬೃಹತ್ ಗ್ರಂಥಗಳನ್ನು ಅವರು ಅನುವಾದಿಸಿರುವುದನ್ನು ನೋಡಿದರೆ ಅವರ ಅನುವಾದದ ಗತಿ, ವೇಗದ ಬಗೆಗೆ ಆಶ್ಚರ್ಯವಾಗುತ್ತದೆ. ನಾರಾಯಣ್ ಅನುವಾದಿಸಿರುವ ಕೆಲವು ಕೃತಿಗಳೆಂದರೆ– ಮಾಸ್ತಿಯವರ 'ಚಿಕ್ಕವೀರ ರಾಜೇಂದ್ರ', 'ಚೆನ್ನಬಸವ ನಾಯಕ' (ಕಾದಂಬರಿಗಳು); ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' (ಕಾದಂಬರಿ), 'ಶೂದ್ರ ತಪಸ್ವಿ', 'ಜಲಗಾರ', 'ಬೆರಳ್ಗೆ ಕೊರಳ್' (ನಾಟಕಗಳು), ಎಸ್. ಎಲ್. ಭೈರಪ್ಪನವರ 'ಸಾರ್ಥ', 'ತಂತು', 'ಪರ್ವ', 'ನೆಲೆ', 'ತಬ್ಬಲಿಯು ನೀನಾದೆ ಮಗನೆ' (ಕಾದಂಬರಿಗಳು), ಶ್ರೀರಂಗರ 'ಅನಾದಿ ಅನಂತ', 'ರಂಗಭಾರತ', 'ಪ್ರಕೃತಿ ಪುರುಷ' (ನಾಟಕಗಳು), ಯು. ಆರ್. ಅನಂತಮೂರ್ತಿಯವರ 'ಘಟಶ್ರಾದ್ಧ', 'ಮೌನಿ', 'ಆಕಾಶ ಮತ್ತು ಬೆಕ್ಕು' (ಕಥಾಸಂಗ್ರಹಗಳು), 'ಭವ', 'ದಿವ್ಯ' (ಕಾದಂಬರಿಗಳು), ಚಂದ್ರಶೇಖರ ಕಂಬಾರರ 'ಜೈಸಿದ ನಾಯಕ', 'ಹರಕೆಯ ಕುರಿ' (ನಾಟಕಗಳು), 'ಸಿಂಗಾರೆವ್ವ', 'ಜಿ. ಕೆ. ಮಾಸ್ತರ್' (ಕಾದಂಬರಿಗಳು), ಗಿರೀಶ ಕಾರ್ನಾಡರ 'ನಾಗಮಂಡಲ', 'ಯಯಾತಿ', ಲಂಕೇಶರ 'ಸಂಕ್ರಾಂತಿ' (ನಾಟಕ), ತೇಜಸ್ವಿಯವರ 'ಕರ್ವಾಲೋ' (ಕಾದಂಬರಿ), ಶಾಂತಿನಾಥ ದೇಸಾಯಿಯವರ 'ಕ್ಷಿತಿಜ' (ಕಥಾಸಂಗ್ರಹ), 'ಬೀಜ' (ಕಾದಂಬರಿ), ಶಿವರಾಮ ಕಾರಂತರ 'ಬೆಟ್ಟದ ಜೀವ', 'ಮೈಮನಗಳ ಸುಳಿಯಲ್ಲಿ' (ಕಾದಂಬರಿಗಳು), ತ. ರಾ. ಸು. ಅವರ 'ದುರ್ಗಾಸ್ತಮಾನ' (ಕಾದಂಬರಿ), ವೀರಪ್ಪ ಮೊಯಲಿ ಅವರ 'ಕೊಟ್ಟ' (ಕಾದಂಬರಿ) ಇತ್ಯಾದಿ.

ಬಿ. ಆರ್. ನಾರಾಯಣ್ ತಮ್ಮ ಅಸಾಧಾರಣ ಅನುವಾದ ಕಾರ್ಯಕ್ಕಾಗಿ ನಾನಾ ರಾಜ್ಯಗಳ ಸರ್ಕಾರಗಳಿಂದ, ಅಕಾಡೆಮಿಗಳಿಂದ ಪುರಸ್ಕೃತರಾಗಿದ್ದಾರೆ. ಲಖನೌದ ಉತ್ತರ ಪ್ರದೇಶ ಹಿಂದೀ ಸಂಸ್ಥಾನ್, ಕಲ್ಕತ್ತಾದ ಭಾರತೀಯ ಭಾಷಾಪರಿಷತ್, ನವದೆಹಲಿಯ ಹಿಂದೀ ನಿರ್ದೇಶನಾಲಯ್, ಬಿಹಾರ್ ಸರ್ಕಾರ, ಹೈದರಾಬಾದ್‌ನ ಹಿಂದೀ ಪ್ರತಿಷ್ಠಾನ್, ನವದೆಹಲಿಯ ಹಿಂದೀ ಅಕಾಡೆಮಿ, ಮಧ್ಯಪ್ರದೇಶ ಸರ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ– ಹೀಗೆ ಹತ್ತು ಹಲವು ಗೌರವ-ಸನ್ಮಾನಗಳು ನಾರಾಯಣ್‌ರಿಗೆ ಸಂದಿವೆ.

ಬಿ. ಆರ್. ನಾರಾಯಣ್ ವಿದ್ವಾಂಸರಾಗಿಯೂ ಮನ್ನಣೆಗೆ ಪಾತ್ರರಾಗಿದ್ದರು. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಗೋಷ್ಠಿಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು, ವಿಚಾರಗಳನ್ನು ಮಂಡಿಸಿದ್ದರು. ನಾಗಪುರ, ಮಾರಿಷಸ್‌ಗಳಲ್ಲಿ, ದಿಲ್ಲಿಯಲ್ಲಿ ನಡೆದ ವಿಶ್ವ ಹಿಂದೀ ಸಮ್ಮೇಳನಗಳಲ್ಲಿ ಹಾಗೂ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಪ್ರಸ್ತುತಪಡಿಸಿದ್ದರು.

ನಾರಾಯಣ್ ಎತ್ತರದ ಆಳು. ಸರಳ ಜೀವಿ, ಸ್ನೇಹಮಯಿ ಹಾಗೂ ಭಾವಜೀವಿಯಾಗಿದ್ದರು. ಹಿರಿಯರಿಗೆ ಗೌರವ ಮತ್ತು ಕಿರಿಯರಿಗೆ ಪ್ರೀತಿಯನ್ನು ಮೊಗೆಮೊಗೆದು ಕೊಡುತ್ತಿದ್ದರು. ನಾರಾಯಣ್ ೨೦-೨೫ ವರ್ಷಗಳಿಂದ ನನ್ನ ಪ್ರಿಯ ಸ್ನೇಹಿತರಾಗಿದ್ದರು. ನನ್ನ ಅನುವಾದಗಳ ಬಗೆಗೆ ಅಭಿಮಾನದಿಂದ ಮಾತನಾಡುತ್ತಿದ್ದರು. ಅನುವಾದಗಳನ್ನು ಕುರಿತ ನನ್ನ ಸಮೀಕ್ಷಾ ಲೇಖನಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ನಾರಾಯಣ್ ಅವರೊಡನೆ ಮಾತನಾಡುವುದೆಂದರೆ ಆಪ್ಯಾಯಮಾನವಾದ ಅನುಭವವಾಗಿರುತ್ತಿತ್ತು. ದೆಹಲಿಯಲ್ಲಿ ಒಮ್ಮೆ ಭೇಟಿಯಾದಾಗ ನನ್ನನ್ನು ಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿ ಕಳಿಸಿದ್ದರು. ಕಳೆದ ವರ್ಷ ಮದ್ರಾಸ್‌ನಲ್ಲಿ ನಡೆದ ಒಂದು ಗೋಷ್ಠಿಗೆ ಇಬ್ಬರೂ ಹೋಗಿದ್ದೆವು. ೨-೩ ದಿನ ಒಟ್ಟಿಗೆ ಇದ್ದೆವು. ಗೋಷ್ಠಿಯಲ್ಲಿ ಮಂಡಿಸಲು ನಾರಾಯಣ್ ಪ್ರಬಂಧವನ್ನು ತಂದಿದ್ದರೂ ಅದನ್ನು ಸ್ವತಃ ಓದುವಷ್ಟು ಆರೋಗ್ಯವಿರಲಿಲ್ಲ. ಅವರ ಪ್ರಬಂಧವನ್ನು ನಾನು ಓದಿದೆ. ನಾರಾಯಣ್ ಬಹುವಾಗಿ ಮೆಚ್ಚಿಕೊಂಡರು. ನಾರಾಯಣ್ ಭೇಟಿಯಾದಾಗಲೆಲ್ಲ ತೋರುತ್ತಿದ್ದ ಪ್ರೀತಿ ಮತ್ತು ಅಂತಃಕರಣ ಈಗ ನೆನಪುಗಳಷ್ಟೆ.

ನಾರಾಯಣ್‌ರದು ಸಂತೃಪ್ತ ಕುಟುಂಬ. ಪಂಜಾಬಿ ಹೆಣ್ಣುಮಗಳಾದ ಶ್ರೀಮತಿ ಕಮಲಾ ನಾರಾಯಣರ ಪತ್ನಿ. ಇವರಿಗೆ ಒಬ್ಬ ಗಂಡುಮಗ, ಮೂವರು ಹೆಣ್ಣುಮಕ್ಕಳು. ಮಕ್ಕಳು-ಮೊಮ್ಮಕ್ಕಳೊಂದಿಗೆ ಕೆಂಗೇರಿಯಲ್ಲಿ ಸಂತೃಪ್ತ ವಿಶ್ರಾಂತ ಜೀವನ ನಡೆಸುತ್ತಿದ್ದ ನಾರಾಯಣ್ ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ತೀವ್ರ ಅನಾರೋಗ್ಯದಿಂದ ನರಳಿದ್ದರು. ಡಿಸೆಂಬರ್ ೧, ೨೦೦೪ ರಂದು ಇಹಲೋಕದಿಂದ ತೆರಳಿದರು. ನಾರಾಯಣ್‌ರ ಅಗಲಿಕೆ ಕೇವಲ ಸುದ್ದಿಯಾಯಿತು, ಅಷ್ಟೆ. ಅವರ ಸಿದ್ಧಿ-ಸಾಧನೆಗಳನ್ನು ಯಾರೂ ನೆನೆಯಲಿಲ್ಲ. ಬಿ. ಆರ್. ನಾರಾಯಣ್ ನಮ್ಮ ಮಧ್ಯೆ ಇದ್ದ ಶ್ರೇಷ್ಠ ಅನುವಾದಕ; ಸಾತ್ವಿಕ ಮನಸ್ಸಿನ ಹೃದಯವಂತ; ಕನ್ನಡ ಸಂಬಂಧವನ್ನು ಎಲ್ಲ ಭಾರತೀಯ ಭಾಷೆಗಳೊಂದಿಗೆ ಬೆಸೆದ ಅನನ್ಯ ಭಾಷೋಪಾಸಕ.

■ ಡಾ. ತಿಪ್ಪೇಸ್ವಾಮಿ, ೩೬೯, ಎಚಿ ಬ್ಲಾಕ್, ಕುವೆಂಪುನಗರ, ಮೈಸೂರು-೫೭೦ ೦೨೩ ■

ಮೊದಲನೇ ಮರಾಠೀ ನಾಟಕ ಮತ್ತು ಕರ್ನಾಟಕದ ಭಾಗವತ ಮಂಡಳಿ

ಚಂದೂಲಾಲ್ ದುಬೆ

ಆದ್ಯ ಮರಾಠೀ ನಾಟಕಕಾರ ವಿಷ್ಣುದಾಸ ಭಾವೆ ಮತ್ತು ಯಕ್ಷಗಾನ ಕುರಿತು ಸಂಕಲನ-೨೩ ರಲ್ಲಿ ಪ್ರಕಟವಾದ ಡಾ. ಶ್ರೀನಿವಾಸ ಹಾವನೂರರ ಲೇಖನ ಓದಿದೆ. ಈ ವಿಷಯದ ಬಗ್ಗೆ ಇನ್ನೂ ಕೆಲವು ವಿವರಗಳನ್ನು ನಮ್ಮ ಓದುಗರಿಗೆ ತಿಳಿಸುವುದು ಆವಶ್ಯಕವೆನ್ನಿಸಿ ಈ ಲೇಖನ ಬರೆಯುತ್ತಿದ್ದೇನೆ.

ಮರಾಠೀ ಮತ್ತು ತೆಲುಗು ನಾಟಕಗಳು ತಮ್ಮ ಹುಟ್ಟಿಗೆ ಕನ್ನಡ ನಾಟಕಗಳಿಗೆ ಋಣಿಯಾಗಿವೆ ಎಂಬ ಸತ್ಯಕ್ಕೆ ಕನ್ನಡಿಗರು ಅಭಿಮಾನ ಪಡುವದು ಸಹಜವಾದರೂ, ಇಂದಿನ ವರೆಗೆ ಕರ್ನಾಟಕದ ಒಬ್ಬ ಸಂಶೋಧಕನೂ ಆ ಪ್ರೇರಣಾಪ್ರದವಾದ ಕನ್ನಡ ನಾಟಕಗಳ ಅಥವಾ ಆ ನಾಟಕವಾಡಿದ ಮಂಡಳಿಯ ಇತಿಹಾಸವನ್ನು ವಿವರಿಸುವ ಗೋಜಿಗೆ ಹೋಗಿಲ್ಲವೆಂಬ ಮಾತೂ ನಿಜ.

ಮರಾಠಿಯ ಆದ್ಯ ನಾಟಕಕಾರನೆಂದು ತನ್ನಷ್ಟಕ್ಕೆ ತಾನೇ ಕರೆದುಕೊಂಡ, ಸಾಂಗ್ಲಿಯ ವಿಷ್ಣುದಾಸ್ ಭಾವೆ ತಮ್ಮ ಮರಾಠೀ ನಾಟಕಕ್ಕೆ ಕನ್ನಡ ನಾಟಕವೇ ಮೂಲ ಪ್ರೇರಣೆ ಎಂಬ ಸತ್ಯವನ್ನು ಸ್ವತಃ ಒಪ್ಪಿಕೊಂಡಿದ್ದಾರೆ. ಅವರು ತಮ್ಮ 'ನಾಟ್ಯ ಕವಿತಾ ಸಂಗ್ರಹ'ದ ಪ್ರಸ್ತಾವನೆಯಲ್ಲಿ ೧೮೮೫ ರಲ್ಲಿ ನಮೂದಿಸಿದ್ದು ಹೀಗೆ– "ಕರ್ನಾಟಕದ ಉತ್ತರ ಕಾನಡಾ ಪ್ರಾಂತದಿಂದ ಒಂದು ಭಾಗವತ ನಾಟಕ ಮಂಡಳಿಯು ಇ.ಸ. ೧೮೪೨ ರಲ್ಲಿ ಸಾಂಗ್ಲಿಗೆ ಬಂದಿತ್ತು. ಸ್ವರ್ಗೀಯ ಶ್ರೀ ಚಿಂತಾಮಣರಾವ ಅಪ್ಪಾಸಾಹೇಬರು ಈ ಮಂಡಳಿಯ ಎರಡು-ಮೂರು ನಾಟಕಗಳ ಪ್ರಯೋಗಗಳನ್ನು ಮಾಡಿಸಿದರು. ರಾಜಾಸಾಹೇಬರು ರಸಜ್ಞರು ಮತ್ತು ಗುಣಗ್ರಾಹಿಗಳಾಗಿದ್ದರು. ಆದ್ದರಿಂದ ಆ ಮಂಡಳಿಯ ವಿಕೃತ ಹಾಗೂ ಬೀಭತ್ಸ ಕೃತಿಗಳಿಂದ ಅವರ ಮನಸ್ಸು ಪ್ರಸನ್ನವಾಗಲಿಲ್ಲ. ಈ ಪ್ರಕಾರದ ಪ್ರಯೋಗಗಳಲ್ಲಿ ಒಳ್ಳೇ ಸುಧಾರಣೆ ಮಾಡಿ ಹೊಸ ಮರಾಠೀ ನಾಟಕವನ್ನು ತಯಾರಿಸಲು ಅವರು ನನಗೆ ಆಜ್ಞಾಪಿಸಿದರಲ್ಲದೇ ಬೇರೆ ಬೇರೆ ತರದಿಂದ ಸಹಾಯವನ್ನು ನೀಡುವೆನೆಂದು ಹೇಳಿದರು. ನಾನು ಆವಾಗ ಅವರ ಖಾಸಗೀ ಸೇವೆಯಲ್ಲಿದ್ದೆ. ನನಗೆ ಮೊದಲಿ ನಿಂದಲೂ ಚಿತ್ರ ತೆಗೆಯುವ, ಕವಿತೆಗಳನ್ನು ಬರೆಯುವ, ಕಥೆಗಳನ್ನು ಕಟ್ಟುವ ಹವ್ಯಾಸವಿತ್ತು. ಇದೇ ಕಾರಣಗಳಿಂದಲೇ ನನಗೆ ರಾಜಾಸಾಹೇಬರ ಅರಮನೆಯಲ್ಲಿ ಕೆಲಸ ಸಿಕ್ಕಿತ್ತು..."

ಭಾವೆಯವರ ಹೇಳಿಕೆಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಿಂದ ಬಂದ ಭಾಗವತ ಮಂಡಳಿಯವರು ೧೮೪೨ ರಲ್ಲಿ ಸಾಂಗ್ಲಿಯಲ್ಲಿ ಅಲ್ಲಿಯ ರಾಜಾಸಾಹೇಬರ ಸನ್ನಿಧಿಯಲ್ಲಿ ಎರಡು-ಮೂರು ಆಟಗಳನ್ನು ಆಡಿದರು. ಭಾಗವತ ಮಂಡಳಿಯ ಆ ನಾಟಕಗಳು 'ವಿಕೃತ' (ಒರಟು) ಹಾಗೂ 'ಬೀಭತ್ಸ'ವಿದ್ದವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಅದೇ ಪ್ರಸ್ತಾವನೆಯಲ್ಲಿ ಇವುಗಳ ಬಗ್ಗೆ ಮತ್ತೆ ಹೇಳಿದ್ದೇನೆಂದರೆ– 'ಆ ನಾಟಕಗಳಲ್ಲಿ ಮನರಂಜನೆ ಏನೂ ಇರುತ್ತಿರಲಿಲ್ಲ. ಸೋಗಿನ ವೇಷವು ಬಹಳೇ ಕೆಟ್ಟದ್ದಾಗಿರುತ್ತಿತ್ತು. ಎಲ್ಲ ಪಾತ್ರಗಳು, ಅವರಿಗೆ ಹಾಡಲು ಬರಲಿ ಅಥವಾ ಬರದಿರಲಿ ಹಾಡಿ ಕುಣಿಯುತ್ತಿದ್ದವು. ಈ ಆಟ ನೋಡಿ ಹಳ್ಳಿಗರ ಮನಸ್ಸು ಆನಂದಪಡುತ್ತಿತ್ತು. ಆದರೆ ವಿದ್ವಾಂಸರಿಗೆ ಅದರಿಂದ ಆನಂದ ಸಿಗದೆ, ತ್ರಾಸಾಗುತ್ತಿತ್ತು.'

ತಾವೇ ಅನುಕರಣ ಮಾಡಿದ ಈ ಕನ್ನಡ ನಾಟಕಗಳ ಬಗ್ಗೆ ಭಾವೆಯವರು ಹೇಳಿದ ಮಾತುಗಳು– ನಿಜವೇ, ಇದರಲ್ಲಿ ಸತ್ಯಾಂಶ ಎಷ್ಟಿದೆ, ಆ ಭಾಗವತ ಮಂಡಳಿಯು ಉತ್ತರ ಕನ್ನಡದ ಯಾವ ಊರಿಂದ ಹೋಗಿತ್ತು, ಆ ನಾಟಕಗಳ ಸ್ವರೂಪವು ಹೇಗಿತ್ತು– ಎಂಬ ಸಂಗತಿಗಳ ಬಗ್ಗೆ, ನನಗೆ ಗೊತ್ತಿದ್ದ ಮಟ್ಟಿಗೆ, ಕನ್ನಡದಲ್ಲಿ ವಿಶೇಷ ಸಂಶೋಧನೆ ಆಗಿಲ್ಲ.

ಡಾ. ಎಚ್. ಕೆ. ರಂಗನಾಥರು ತಮ್ಮ ಸಂಶೋಧನಾತ್ಮಕ ಮಹಾಪ್ರಬಂಧವಾದ 'The Karnataka Theatre'ದಲ್ಲಿ ಭಾವೆಯವರ ಮೊದಲನೇ ಮರಾಠೀ ನಾಟಕದ ಬಗ್ಗೆ ಹೀಗೆ ವಿವರ ನೀಡಿದ್ದಾರೆ– "The professional theatre of Maharashtra which celebrated its century, three decades ago, seems to have drawn its imspiration from the folk modes of the Kannada stage, for troupes of the folk artists of North Karnataka which were frequently visiting important places in Maharashtra drew the attention of the region. The Yakshagāna troupe of Kirki (North Kanara) which visited Sangli in 1842 on the invitation of the chief, Srimant Appasaheb Patwardhan, impressed the Raja and the people so much that they considered it desirable to fashion the Marathi stage on the performance of the Kannada

Yakshagāna in order to make it more sustaining than the prevailing folk patterns of Tamasha and Lalit. Vishnupant Bhave, a gifted clerk of the Raja of Sangli, under instruction from his chief, wrote his first play Seeta Swayamvara possibly before 1845. Encouraged by the success Bhave wrote many more plays in Marathi exactly on the pattern set by the Kannada Yakshagāna and staged them in Bombay in 1852". (ಈ ಪ್ರೌಢಪ್ರಬಂಧದ ಕನ್ನಡ ಅನುವಾದವಾದ 'ಕರ್ನಾಟಕ ರಂಗಭೂಮಿ' ಎಂಬ ಕೃತಿಯಲ್ಲಿ ಇಂಗ್ಲೀಷಿನಲ್ಲಿ ಕೊಟ್ಟ ಈ ಮಾಹಿತಿಯನ್ನು ಕೊಟ್ಟಿಲ್ಲ.)

ಡಾ. ರಂಗನಾಥರ ಹೇಳಿಕೆಯ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಗ್ರಾಮದ ಯಕ್ಷಗಾನ ಮಂಡಳಿಯು ೧೮೪೨ ರಲ್ಲಿ ಸಾಂಗ್ಲಿ ಸಂಸ್ಥಾನಕ್ಕೆ ಭೇಟಿ ಕೊಟ್ಟಿತ್ತು. ಆದರೆ ಆ ಕರ್ಕಿ ಭಾಗವತ ಮಂಡಳಿಯ ವಿವರಣೆ ಅಲಭ್ಯ. ಇವರ ಬಗ್ಗೆ ಮರಾಠೀ ವಿದ್ವಾಂಸರಾದ ಜಗನ್ನಾಥ ಸದಾಶಿವ ಸುಖಠಣಕರ ಎಂಬ ಸಂಶೋಧಕರು, ಕನ್ನಡ ಬಾರದಿದ್ದರೂ, ಈ ಭಾಗವತ ಮಂಡಳಿಯ ಬಗ್ಗೆ ಮಾಹಿತಿ ಪಡೆಯಲು ಕಾರವಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡರು. ತಮಗೆ ಸಿಕ್ಕ ಜ್ಞಾನವನ್ನು ಅವರು ತಮ್ಮ ಹೊಸ ಹೊತ್ತಿಗೆ 'ರೂಪಪ್ಯಾಂಚೀ ರೂಪಕಥಾ'ದಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾರೆ.

ಡಾ. ಎಚ್. ಕೆ. ರಂಗನಾಥರ ಸಂಶೋಧನಾತ್ಮಕ ಪ್ರೌಢ ಪ್ರಬಂಧವಾದ 'ದಿ ಕರ್ನಾಟಕ ಥಿಯೇಟರ್'ದಲ್ಲಿ ಕೊಟ್ಟ ಟಿಪ್ಪಣಿ ಶ್ರೀ ಸುಖಠಣಕರರಿಗೆ ಸಂಧಾನದ ಮಾರ್ಗದರ್ಶಕ ವಾಯಿತೆಂದು ಅವರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಆ ಟಿಪ್ಪಣಿ ಹೀಗಿದೆ– A fuller account is provided by Muliya Timmappayya : Parthi Subba page 123. An idol of Krishna said to have been presented by Sangli Chief to the troupe at that time is still preserved by the Hasyagar family of Kirki– page 2 of The Karnatak Theatre (ರೂಪಪ್ಯಾಂಚೀ ರೂಪಕಥಾ– ಜ. ಸ. ಸುಖಠಣಕರ– ಪು. ೧೨೫) ಈ ಟಿಪ್ಪಣಿಯಲ್ಲಿ ನಮೂದಿಸಿದ 'ಹಾಸ್ಯಗಾರ' ಪರಿವಾರ ಮತ್ತು ಭಾಗವತರ ಮಂಡಳಿಗೂ ಏನು ಸಂಬಂಧ, ಇದಲ್ಲದೆ ಸಾಂಗ್ಲಿಯ ರಾಜಾಸಾಹೇಬರು ಭಾಗವತ ಮಂಡಳಿಗೆ ಕೊಟ್ಟ ಕೃಷ್ಣನ ಮೂರ್ತಿಯು ಹಾಸ್ಯಗಾರ ಕುಟುಂಬಕ್ಕೆ ಹೇಗೆ ಸಿಕ್ಕಿತು ಮುಂತಾದ ಪ್ರಶ್ನೆಗಳು ಈ ಮರಾಠೀ ಸಂಶೋಧಕರನ್ನು ಕೆಣಕತೊಡಗಿದವು.

ಹಾಸ್ಯಗಾರ ಕುಟುಂಬದ ಮಾಹಿತಿ ಪಡೆಯಲು ಸುಖಠಣಕರ ಇವರು ಮಡಗಾವಿ(ಗೋವಾ) ಯಿಂದ ಕಾರವಾರಕ್ಕೆ ತಲುಪಿದರು. ಅಲ್ಲಿಂದ ಹೊನ್ನಾವರ ಬಂದರಕ್ಕೆ ಬಂದರು. ಅಲ್ಲಿ ಅವರಿಗೆ ದುರ್ಗಾಕೆರಿ ಎಂಬ ಗ್ರಾಮದಲ್ಲಿ ಹಾಸ್ಯಗಾರ ಕುಟುಂಬ ಇದೆ ಎಂದು ಗೊತ್ತಾಯಿತು. ಅಲ್ಲಿ ಇದ್ದ ಎರಡು ಹಾಸ್ಯಗಾರರ ಮನೆಗಳಲ್ಲಿ ಭಾಗವತ ಮಂಡಳಿಗೆ ಸಂಬಂಧಪಟ್ಟ ಮನೆತನವು ಯಾವದೆಂದು ಗುರುತಿಸುವ ಕುತೂಹಲವು ಅವರನ್ನು ಮತ್ತೆ ಕೆರಳಿಸಿತು. ಕೇಳುತ್ತ ಕೇಳುತ್ತ ಬಂದು ಹಾಸ್ಯಗಾರರ ಮನೆಗೆ ತಲುಪಿದರು. ಆದರೆ ಅಲ್ಲಿ ಭಾಷೆಯ ತೊಂದರೆಯನ್ನು ಎದುರಿಸ ಬೇಕಾಯಿತು. ಇವರ ಮರಾಠೀ ಭಾಷೆಯು ಅವರಿಗೆ ತಿಳಿಯದು; ಅವರ ಕನ್ನಡ ಉತ್ತರ ಇವರಿಗೆ ಅರಿಯದು. ಒಳಗಿದ್ದ ಒಬ್ಬ ಹೆಣ್ಣುಮಗಳಿಗೆ ಸ್ವಲ್ಪ ಕೊಂಕಣಿ ಮತ್ತು ಮರಾಠೀ ಬರುವದೆಂದು ತಿಳಿದಾಗ ಕೂಡಲೇ ಇವರ ಸಂಭಾಷಣೆ ಸರಳವಾಯಿತು. ಆದರೆ ಇವರಿಗೆ ಬೇಕಾಗಿದ್ದ ಹಾಸ್ಯಗಾರರ ಕುಟುಂಬ ಇದಲ್ಲ, ಸ್ವಲ್ಪ ದೂರದಲ್ಲಿಯೆ ಮತ್ತೊಂದಿದೆ ಎಂದು ತಿಳಿದು ಬಂದಿತು.

ಹಾಸ್ಯಗಾರರ ಎರಡನೇ ಮನೆಯಲ್ಲಿ ಅವರು ವರದಾ ಹಾಸ್ಯಗಾರ ಮತ್ತು ಅವನ ಮಗ ಪರಮ ವರದಾ ಹಾಸ್ಯಗಾರರನ್ನು ಭೆಟ್ಟಿಯಾದರು. ತಂದೆ-ಮಗನು ಇಂಗ್ಲೀಷ ಬಲ್ಲವರಾದ್ದರಿಂದ ಸಂಭಾಷಣೆಯು ಸುರಳೀತವಾಗಿ ನಡೆಯಿತು. ತಂದೆ ಶಿಕ್ಷಕನಾಗಿ ಸೇವೆಯಿಂದ ನಿವೃತ್ತನಾಗಿದ್ದನು. ಮಗನು ಬಿ. ಎ. ಪದವೀಧರನು. ವಂಶಪರಂಪರೆಯಿಂದ ಇವರು ಯಕ್ಷಗಾನ ವಿದ್ಯೆಯಲ್ಲಿ ಪರಿಣತರು. ಹೊಸ ಪೀಳಿಗೆಗೆ ಬಾಲ್ಯದಿಂದಲೇ ಯಕ್ಷಗಾನ ವಿದ್ಯೆ ಕಲಿಸಲು ತಂದೆ-ಮಗನು ಶಾಲೆ ಒಂದನ್ನು ನಡೆಸುತ್ತಿದ್ದರು. ಪರಮ ವರದಾ ಹಾಸ್ಯಗಾರನು ಸಂಶೋಧನ ಪ್ರವೃತ್ತಿಯ ಶಿಕ್ಷಕ. ಇವನು ಡಾ ಕೋ. ಶಿವರಾಮ ಕಾರಂತರ ಯಕ್ಷಗಾನ ಪುಸ್ತಕಕ್ಕೆ ಸಹಾಯಕ ಲೇಖಕನೂ ಆಗಿದ್ದನಂತೆ. ಭಾಗವತ ಮಂಡಳಿಯ ವಂಶಸ್ಥನಾದ ನಾರಾಯಣ ಕುರ್ಡಿ ಭಾಗವತರ ಸಂದರ್ಶನ ವನ್ನು ೧೯೭೪ ರಲ್ಲಿ ಪಡೆದು ಸಾಕಷ್ಟು ಮಾಹಿತಿ ಸಂಪಾದಿಸಿದ್ದನು. ಆದ್ದರಿಂದ ಪರಮ ವರದಾ ಹಾಸ್ಯಗಾರನು ಸುಖಠಣಕರರಿಗೆ ಭಾಗವತ ಮಂಡಳಿಯ ಬಗ್ಗೆ ಸ್ವತಃ ತಾನೇ ಮಾಹಿತಿ ಪೂರೈಸುವನೆಂದೂ ಇದರ ಸಲುವಾಗಿ ಅವರಿಗೆ ಮತ್ತೆಲ್ಲೂ ಹೋಗುವ ಆವಶ್ಯಕತೆ ಇಲ್ಲವೆಂದೂ ಭರವಸೆ ಕೊಟ್ಟನು. ಭಾಗವತ ಮಂಡಳಿಯ ಬಗ್ಗೆ ಚರ್ಚೆಯಾಗುವ ಮೊದಲೇ, ಡಾ. ಎಚ್. ಕೆ. ರಂಗನಾಥರ ಹೆಸರು ಬಂದ ಕಾರಣ, ಪರಮ ವರದಾ ಇವನು ಒಂದು ಮಹತ್ವದ ಗುಟ್ಟನ್ನು ಬಹಿರಂಗಪಡಿಸಿದನು. ಅದೇನೆಂದರೆ ಡಾ. ರಂಗನಾಥರು ತಮ್ಮ ಗ್ರಂಥದ ಟಿಪ್ಪಣಿಯಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆ– ಸಾಂಗ್ಲಿಯ ರಾಜಾಸಾಹೇಬರು ಭಾಗವತ ಮಂಡಳಿಗೆ ಕೊಟ್ಟ ಕೃಷ್ಣನ ಮೂರ್ತಿಯು ಈಗಲೂ ಕರ್ಕಿಯ ಹಾಸ್ಯಗಾರರ ಪರಿವಾರದವರ ಕಡೆಗೆ ಸುರಕ್ಷಿತವಾಗಿದೆ ಎಂದದ್ದು ಸರಿಯಲ್ಲ. ಅದು ವಸ್ತುಸ್ಥಿತಿಯಲ್ಲ. ಆ ಕೃಷ್ಣನ ಮೂರ್ತಿ ಈಗಲೂ ಭಾಗವತ ಮಂಡಳಿಯ ವಂಶಸ್ಥರಾದ ನಾರಾಯಣ ಕುರ್ಡಿ ಭಾಗವತರ ಮನೆಯಲ್ಲಿದೆ, ಎಂದು ತಿಳಿಸಿದನು.

ಭಾಗವತ ಮಂಡಳಿಯ ಹಿರಿಯರು ಹಾಗೂ ಹಾಸ್ಯಗಾರ ಕುಟುಂಬದ ಹಿರಿಯರು ಮೂರು-ನಾಲ್ಕು ಪೀಳಿಗೆಗಳಿಂದ ಸಮಕಾಲೀನರು. ಯಕ್ಷಗಾನದಲ್ಲಿ ಹಾಸ್ಯಗಾರರ ಪೂರ್ವಜರು ಬಹುತೇಕ ವಿದೂಷಕನ ಪಾತ್ರಗಳನ್ನು ನಿಭಾಯಿಸುತ್ತಿದ್ದರು. ಈ ಕಾರಣದಿಂದಲೇ ಈ ಪರಿವಾರಕ್ಕೆ ಹಾಸ್ಯಗಾರ ಎಂಬ ನಾಮಾಭಿಧೇಯವು ಸಿಕ್ಕಿರಬಹುದು.

ಆ ಮೇಲೆ ಭಾಗವತ ಮಂಡಳಿಯ ಬಗ್ಗೆ ಪರಮ ವರದಾ ಸಾಕಷ್ಟು ಮಾಹಿತಿ ನೀಡಿದನು. ಸುಖಠಣಕರರು ತಮ್ಮ ಪುಸ್ತಕದಲ್ಲಿ ಇದನ್ನು ವಿವರಿಸಿದ್ದಾರೆ. ಅವರು ಬರೆದ ವಿಷಯದ ಸಾರಾಂಶ ವೇನೆಂದರೆ, ಭಾಗವತ ಮಂಡಳಿಯು ೧೮೪೨ ರಲ್ಲಿ ಸಾಂಗ್ಲಿಗೆ ಹೋಗಿದ್ದು ಮೊದಲು ಬಾರಿ ಅಲ್ಲ. ಇದಕ್ಕೂ ಪೂರ್ವದಲ್ಲಿ ಈ ಮಂಡಳಿಯು ಬಡೋದೆ ಸಂಸ್ಥಾನಕ್ಕೆ ವರ್ಷಕ್ಕೊಮ್ಮೆ ಭೆಟ್ಟಿ ಕೊಟ್ಟು ಯಕ್ಷಗಾನದ ಪ್ರಯೋಗಗಳನ್ನು ಮಾಡುತ್ತಿತ್ತು. ಆಗ ಈ ಮಂಡಳಿಗಳು ಸಮುದ್ರ ಮಾರ್ಗದಿಂದ ಮುಂಬಯಿ, ಸೂರತನ್ನು ತಲುಪಿದ್ದವು. ಆಗಿನ ಕಾಲದಲ್ಲಿ ವ್ಯಾಪಾರಕ್ಕಾಗಿ ಹೊನ್ನಾವರವು ಒಂದು ಪ್ರಸಿದ್ಧ ಬಂದರವಾಗಿತ್ತು. ಮುಂಬಯಿಂದ ಸಾಂಗ್ಲಿಗೆ ಮುಟ್ಟುತ್ತಿದ್ದರು.

ಪರಮ ವರದಾ ಕೊಟ್ಟ ಮಾಹಿತಿಯ ಆಧಾರದ ಮೇಲೆ ಸುಖಠಣಕರರು ಭಾಗವತ ಮಂಡಳಿಯ ವಂಶವೃಕ್ಷವನ್ನು ಹೀಗೆ ಕೊಟ್ಟಿದ್ದಾರೆ– ೧. ಮಂಜಿ[ಜು]ನಾಥ ಭಾಗವತ (ಸು. ೧೭೧೨ ಇ.), ೨. ಕೃಷ್ಣಾ[ಷ್ಣ] ಭಾಗವತ (ಸು. ೧೭೪೨ ಇ.), ೩. ವ್ಯಂಕಾ[ವೆಂಕಟ] ರಮಣ ಭಾಗವತ (ಸು. ೧೭೮೨ ಇ.), ೪. ಎರಡನೇ ಮಂಜಿ[ಜು]ನಾಥ ಭಾಗವತ (ಸು.

೧೮೧೭ ಇ.). ೫. ಸುಬ್ರಾಯ ಭಾಗವತ (ಸು. ೧೮೫೨ ಇ.), ೬. ನಾರಾಯಣ ವೆಂಕಟೇಶ ಕುರ್ಡಿ ಭಾಗವತ (೧೮೮೭-೧೯೭೫ ಇ.). ನಾರಾಯಣರ ಸಾಕುತಾಯಿ ಕುರ್ಡಿ ಮನೆತನದವ ಳಾದ್ದರಿಂದ ಇವರು ಕುರ್ಡಿ ಭಾಗವತರೆಂದು ಬರೆಯತೊಡಗಿದರು. ಇವರು ೧೯೩೭ ರ ವರೆಗೆ ತಮ್ಮ ಕಂಪನಿ ನಡೆಸಿದರು. ಸಾಂಗ್ಲಿಗೆ ಹೋದ ಭಾಗವತ ಮಂಡಳಿಯ ಬಗ್ಗೆ, ಇಲ್ಲಿಯ ವರೆಗೆ ಇಷ್ಟೇ ಮಾಹಿತಿ ಲಭ್ಯವಿದ್ದದ್ದನ್ನು ಸುಖಠಣಕರರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಸುಮಾರು ನೂರು ವರ್ಷಗಳ ಪರಂಪರೆ ಇದ್ದ ಯಕ್ಷಗಾನದ ಪ್ರಯೋಗಗಳನ್ನು ಈ ಮಂಡಳಿಯು ಮಾಡುತ್ತಿತ್ತು. ಎಲ್ಲ ಪಾತ್ರಗಳು ಶಾಸ್ತ್ರೀಯ ಪರಂಪರೆಯಿಂದ ಈ ಯಕ್ಷಗಾನ ಬಡಗುತಿಟ್ಟು ಪ್ರಕಾರದಲ್ಲಿ ಪಳಗಿದವರಾಗಿದ್ದರು. ಆದ್ದರಿಂದ ಅದು ಒರಟು ಪ್ರಯೋಗವಾಗಿರಲು ಸಾಧ್ಯವಿಲ್ಲ.

ಯಕ್ಷಗಾನದ ನೃತ್ಯಕ್ಕೆ ಶಾಸ್ತ್ರೀಯ ಸಂಕೇತಗಳಿರುತ್ತವೆ. ನೃತ್ಯ ಮಾಡುವ ನಟರು, ಮತ್ತು ನೋಡುವ ಪ್ರೇಕ್ಷಕರು ಸಾಮಾನ್ಯವಾಗಿ ಈ ಸಂಕೇತಗಳನ್ನು ತಿಳಿದಿರುತ್ತಾರೆ. ಆದ್ದರಿಂದ ಈ ನೃತ್ಯಗಳಿಂದ ರಸಾಸ್ವಾದವನ್ನು ಸಹಜವಾಗಿ ಪಡೆಯುತ್ತಾರೆ. ಭಾವೆಯವರು ಈ ಶಾಸ್ತ್ರೀಯ ಸಂಕೇತ ಗಳಿಗೆ ಅಪರಿಚಿತರಾಗಿದ್ದರಿಂದ ಅವರು ಇವುಗಳಿಗೆ ಒರಟು ಮತ್ತು ಬೀಭತ್ಸ ಅಂದಿರಬಹುದು.

ಭಾಗವತ ಮಂಡಳಿಯ ಭಾಗವತನು ಮಹಾರಾಷ್ಟ್ರದಲ್ಲಿ ಯಾವ ಭಾಷೆಯಲ್ಲಿ ಹಾಡುಗಳನ್ನು ಹಾಡುತ್ತಿದ್ದನೆಂಬ ಬಗೆಗೆ ಎಲ್ಲಿಯೂ ಉಲ್ಲೇಖವಿಲ್ಲ. ಸುಖಠಣಕರರ ಮತ್ತು ಇವರ ಜೊತೆಗೆ ಬಂದ ಸಂಗಡಿಗನ ಮರಾಠೀ ಭಾಷೆ ಅಲ್ಲಿ ಯಾರಿಗೂ ತಿಳಿಯಲಿಲ್ಲ. ಮೊದಲನೇ ಹಾಸ್ಯಗಾರರ ಮನೆಯಲ್ಲಿ ತಾವು ಬಂದ ಅಭಿಪ್ರಾಯ ತಿಳಿಸುವದು ಈ ಇಬ್ಬರಿಗೂ ಕಷ್ಟಕರವಾಯಿತು. ವರದಾರ ಮನೆಯಲ್ಲೂ ಕನ್ನಡವೇ ಪ್ರಚಲಿತವಿದ್ದಿರಬೇಕು. ಮರಾಠೀ ಬಾರದಿದ್ದಕ್ಕೇ ತಂದೆ-ಮಗ ಇಂಗ್ಲೀಷಿ ನಲ್ಲಿ ಸಂವಾದ ನಡೆಸಿದರು. ಇದರ ಮಥಿತಾರ್ಥವೆಂದರೆ ಹೊನ್ನಾವರದ ಈ ಮಂಡಳಿಗಳು ಕನ್ನಡದಲ್ಲಿಯೇ ಹಾಡುತ್ತಿರಬೇಕು. ಮಹಾರಾಷ್ಟ್ರ ಅಥವಾ ಗುಜರಾತದಲ್ಲಿಯೂ ಭಾಗವತನು ಇದನ್ನೇ ಪಾಲಿಸುತ್ತಿರಬೇಕು. ಕಾರವಾರ ಜಿಲ್ಲೆಯು ಗಡಿಭಾಗದಲ್ಲಿರುವ ಕಾರಣ, ಆ ಜಿಲ್ಲೆಯಲ್ಲಿ ಕೊಂಕಣಿ ಮಾತನಾಡುವವರ ಸಂಖ್ಯೆ ಹೆಚ್ಚಿದ್ದರಿಂದ ಸುಖಠಣಕರರು ಭಾಗವತ ಮಂಡಳಿಯ ಹಾಡುಗಳು ಕೊಂಕಣಿಯಲ್ಲಿ ಇರಬಹುದೆಂದು ಊಹಿಸಿದ್ದಾರೆ. ಕೊಂಕಣದಲ್ಲಿ ದಶಾವತಾರದ ನಾಟಕಗಳು ರೂಢಿಯಲ್ಲಿದ್ದವು. ದಶಾವತಾರದ ಆಟಗಳ ಅಸ್ತಿತ್ವ ಕರ್ನಾಟಕದಲ್ಲಿಯೂ ಇತ್ತು.

ವಿಷ್ಣುಪಂತ ಭಾವೆಯವರ ತಂದೆಯವರು ಸಾಂಗ್ಲಿ ಸಂಸ್ಥಾನದ ಸೇನೆಯಲ್ಲಿ ಮಹತ್ವದ ಹುದ್ದೆಯಲ್ಲಿದ್ದರು. ಒಂದು ದಿನ ಬಾಲಕ ವಿಷ್ಣುಪಂತನು ಮನೆಯ ಕುದುರೆಯಾಳಿನ ಕೈಯಿಂದ ಕಡಲೆಕಾಯನ್ನು ತಿನ್ನುವುದನ್ನು ನೋಡಿ ಅವರ ಕ್ರೋಧವು ನೆತ್ತಿಗೇರಿತು. ಕೈಯಲ್ಲಿದ್ದ ಬಂದೂಕನ್ನೇ ಎತ್ತಿದರು. ಬಾಲಕನು ಭಯದಿಂದ ಅಲ್ಲಿಂದ ತಕ್ಷಣ ಎದ್ದು ಓಡತೊಡಗಿದನು. ಮನೆಯಲ್ಲಿದ್ದರೆ ಗಂಡಾಂತರವೆಂದು ತಿಳಿದು, ಜಮಖಂಡಿಯ ಹತ್ತಿರ ಸಾವಳಗಿಯಲ್ಲಿದ್ದ ಸೋದರಮಾವನ ಮನೆ ಮುಟ್ಟಿದನು. ಸಾವಳಗಿ ಗ್ರಾಮದಲ್ಲಿ ಮಾತನಾಡುವ ಭಾಷೆ ಕನ್ನಡವೆಂದು ಬೇರೆ ಹೇಳಬೇಕಾಗಿಲ್ಲ. ಸೋದರಮಾವನ ನಿರ್ದೇಶನದಲ್ಲಿ ವಿಷ್ಣುಪಂತನ ವಿದ್ಯಾಭ್ಯಾಸವು ನಡೆಯಿತು. ಹೀಗೆ ಕೆಲಕಾಲ ಸಾವಳಗಿಯಲ್ಲಿ ಕಾಲ ಕಳೆದ ಕಾರಣ, ಚುರುಕು ಬುದ್ಧಿಯ ಈ ಬಾಲಕನಿಗೆ ಕನ್ನಡ ಭಾಷೆಯ ಜ್ಞಾನವಾಗಿರಬೇಕು. ಅಂತಲೇ ಭಾಗವತನ ಹಾಡುಗಳನ್ನು ತಿಳಿಯುವದು ಕಷ್ಟಕರವಾಗಿರಲಿಕ್ಕಿಲ್ಲ. ಈ ಪ್ರಯೋಗಗಳು ದಶಾವತಾರದ ಆಟಗಳಾದ್ದರಿಂದ ಭಾವೆಯವರಿಗೆ ಈ ಕಥೆಗಳು ಪರಿಚಿತವಾದವುಗಳಾಗಿರಬಹುದು.

ಹೊನ್ನಾವರವಲ್ಲಿ ಯಕ್ಷಗಾನದ ಬಡಗುತಿಟ್ಟು ಪ್ರಕಾರವು ಪ್ರಚಾರದಲ್ಲಿದೆ. ಅದ್ದರಿಂದ ಸಾಂಗ್ಲಿಯಲ್ಲಿ ಪ್ರದರ್ಶಿಸಿದ ಈ ಆಟಗಳು ಬಡಗುತಿಟ್ಟಿನ ಶೈಲಿಯಲ್ಲಿ ಇದ್ದವು. ಈ ಪದ್ಧತಿಯಲ್ಲಿ ಭಾಗವತನಂತೂ ಹಾಡುತ್ತಿದ್ದನು. ಇದರ ಹೊರತಾಗಿ ಪಾತ್ರಗಳೂ ಹಾಡುತ್ತಿದ್ದವು. (ತೆಂಕು ತಿಟ್ಟಿನಲ್ಲಿ ಕೇವಲ ಭಾಗವತನೊಬ್ಬನೇ ಹಾಡುತ್ತಾನೆ; ಪಾತ್ರಗಳು ಹಾಡುವದಿಲ್ಲ, ಬರೀ ನೃತ್ಯ ಮಾಡುತ್ತವೆ.) ಈ ಪಾತ್ರಗಳಿಗೆ ಚೆನ್ನಾಗಿ ಹಾಡುವ ಅಭ್ಯಾಸವಿರುತ್ತಿತ್ತು. ಈ ವಿಷಯದ ಜ್ಞಾನವಿಲ್ಲದ ಕಾರಣ ವಿಷ್ಣುದಾಸರು ತಮ್ಮ ತೀಕ್ಷ್ಣ ಪ್ರತಿಕ್ರಿಯೆಯನ್ನು ವ್ಯಕ್ತಮಾಡಿದ್ದಾರೆ. (ಅಂದರೆ– ಹಾಡಲು ಬರಲಿ ಇಲ್ಲವೇ ಬರದಿರಲಿ ಪಾತ್ರಗಳು ಹಾಡುತ್ತಿದ್ದವು ಎಂದು.)

ಚಿಂತಾಮಣ ಅಪ್ಪಾಸಾಹೇಬ ಪಟವರ್ಧನರು ಕಲಾವಂತನಾದ ವಿಷ್ಣುಪಂತನಿಗೆ ಭಾಗವತ ಮಂಡಳಿಯ ಮಾದರಿಯ, ಆದರ್ಶದ ಮೇಲೆ ಮರಾಠೀ ನಾಟಕ ರಚಿಸಲು ಆದೇಶಿಸಿದ್ದು ನಿಜ. ನಾಟಕಕ್ಕೆ ಒಲವು ಮತ್ತು ಅನುಭವವಿದ್ದ ಜನರು ಸಿಗುವದು ಕಷ್ಟ. ನಾಟಕದಲ್ಲಿ ಕೆಲಸ ಮಾಡುವವರಿಗೆ ಸರಕಾರದಿಂದ ನೌಕರಿಗಳು ಸಿಗುವ ಆಮಿಷವನ್ನು ತೋರಿಸಿ ಕೆಲ ಪಾತ್ರಗಳನ್ನು ಒಗ್ಗೂಡಿಸಿದನು. ಇಂತಹ ಪಾತ್ರಗಳಿಗೆ ಪ್ರೌಢಾವಸ್ಥೆಯಲ್ಲಿದ್ದವರಿಗೆ ಹಾಡು ಕಲಿಸುವದು ಕಷ್ಟದ ಕೆಲಸ. ಆ ಪಾತ್ರಧಾರಿಗಳಲ್ಲಿ ಈ ಸಾಮರ್ಥ್ಯವೂ ಇರಲಿಲ್ಲ. ಆದರೆ ಭಾಗವತ ಮಂಡಳಿಗಳು ಹಾಡುತ್ತಿದ್ದವು. ಈ ಕಷ್ಟದಿಂದ ಪಾರಾಗಲು ವಿಷ್ಣುಪಂತನು ಒಂದು ಉಪಾಯವನ್ನು ಹುಡುಕಿದನು. ಎಲ್ಲ ಹಾಡುಗಳನ್ನು ಕೇವಲ ಸೂತ್ರಧಾರನ ಬಾಯಲ್ಲಿ ತುರುಕಿದನು. ಪಾತ್ರಗಳಿಗೆ ಹಾಡುವ ಪ್ರಶ್ನೆಯೇ ಇರಲಿಲ್ಲ. ಪಾತ್ರಗಳಿಗೆ ಕೇವಲ ನೃತ್ಯದ ಕಡೆಗೆ ಲಕ್ಷ್ಯ ಕೊಡಬೇಕಾಗುತ್ತಿತ್ತು. ಈ ಪಾತ್ರಗಳು ಸೂತ್ರಧಾರನು ಹಾಡಿದ ಅರ್ಥವನ್ನು ತಿಳಿದುಕೊಂಡು ಆವಶ್ಯಕವಿದ್ದಲ್ಲಿ ಗದ್ಯದಲ್ಲಿ ಬಾಯಿ ಬಿಚ್ಚುತ್ತಿದ್ದವು. ಇದಕ್ಕೆ ಭಾವೆಯವರು ಸುಧಾರಿತ ನಾಟಕಗಳೆಂದು ಕರೆದಿದ್ದಾರೆ.

೧೮೪೨ ರಿಂದ ೧೮೬೦ ರ ವರೆಗೆ ನಾಟಕವಾಡುವಾಗ ಅವರಿಗೆ ಕನ್ನಡ ಪ್ರಯೋಗಗಳ ಬಗ್ಗೆ ಅಪಾರ ಶ್ರದ್ಧೆ ಇತ್ತು. ಆದ್ದರಿಂದಲೇ ತಮ್ಮ ಆಟದ ಪ್ರಾರಂಭದಲ್ಲಿ ಕನ್ನಡ ನಾಟಕಗಳನ್ನು ಸ್ಮರಿಸುತ್ತಿದ್ದರು. ಆದರೆ ೧೮೮೫ ರಲ್ಲಿ ತಮ್ಮ 'ನಾಟ್ಯ ಕವಿತಾ ಸಂಗ್ರಹ'ದ ಪ್ರಸ್ತಾವನೆಯಲ್ಲಿ ಕನ್ನಡ ಪ್ರಯೋಗಗಳ ಬಗ್ಗೆ ಹೀಯಾಳಿಸಿ ಬರೆದಿದ್ದಾರೆ. ಮರಾಠಿಯ ಆದ್ಯ ನಾಟಕಕಾರರೆಂದು ಬಿರುದು ಧರಿಸಿದ ಕಾರಣ ಯಶಾಂಧರಾಗಿ ಹೀಗೆ ಹೇಳಿರಬಹುದು.

ರಾಜಾಸಾಹೇಬರು ರಸಜ್ಞರೆಂದು ಭಾವೆಯವರು ಹೇಳಿದ್ದಾರೆ. ಉತ್ತರ ಕನ್ನಡದ ನಾಟಕಗಳು ಒಂದು ವೇಳೆ ಒರಟು ಹಾಗೂ ಬೀಭತ್ಸವಾಗಿದ್ದರೆ ಅವರು ೨-೩ ನಾಟಕಗಳನ್ನು ಏಕೆ ಆಡಿಸುತ್ತಿದ್ದರು. ಅವರು ಮೂರು ರಾತ್ರಿ ಜಾಗರಣ ಮಾಡಿ ನಾಟಕ ನೋಡಿದ್ದಾರೆ. ಒಂದು ವೇಳೆ ಭಾಗವತರ ಪ್ರಯೋಗಗಳು ಒರಟಾಗಿದ್ದರೆ ಒಂದನೇ ನಾಟಕವಾಡಿದ ಮೇಲೆ ಹೋಗಲು ಅಪ್ಪಣೆ ಕೊಡುತ್ತಿದ್ದರು. ಇಷ್ಟೇ ಅಲ್ಲ, ಹೋಗುವ ಮುಂದೆ ಅವರ ಕಲೆಗೆ ಮೆಚ್ಚಿ ಕೃಷ್ಣನ ಮೂರ್ತಿಯನ್ನೂ ಕೊಟ್ಟಿದ್ದಾರೆ. ಚಿಂತಾಮಣ ಸಾಹೇಬರ ನಾಲ್ಕೈದು ವರ್ಷಗಳ ದಿನಚರಿಯಲ್ಲಿ ನಮೂದಿಸಿದ ಪ್ರಕಾರ ಆ ಮೇಲೆಯೂ ಬಂದಾಗೆಲ್ಲ ಭಾಗವತ ಮಂಡಳಿಯ ಪ್ರಯೋಗಗಳನ್ನು ಮಾಡಿಸುತ್ತಿದ್ದರು. ಇದರಿಂದ ಭಾಗವತ ಮಂಡಳಿಯ ನಾಟಕಗಳು ಕೆಟ್ಟದವಿದ್ದವೆಂದು ಅಭಿಪ್ರಾಯ ಪಡಲು ಏನೂ ಕಾರಣವಿಲ್ಲ. ೧೮೪೨ ರಲ್ಲಿ ನೋಡಿದ ನಾಟಕಗಳು ಒಳ್ಳೆಯವಿದ್ದವು. ಆದರೆ ೪೩ ವರ್ಷಗಳ ನಂತರ ಅವೇ ನಾಟಕ ಹೇಗೆ ಕೆಟ್ಟದವಾದವು! ಇದಕ್ಕೆ ಪ್ರಸಿದ್ಧಿಯ ಪಿಡುಗೇ ಕಾರಣವೆಂಬ ಉತ್ತರ ಸಹಜವಾಗಿ ಮೂಡಿಬರುತ್ತವೆ.

■ ಡಾ. ಚಂದೂಲಾಲ್ ದುಬೆ, ಎಮೆರಿಟಸ್ ಪ್ರೊಫೆಸರ್
ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ (ಕರ್ನಾಟಕ), ಧಾರವಾಡ-೫೮೦ ೦೦೧ ■

ಪುಸ್ತಕ ಪರಿಶೀಲನೆ

೧. *ಕುಲುಮೆಯೊಳಗಿನ ಚಿಲುಮೆ* : ಅನು. ಪ್ರೊ. ಸಿ. ನಾಗಣ್ಣ

ತುಘಾ ಪ್ರಕಾಶನ, ಜರಗನಹಳ್ಳಿ, ಜೆ.ಪಿ. ನಗರ, ಬೆಂಗಳೂರು-೫೬೦ ೦೭೮. ಪ್ರಮು. ೨೦೦೩, ಪು.೬೨, ರೂ.೬೦/-

ಜೀವಿಸುವ ಗಾಢ ಪ್ರೀತಿ ಮತ್ತು ಜೀವಿತದ ದಟ್ಟ ನೋವು ಎರಡನ್ನೂ ಎಚ್ಚರವಾಗಿಟ್ಟುಕೊಂಡೇ ಸ್ಪಂದಿಸಬೇಕಾದ ಈ ಕವಿತೆಗಳು ಆಫ್ರಿಕದ ಕವಿಬಾಂಧವರಿಂದ ಆಮದು ಮಾಡಿಕೊಂಡ ಅನುವಾದಗಳು. ಸಾಮುದಾಯಿಕ ಕಾಳಜಿಗಳ, ಚಿಂತನೆಗಳ, ಬದಲಾವಣೆಯ ತಹತಹಗಳ ಆಯಾಮಗಳು ಇನ್ನಷ್ಟು ವಿಸ್ತೀರ್ಣಗೊಳ್ಳಲು ಇಂಥ ಬರಹಗಳು ಅವಶ್ಯಕ. ಬೆಳಕು ಎಲ್ಲಿಂದ ಬಂದರೂ ಸ್ವಾಗತಾರ್ಹ. ಈ ಹಿನ್ನೆಲೆಯಲ್ಲಿ, `ಕುಲುಮೆಯೊಳಗಿನ ಚಿಲುಮೆ`ಯಂಥ ಅನುವಾದಗಳು ನಮ್ಮ ಕಾವ್ಯಕ್ಕೆ ಹೊಸ ಕಸಿಗಳು.

``ನನ್ನ ಅಂತರಾತ್ಮದ ಉತ್ಕಟ ಬಯಕೆ ಒಂದೆ / ಸಮಾಧಿ ಮಾಡಿ ನನ್ನ ಗುಲಾಮರಿರದ ನಾಡಿನಲ್ಲಿ'' ಎಂಬುದು ಒಂದು ಅಂತಿಮ ಅಪೇಕ್ಷೆ ಮಾತ್ರವಲ್ಲ, ತನ್ನನ್ನು ಸಮಾಧಿ ಮಾಡುವವರ ಈ ಜಗ, ಎಂತಹದೇ ರೀತಿಯ ಗುಲಾಮಗಿರಿಯ ಅಡಿಯಲ್ಲಿರದಿರಲಿ ಎಂಬ ಅಪೇಕ್ಷೆಯ ಸೂಚನೆಯೂ ಆಗಿದೆ.

ಇದು ಏಕೆ ಹೀಗನ್ನಿಸುವದೆಂದರೆ, ಎಲ್ಲದಕ್ಕೂ ಇಲ್ಲಿ `ಕಾಲ` ಒಂದು ಮಿತಿಯನ್ನು ಹಾಕಿದೆ. ``ಕಾಲ ಶಾಮೀಲಾಗಿದೆ ವ್ಯರ್ಥದೊಂದಿಗೆ / ಕಾಲವೆಂದರೆ ನಷ್ಟದ ನೆಂಟ / ತುಂಬಿ ಹೊರಚೆಲ್ಲುವ ಪರಿಪಾಠ / ಕಾಲ ತಿರುಗಿಸುತ್ತದೆ ಗಿರಿಗಿಟ್ಲೆ.'' ಈ ಗಿರಿಗಿಟ್ಲೆಯ `ಮಿತಿ`ಯನ್ನೂ ನಾವು ಮೀರಬೇಕಾಗಿದೆ. ಎಂದರೆ, ಕಾಲವನ್ನು, ಅದರ ಪರಿಪಾಠವನ್ನು. ಇದೇ ಇಲ್ಲಿಯ ತುಡಿತ; ಇದೇ ಇಲ್ಲಿಯ ಚಿಲುಮೆ; ಕುಲುಮೆಯೊಳಗಿನ ಚಿಲುಮೆ.

``ಸತ್ತ ಶವಕ್ಕಿರುವದೆ ಎರಡು ಬಾರಿಯ ಶಿಕ್ಷೆ: / ಅವನ್ನು ಮುಚ್ಚಲು ಬಟ್ಟೆ ಇಲ್ಲವಿದ್ದರೆ / ಅವನ್ನು ಮುಚ್ಚಲು ಮಣ್ಣಿರುವುದಲ್ಲಾ'' ಎಂಬ ದಾರುಣತೆಯ ಮಧ್ಯದಲ್ಲೂ ನಾವು ಕನಸು ಕಾಣಬೇಕಾಗಿದೆ :

``ಕಾಗದದ ಆಕಾಶದ ಮೇಲೆ / ಕಾಮನ ಬಿಲ್ಲು ಬರೆಯೋಣ / ನಮ್ಮ ಮಗ ಆಡಿಕೊಳ್ಳುವದಕ್ಕೆ'' ಎಂದು ಅಂದುಕೊಳ್ಳಲೇಬೇಕಾಗಿದೆ. ಏಕೆಂದರೆ: ``ಅವರ ಸುಖದ ಹಗಲು ಬೆಳಕನ್ನವರಿಗೆ ಮರಳಿ `ಕೊಡಲು`, ಅವರ ನೆತ್ತಿಯ ಮೇಲೆ ಮತ್ತೊಮ್ಮೆ (ನೀಲಿಯಾಕಾಶ) ಹರಡಿ'' ಬಿಡಲು ಇದು ಅವಶ್ಯಕ. ಇಲ್ಲಿ ಬರುವ ಎರಡು ಮುಖ್ಯ ಸಾಲುಗಳು :

``ಕಪ್ಪು ಸೋದರನ ಕಣ್ಣಲ್ಲಿ ಉರಿದ ಜ್ವಾಲೆಯ ಬಲ/ಗೊತ್ತು ಮತ್ತೊಬ್ಬ ಕಪ್ಪು ಸೋದರನಿಗೆ ಮಾತ್ರ.''

ಕಪ್ಪು ಸೋದರನ ಮತ್ತು ಅವನಂಥವರ ಅಂಥ ಕಣ್ಣುರಿ ಜ್ವಾಲೆಯ ಝಳದೊಂದಿಗೆ ಅವರ ತಾಪವೂ ತಳಮಳವೂ ಅಷ್ಟಿಷ್ಟು, ಕೆಲವಾದರೂ ಓದುಗರಿಗೆ ತಲುಪಿದರೆ ಸಿ. ನಾಗಣ್ಣವರ ಶ್ರಮ ಸಾರ್ಥಕ.

– ದೇಶಪಾಂಡೆ ಸುಬ್ಬರಾಯ, 'ನೆಲೆ', ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೫೮೦ ೦೦೮

೨. *ಅರಹಂತ* : ಎಸ್. ರಾಮನಾಥ

ಅಭಿನವ ಪ್ರಕಾಶನ, ೫೮, ಮಹಡಿ, ೫ ನೇಯ ಎ ಕ್ರಾಸ್, ಸುಬ್ಬಣ್ಣ ಗಾರ್ಡನ್, ವಿಜಯನಗರ ಬೆಂಗಳೂರು-೫೬೦ ೦೪೦.
ಪ್ರ.ಮು. ೨೦೦೨, ಪು. ೮೮, ರೂ. ೭೫/-

೨೦೦೧-೦೨ ಮಹಾವೀರರ ೨೬೦೦ ನೇ ವರ್ಧಂತಿ ವರ್ಷ. ಸರಕಾರದ ಸೂಚನೆಯಂತೆ: ರಂಗಾಯಣದ ಪ್ರಸನ್ನ ಅಲ್ಲಿಯ ಕಲಾವಿದ, ನಾಟಕಕಾರ ಎಸ್. ರಾಮನಾಥರಿಗೆ ಜೈನ ಧರ್ಮ ಹಾಗೂ ಮಹಾವೀರರ ವಿಚಾರ ಮತ್ತು ಉಪದೇಶ ಬಿಂಬಿಸುವ ನಾಟಕ ಬರೆಯಲು ಕೇಳಿಕೊಂಡರು, ಅಭಿನಯಿಸುವ ಉದ್ದೇಶದಿಂದ. `ಅರಹಂತ` ನಾಟಕ ಹುಟ್ಟಿದ್ದು ಹೀಗೆ. `ಹಿಂಸೆ-ಪ್ರತಿಹಿಂಸೆ, ಅಹಿಂಸೆಯ ಚಿತ್ರಣವನ್ನು ಕೊಡುವ ಒಂದು ಪ್ರಯತ್ನ` ಎಂದು ನಾಟಕದ ಬಗೆಗೆ ರಾಮನಾಥ ಹೇಳುತ್ತಾರೆ. ಮಗಧ ಚಕ್ರವರ್ತಿ

ಅಶೋಕ, ಕಳಿಂಗ ಯುದ್ಧ ಹಾಗೂ ಆ ಯುದ್ಧದ ನಂತರ ಮನಃಪರಿವರ್ತನೆ ಹೊಂದಿ ಹಿಂಸೆ ತ್ಯಜಿಸಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದು– ಇವೆಲ್ಲ ಎಲ್ಲರಿಗೆ ತಿಳಿದಿರುವ ಐತಿಹಾಸಿಕ ವಿಷಯಗಳು. ಆದರೆ ಇದಾದ ಕೆಲವು ದಶಕಗಳ ನಂತರ ಕಳಿಂಗದ ಪಟ್ಟಕ್ಕೆ ಬಂದ ಯುವಕ ಖಾರವೇಲ– ಕಳಿಂಗರಾಜರು ಜೈನ ಧರ್ಮೀಯರು– ಮಗಧದ ಮೇಲೆ ದಾಳಿ ಮಾಡಿ ಗೆದ್ದು ಸಮ್ರಾಟನಾಗಿ ಮೆರೆದ ಐತಿಹಾಸಿಕ ಸಂಗತಿ ಬಹಳಷ್ಟು ಜನರಿಗೆ ತಿಳಿಯದ ವಿಷಯ. ಅಶೋಕ ಕಳಿಂಗದ ಮೇಲೆ ಗೈದ ಹಿಂಸೆಗೆ, ಖಾರವೇಲನ ಪ್ರತಿಹಿಂಸೆ. ಮಹಾವೀರರ 'ಅಹಿಂಸೆ'ಗೆ ಏನಾಗುತ್ತದೆ? ಖಾರವೇಲ ಕುತೂಹಲ ಕೆರಳಿಸುವ ಸಂಕೀರ್ಣ ವ್ಯಕ್ತಿಯಾಗಿರಲು ಸಾಕು. ಹೀಗೆ ಅಭ್ಯಾಸಕ್ಕೆ ತೊಡಗಿದ ರಾಮನಾಥರಿಗೆ ಐತಿಹಾಸಿಕ ವಿವರಗಳು ಸಿಕ್ಕದ್ದು ಅಷ್ಟಕ್ಕಷ್ಟೆ. ಆದರೆ ಜೈನಧರ್ಮದ ತತ್ವಗಳ ಹಿನ್ನೆಲೆಯಲ್ಲಿ ಈ ಖಾರವೇಲನ ವ್ಯಕ್ತಿತ್ವವನ್ನು, ಸಂಕೀರ್ಣತೆಯನ್ನು ನಾಟಕವಾಗಿಸುವ ಹಂಬಲ ರಾಮನಾಥರ ಕಲ್ಪನೆಯನ್ನು ಕೆದರಿ ಅವತರಿಸತೊಡಗಿತು. ರಂಗಭೂಮಿಯ ಅನುಭವ, ಸಾಧ್ಯತೆಗಳ ತೆರೆದುಕೊಳ್ಳುವಿಕೆಗೆ ಬೇಕಾದ ವೈಚಾರಿಕತೆಯ ಹದ ಇವುಗಳಿಂದ ನಾಟಕ ದಷ್ಟಪುಷ್ಟವಾಯಿತು.

ಅಶೋಕ ಕಳಿಂಗ ನಾಶ ಮಾಡಿದಾಗ ಖಾರವೇಲನ ತಂದೆ ಬುದ್ಧರಾಜರಿಗೆ ಹತ್ತು ವರ್ಷ ವಯಸ್ಸು. ತನ್ನ ಆಳ್ವಿಕೆಯುದ್ದಕ್ಕೂ ಬುದ್ಧರಾಜ ಕಳಿಂಗವನ್ನು ಪುನಃಶ್ಚೇತನಗೊಳಿಸುವ ಕಾರ್ಯ ಮಾಡಿದ್ದಾರೆ. ಇಂದು ಕಳಿಂಗ ನಳನಳಿಸುವ ಹಸಿರಿನ, ಶಾಂತಿ-ಸಮೃದ್ಧಿ ಹಾಗೂ ಸಮಾಧಾನದ ನಾಡು. ಹೆಚ್ಚೂ ಕಡಿಮೆ ಬುದ್ಧರಾಜರ ವಯಸ್ಸಿನವನೇ ಆದ ಅವರ ಅಮಾತ್ಯ ವಿವೇಕ ಚೂಡಾಮಣಿ– ಇವನು ವೈದಿಕ ಧರ್ಮದನುಯಾಯಿ– ಆ ಯುದ್ಧದಲ್ಲಿ ತನ್ನವರೆನ್ನುವವರೆಲ್ಲರನ್ನೂ ಕಳೆದುಕೊಂಡವ. ಪ್ರತಿಹಿಂಸೆಯ ಜ್ವಾಲೆಯನ್ನು ಎದೆಯಲ್ಲಿ ಉರಿಸಿಕೊಳ್ಳುತ್ತಿರುವವ. ಖಾರವೇಲ ಹುಚ್ಚು ಕುದುರೆ, ಹುಂಬ; ಅಪ್ಪ ಹೇಳುತ್ತಿದ್ದ ಬಾಹುಬಲಿಯ ಕತೆಯ ಮೊದಲರ್ಧ ಮಾತ್ರ ಎಚ್ಚರಿದ್ದು ಕೇಳಿದವ, ಪ್ರತಿದಿನ ಮಲಗುವ ಮುನ್ನ ಗರಡೀಮನೆಯಲ್ಲಿ ತಾಲೀಮು ಮಾಡಿದ್ದಾನೆ. ಇವನನ್ನು ಚೂಡಾಮಣಿ ವೇಷ ಮರೆಸಿ ಮಗಧಕ್ಕೆ ಕಳಿಸಿ, ಸೈನಿಕ ತರಬೇತು ಕೊಡಿಸಿದ್ದಾನೆ ಐದು ವರ್ಷಗಳ ಕಾಲ. ಇವನು ತಿರುಗಿ ಬಂದು ಎರಡು ತಿಂಗಳು ಕಳೆಯುವಷ್ಟರಲ್ಲಿಯೇ, ಒಂದು ದಿನ ಮುಂಜಾನೆ ಬುದ್ಧರಾಜರು ಅರಮನೆಯಿಂದ ಹೊರನಡೆದು ಬಿಡುತ್ತಾರೆ; ಎಲ್ಲಿಗೆ ಹೋಗುತ್ತೇನೆಂಬ ಸುಳಿವು ಕೊಡದೆ, ತನ್ನನ್ನು ಹುಡುಕುವ ಪ್ರಯತ್ನ ಮಾಡಬಾರದೆಂದು ಬರೆದಿಟ್ಟು ಹೋಗಿದ್ದಾರೆ.

ನಾಟಕ ಇಲ್ಲಿಂದ ಆರಂಭವಾಗುತ್ತದೆ. ಖಾರವೇಲನಿಗೆ ಪಟ್ಟಾಭಿಷೇಕವಾಗುತ್ತದೆ. ಖಾರವೇಲ ಮಗಧ ಸಮ್ರಾಟರ ಆಳ್ವಿಕೆಯ ಕುರುಹಾದ ಧ್ವಜವನ್ನು ಹರಿದು ಹಾಕಿ ತಾವಿನ್ನು ಮಗಧರ ಸಾಮಂತರಲ್ಲವೆಂದು ಘೋಷಿಸುತ್ತಾನೆ. ಆಗ ಅಲ್ಲಿ ನೆರೆದಿದ್ದ ಸಹಸ್ರಾರು ಕಳಿಂಗದ ಸೈನಿಕರ ಕೇಕೆ, ಉತ್ಸಾಹ ನೋಡಿದರೆ, ಅವರು ಯುದ್ಧಕ್ಕೆ ಕಾತರರಾಗಿದ್ದುದು ಸ್ಪಷ್ಟವಾಗುತ್ತದೆ. ಅಹಿಂಸೆಯೇ ಧರ್ಮವಾಗಿರುವ ಜೈನ ರಾಜ್ಯದ ಪ್ರಜೆಗಳಲ್ಲೂ ಉಕ್ಕುವ ಸ್ವಾಭಿಮಾನ, ತಮ್ಮ ಧರ್ಮದ ಪ್ರತಿಷ್ಠೆಗಾಗಿ ಹಿಂಸೆ ಕೂಡ ತ್ಯಾಜ್ಯವೇನಲ್ಲ ಎಂಬ ಸೂಚನೆ ಕೊಡುವ ಈ ಘಟನೆ 'ಅಹಿಂಸೆ ಅಸಹಜವೇನೋ?' ಎಂಬ ಅನುಮಾನಕ್ಕೆ ಕಾರಣವಾಗುತ್ತದೆ. ಖಾರವೇಲನ ಅನಿಶ್ಚಿತ ಮನೋಭೂಮಿಕೆ ಯುದ್ಧವನ್ನು ಅನಿವಾರ್ಯವಾಗಿಸುತ್ತದೆ.

ಮಗಧ ಮತ್ತು ಕಳಿಂಗದ ಸಂಬಂಧಗಳಲ್ಲಿ ಇನ್ನೊಂದು ಸೂಕ್ಷ್ಮ ವಿಷಯ ಭಾವನಾತ್ಮಕ ತೊಡಕು ಸಮಸ್ಯೆಯಾಗಿದೆ. ಅಶೋಕನ ಪೂರ್ವಜರು ಚಂದ್ರಗುಪ್ತ, ಬಿಂಬಸಾರ ಜೈನ ಮತಾನುಯಾಯಿಗಳಾಗಿದ್ದಾಗ, ಕಳಿಂಗದ ಅಂದಿನ ಅರಸು ಜೈನರ ಪ್ರಥಮ ತೀರ್ಥಂಕರ ವೃಷಭದೇವರ ಬೃಹತ್ ವಿಗ್ರಹವೊಂದನ್ನು ಅವರಿಗೆ ಕೊಟ್ಟಿರುತ್ತಾನೆ. ಮಗಧ ನಂತರ ವೈದಿಕ ಧರ್ಮದ ದಾರಿ ಹಿಡಿದು, ಅಶೋಕ ಅದನ್ನೂ ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದ್ದಾನೆ. ಈ ವಿಗ್ರಹ 'ಕಳಿಂಗದ ಮನೆದೇವರು– "ಬಿಸಿಲು, ಮಳೆ, ಗಾಳಿಗೆ ಬಯಲಲ್ಲಿ ಮೈಯೊಡ್ಡಿ ನಿಂತಿರುವ ಮನೆದೇವರು, ಯಾವವೇ ಧಾರ್ಮಿಕ ಪೂಜಾವಿಧಿಗಳೂ ಒದಗದೆ" ಮಗಧ ರಾಜರರಮನೆಯೆದುರು ಬಯಲಲ್ಲಿ ನಿಂತಿದೆ. ಈ ವಿಗ್ರಹ, ಇದರೊಂದಿಗೆ

ಬೆಸೆದುಕೊಂಡ ಭಾವನೆಗಳು, `ವಿಗ್ರಹ ಮನೆಗೆ ಮರಳಿ ಬರಬೇಕೆಂಬ`– ಪ್ರತಿಯೊಬ್ಬರ ನಿರ್ವಿವಾದವಾದ ನಿಲುವು, ಆ ಮೂಲಕ ಸ್ಫುಟಗೊಳ್ಳುವ, ಸ್ಫೋಟಗೊಳ್ಳುವ ಪಾತ್ರಗಳು– ಇಲ್ಲೆಲ್ಲ ರಾಮದಾಸರ ಕಾಳಜಿಯಿಂದ ಕೂಡಿದ ಪ್ರತಿಭೆ ಸಹಜವೇನೋ ಎಂಬಂತೆ ಕೆಲಸ ಮಾಡುತ್ತದೆ. ಕಳೆದ ಮೂರು-ನಾಲ್ಕು ತಲೆಮಾರುಗಳಿಂದ ಕಳಿಂಗದ ಪಟ್ಟಕ್ಕೆ ಬಂದ ಪ್ರತಿಯೊಬ್ಬ ರಾಜನಿಗೂ ಈ ವಿಗ್ರಹವನ್ನು ಮರಳಿ ಕಳಿಂಗಕ್ಕೆ ಕರೆತರುವ ಆಗ್ರಹ ಮಾಡುವ ಕನಸೊಂದನ್ನು ರಾಮದಾಸ ನಾಟಕದಲ್ಲಿ ಹೆಣೆದಿದ್ದಾರೆ. ಈ ಕನಸು ಈಗ ಖಾರವೇಲನನ್ನು ಹೊಕ್ಕಿದೆ. ಈ ಕನಸು high point of creativity of a man deeply involved in the work of art and also in the issues he raises as relevent and important in today's contest also.

ಕೆಲವೊಂದೆಡೆ ಚಿತ್ರಣ ಎಷ್ಟು ಬೇಕೋ ಅಷ್ಟು ಸಶಕ್ತವಾಗಿಲ್ಲ. contrived ಅನ್ನಿಸುವಂತಹ ಎಳೆಗಳು, ಸನ್ನಿವೇಶಗಳೂ ಇವೆ. ಆದರೆ ಒಂದು ಮಾತು ಮಾತ್ರ ಸತ್ಯ: ನಾಟಕ ನೋಡಿದ ಮೇಲೆ ಅದನ್ನು ಓದಬೇಕೆನ್ನಿಸುವಂಥ, ಓದಿದ ಮೇಲೆ ನೋಡಬೇಕೆನ್ನಿಸುವಂಥ ಕೃತಿ `ಅರಹಂತ`.

– ಪ್ರೊ. ದುಷ್ಯಂತ ನಾಡಗೌಡ, ‘ವೆಂಕಟಾದ್ರಿ’, # ೧೨೪, ೨ನೇ ಮೇನ್, ಗಾಂಧೀನಗರ, ಧಾರವಾಡ-೪

೩. *ಮಗು ಮಲಗಿದೆ ಎದೆಯ ಮೇಲೆ* : ಎಂ. ಡಿ. ಒಕ್ಕುಂದ

ಲೋಹಿಯಾ ಪ್ರಕಾಶನ, ಕ್ಷಿತಿಜ, ಕಪ್ಪಗಲ್ಲು ರಸ್ತೆ, ಗಾಂಧೀನಗರ, ಬಳ್ಳಾರಿ, ಪ್ರ.ಮು. ೨೦೦೪, ಪು. ೭೬, ರೂ. ೩೫/-

`ರೆಕ್ಕೆಗರಿಗಳ ಬಿಚ್ಚಿ`(೧೯೯೯), `ತುಳುಕು`(೨೦೦೨) ಎರಡು ಕವನ ಸಂಗ್ರಹಗಳನ್ನು ಈಗಾಗಲೇ ಪ್ರಕಟಿಸಿದ ಎಂ. ಡಿ. ಒಕ್ಕುಂದ ಅವರು ಇದೀಗ `ಮಗು ಮಲಗಿದೆ ಎದೆಯ ಮೇಲೆ` ಪ್ರಕಟಿಸಿದ್ದಾರೆ. ಜನಪರ ಮತ್ತು ಜೀವಪರ ಧೋರಣೆಯನ್ನು ಹೊಂದಿದ ಒಕ್ಕುಂದ ಅವರು, ತಮ್ಮ ಆರಂಭದ ಕವಿತೆಗಳಿಂದಲೂ ಈ ಮೂಲಕವಾಗಿಯೇ ಹೆಚ್ಚು ಪರಿಚಿತರು.

‘ಮಾನವೀಯತೆಯ/ಮಾರಣಹೋಮದೆದುರು/ಎಲ್ಲ ಇಂದ್ರಿಯಗಳೂ ಸ್ತಬ್ಧವಾಗಿ/

ಜೀವ ಊಳಿಡುತ್ತಿದೆ/ಅಭಿವ್ಯಕ್ತಿಯ ಎಲ್ಲ ಬಾಗಿಲುಗಳೂ ಮುಚ್ಚಿ/ಕಣ್ಣು ಒರತೆ ಒಸರುತ್ತಿದೆ’ (ಒಂದು ನೋವು) ಎಲ್ಲ ಇಂದ್ರಿಯಗಳೂ ಸ್ತಬ್ಧವಾಗಿ ಜೀವ ಊಳಿಡುವ ಪ್ರಸಂಗ– ಮಾನವೀಯತೆಯ ಮಾರಣಹೋಮದೆದುರು. ಅಭಿವ್ಯಕ್ತಿಯ ಎಲ್ಲ ಸಂವೇದನಾಶೀಲ ತಂತುಗಳು ಅತ್ಯಂತ ನಿಸ್ಸಹಾಯಕ ಸ್ಥಿತಿ ತಲುಪಿರುವ ಗಾಢ ಪರಿಣಾಮವನ್ನೇ ನೀಡಿದೆ.

ಯುದ್ಧ ಮತ್ತು ಗಡಿಗಳನ್ನು ಕುರಿತು ೧೬ ಕಿರು ಕವಿತೆಗಳು ಇಲ್ಲಿ ಭಯ/ಆತಂಕದ ವೈವಿಧ್ಯಮಯ ಮುಖಗಳನ್ನು ವಿಶ್ಲೇಷಿಸುತ್ತವೆ. ಮನುಕುಲವನ್ನು ಪ್ರಮಾಣಿಸಿ ಅದೇ ಕಾಲಕ್ಕೆ ಅಲುಗಾಡಿಸಿ ನೋಡುವಂಥದ್ದು ಕೂಡ : ‘ಹಕ್ಕಿಗಳಿಗೆ ಗಡಿಗಳಿರುವುದಿಲ್ಲ/ಆಹಾರ ನೀರು ಗಾಳಿ ಹಾಗೂ ಪ್ರೀತಿ ಹುಡುಕಿಕೊಂಡು/ಯಾವ ದೇಶಕ್ಕಾದರೂ ಹಾರಿ ಹೋಗುತ್ತವೆ` (ಯುದ್ಧ-೨),

‘ಗಡಿಗಳಿರುವಲ್ಲಿ ಬುದ್ಧನಿಲ್ಲ/ಬುದ್ಧನಿರುವಲ್ಲಿ ಯುದ್ಧವಿಲ್ಲ’ (ಯುದ್ಧ-೩);

‘ಇಲ್ಲಿಯವರೆಗೆ ಹೋರಾಡಿ ಸತ್ತ/ಅಸಂಖ್ಯ ಸೈನಿಕರ ಹೆಸರೂ ನೆನಪಿಲ್ಲ/ಆಳಿದ ರಾಜರ ಇತಿಹಾಸ ಮಾತ್ರ/ಹಚ್ಚ ಹಸಿರಾಗಿದೆ.’ (ಯುದ್ಧ-೯);

‘ಬೆಳಗು ಮುಂಜಾನೆಯ ಕನಸಲ್ಲೂ ಕೂಡ/ಹಕ್ಕಿ ಹಾಡುತ್ತಿಲ್ಲ ಮಗು ಅಳುತ್ತಿಲ್ಲ/ಅಂತೂ ಬರುತ್ತಾನೆ ಸೂರ್ಯನೆಂಬ ಕುಷ್ಠರೋಗಿ’ (ಯುದ್ಧ-೧೨)

`ಕಾಲ` ಕುರಿತ ಚಿಂತನೆ ಕಾವ್ಯಮಾಧ್ಯಮದಲ್ಲಿ ಪರಂಪರಾಗತವಾಗಿ ಆಧುನಿಕ ಸನ್ನಿವೇಶದಲ್ಲಿಯೂ ವಿಶೇಷವಾಗಿ ಜರುಗಿರುವಂಥದ್ದು. ಈ ಅಮೂರ್ತ ಪರಿಕಲ್ಪನೆ `ನವ್ಯ`ರಲ್ಲಿ ತೀರ ಕ್ಷೀಣವಾಗಿ, ವ್ಯಂಗ್ಯವಾಗಿ ಅಭಿವ್ಯಕ್ತಿ ಫಲಿಸಿದ್ದು ಇದೆ. ಮತ್ತೆ ಇಂಥ ಅಭಿವ್ಯಕ್ತಿ ಸನ್ನಿವೇಶಗಳು ಬಹಳ ಅರ್ಥಪೂರ್ಣ, ಹೊಸರೂಪ ವಿನ್ಯಾಸವನ್ನು ನಿಲ್ಲಿಸಿದಾಗ ಮಾತ್ರ ಜೀವೋತ್ಕರ್ಷವನ್ನು ಹೆಚ್ಚಿಸಬಹುದು. ಒಕ್ಕುಂದ ಅವರು ಕಾಲ

ಮತ್ತು ಮನುಷ್ಯಸಂಬಂಧೀ ಸ್ವಭಾವವನ್ನು ೯ ತುಂಡು ಪದ್ಯಗಳಲ್ಲಿ ವ್ಯಕ್ತಗೊಳಿಸಿದ್ದಾರೆ. ಇಂಥ ಕವಿತೆಗಳಲ್ಲಿ ಚೇತೋಹಾರಿ ಲಕ್ಷಣಗಳನ್ನು ಕಂಡುಕೊಂಡರೂ 'ಕಾಲ' ಕುರಿತ ಗಂಭೀರ ರಚನೆಗಳ ತಿಳಿವುಗಳು ಇನ್ನೂ ಹಸಿಹಸಿಯಾಗಿರುವಾಗಲೇ ಒಕ್ಕುಂದ ಅವರ ಈ ಬಗೆಯ ರಚನೆಗಳು ಗಮನ ಸೆಳೆಯುವುದಿಲ್ಲ. ಆದರೆ ಅವುಗಳಲ್ಲಿ ಸಿಡಿದು ಬರುವ 'ಲವಲವಿಕೆ' ಮೆಚ್ಚುವಂಥದ್ದು :

'ಕಾಲನ ದಂಡೆಗಳ ಗುಂಟ/'ಲಯ'ಬದ್ಧವಾಗಿ/ಹರಿದು ಹೋಗುವ ನದಿ/
ಕವಿತೆಯೊಂದು ಕಳೆದುಹೋದಂತೆ/ಹಾಡೊಂದು ಮರೆತು ಹೋದಂತೆ/ಕಾಡೊಂದು ಖಾಲಿಯಾದಂತೆ/
ನಾಡೊಂದು ನಡೆದು ಹೋದಂತೆ'. (ಕಾಲ-೧)

ಹಿಂಸೆಯ ಪರಮಾವಧಿಯನ್ನು ಮತ್ತು ಅದನ್ನು ದಾಟಿಕೊಳ್ಳಲು ಪ್ರಯತ್ನಿಸುವ ಹಾದಿಯಲ್ಲಿ ಹತಾಶ ಭಾವಗಳು ಮನುಷ್ಯನ ಎದೆಯನ್ನು ನಡುಗಿಸಿದರೂ ಕವಿ ಮತ್ತೆಮತ್ತೆ ಮಾನವತೆಯ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಲು ಯತ್ನಿಸಿರುವುದು ಇತ್ಯಾದಿ– ಗುಜರಾತಿನ ೭ ತುಂಡು ಪದ್ಯಗಳಲ್ಲಿ ಅನುಭವಿಸುತ್ತೇವೆ. ಗುಜರಾತಿನ ಹಿಂಸಾಬಾಗಿಲು ತೆರೆದುಕೊಳ್ಳುವುದು ಹೀಗೆ–

'ಬೇಕಾಗಿವೆ;/ಕೊಯ್ಯಲು ಮೊಲೆ/ಅತ್ಯಾಚಾರಕ್ಕೆ ಯೋನಿ/ಹರಿಯಲು ಬಸಿರು/ಸುಡಲು
ಹಿಂಡದುಸಿರು/ಕತ್ತರಿಸಲು ಕೈಕಾಲು ರುಂಡ/ಕೈ ತೊಳೆಯಲು ರಕ್ತ/ಹೆಣದ ರಾಶಿಗಳನ್ನು/ನೆತ್ತರ
ಒರತೆಗಳನ್ನು/ಒಕ್ಕಬೇಕಾಗಿದೆ' (ಗುಜರಾತ್-೩)

ಸಂಕಲನದ ಮುಖ್ಯ ಕವಿತೆಯಾದ, ಮತ್ತು 'ಹಿಂಸೆ'ಯ ಸ್ವರೂಪವನ್ನು ಪರಿಣಾಮಕಾರೀ ರೂಪಕದ ಮೂಲಕ ಕಟ್ಟಿಕೊಡುವ ತಾಳ್ಮೆ ಮತ್ತು ಜಾಣ್ಮೆಯನ್ನು 'ಮಗು ಮಲಗಿದೆ ಎದೆಯ ಮೇಲೆ' ಕವಿತೆಯಲ್ಲಿ ಎದುರಿಸುತ್ತೇವೆ. ಈ ಕವಿತೆ ಹಿಂಸೆಯ ನಾನಾ ಪರಿಗಳನ್ನು ಬೇರೆ ಬೇರೆ ಆಯುಧಗಳ/ಆಶಯಗಳ ಹಿನ್ನೆಲೆಯಲ್ಲಿ ಪ್ರತಿಮಿಸಲು ಪ್ರಯತ್ನಿಸಿದರೂ 'ಮಗು'ವೇ ಕೇಂದ್ರ ಪ್ರತಿಮೆಯಾಗಿದೆ ಇಲ್ಲಿ. ಹಿಂಸೆಯನ್ನು ತಡೆಯುವ, ಶಾಂತಿ, ನೆಮ್ಮದಿಯನ್ನು ಬಯಸುವ ಮನಸ್ಸು– ಕವಿತೆಯಲ್ಲಿ ಆರಂಭ ಒದಗಿಸುವುದು ಹೀಗೆ– 'ಸದ್ದೇ/ಎದೆಗಿಳಿದು ಕುಕ್ಕುವ ಹದ್ದೇ/ಸುಮ್ಮನಿರು,/ಮಗು ಮಲಗಿದೆ ಎದೆಯ ಮೇಲೆ.'

ಹಿಂಸೆಯ 'ಆಳ'ವನ್ನು ಕಾಣಿಸಲು ಕವಿತೆ ತನ್ನ ಕೆನ್ನಾಲಿಗೆಯನ್ನು ಮುಗ್ಧ ರೂಪಕದ ಮೂಲಕ ಈ ರೀತಿ ಚಾಚಿಕೊಳ್ಳುತ್ತ ನಡೆಯುವ ನಡಿಗೆ ಅಂತರಂಗವನ್ನು ಹಿಂಡಿಬಿಟ್ಟಂಥ ಅನುಭವ–

'ಮಂದಿರ ಮಸೀದಿಗಳಲ್ಲಿ ಬೀಳುವ / ಆಕಳ ಹಂದಿಯ ಮಾಂಸಗಳ ಸದ್ದೆ'
'ಹೊಟ್ಟೆಯಲ್ಲೇ ಸಾವ ಹೆಣ್ಣು ಭ್ರೂಣದ ಸದ್ದೆ'
'ಲಂಗ ದಾವಣಿ ಚೂಡಿ ಹರಕು ಸೀರೆಗಳಲ್ಲಿ / ಕರಗಿ ಹೋಗುತ್ತಿರುವ ನಿಟ್ಟುಸಿರುಗಳ ಸದ್ದೆ'
'ಹರಿದ ತಾಳಿಯ ಸದ್ದೆ ಒಡೆದ ಬಳೆಗಳ ಸದ್ದೆ'
'ಖಾಲಿ ಕೀಟ ನಾಶಕದ ಬಾಟಲಿಯ ಬಾಜೂ / ನಿಖಾಲಿಯಾಗಿ ಬಿದ್ದ ಶವಗಳ ಸದ್ದೆ'
'ಊರ ಹೊರಗಿನ ಕತ್ತಲಲ್ಲಿ / ನರಳುತ್ತಿರುವ ಮೈಲಿಗೆಯ ಸದ್ದೆ'

ಹೀಗೆ ನೀಳ್ಗವನದ ರೀತಿಯಲ್ಲಿ ಹಿಂಸೆಯ ಹೆಜ್ಜೆಗಳನ್ನು ದಾಖಲಿಸುತ್ತ ಚಲಿಸುವ ಕವಿತೆ, ಮಾನವೀಯತೆಯ ಎದುರು ಪ್ರಶ್ನೆಯಾಗಿ ತಂದೆ-ಮಗುವಿನ ಅಂತಃಕರಣ, ಅನುಕಂಪ, ಸಮಾಧಾನ, ಪ್ರೀತಿ/ವಾತ್ಸಲ್ಯದಂಥ ತೀರ ಖಾಸಗೀ ಬದುಕಿಗೆ ಲಗ್ಗೆಯಿಟ್ಟ ವಿನಾಶಕಾರೀ ಬುದ್ಧಿಯನ್ನು ಕವಿ ಕೊನೆಯಲ್ಲಿ ಕೇಳಿಕೊಳ್ಳುವುದು, ತನ್ನೊಳಗೆ ತಾನು ಅನುರಣಿಸಿಕೊಳ್ಳುವುದು– ಕೊಲ್ಲುವ ಕೈಗಳ ಹಿಂದೆ/ಇರುವ ಮನ ಒಂದೆ (ಯುದ್ಧ-೬), ಹಕ್ಕಿ ಗೂಡು ಬಿಟ್ಟು ಹೊರಬರುತ್ತಿಲ್ಲ/ಕೂಸು ಬಸಿರಲ್ಲೇ ಕಂಪಿಸುತ್ತಿದೆ (ಯುದ್ಧ-೮), ಸದ್ದೇ/ಎದೆಗಿಳಿದು ಕುಕ್ಕುವ ಹದ್ದೇ/ತಂದೆಯ ನಿಷ್ಕಲ್ಮಶ ವಾತ್ಸಲ್ಯವ/ಕಬಳಿಸುತ್ತೀ/ ಮಗುವಿನ ನಿರ್ಮಲ ನಿದ್ದೆಯ/ಕದಲಿಸುತ್ತೀ ಸದ್ದೇ... ಸದ್ದೇ... ಸದ್ದೇ....

ಒಂದು ಕಡೆ ಮಾನವರ ಕಾಳಜಿಗಳು ಮತ್ತು ಆ ನಿಟ್ಟಿನಲ್ಲಿ ಕ್ರಿಯಾಶೀಲ ಅಭಿವ್ಯಕ್ತಿಯ ಸ್ಪಂದನ ಜರುಗುತ್ತಲೇ ಇರುವಾಗ, ಮುಗ್ಧ ಮಗುವನ್ನು ಎರಗಿದ ಹದ್ದು ಕುಕ್ಕಿ ಆಕಾಶಕ್ಕೆ ನೆಗೆದು ಟಪ್ಪನೆ ನೆಲಕ್ಕೆ ಅಪ್ಪಳಿಸಿ ಬಿಟ್ಟಂತೆ ಛಿದ್ರಗೊಳ್ಳುವ ನೋವನ್ನು ಇನ್ನೊಂದೆಡೆ ನಿರಂತರ ಆತಂಕ/ಭಯಗಳನ್ನು ಒಡ್ಡುತ್ತಲೇ ನೀಡುತ್ತಿರುವುದು ಚರಿತ್ರೆಯ ಭಾಗವಾಗುತ್ತಲೇ ಇದೆ. ಸದ್ದಿನ ಸ್ಥಿತಿಯಲ್ಲಿ ಮಾನವಪರ ಕಾಳಜಿ/ಕ್ರಿಯಾಶೀಲತೆಗಳಿಗಿಂತಲೂ ಹಿಂಸಾಸ್ವರೂಪವೇ ಪೃಥ್ವಿಯನ್ನು ಅಲುಗಾಡಿಸುತ್ತಿದೆ. ಜೀವಸಂಕುಲವನ್ನೇ ಕಬಳಿಸಿಬಿಡುವ 'ಸುನಾಮಿ'ಯ ಎದುರು ಸೃಜನಶೀಲ ಸನ್ನಿವೇಶಗಳು ನಿಂತುಕೊಳ್ಳುವುದಾದರೂ ಹೇಗೆ?

ಒಂದು ಸುಂದರ ಕಲಾಕೃತಿ ತನ್ನ ಸಾಮರ್ಥ್ಯ ಕಾಣಿಸುವುದಕ್ಕಾಗಿ ನಿರಂತರ ತುಡಿಯುತ್ತಲೇ ಇದೆ.

– ಡಾ. ಗುಂಡಣ್ಣ ಕಲಬುರ್ಗಿ, ಸೃಷ್ಟಿ, ಈರಣ್ಣನಗರ, ಮೂಡಲಗಿ-೫೯೧ ೩೧೨ (ಬೆಳಗಾವಿ)

೪. *ಬಯಲ ಬೆರಗು* : ಡಾ. ಬಸವರಾಜ ಡೋಣೂರ

ಶಕ್ತಿ ಪಬ್ಲಿಷರ್ಸ್, ೫ನೇಕ್ರಾಸ್, ಕವಿಧಾಮನಗರ, ಲಗ್ಗೆರೆ, ಬೆಂಗಳೂರು-೫೮, ಪ್ರಮು. ೨೦೦೫, ಪು.೧೧೬, ರೂ.೬೦/-

'ಬಯಲ ಬೆರಗು' ಕೃತಿಯಲ್ಲಿ ಒಟ್ಟು ೧೪ ಲೇಖನಗಳಿವೆ. ಲಂಕೇಶ ಸಾಹಿತ್ಯ ಕುರಿತ ಸುದೀರ್ಘ ಲೇಖನದಲ್ಲಿ ಲಂಕೇಶರ ಸಮಗ್ರ ಸಾಹಿತ್ಯ ಹಾಗೂ ವ್ಯಕ್ತಿತ್ವದ ಇಣುಕು ನೋಟವಿದೆ. ನವ್ಯ ಲೇಖಕರಲ್ಲಿ ಲಂಕೇಶರ ಸ್ಥಾನ ಗುರುತಿಸುವ ಪ್ರಯತ್ನವಿದು.

ಇತ್ತೀಚೆಗೆ ತೌಲನಿಕ ಸಾಹಿತ್ಯ ವಿಮರ್ಶೆಯು ಹೊಸ ವಿಧಾನವಾಗಿ ಬೆಳೆದುಬರುತ್ತಿದೆ. ಈ ನಿಟ್ಟಿನಲ್ಲಿ ಡೋಣೂರ ಅವರು, ಇಂಗ್ಲಿಷ್ ಕವಿ ಜಾನ್ ಕೀಟ್ಸ್‌ನೊಂದಿಗೆ ಕನ್ನಡ ಕವಿ ಬೇಂದ್ರೆ ಅವರನ್ನು ಅಕ್ಕಪಕ್ಕದಲ್ಲಿಟ್ಟು ನೋಡುವ ಪ್ರಯತ್ನ ಮಾಡಿದ್ದಾರೆ. ಬೇಂದ್ರೆಯವರ ಮೇಲೆ ಕೀಟ್ಸ್‌ನ ಪ್ರಭಾವವಿದೆ ಎಂಬ ಮಾತನ್ನು ಕೆಲವು ಸಂದರ್ಭಗಳಲ್ಲಿ ಒಪ್ಪಿಕೊಳ್ಳಬಹುದೆ ಹೊರತು ಇಡಿಯಾಗಿ ಅಲ್ಲ. ಪಾಶ್ಚಾತ್ಯ ಸಾಹಿತ್ಯ ಪ್ರಭಾವವನ್ನು ಅರಗಿಸಿಕೊಂಡು, ಕನ್ನಡತನವನ್ನು ಮೈಗೂಡಿಸಿಕೊಂಡು ಬರೆದ ಬೇಂದ್ರೆ ತಮ್ಮತನದ ಛಾಪನ್ನು ಮೂಡಿಸಿದ್ದಾರೆ ಎಂದು ಹೇಳುತ್ತಾ ಈ ಇಬ್ಬರ ಬದುಕು ಹಾಗೂ ಬರಹಗಳಲ್ಲಿನ ಸಾಮ್ಯಗಳನ್ನು ಗುರುತಿಸಲು ಯತ್ನಿಸುತ್ತಾರೆ.

ಪೂರ್ಣಚಂದ್ರ ತೇಜಸ್ವಿ ಕುವೆಂಪು ಮಗನಾಗಿ ಹುಟ್ಟಿರುವುದು ಆಕಸ್ಮಿಕ. ತೇಜಸ್ವಿ ತಮ್ಮ ಸ್ವಂತದ ಅನುಭವ, ಗ್ರಹಿಕೆ ಮತ್ತು ಪ್ರತಿಭೆಗಳಿಂದಾಗಿ ಕನ್ನಡದ ವಿಶಿಷ್ಟ ಲೇಖಕರಾಗಿ ರೂಪಗೊಂಡವರು ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ತೇಜಸ್ವಿಯವರ ಬರಹದ ಸ್ವರೂಪ ಸಮಕಾಲೀನ ನವ್ಯ ಲೇಖಕರಿಗಿಂತ ಭಿನ್ನವಾಗಲು ಅವರ ಬದುಕಿನ ಕ್ರಮವೇ ಕಾರಣ ಎನ್ನುವ ಡೋಣೂರರ ಮಾತಿನಲ್ಲಿ ಸತ್ಯವಿದೆ. ಆದರೆ ಈ ಎಲ್ಲಾ ಅಂಶಗಳ ನಿರೂಪಣೆಗೆ ತೇಜಸ್ವಿ ಸಾಹಿತ್ಯದ ಇನ್ನಷ್ಟು ವಿವರಗಳನ್ನು ಲೇಖನ ಬಯಸುತ್ತದೆ.

ಸರೋಜಿನಿ ಶಿಂತ್ರಿಯವರ ಇಂಗ್ಲಿಷ್ ಕೃತಿಗಳ ಪರಿಚಯದ ಲೇಖನದಲ್ಲಿ ಶಿಂತ್ರಿಯವರು Feminism ನ ಬೆಳಕಿನಲ್ಲಿ ಸಾಹಿತ್ಯದ ಮೌಲ್ಯಮಾಪನ ಮಾಡುತ್ತಾರೆ ಎಂದು ಹೇಳಿ, ಹೀಗೆ ಒಂದು ನಿರ್ದಿಷ್ಟ ತಾತ್ವಿಕ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ನಿಂತು ಸಾಹಿತ್ಯ ಕೃತಿಯೊಂದನ್ನು ಪರೀಕ್ಷಿಸಿದರೆ ಕೃತಿಯ ಬೇರೆ ಆಯಾಮಗಳು ಕಾಳಜಿಗಳು ನಮ್ಮ ಕಣ್ಣು ತಪ್ಪುತ್ತವೆ, ಇದು ಸರಿಯಾದ ಕ್ರಮವೇ? –ಎಂದು ಪ್ರಶ್ನಿಸುತ್ತಾರೆ. ಆದರೆ ಸ್ತ್ರೀವಾದಿ ವಿಮರ್ಶೆ ಎನ್ನುವದು ಉಳಿದ ವಿಮರ್ಶಾ ವಿಧಾನಗಳಂತೆ ಒಂದು ವಿಧಾನವೇ ಹೊರತು ಅದು ಆತ್ಯಂತಿಕ ಮೌಲ್ಯಮಾಪನ ಕ್ರಮವೇನಲ್ಲ. ಒಂದು ವಿಮರ್ಶೆಯಲ್ಲಿ ವಿಮರ್ಶೆಯ ಎಲ್ಲಾ ಸೈದ್ಧಾಂತಿಕ ನೆಲೆಗಟ್ಟುಗಳನ್ನು ಅನ್ವಯಿಸಲೇಬೇಕೆಂಬ ನಿಯಮವೇನೂ ಇಲ್ಲ.

'ವಚನ ಚಿಂತನ'ದಲ್ಲಿ ಶಿವಕುಮಾರ ಸ್ವಾಮಿಗಳು ಬಸವಣ್ಣನವರ ೫ ವಚನಗಳಿಗೆ ಬರೆದ ಭಾಷ್ಯವನ್ನು ಕುರಿತ ಪರಿಚಯವಿದೆ. ಎಚ್. ಎಸ್. ಶಿವಪ್ರಕಾಶರ ೩ ನಾಟಕಗಳ ಬಗೆಗಿನ ಲೇಖನದಲ್ಲಿ, ತಮಿಳು ಮಹಾಕಾವ್ಯದಿಂದ ಈ ನಾಟಕಗಳಿಗೆ ವಸ್ತು ಆಯ್ದಿರುವುದನ್ನು ಹೇಳಿ, ಅವರ ನಾಟಕದಲ್ಲಿ

ಬಳಸಿದ ಭಾಷೆ ಕಾವ್ಯಮಯವಾಗಿದೆ ಎನ್ನುತ್ತ, ಎಲ್ಲಾ ಪಾತ್ರಗಳು ಒಂದೇ ರೀತಿಯ ಭಾಷೆ ಬಳಸುತ್ತವೆ. ನಾಟಕದಲ್ಲಿ ಬೇರೆ ಬೇರೆ ಸ್ತರದ ಜನ ಬಳಸುವ ಭಾಷೆಯಿಂದಲೇ ಅವರ ಸ್ಥಾನಮಾನಗಳು ಸೂಚಿತವಾಗಬೇಕು. ನಾಟಕ ಸಾಮುದಾಯಿಕ ಕಲೆಯಾಗಿರುವುದರಿಂದ ಇದರ ಭಾಷೆ ಜನಸಾಮಾನ್ಯರಿಗೆ ಅರ್ಥವಾಗುವಂತೆ ಇರಬೇಕು, ಈ ದೃಷ್ಟಿಯಿಂದ ಶಿವಪ್ರಕಾಶರ ನಾಟಕಗಳು ನಿರಾಶಾದಾಯಕ ಎಂದಿದ್ದಾರೆ.

ವೀಚಿಯವರ 'ನೆಚ್ಚಿನವರು' ಎಂಬ ವ್ಯಕ್ತಿಚಿತ್ರಣ ಸಂಗ್ರಹವನ್ನು ಕುರಿತು ಅವರು ಕಟ್ಟಿಕೊಟ್ಟ ವ್ಯಕ್ತಿತ್ವಗಳ ಮೂಲಕವೇ ವೀಚಿಯವರ ವ್ಯಕ್ತಿತ್ವವನ್ನು ಗುರುತಿಸಬಹುದು ಎನ್ನುತ್ತಾರೆ. ಗಾಂಧೀ, ಲೋಹಿಯಾ, ಅಂಬೇಡ್ಕರ್ ಹಾಗೂ ಗೋಪಾಲಗೌಡರಂಥ ಮಹಾನ್ ವಿಚಾರವಾದಿಗಳ ಹೋರಾಟಗಾರರ ಕಟ್ಟಾ ಅಭಿಮಾನಿ ಹಾಗೂ ಪ್ರಗತಿಪರ ಧೋರಣೆಯ ಕವಿಯೆಂದು ವೀಚಿಯವರನ್ನು ಗುರುತಿಸುತ್ತಾರೆ. ಡೋಣೂರರಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾಳಜಿಗಳಿವೆ. 'ಕನ್ನಡ ಸಾಹಿತ್ಯ ಮತ್ತು ರಾಜಕಾರಣದ ಸೂಕ್ಷ್ಮ ಅಟ್ಟಹಾಸ' ಲೇಖನದಲ್ಲಿ ಇದು ವ್ಯಕ್ತವಾಗಿದೆ. ಸಾಹಿತ್ಯ ಮತ್ತು ರಾಜಕೀಯಗಳು ಬಹುತೇಕ ತಳಕು ಹಾಕಿಕೊಂಡು ಬಂದಿರುವುದನ್ನು ಸರಿಯಾಗಿಯೇ ಗುರುತಿಸುತ್ತಾರೆ. 'ಧಾರ್ಮಿಕ ಸಾಮರಸ್ಯ ಹಾಗೂ ಅಭಿವ್ಯಕ್ತಿಯ ಸಾಧ್ಯತೆಗಳು' ಎಂಬ ಲೇಖನದಲ್ಲಿ ಧಾರ್ಮಿಕ ಸಾಮರಸ್ಯವಿದ್ದಾಗ ಮಾತ್ರ ಉತ್ತಮ ಕೃತಿಗಳು ಹುಟ್ಟಿಬರುವುದು ಸಾಧ್ಯವೆಂಬ ಅಭಿಪ್ರಾಯವಿದೆ. ಒಬ್ಬ ಲೇಖಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತುಂಬಾ ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾಗಿದ್ದು ಅವಶ್ಯ. ಧಾರ್ಮಿಕ ಸಾಮರಸ್ಯ ಉಂಟುಮಾಡಲು ಸಾಧ್ಯವಾಗದಿದ್ದರೆ ಹೋಗಲಿ, ಅದನ್ನು ಕದಡುವ ಕೆಲಸವನ್ನು ಮಾಡದೇ ಇರುವುದು ಒಳ್ಳೆಯದು ಎಂಬ ವಿಚಾರ ಡೋಣೂರ ಅವರದು.

'ಜಾಗತೀಕರಣ ಮತ್ತು ಸೃಜನಶೀಲತೆ' ಲೇಖನದಲ್ಲಿ ಜಾಗತೀಕರಣ ಎಂದರೇನು ಎಂಬುದನ್ನು ಅರ್ಥೈಸುವುದು ಮೊದಲ ಭಾಗದಲ್ಲಿದೆ, ಎರಡನೇ ಭಾಗದಲ್ಲಿ ಜಾಗತೀಕರಣವು ಸಾಹಿತ್ಯ ಹಾಗೂ ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವದ ಪರಿಶೀಲನೆ ಇದೆ. ಜಾಗತೀಕರಣವನ್ನು ಮರುಮಾತಿಲ್ಲದೆ ಸ್ವೀಕರಿಸಿದರೆ, 'ಯಾವುದೇ ಸಮುದಾಯ ಅಥವಾ ರಾಷ್ಟ್ರ ತನ್ನ ಮೂಲ ರೂಪವನ್ನು ಕಳೆದುಕೊಳ್ಳದೆ ಇರಲು ಸಾಧ್ಯವಿಲ್ಲ' ಎಂಬ ಅಪಾಯವನ್ನು ಸೂಚಿಸುತ್ತಾರೆ.

'ಅಕ್ಷರಜ್ಞಾನ ಮತ್ತು ಮಧ್ಯಮ ವರ್ಗ' ಎಂಬ ಕಿರುಲೇಖನದಲ್ಲಿ ನಮ್ಮ ಶೈಕ್ಷಣಿಕ ಪದ್ಧತಿಯ ಬಗೆಗಿನ ಆಕ್ರೋಶ ವ್ಯಕ್ತವಾಗಿದೆ. ಅಕ್ಷರಜ್ಞಾನದ ಫಲಶ್ರುತಿಯಾಗಿ ಹುಟ್ಟಿಬಂದಿರುವುದೆ ಮಧ್ಯಮ ವರ್ಗ. ಅಕ್ಷರಜ್ಞಾನ ಕೂಡಾ ಒಂದು ರೀತಿಯಲ್ಲಿ ಶ್ರೇಣೀಕರಣವನ್ನು ಉಂಟುಮಾಡುತ್ತಿದೆ ಎಂಬುದೇ ಡೋಣೂರರ ವ್ಯಥೆ. ಅಕ್ಷರಸ್ಥರು ಹಾಗೂ ಅನಕ್ಷರಸ್ಥರ ಮಧ್ಯೆ ಒಂದು ಕಂದಕವೇರ್ಪಡುತ್ತಿರುವ ಅಪಾಯಕಾರಿ ಬೆಳವಣಿಗೆಗೆ ಕಾರಣವಾದದ್ದು ನಮ್ಮ ಶಿಕ್ಷಣ ಪದ್ಧತಿ. ಇನ್ನೂ ನಾವು ವಸಾಹತುಶಾಹಿ ಸಂದರ್ಭದ ಶಿಕ್ಷಣಕ್ರಮವನ್ನೇ ಅನುಸರಿಸುತ್ತಿರುವುದರಿಂದ ಈ ಶ್ರೇಣೀಕೃತ ಸಮಾಜ ನಿರ್ಮಾಣವಾಗಿದೆ ಎನ್ನುತ್ತಾರೆ. ಆದರೆ ಪರ್ಯಾಯ ಶಿಕ್ಷಣಕ್ರಮವೇನು ಎಂಬ ಸಮಸ್ಯೆ ಬಗೆಹರಿಯದೆ ಹಾಗೆಯೇ ಮುಂದುವರಿಯುತ್ತಿರುವುದು ವಿಪರ್ಯಾಸ.

ಬಸವಣ್ಣ ಕೈಕೊಂಡ ಸಾಮಾಜಿಕ ಚಳುವಳಿಯನ್ನು ಧಾರ್ಮಿಕ, ಆರ್ಥಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಆಂದೋಲನಗಳಿಂದ ಬೇರ್ಪಡಿಸಿ ನೋಡಲಾಗದು, ಈ ಆಂದೋಲನಗಳಲ್ಲಿ ಯಾವುದೇ ಸ್ವತಂತ್ರವಾದುದಲ್ಲ, ಒಂದು ಇನ್ನೊಂದರಲ್ಲಿದೆ, ಆದ್ದರಿಂದ ಈ ಎಲ್ಲ ಆಂದೋಲನಗಳ ಮೂಲಾಶಯ ಕಂಡುಕೊಳ್ಳಲು ಯತ್ನಿಸಬೇಕಿದೆ ಎಂದು ಹೇಳುವಲ್ಲಿ ಬಸವಣ್ಣನ ವ್ಯಕ್ತಿತ್ವವನ್ನು ನೋಡುವ ಹೊಸ ದೃಷ್ಟಿಕೋನವನ್ನು ಇನ್ನೊಂದು ಲೇಖನದಲ್ಲಿ ಆವಿಷ್ಕರಿಸಿದ್ದಾರೆ. ಸುಧಾ ಮೂರ್ತಿಯವರ ಸಾಹಿತ್ಯ ಕುರಿತ ಲೇಖನದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಕುರಿತು ವಿವೇಚನೆ ಒಂದನೇ ಭಾಗದಲ್ಲಿದೆ, ಕನ್ನಡ ಸಾಹಿತ್ಯವನ್ನು ಕುರಿತದ್ದು ಎರಡನೇ ಭಾಗ.

ಡೋಣೂರರಲ್ಲಿ ಉತ್ಸಾಹವಿದೆ, ಕಳಕಳಿ ಇದೆ, ಅನಿಸಿದ್ದನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸುವ ಮುಗ್ಧತೆ ಇದೆ, ವ್ಯವಸ್ಥೆಯ ಭ್ರಷ್ಟತನದ ಬಗ್ಗೆ ಆಕ್ರೋಶವಿದೆ. ಆದಾಗ್ಯೂ ಸ್ವಲ್ಪ ಮಟ್ಟಿನ ಸಂಯಮವನ್ನು ರೂಢಿಸಿಕೊಂಡಲ್ಲಿ ಇನ್ನೂ ಒಳ್ಳೆಯ ಕೃತಿಗಳನ್ನು ಕೊಡಬಹುದಾದ ಶಕ್ತಿ ಸಾಧ್ಯ. ಕೆಲವು ಮುದ್ರಣ ದೋಷಗಳನ್ನು ಹೊರತುಪಡಿಸಿದರೆ ಪುಸ್ತಕ ಅಂದವಾಗಿ ಬಂದಿದೆ.

– ಡಾ. ವಿಜಯಕುಮಾರಿ ಎಸ್. ಕರಿಕಲ್, ಕನ್ನಡ ವಿಭಾಗ, ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ-೧

೫. ಬೆಳಗು : ಚಂದ್ರಶೇಖರ ವಸ್ತ್ರದ

ಕ್ಷಮಾ ಪ್ರಕಾಶನ, ಬೆಳಗು, ಆನಂದಾಶ್ರಮ ರಸ್ತೆ, ಗದಗ-೫೮೨ ೧೦೧, ಪ್ರ.ಮು. ೨೦೦೫, ಪು. ೧೭೮, ರೂ. ೪೦/-

'ಚಿಂತನ', 'ಲೇಖನ', 'ಮೌನದ ಮೊಗ್ಗುಗಳು' ಎಂಬ ಮೂರು ವಿಭಾಗಗಳಿಂದ ಕೂಡಿದ ಚಿಂತನಪರ ಲೇಖನಗಳ ಸಂಗ್ರಹವೊಂದನ್ನು 'ಬೆಳಗು' ಶಿರೋನಾಮೆಯೊಂದಿಗೆ ಚಂದ್ರಶೇಖರ ವಸ್ತ್ರದ ಅವರು ವಾಚಕರ ಮುಂದಿರಿಸಿದ್ದಾರೆ.

ಮೊದಲ ಭಾಗದಲ್ಲಿ ಬಾನುಲಿ ಪ್ರಸಾರಕ್ಕಾಗಿ ಬರೆದ ಕಿರುಲೇಖನಗಳು. ದೃಷ್ಟಾಂತಗಳ, ಉದಾಹರಣೆಗಳ ಮೂಲಕ ಲೇಖನವನ್ನು ಕಟ್ಟುವ ಪ್ರಯತ್ನ ಇಲ್ಲಿನ ಲೇಖನಗಳಲ್ಲಿ ವಿಪುಲವಾಗಿ ಕಾಣಸಿಗುತ್ತದೆ. ಅದರಲ್ಲೂ ಮುಖ್ಯವಾಗಿ ಝೆನ್ ಪಂಥದವರು, ವಚನಕಾರರು, ಕೀರ್ತನೆಕಾರರು– ಹೀಗೆ ಕವಿಗಳು, ಚಿಂತಕರು ಅವರ ಲೇಖನದಲ್ಲಿ ಬಂದು ಹೋಗುತ್ತಿರುತ್ತಾರೆ. ಆ ಮೂಲಕ ಸುದೀರ್ಘ ವಿವರಣೆಯನ್ನು ತಪ್ಪಿಸುವುದಕ್ಕೂ ಹೃದ್ಯವಾಗುವ ಹಿರಿಯರ ಮಾತುಗಳನ್ನು ಉದ್ಧರಿಸುವುದಕ್ಕೂ ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಚಿಂತನಗಳನ್ನು ಸಮರ್ಥವಾಗಿ ದುಡಿಸುವುದು ವಸ್ತ್ರದ ಅವರಿಗೆ ಸಾಧ್ಯವಾಗಿದೆ.

ಲೇಖನಗಳ ಗುಂಪಿನಲ್ಲಿ ವಚನಗಳನ್ನು ನಿಕಷಕ್ಕೊಡ್ಡಲಾಗಿದೆ. ಇತರರ ಚಿಂತನೆಗಳಿಗಿಂತ ಶೈವ ಚಿಂತನೆಗಳು ಅದ್ಭುತವಾದುದು ಎಂಬುದಾಗಿ ಸಮರ್ಥಿಸುವ ಪ್ರಯತ್ನಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಅಗ್ನಿಪೂಜೆ, ಯಜ್ಞಯಾಗಾದಿಗಳು, ವಿಗ್ರಹಾರಾಧನೆ, ಜಾತಕ ಫಲ ಇತ್ಯಾದಿಗಳನ್ನು ಭ್ರಮಾಧೀನವೆಂದು ಸಾಧಿಸುವ ಪ್ರಯತ್ನ ವಚನಕಾರರಿಗಿರುವಂತೆಯೇ ಲೇಖಕರಿಗೂ ಇದೆ.

ಶರಣ ಸಾಹಿತ್ಯದಲ್ಲಿರುವ ಸಮಕಾಲೀನ ಹಾಗೂ ಸಾರ್ವಕಾಲೀನ ಚಿಂತನೆಗಳ ಮಹತ್ವವನ್ನು ಇನ್ನೊಂದು ಲೇಖನದಲ್ಲಿ ತಿಳಿಸಿರುವ ವಸ್ತ್ರದ ಅವರು ಆಧುನಿಕರಿಗಿಂತ ಅತ್ಯಾಧುನಿಕರು ವಚನಕಾರರು ಎನ್ನುತ್ತಾರೆ. ಹಣ ಕೂಡಿಡುವಿಕೆ, ಆಸ್ತಿ ಸಂಚಯನ ಇತ್ಯಾದಿಗಳನ್ನು ವಚನಕಾರರು ಬಲವಾಗಿ ವಿರೋಧಿಸಿದ್ದಾರೆ.

ಹರಿಹರನ ಕಾವ್ಯಮಾರ್ಗ, ಭಾಷೆ, ವಸ್ತು, ಶೈಲಿ ಇತ್ಯಾದಿಗಳನ್ನು ಪ್ರತ್ಯೇಕ ಲೇಖನವೊಂದರಲ್ಲಿ ಚರ್ಚೆಗೆ ಒಡ್ಡುತ್ತಾರೆ ವಸ್ತ್ರದ ಅವರು. ಅಂಬಿಗರ ಚೌಡಯ್ಯ, ಮೋಳಿಗೆ ಮಹಾದೇವಿ, ವರದ ಸಂಕಣ್ಣ ಮುಂತಾದವರ ವಚನಗಳ ಚರ್ಚೆಯೂ ಅಳವಡಿಕೆಯಾಗಿವೆ. ಒಂದು ಮಾತೆಂದರೆ ವಚನಗಳ ಜೊತೆ ತಾದಾತ್ಮ್ಯಗೊಳ್ಳುವುದೊಂದು ಬಗೆಯಾದರೆ ಇಂತಹದೇ ಸಾಹಿತ್ಯ ಪ್ರಕಾರಗಳನ್ನಿರಿಸಿ ನಿರ್ಲಿಪ್ತವಾಗಿ ಎರಡನ್ನೂ ನೋಡುವುದು.

ವಸ್ತ್ರದ ಅವರು ಈ ಕೊರತೆಯನ್ನು ನೀಗಬಲ್ಲರಾದರೆ ಅವರೇ ಹೇಳುವಂತೆ 'ಕತ್ತಲೆಯ ಬಗ್ಗೆ ಕನಿಕರಿಸದ ಬೆಳಕು ಬೆಳಕು ಹೇಗಾದೀತು?', 'ಮೌನ ಮೊಗ್ಗೆಯನೊಡೆದು ಮಾತರಳಿದಾಗ' ಎಂಬುದು ಕೊನೆಯ ಭಾಗ. ಚೆನ್ನವೀರ ಕಣವಿಯವರ ಸೇಸೆನುಡಿಗಳೊಂದಿಗೆ ಚಂದ್ರಶೇಖರ ವಸ್ತ್ರದ ಅವರ 'ಮೌನದ ಮಾತುಗಳು' ಮೊಗ್ಗರಳಿ ನಿಂತಿವೆ. ಇಲ್ಲಿನ ಸಾಲುಗಳು ಮೌನವಾಗಿ ಹೊಮ್ಮುತ್ತ ಗಾಢವಾದ ಅರ್ಥದ ಕಡೆಗೆ ಸಾಗುವ ಪರಿಯೇ ಚೆನ್ನ. ಭಾಷೆಯ ನವುರಾದ ಬಳಕೆ ಸಾಲುಗಳ ಅರ್ಥವಂತಿಕೆಯನ್ನು ಮತ್ತಷ್ಟು ಹಿಗ್ಗಿಸುತ್ತವೆ.

ವಸ್ತ್ರದ ಅವರು ಕೊಟ್ಟ ಬೆಳಕಿನಲ್ಲಿ ಇನ್ನಷ್ಟು ಹೊಸ ಹೊಳಹುಗಳನ್ನು ಹುಡುಕಬಹುದು.

– ಡಾ. ನಾ. ದಾಮೋದರ ಶೆಟ್ಟಿ, ಪ್ರಸಾಧನ, ಬಿಜೈ, ಭಾರತೀನಗರ, ಮಂಗಳೂರು-೫೭೫ ೦೦೪

೬. ಸ್ವರ್ಗಾದಪಿ ಗರೀಯಸಿ : ಪು. ೭೦, ರೂ. ೫೦/- **೭. ಗಾಳಿಯ ಉಡುಗೊರೆ :** ಪು. ೬೪, ರೂ. ೨೦/- **೮. ಮಾಯವಾದ ಮೊಲ** ಪು. ೫೬, ರೂ. ೨೨/- **: ಜಿ. ಜಿ. ಹರಿಜಿತ್**
ಎಲ್ಲವೂ ಪ್ರ.ಮು. ೨೦೦೪, ಸಪ್ತಲಾ ಪ್ರಕಾಶನ, ಅಂಚೆ ಪೆಟ್ಟಿಗೆ ನಂ. ೬೫೧೭, ಬೆಂಗಳೂರು-೫೬೦ ೦೬೫

ಹರಿಜಿತ್ ಅವರ 'ಮಾಯವಾದ ಮೊಲ', 'ಗಾಳಿಯ ಉಡುಗೊರೆ' ಮತ್ತು 'ಸ್ವರ್ಗಾದಪಿ ಗರೀಯಸಿ' ಎಂಬ ಮೂರೂ ನಾಟಕಗಳ ಆಶಯ ಜಾಗತಿಕವಾದ ಮೋಸ ಪ್ರಕೃತಿಯನ್ನು ಅನಾವರಣಗೊಳಿಸುವುದು. ಈ ಎಲ್ಲ ನಾಟಕಗಳಲ್ಲಿ ಕಾಲ್ಪನಿಕತೆಯನ್ನು ಅಧಿಕವಾಗಿಯೇ ಬಳಸಲಾಗಿದೆ. ಪವಾಡಸದೃಶ ಘಟನೆಗಳ ಮುಖಾಂತರ ಮೋಸಕ್ಕೆ ತಕ್ಕ ಪ್ರತಿಫಲವನ್ನು ಈ ನಾಟಕಗಳು ನಿರೀಕ್ಷಿಸುತ್ತವೆ. 'ಮಾಯವಾದ ಮೊಲ' ಮತ್ತು 'ಗಾಳಿಯ ಉಡುಗೊರೆ' ನಾಟಕಗಳಲ್ಲಿ ಇಂತಹ ಪ್ರತಿಫಲವನ್ನು ಈ ನೆಲದಲ್ಲಿಯೇ ಸೃಜಿಸುವ ತಂತ್ರವನ್ನು ಬಳಸಿದರೆ, 'ಸ್ವರ್ಗಾದಪಿ ಗರೀಯಸಿ' ನಾಟಕದಲ್ಲಿ ನೆಲ-ನರಕ-ಸ್ವರ್ಗಗಳನ್ನು ಕೂಡಿಸುವ ಪ್ರಯತ್ನವಿದೆ. 'ಗಾಳಿಯ ಉಡುಗೊರೆ' ಕೆಲವೇ ಪಾತ್ರಗಳ ಮುಖಾಂತರ ಮಾನವಸಹಜವಾದ ದುರ್ಬುದ್ಧಿಯನ್ನು ನಿರೂಪಿಸಿ ಅದಕ್ಕೆ ತಕ್ಕ ಶಾಸ್ತಿಯನ್ನು ಚಿತ್ರಿಸುತ್ತದೆ. ಬಡಮುದುಕನ ಹಿಟ್ಟನ್ನು ಗಾಳಿ ಚೆಲ್ಲಿ ಆಟ ನೋಡುವುದು, ನಂತರ ಮುದುಕನ ಆರ್ತತೆಗೆ ಕರಗಿ ಉಡುಗೊರೆಯನ್ನು ನೀಡುವುದು– ನೀಡಿದ ಉಡುಗೊರೆಗಳನ್ನು ಅಡಗೋಲಜ್ಜಿ ಲಪಟಾಯಿಸುವುದು– ಇದನ್ನು ಅರಿತ ಗಾಳಿ ಅಡಗೋಲಜ್ಜಿಗೆ ಬುದ್ಧಿ ಕಲಿಸಲು ಮತ್ತೊಂದು ಉಡುಗೊರೆ ನೀಡುವುದು ಈ ಎಲ್ಲ ಸಂಗತಿಗಳು ಒಂದರ್ಥದಲ್ಲಿ ಜಾನಪದ ರಂಗವನ್ನು ನೆನಪಿಗೆ ತರುತ್ತವೆ. ತಪ್ಪಿಗೆ ತಕ್ಕ ಶಾಸ್ತಿ ಆಗಬೇಕೆಂಬ ಸದಾಶಯವನ್ನು ನಾಟಕ ಒಳಗೊಂಡಿದೆ. ಇದೇ ಜಾಡಿನಲ್ಲಿ ಕಟ್ಟಿದ ಇನ್ನೊಂದು ನಾಟಕ 'ಮಾಯವಾದ ಮೊಲ'. ಇದು ಜಾಣ ಬಡವನೊಬ್ಬನ, ದಡ್ಡ ಅಮೀರರ ಸ್ವಾರ್ಥಬುದ್ಧಿಯನ್ನು ಅನಾವರಣಗೊಳಿಸುತ್ತದೆ. ಸಾಮಾನ್ಯ ಮೊಲವನ್ನು ಅಸಾಮಾನ್ಯ ಪ್ರಾಣಿಯೆಂದು ಬಿಂಬಿಸಿ, ನಂಬಿಸುತ್ತಾನೆ. ಬಡ ನಸರುದ್ದೀನ್ ಬಗ್ಗೆ, ಬಡತನದ ಬಗ್ಗೆ ತಿರಸ್ಕಾರ ಭಾವನೆ ಹೊಂದಿರುವ ಅಮೀರರು ಇದನ್ನು ನಂಬಿ ಮೋಸ ಹೋಗುವ ಪ್ರಕರಣ ನಾಟಕದ ವಸ್ತು. ಮೊಲಕ್ಕೆ ಬೆಲೆ ಕಟ್ಟುವಲ್ಲಿ ಮೂವರು ಅಮೀರರ ಲೋಭಿತನ ವ್ಯಕ್ತವಾಗಿದೆ. ಇಲ್ಲಿ ನಸರುದ್ದೀನನ ಮೋಸ ಶಿಕ್ಷಾರ್ಹವಲ್ಲ. ದಾನ ಮಾಡಿದರೆ ಸತ್ಪಾತ್ರರಿಗೆ ದಾನ ಮಾಡಬೇಕು ಎಂಬಂತೆ ಮೋಸ ಮಾಡಿದರೂ ಅಪಾತ್ರರನ್ನ, ಅನ್ಯಾಯವಾಗಿ ಸಂಗ್ರಹಿಸಿದವರನ್ನ, ಮೋಸಕ್ಕೆ ಒಳಪಡಿಸಬಹುದೆಂಬ ಸರಳ ತಾರ್ಕಿಕತೆ ಈ ನಾಟಕದ ಹಿಂದಿನ ಆಶಯ.

'ಸ್ವರ್ಗಾದಪಿ ಗರೀಯಸಿ' ನಾಟಕದಲ್ಲಿ ಹರಿಜಿತ್‌ರು ಪ್ರಾಪಂಚಿಕವಾದ ಸಮುದಾಯದ ಪಿಡುಗುಗಳನ್ನ ಅದರಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳನ್ನ ಯಮನೆದುರು ಬಿಚ್ಚಿಡುತ್ತಾರೆ. ಆ ಮೂಲಕ ಜಗತ್ತಿನ ಕೆಡುಕುಗಳಾದ ಏಡ್ಸ್, ಆತ್ಮಹತ್ಯೆ, ಭಯೋತ್ಪಾದನೆ, ಡೊನೇಶನ್ ಹಾಗೂ ಅಧಿಕ ಸಂಪಾದನೆ, ನಾಸ್ತಿಕತೆ ಈ ಎಲ್ಲ ವಿವಿಧ ಶೋಷಣೆಗಳನ್ನು ಚಿತ್ರಗುಪ್ತರ ಮೂಲಕ ಬಿಚ್ಚಿಡುತ್ತಾರೆ. ಇದಕ್ಕೆ ತಕ್ಕ ಶಿಕ್ಷೆಯನ್ನು ನೀಡಲಾಗುತ್ತದೆ. ಅಂತ್ಯದಲ್ಲಿ ದೇಶಪ್ರೇಮ, ದೇಶಭಕ್ತಿಯಂತಹ ಉದಾತ್ತ ಗುರಿಯನ್ನು ಮನ್ನಿಸಿ ಪುರಸ್ಕರಿಸಲಾಗುತ್ತದೆ. ಈ ಮೂಲಕ ಒಳ್ಳೆಯ ಕಾರ್ಯಗಳಿಗೆ ಒಳ್ಳೆಯ ಫಲ, ಕೆಟ್ಟ ಕೆಲಸಗಳಿಗೆ ಕೆಟ್ಟ ಫಲ ಎಂಬ ಸಿದ್ಧಾಂತವನ್ನ ಪ್ರತಿಪಾದಿಸಲಾಗುತ್ತದೆ.

ಹರಿಜಿತ್ ಅವರು ಉದಾತ್ತವಾದ ಆಶಯಗಳೊಂದಿಗೆ ನಾಟಕಗಳನ್ನು ರಚಿಸಿದ್ದಾರೆ. ಆದರೂ ಸ್ವತಃ ಹರಿಜಿತ್‌ರು ವಾಸನೆಗಳಿಂದ ಮುಕ್ತರಾಗಿಲ್ಲ. ತಮ್ಮ ಕೃತಿಗಳು ಪ್ರದರ್ಶನವಾಗಿಲ್ಲ, ಇವುಗಳಿಗೆ ಪ್ರಶಸ್ತಿಯನ್ನು ಕೊಟ್ಟಿಲ್ಲ, ವಿಮರ್ಶಕರು ತಮ್ಮ ಕೃತಿಗಳನ್ನು ಗಮನಿಸುತ್ತಿಲ್ಲ ಎಂಬ ಭಾವ ಅತಿಯಾಗಿದೆ. "ಕಂಬಾರ-ಕಾರ್ನಾಡ-ಲಂಕೇಶರಿಗೇ ನಾಟಕ ರಚನಾ ಪ್ರಕ್ರಿಯೆ ನಿಂತಿಲ್ಲವೆಂದು ಈ ಭಕ್ತಾಂಧರಿಗೆ ಎಷ್ಟು ಬೇಗನೆ ತಿಳಿಯುವುದೋ ಅಷ್ಟು ಒಳ್ಳೆಯದು. ನನ್ನ ಮೊಟ್ಟಮೊದಲ ಎರಡು ನಾಟಕಗಳು ಆಕಾಶವಾಣಿಯಿಂದ ಪ್ರಕಟವಾದಾಗ ಇವರಿಗೆ ಮೂಗು ಒರೆಸಿಕೊಳ್ಳಲು ಬರುತ್ತಿತ್ತೋ ಇಲ್ಲವೋ!".

"ಹೊಗಳಿ ಕಟ್ಟಿ ನನ್ನ ಎರಡು ನಾಟಕಗಳನ್ನು ಭ್ರೂಣಹತ್ಯೆ ಮಾಡಿದ ಎರಡು ನಾಯಿಗಳಿಗೆ" ಇತ್ಯಾದಿ ವಿಮರ್ಶಕರನ್ನು ಕುರಿತಂತೆ ಹೇಳಿರುವುದು ಸಮಂಜಸವೂ ಅಲ್ಲ, ಅಪೇಕ್ಷಣೀಯವೂ ಅಲ್ಲ.

– ಡಾ. ಎ. ಮುರಿಗೆಪ್ಪ, ಮುಖ್ಯಸ್ಥರು, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

೯. ಭಂಗಸ್ವನೆ : ಮಧುಸೂದನ ಜೆ. ಘಾಟೆ

ಶಾಂತಲಾ ಪ್ರಕಾಶನ, ೮೭, ಶಾಂತಲಾ, ಕುವೆಂಪು ರಸ್ತೆ, ಶಿವಮೊಗ್ಗ-೧. ಪ್ರ.ಮು. ೨೦೦೪, ಪು. ೭೪, ರೂ. ೫೦/-

ನಾಟಕದ ಹಿನ್ನೆಲೆ ಪುರಾಣದ್ದಾದರೂ ಆಧುನಿಕ ಬದುಕಿನ ಸಮಸ್ಯೆಗಳಿಗೂ ಪರಿಹಾರ ಒದಗಿಸುವ ಜೀವಸೆಲೆಯಾಗಿರುವುದು ವೈಶಿಷ್ಟ್ಯಪೂರ್ಣವೆನಿಸುತ್ತದೆ. ಸಾರ್ವಕಾಲಿಕ ಜೀವನಮೌಲ್ಯಕ್ಕೆ ನಿಮ್ಮ ಸಂಸ್ಕೃತಿಯನ್ನು ಬಿಂಬಿಸುವ ಪುರಾಣ ಪ್ರಸಂಗಗಳು ಎಂದಿಗೂ ಬತ್ತದ ಪುಷ್ಕರಣಿಗಳಿದ್ದಂತೆ. ಅಂತೆಯೇ ಪ್ರಸಂಗ ಮಹಾಭಾರತದ ಅನುಶಾಸನ ಪರ್ವದ್ದಾಗಿದ್ದರೂ ಇಂದಿನ ಅನುಶಾಸನರಹಿತ ಜೀವನಶೈಲಿ, ಮನುಷ್ಯನ ಸ್ವಾರ್ಥದ ಜೇಲಿಯ ಮಧ್ಯದಲ್ಲಿಯೇ ಓಡಾಡುತ್ತಿರುವಂತಿರುವ ಕಾಂಚನಮೃಗದಂತಹ ಮನೋಸ್ಥಿತಿಗೂ ಹಿಡಿದ ಕನ್ನಡಿಯಂತಿದೆ ಈ ನಾಟಕ.

ಒಬ್ಬ ವ್ಯಕ್ತಿ ರಾಜನಾಗಿದ್ದುಕೊಂಡು ಸರ್ವಶಕ್ತ ಸಂಪನ್ನ ಗಂಡಸಾಗಿರುವಾಗ ಕಾಣದ ಜೀವನದ ಸಾರ್ಥಕ್ಯವನ್ನು ಅದೇ ದರ್ಪದ ಗಂಡು ಆಕಸ್ಮಿಕ ಹೆಣ್ಣಾಗಿ ಪರಿವರ್ತಿತಗೊಂಡಾಗ ಉಂಟಾಗುವ ಸಂಘರ್ಷದೊಳಗಿಂದ ಸ್ಫುರಿಸಿದ ಮಾನವೀಯತೆಯನ್ನು ಮೆರೆಯುವ ಉಜ್ವಲ ಜ್ಯೋತಿಯಾಗಿ ಹೆಣ್ತನ, ಮಾತೃತ್ವ, ಅಂತಃಕರಣ, ಮಮತೆ ಮೂಲಕ ವೈಯಕ್ತಿಕ ಜೀವನವಷ್ಟೇ ಅಲ್ಲದೆ ಇಡೀ ಸಾಮಾಜಿಕ ಪರಿಸರವನ್ನೇ ಬೆಳಗುವ ಜೀವನಸಂದೇಶ ಭಂಗಸ್ವನೆ ಪಾತ್ರದ ಮೂಲಕ ಬಿತ್ತರಿಸಲ್ಪಟ್ಟಿದ್ದು, ಕೃತಕ ಉಪದೇಶವೆನಿಸದೇ ಸಹಜ ಸಂದೇಶವೆನಿಸಿದ್ದು, ಸ್ವತಃ ನಟ, ನಿರ್ದೇಶಕರಾಗಿ ಪಳಗಿರುವ ಮಧುಸೂದನ ಜೆ. ಘಾಟೆಯವರ ನೈಪುಣ್ಯಕ್ಕೆ ಸಾಕ್ಷಿಯಾದಂತಿದೆ ಈ ಕೃತಿ. ನಾಟಕ ಕುತೂಹಲಪೂರ್ಣವಾಗಿದೆ. ಆರಂಭದಿಂದ ಅಂತ್ಯದ ವರೆಗೂ ಪ್ರೇಕ್ಷಕನನ್ನು ಹಿಡಿದಿಟ್ಟುಕೊಳ್ಳುವ ಗುಣ ಹೊಂದಿದೆ. ಜೀವನದ ವಿವಿಧ ಮಜಲುಗಳಲ್ಲಿ ಸುತ್ತಾಡಿಕೊಂಡು ಬರುವ ಕಲೆಯನ್ನು ಕರಗತ ಮಾಡಿಕೊಂಡ ಘಾಟೆಯವರು ಇನ್ನೂ ಇಂಥ ಯಶಸ್ವಿ ನಾಟಕಗಳನ್ನು ರಚಿಸಲಿ.

– ಡಾ. ಮೋತಿಲಾಲ ಹಲವಾಯಿ, 'ವಿಶಾಲ', ೨ನೇ ಮುಖ್ಯರಸ್ತೆ, ಶಕ್ತಿನಗರ, ಧಾರವಾಡ-೫೮೦ ೦೦೪

೧೦. ನಾನು ಮೋಸಗಾರನೇ? : ಜಿ. ವಿ. ಶ್ರೀನಾಥಶಾಸ್ತ್ರೀ

೩೭, ಗುರುಕೃಪಾ, ೨ ನೇ ಕ್ರಾಸ್, ಜ್ಯೋತಿ ಬಡಾವಣೆ, ಯಲಚೇನಹಳ್ಳಿ, ಬೆಂಗಳೂರು-೭೮, ಪ್ರ.ಮು. ೨೦೦೪, ಪು. ೫೮, ರೂ. ೨೫/-

ಜಿ. ವಿ. ಶ್ರೀನಾಥಶಾಸ್ತ್ರೀ ವಿರಚಿತ ನವಿರಾದ ಹಾಸ್ಯಭರಿತ, ಅರ್ಥಗರ್ಭಿತ ಐದು ಲಲಿತ ಪ್ರಬಂಧಗಳ ಸಂಕಲನವಿದು. ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳಲ್ಲಿ ವಿಜ್ಞಾನಿಯಾಗಿ ತಮ್ಮ ಮೂರು ದಶಕಗಳಿಗೂ ಮಿಕ್ಕ ಸೇವಾ ಅವಧಿ-ಕರ್ತವ್ಯ ಮತ್ತು ಇತರ ಸಂದರ್ಭಗಳಲ್ಲಿನ ಲೇಖನ ಪ್ರತಿಭಾಮೂಸೆ ಯಿಂದ ಹೊರಬಂದ ಕಲ್ಪಿತವಲ್ಲದ ಬರಹವಿಲ್ಲಿದೆ. ಶಾಸ್ತ್ರೀಗಳು ಇಲ್ಲಿ ತಮ್ಮ ಜೀವನಾನುಭವಗಳ ಸಾಂದ್ರತೆಯನ್ನು ಓದುಗರ ಮನಮುಟ್ಟುವಂತೆ ತೆರೆದಿಟ್ಟಿದ್ದಾರೆ. ಅವರ ಚಿಂತನಾಲಹರಿಯಲ್ಲಿ ಹಲವು ಹತ್ತು ಸಂಗತಿ-ವಿಸಂಗತಿಗಳು ಹಾದುಹೋಗಿವೆ. 'ನಾನು ಮೋಸಗಾರನೇ?' ಪ್ರಬಂಧವು ತನ್ನದಲ್ಲದ ತಪ್ಪು ಅಥವಾ ಪ್ರಯತ್ನದಿಂದಾಗಿ ಪರಿಸ್ಥಿತಿಯ ಕೂಸಾಗಿ ಮೋಸಗಾರನೆಂಬ ಪಟ್ಟಕ್ಕೆ ಈಡಾಗಬೇಕಾದ ಪ್ರಸಂಗಗಳನ್ನು ಸುಪರಿಚಯಿಸುತ್ತದೆ. ಗೊತ್ತಿದ್ದೂ ನಂಬಿಸಿ ಮೋಸ ಮಾಡುವುದು ಒಂದು ವಿಧವಾದರೆ ನಂಬಿಸದೇ ಮೋಸ ಮಾಡುವುದು ಇನ್ನೊಂದು ವಿಧಾನ. ತನ್ನ ಜೀವಮಾನದಲ್ಲಿ ಯಾವುದೇ ವ್ಯಕ್ತಿ

ಶಾಸ್ತ್ರಕ್ಕಾಗಿಯಾದರೂ ಒಮ್ಮೆಯಾದರೂ ಅನಿವಾರ್ಯವಾಗಿ ಮೋಸಗಾರನೆಂಬ ಪಟ್ಟ ಕಟ್ಟಿಸಿಕೊಳ್ಳುವ ಸಾಧ್ಯತೆ ಇಲ್ಲದಿರುವುದಿಲ್ಲ. ಇತರರಿಗೆ ಮೋಸ ಮಾಡುವುದು ಒಂದು ರೀತಿಯದಾದರೆ ತಮಗೆ ತಾವೇ ಮೋಸ ಹೋಗುವ ಸಂಗ-ಪ್ರಸಂಗಗಳಿಗೇನು ಕೊರತೆಯಿಲ್ಲ. ಆಸೆಯೇ ದುಃಖಕ್ಕೆ ಕಾರಣವೆಂಬಂತೆ ನಂಬಿಕೆಯೇ ಮೋಸದ ಮೂಲ. ದಡ್ಡತನ ಅಥವಾ ಅತಿಬುದ್ಧಿವಂತಿಕೆ ಇದಕ್ಕೆ ಪ್ರೇರಣೆ. ಮೋಸ ಮಾಡುವುದೂ ಒಂದು ಅಮೂಲ್ಯ ಕಲೆ! ಒಟ್ಟಿನಲ್ಲಿ ಇದೊಂದು ದೈನಂದಿನ ಪ್ರಕ್ರಿಯೆ. ಅನೇಕ ವೇಳೆ ಮೋಸಗಾರಿಕೆ ಮತ್ತು ಸಾಚಾತನಗಳ ನಡುವೆ ಅಂತಹ ಗುರುತರವಾದ ಸ್ಪಷ್ಟ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಈ ಅಂಶಗಳ ಸಾರವತ್ತಾದ ಪ್ರಸಂಗಗಳ ಅನಾವರಣ ಪ್ರಬಂಧದ ಆಶಯವಾಗಿದೆ.

'ಹೊಟ್ಟೆತುಂಬ ಉಪವಾಸ' ಪ್ರಬಂಧವು ಧಾರವಾಡ-ಶೃಂಗೇರಿ-ಬೆಂಗಳೂರಿನ ಆತ್ಮೀಯ ಪರಿಚಯವನ್ನು ನೀಡುತ್ತಲೇ ಏಕಾದಶಿ ದಿನದಂದು ಉಪವಾಸ ವ್ರತಾಚರಣೆಯನ್ನೂ ನೀಗಿದ ಧಾರವಾಡ ಪೇಡದ ಮಹಿಮೆಯನ್ನು ತಿಳಿಸುತ್ತದೆ. ಇಲ್ಲಿ ಅಳವಡಿಸಿರುವ ಶಿಶುಪದ್ಯದ ಧಾಟಿಯ ಸಾಲುಗಳು ಗಮನ ಸೆಳೆಯುತ್ತವೆ. ಉಪವಾಸ ಆಚರಿಸುವಲ್ಲಿ ಉಂಟಾಗುವ ತಳಮಳ, ಮತ್ತದನ್ನು ಉಪಶಮನಗೊಳಿಸಲು ಕದ್ದುಮುಚ್ಚಿ ಕೈಗೊಳ್ಳುವ ಉದರ ಸಮಾರಾಧನೆ ನಗೆ ತರಿಸುತ್ತದೆ. ಇದೊಂದು ಬಹು ಲಘುಧಾಟಿಯ ಪ್ರಬಂಧ. ಸನ್ಮಾನ ಮಾಡಿಸಿಕೊಳ್ಳುವುದು ಹಾಗೂ ಮಾಡುವುದು ಇತ್ತೀಚಿನ ದಶಕಗಳ ಒಂದು ಬಿಡಿಸಲಾಗದ ಗೀಳು, ಚಟ; ಪಿಡುಗೆಂದರೂ ಒಪ್ಪೀತು. ಇಂದಿನ ಅತಿಯಾದ ಪ್ರಚಾರಪ್ರಿಯತೆಯ ದಿನ ವಿದ್ಯಮಾನಗಳಲ್ಲಿ ಸನ್ಮಾನಾಕಾಂಕ್ಷಿಗಳ ಸಂಖ್ಯೆ ಮಿತಿಮೀರಿರುವಾಗ ಅಪರೂಪವೆಂಬಂತೆ ತನ್ನ ಪಾಡಿಗೆ ತಾನು ಎಂಬಂತಿದ್ದ ಅಮಾಯಕ ಬಡಪಾಯಿ ಲೇಖಕನನ್ನು ಹಿಡಿದು ತಂದು ಸನ್ಮಾನಿಸುವುದಾಗಿ ವಾಗ್ದಾನವಿತ್ತ ಎಡಬಿಡಂಗಿತನದ ಆತ್ಮೀಯನೊಬ್ಬನ ಪರಿಚಯವಿಲ್ಲಿದೆ. ಅತ್ಯುತ್ಸಾಹದ ಮುಗ್ಧನ ಅಭಿಮಾನಕ್ಕೆ ಶರಣುಹೋಗಿ ಗೊಂದಲ ಗೋಜಲುಮಯ ಕೂಪಕ್ಕೆ ತಳ್ಳಲ್ಪಡುವ ಲೇಖಕನ ಅನುಭವ 'ಮರೆಯಲಾಗದ ಸನ್ಮಾನ'ದಲ್ಲಿ ಅಭಿವ್ಯಕ್ತಗೊಂಡಿದೆ; ಗತಿಸಿದ ಪ್ರಸಂಗ ಕರುಣಾಜನಕವೆನಿಸುತ್ತದೆ. ರಾಜ್ಯೋತ್ಸವದ ಭರಾಟೆಯಲ್ಲಿ ಜರುಗುವ ಇಂತಹ ಪ್ರಸಂಗಗಳಲ್ಲಿ ಸನ್ಮಾನ ಮಾಡಿಸಿಕೊಳ್ಳಲೇಬೇಕೆಂಬುವವರ ಆತುರ ಕಾತರ ಒಂದು ರೀತಿಯದ್ದಾದರೆ ಅದನ್ನು ಮಾಡಿ ಮುಗಿಸಿಯೇ ತೀರುವೆನೆಂಬುವವರ ಹಠ ಹಾಗೂ ಸಂಭ್ರಮ ಇನ್ನೊಂದು ಬಗೆಯದು. ಹೀಗಿರುವಾಗ ಅದರಿಂದ ದೂರವಿದ್ದು ತಪ್ಪಿಸಿಕೊಳ್ಳುವವರು ನಿಜಕ್ಕೂ ವಿರಳ. ಆದರೆ ಅಂತಹ ಶುದ್ಧಾಂತಃಕರಣ ಹಾಗೂ ನೇರ ನಡೆನುಡಿಯ ವ್ಯಕ್ತಿ ಶಂಕರನು ಎಲ್ಲರನ್ನೂ ಸನ್ಮಾನಿಸುತ್ತಲೇ ಕಣ್ಮುಚ್ಚಿ ವಿರಮಿಸಿದನೆಂಬ ಅತ್ಯಂತ ದಾರುಣ ಭಾವನಾತ್ಮಕ ಅಭಿವ್ಯಕ್ತಿ ಹಾಗೂ ಹೃದಯಸ್ಪರ್ಶದೊಂದಿಗೆ ಪ್ರಬಂಧ ಮುಗಿಯುತ್ತದೆ. ಮನೆಯಲ್ಲಿನ ನೆಮ್ಮದಿಯ ದಾಂಪತ್ಯದ ನಡುವೆಯೂ ಆಗಾಗ್ಗೆ ಸಂಭವಿಸುವ ಸಿಡಿಲು ಗುಡುಗುಗಳ ಆರ್ಭಟ ಒಂದೆಡೆಯಾದರೆ ಪೊಲೀಸರ ಅತಿಥಿಗಳಾಗಿ ಅನುಭವಿಸಿದ ಪಡಿಪಾಟಲುವಿನ ಸನ್ನಿವೇಶ 'ನಾವು ಪೊಲೀಸರ ಅತಿಥಿಗಳಾಗಿದ್ದು' ಪ್ರಬಂಧವಾಗಿದೆ. ಮಂದಿಗೆ ಮಾತನಾಡಲು ಪುಕ್ಕಟೆ ಗ್ರಾಸ ಸಿಕ್ಕರೆ 'ಕುರಿಮಂದಿ ಹಳ್ಳಕ್ಕೆ ಬಿದ್ದರೆ ಬಿಟ್ಟೂ ಬಿಡದೆ ಆಳಿಗೊಂದು ಕಲ್ಲು' ಎಂಬಂತೆ ರೆಕ್ಕೆಪುಕ್ಕ ಕಟ್ಟಿಕೊಂಡು ಹಾರಾಡುವ ಸುದ್ದಿಗಳಿಗೇನೂ ಬರವಿಲ್ಲವೆಂಬುದನ್ನು ಸಾಬೀತುಗೊಳಿಸಿದೆ. ಬಹುಶಃ ಅನೇಕ ಪ್ರತಿಷ್ಠಿತ ಪ್ರಬಂಧಕಾರರು ಕೂಡಾ ಆಯ್ದುಕೊಳ್ಳಲಿಚ್ಛಿಸವ ವಸ್ತು ಕುರಿತ 'ಶೌಚಾಲಯ ಮಹಾತ್ಮೆ' ಮಿಶ್ರ ವಿಷಯಗಳ ಅಪರೂಪದ ದೀರ್ಘ ಹಾಗೂ ಪ್ರೌಢ ಪ್ರಬಂಧವೆನ್ನಲಡ್ಡಿಯಿಲ್ಲ. ಶಾಸ್ತ್ರೀಗಳ ಶಾಸ್ತ್ರೀಯ ಲಕ್ಷಣಗಳನ್ನುಳ್ಳ ವಿನೂತನ ಬರಹವಿದು. ಶೌಚಾಲಯದ ಬಗೆಗಿನ ಲೇಖಕರ ವಿಸ್ತೃತ ಜ್ಞಾನ ಹಾಗೂ ಕಾಳಜಿ ಶ್ಲಾಘನೀಯ.

ಕೆಲವರು ತಮ್ಮ ಅನುಭವಗಳನ್ನು ಬರೆಯುತ್ತಾರೆ, ಹಲವರು ಮರೆಯುತ್ತಾರೆ. ನಿವೃತ್ತಿಯ ನಂತರ ಶಾಸ್ತ್ರೀಗಳು ಎಂದಿನಂತೆ ಪ್ರವೃತ್ತರಾಗಿ ಆತ್ಮೀಯರೆನಿಸುವ ಮುಕ್ತ ಪ್ರಬಂಧಗಳನ್ನಿತ್ತಿದ್ದಾರೆ. ಸರಳ ಹಾಗೂ

ವಿಭಿನ್ನ ನಿರೂಪಣೆ ಉಲ್ಲಾಸ ನೀಡುತ್ತದೆ; ಲಾಲಿತ್ಯದಿಂದ ವಸ್ತುನಿಷ್ಠ ವಿಡಂಬನೆಯು ಮಿಂಚಿ ಮರೆಯಾಗುವ ನಗು ಚಿಮ್ಮುತ್ತದೆ. ಹೊತ್ತಿಗೆಯಲ್ಲಿ ನಡುನಡುವೆ ಅಳವಡಿಸಿರುವ ಚಿತ್ರಗಳು ಪೂರಕವಾಗಿದ್ದರೂ ಇನ್ನೂ ಸ್ಪಷ್ಟವಾಗಿರಬೇಕಾದ ಅಗತ್ಯವಿದ್ದಿತು.

– ಡಾ. ಹೆಚ್. ಎ. ಪಾರ್ಶ್ವನಾಥ್, ಎಸ್.ಡಿ.ಎಂ. ಮೆಡಿಕಲ್ ಕಾಲೇಜು, ಸತ್ತೂರು, ಧಾರವಾಡ-೯

೧೧. ಆಗ್ನೇಯದಂಗಳದಲ್ಲಿ : ವೆಂಕಟೇಶ ಮಾಚಕನೂರ

ಲೋಹಿಯಾ ಪ್ರಕಾಶನ, ಕಪ್ಪಗಲ್ಲು ರಸ್ತೆ, ಗಾಂಧೀನಗರ, ಬಳ್ಳಾರಿ. ಪ್ರ.ಮು. ೨೦೦೫. ಪು.೧೬೦. ರೂ. ೬೦/-

ವೆಂಕಟೇಶ ಮಾಚಕನೂರ ಅವರು ತಮ್ಮ ಕಥೆ, ಲೇಖನ, ಪ್ರವಾಸ ಕಥನಗಳಿಂದಾಗಿ ಸಾಹಿತ್ಯಾಸಕ್ತರಿಗೆ ಪರಿಚಿತರು. `ಥೇಮ್ಸ್‌ನಿಂದ ಟೈಬರ್ ವರೆಗೆ` ಈಗಾಗಲೇ ಎರಡು ಮುದ್ರಣ ಕಂಡಿದೆ. `ಆಗ್ನೇಯದಂಗಳದಲ್ಲಿ` ಥಾಯ್ಲೆಂಡ್, ಮಲೇಶಿಯಾ, ಸಿಂಗಪುರ, ಇಂಡೋನೇಶಿಯಾ ಮುಂತಾದ ಪೂರ್ವ ಏಶಿಯಾ ದೇಶಗಳಲ್ಲಿ ಮಾಚಕನೂರರ ಪ್ರವಾಸಕಥನ. ಹೊರದೇಶಗಳ ಪ್ರವಾಸ ಈಗ ಜನಪ್ರಿಯವೂ, ಸುಲಭವೂ ಆಗಿರುವಾಗ, ಇಂಥ ಪ್ರವಾಸಗಳಿಗೆ ಮಾಡಿಕೊಳ್ಳಬೇಕಾದ ಸಿದ್ಧತೆಯ ಬಗೆಗೆ ಮಾಚಕನೂರರ ಅಭಿಪ್ರಾಯ ಬೇರೆಯವರಿಗಿಂತ ವಿಭಿನ್ನ : ``ಯಾವುದೇ ದೇಶ ಅಥವಾ ಪ್ರದೇಶದ ಪ್ರವಾಸ ಕೈಗೊಳ್ಳುವುದಕ್ಕಿಂತ ಮುಂಚೆ ಆ ದೇಶ, ಪ್ರದೇಶದ ಸ್ಥೂಲ ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ ಪರಿಕಲ್ಪನೆ ನಮಗಿದ್ದರೆ, ಅಲ್ಲಿ ನೋಡುವ, ವೀಕ್ಷಿಸುವ, ಅದರ ಮಹತ್ವ ನಮಗೆ ಶೀಘ್ರವಾಗಿ ಆಗುತ್ತದೆ. ...ಇಲ್ಲದೇ ಹೋದರೆ ಬರೀ ಜಡ ಸ್ಥಾವರಗಳನ್ನು ನೋಡಿಬಂದ ಅನುಭವ ನಮ್ಮದಾಗಬಹುದು.'' (ಪು. ೮೬). ಈ ನಿಲುವಿನಿಂದಾಗಿ ಮಾಚಕನೂರ ತಾವು ಪ್ರವಾಸ ಮಾಡಿದ ದೇಶಗಳ ಭೌಗೋಳಿಕ, ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿವರಗಳನ್ನು ಅತ್ಯಂತ ನಿಖರವಾಗಿ ಹಾಗೂ ಅಧಿಕೃತವಾಗಿ ನೀಡುತ್ತಾರೆ. ಹಾಗಾಗಿ `ಆಗ್ನೇಯದಂಗಳದಲ್ಲಿ` ಪ್ರವಾಸಿಯ ವರದಿಯಾಗದೇ, ಪ್ರವಾಸಕಥನವಾಗಿ, ಆ ದೇಶಗಳ ಸಮಗ್ರ ಚಿತ್ರಣವನ್ನು ಕಟ್ಟಿಕೊಡುತ್ತದೆ, ಹಾಗೂ ಈ ಬರಹದಲ್ಲಿ ಕಂಡುಬರುವ ನಿಖರತೆ ಮಾಚಕನೂರರ ಅಧ್ಯಯನಶೀಲತೆಗೆ ಸಾಕ್ಷಿಯಾಗಿದೆ.

ಆಗ್ನೇಯ ಏಶಿಯಾ ದೇಶಗಳಿಗೂ ಮತ್ತು ಭಾರತಕ್ಕೂ ಪ್ರಾಚೀನ ಕಾಲದಿಂದಲೂ ಇರುವ ಧಾರ್ಮಿಕ, ಐತಿಹಾಸಿಕ, ರಾಜಕೀಯ ಸಂಬಂಧಗಳನ್ನು, ಆ ಸಂಬಂಧಗಳು ಬೆಳೆದುಬಂದ ಬಗೆಯನ್ನು ನೋಡುವಾಗ, ನಮ್ಮ ಪೂರ್ವಜರೂ ಬೇರೆ ದೇಶಗಳಿಗೆ ಹೋಗಿ ತಮ್ಮ ಸಾಮ್ರಾಜ್ಯಗಳನ್ನು – ಅಂದರೆ ಇಂದಿನ ಭಾಷೆಯಲ್ಲಿ ವಸಾಹತುಗಳನ್ನು ಸ್ಥಾಪಿಸಿದ್ದರೆಂದು ತಿಳಿದಾಗ ಆಶ್ಚರ್ಯವಾಗುತ್ತದೆ. ಸುಮಾತ್ರಾ, ಜಾವಾ ದ್ವೀಪಗಳಲ್ಲಿ ಹಿಂದೂ ಮತ್ತು ಬೌದ್ಧ ಧರ್ಮಗಳು ನೆಲೆಸಿದ್ದುವಲ್ಲದೇ, ಶ್ರೀವಿಜಯ, ಶೈಲೇಂದ್ರ, ಮಾಜಾಪಹಿಕ ಮುಂತಾದವರ ಸಾಮ್ರಾಜ್ಯಗಳು ಇಂದಿನ ಬೋರ್ನಿಯೋ, ಇಂಡೋನೇಶಿಯಾ, ಮಲೇಶಿಯಾಗಳಾಗಿರುವುದನ್ನು ತಿಳಿದಾಗ, ಈ ಭಾರತ ಎಂಬ ದೇಶ ಎಂದೋ ಒಮ್ಮೆ ಅಖಂಡವಾಗಿದ್ದಿರಬೇಕು ಎಂದೂ ಅನಿಸುತ್ತದೆ. ಬಾಲಿ ದ್ವೀಪ ಇಂದಿಗೂ ಹಿಂದೂ ದ್ವೀಪವಾಗಿಯೇ ಉಳಿದಿದ್ದು, ಬ್ರಹ್ಮ, ವಿಷ್ಣು, ಮಹೇಶ್ವರರು ಮನೆಮನೆಯಲ್ಲಿಯೂ ನಿತ್ಯ ಪೂಜೆಗೊಳ್ಳುತ್ತಿರುವುದು ಬಾಲಿ ದ್ವೀಪವೊಂದರಲ್ಲಿಯೇ ಎಂಬ ಅಂಶ ಈ ಪ್ರವಾಸಕಥನದಿಂದ ತಿಳಿದುಬಂದು ಅಚ್ಚರಿ ಮೂಡುತ್ತದೆ. ಕಾಂಡಿನ್ಯ ಮತ್ತು ಅಗಸ್ತ್ಯ ಋಷಿಗಳಿಗೂ ಅಲ್ಲಿ ಪೂಜೆ ಸಲ್ಲುವುದೂ ತಿಳಿದುಬರುತ್ತದೆ. ಪೂರ್ವದೇಶಗಳಿಗೆ ಬಂದ ಹಿಂದೂಗಳು ಅಲ್ಲಿನ ಮಹಿಳೆಯರನ್ನು ಪರಿಸುಪ್ರವರ ಮೂಲಕ ಅಲ್ಲಿನ ಸಾಮ್ರಾಜ್ಯ ಸ್ಥಾಪನೆಗೆ ನಾಂದಿ ಹಾಡಿದರೆಂದು ತಿಳಿದುಬರುತ್ತದೆ. ಅಂಕೋರ್‌ವಾಟ್‌ನ ವಿಷ್ಣು ದೇವಾಲಯ, ಪ್ರಂಬನನ್ ಮತ್ತು ಬೋರೋಬುದೂರು ದೇವಾಲಯ ಸಮುಚ್ಚಯಗಳು ಪರಂಪರೆಯ ಅಂಗವಾಗಿ ಇನ್ನೂ ಉಳಿದುಬಂದಿರುವ ರಾಮಾಯಣ, ಮಹಾಭಾರತಗಳು. ದೇವಾಲಯಗಳ ಸುಂದರ ಗೋಪುರಗಳು, ಇವುಗಳ ವಿವರಗಳನ್ನೋದುವಾಗ ಭಾರತದ ಬಂದು

ಭಾಗವಲ್ಲಿರುವವೇನೋ ಎನಿಸುತ್ತವೆ. ಈ ಐತಿಹಾಸಿಕ ವಿವರಗಳು, ಆ ದೇಶಗಳನ್ನು ನೋಡಬೇಕೆಂಬ ಕುತೂಹಲ ಹುಟ್ಟಿಸುವುದಲ್ಲದೇ ಇತಿಹಾಸದ ಆಗುಹೋಗುಗಳ ಬಗೆಗೆ ಚಿಂತಿಸುವಂತೆ ಪ್ರಚೋದಿಸುತ್ತವೆ.

ತಾವು ಭೇಟಿ ಮಾಡಿದ ದೇಶಗಳಲ್ಲಿ ಸುಂದರ ಸ್ಥಳಗಳನ್ನು ಅತ್ಯಾಕರ್ಷಕ ಪ್ರವಾಸೀ ತಾಣಗಳಾಗಿ ಪರಿವರ್ತಿಸುವುದನ್ನು ಪ್ರಸ್ತಾಪಿಸಿ, ಭಾರತದಲ್ಲಿ ವ್ಯಾಪಕವಾದ ಸಮುದ್ರ ತೀರ, ನದಿಗಳು, ಪರ್ವತಗಳು ಮುಂತಾದ ರಮ್ಯಸ್ಥಳಗಳಿದ್ದೂ ಅವುಗಳನ್ನು ಆಕರ್ಷಕ ಪ್ರವಾಸಿ ತಾಣಗಳಾಗಿ ಮಾರ್ಪಡಿಸುವುದರಲ್ಲಿ ಸರಕಾರ ಹಾಗೂ ಜನತೆ ವಿಫಲವಾಗಿರುವುದನ್ನು ಮಾಚಕನೂರ ಪದೇಪದೇ ತಿಳಿಸುತ್ತಾರೆ. ಎಂಥ ಸುಂದರ, ರೋಚಕ ದೃಶ್ಯ ನೋಡುವಾಗಲೂ ಅವರ ಕಣ್ಣು, ಮನಸ್ಸು, ಬೇರೆ ದೇಶಗಳ ಜನರ ಕರ್ತೃತ್ವಶಕ್ತಿ, ಅಲ್ಲಿನ ಸಾರಿಗೆ ವ್ಯವಸ್ಥೆ, ಸಾರ್ವಜನಿಕ ಸೌಲಭ್ಯಗಳೊಡನೆ ಭಾರತದಲ್ಲಿನ ಪರಿಸ್ಥಿತಿಯನ್ನು ಹೋಲಿಸುತ್ತಿರುತ್ತವೆ.

ಥಾಯ್ಲೆಂಡ್‌ನ ಮಸಾಜ್ ಪಾರ್ಲರ್‌ಗಳು ಆಕರ್ಷಕ ಮತ್ತು ಜನಪ್ರಿಯ ಕೂಡ. “ಥಾಯ್ಲೆಂಡಿಗೆ ಹೋಗಿ ಹರಿಕಥೆ ಕೇಳುವರಾರು?” ಎಂದು ಮಸಾಜ್ ಪಾರ್ಲರ್‌ಗಳ ಬಗೆಗೆ ಸಾಮಾನ್ಯ ಜನರ ಆಕರ್ಷಣೆಯನ್ನು ವಿವರಿಸುತ್ತಲೇ, ತಮ್ಮ ಟೂರ್‌ಗೈಡ್ ಕಾಕಾಳ ಮೂಲಕ ಥಾಯ್ಲೆಂಡ್‌ನ ಸಭ್ಯ, ಸಾಂಸ್ಕೃತಿಕ ಜೀವನದ ಪರಿಚಯ ಮಾಡಿಸುತ್ತಾರೆ ಮಾಚಕನೂರ. ಅಲ್ಲಿಯ ಪತ್ತಯಾ ಮೈಮನಗಳ ಸುಳಿಯಲ್ಲಿ ಮುಳುಗಬಯಸುವವರಿಗೆ ಹೇಳಿ ಮಾಡಿಸಿದ ಕ್ಷೇತ್ರವಂತೆ. ಥಾಯ್ಲೆಂಡ್, ಜಕಾರ್ತಗಳಂತಹ ಪುಟ್ಟ ದೇಶಗಳು ರಸ್ತೆ ಸಂಪರ್ಕದಲ್ಲಿ ಕಲ್ಪಿಸಿರುವ ಮೂಲಭೂತ ಸೌಕರ್ಯಗಳನ್ನು ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಸಾಧಿಸಲಾಗದಿರುವುದಕ್ಕೆ ವಿಷಾದಿಸುತ್ತಾರೆ. ಥಾಯಿ ಆಹಾರದ ಬಗೆಗೆ ಹೇಳುವಾಗ ಅದೆಷ್ಟೋ ಬಗೆಯ ಜೀವಜಂತುಗಳು ಇಲ್ಲಿ ಹಗಲು ರಾತ್ರಿ ಬೇಯುತ್ತಲೇ ಇರುತ್ತವೆ. ಮನುಷ್ಯನ ಜಿಹ್ವಾಚಾಪಲ್ಯಕ್ಕೆ ಎಣೆಯುಂಟೆ ಎಂದು ಮರುಗುತ್ತಾರೆ. ಪ್ರವಾಸೀ ಸ್ಥಳಗಳಲ್ಲಿರುವ ಅತ್ಯಾಕರ್ಷಕವಾದ, ಮೈ ಝುಮ್ಮೆನಿಸುವ ಮನೋರಂಜಿತ ಆಟಗಳ ವಿವರ ಓದುಗರ ಮೈ ನವಿರೇಳಿಸುತ್ತದೆ. ಮಲಯಾ ಮತ್ತು ಇಂಡೋನೇಶಿಯಾದಲ್ಲಿ ಭಾಷೆಗೆ ಇಂಗ್ಲಿಷ್ ಲಿಪಿ ಇರುವ ಅಚ್ಚರಿಯ ಸಂಗತಿ ತಿಳಿಸಿ, ನಮ್ಮ ದೇಶ ಇನ್ನೂರು ವರ್ಷಗಳಿಗೂ ಹೆಚ್ಚಾಗಿ ಬ್ರಿಟಿಷರ ಆಡಳಿತದಲ್ಲಿದ್ದರೂ, ಯಾವುದೇ ಭಾಷೆಗೆ ಇಂಗ್ಲಿಷ್ ಲಿಪಿಯಾಗಿಲ್ಲವೆಂದು ಸಮಾಧಾನದ ನಿಟ್ಟುಸಿರಿಡುವ ಮಾಚಕನೂರ, ಇಂಗ್ಲಿಷ್ “ನಮಗೆ ಬೆಳಕಾಗುತ್ತಲೇ ಬೆಂಕಿಯಾಗಬಾರದು” ಎನ್ನುತ್ತಾರೆ. ಮಾಚಕನೂರರ ಪ್ರವಾಸಕಥನ ವಿಭಿನ್ನ ದೇಶಗಳ ಬಹುಮುಖೀ ಜೀವನದ ಪರಿಚಯ ಮಾಡಿಕೊಡುವುದರೊಂದಿಗೇ, ಲೇಖಕರ ಬಹುಮುಖೀ ವ್ಯಕ್ತಿತ್ವವೂ ಅನಾವರಣಗೊಳ್ಳುವುದು ಈ ಕಥನದ ವೈಶಿಷ್ಟ್ಯ. ಆಳವಾದ ಅಧ್ಯಯನ, ನವಿರಾದ ಸಭ್ಯ ಹಾಸ್ಯ, ಸುಂದರ, ಸ್ವಚ್ಛ, ಭಾಷೆಯಿಂದಾಗಿ ‘ಆಗ್ನೇಯದಂಗಳದಲ್ಲಿ’ ಪ್ರವಾಸ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ.

– ಎಲ್. ವಿ. ಶಾಂತಕುಮಾರಿ

೧೫೪, ರಾಮರಕ್ಷಾ, ೪ನೇ ಮೇನ್, ೫ನೇ ಕ್ರಾಸ್, ಪೂರ್ಣಪ್ರಜ್ಞ ಲೇಔಟ್

ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫

ಸಂಕಲನ : ಅನಿಸಿಕೆ

೧. ಸಂಕಲನದ ಎಲ್ಲ ಸಂಚಿಕೆಗಳನ್ನು ಪ್ರೀತಿಪೂರ್ವಕ ಸಂಗ್ರಹಿಸಿಟ್ಟುಕೊಂಡಿದ್ದೇನೆ. ಇವು ನನ್ನ ಪಾಲಿಗೆ ಒಂದು ಅಪೂರ್ವ ಆಸ್ತಿ. **– ಡಾ. ಬಿ. ಎ. ವಿವೇಕ ರೈ, ಹಂಪಿ**

೨. ಸಂಕಲನದೊಂದಿಗೆ ಮಕರಂದ ಪದ / ಹೇಗೋ ಹೊಂದಿಕೊಳ್ಳುತ್ತದೆ / ಜೇನು ಹುಟ್ಟು / ದ ಗುಟ್ಟು ಇದರೊಳಗಿದೆ // ಕಡಿಯುತ್ತಿರುವ ಕಾಡುಗಳಲ್ಲಿ / ಗುಬ್ಬಿ ಗೂಡು ಕಟ್ಟದ ನಾಡುಗಳಲ್ಲಿ / ಹುಟ್ಟು ಕಟ್ಟುವ ಕೆಲಸ ಅಷ್ಟು ಸುಲಭವಲ್ಲ / ನೆಲದ ಪರಿಮಳ ಶೋಧಿಸಿ, ಸೋಸಿ / ಕೀಳು ಕೀಟಗಳಿಂದ ಕಾದು, ಸದಭಿ / ರುಚಿಯಾಗಿಸುವ ಕೆಲಸ ಅಷ್ಟು ಸರಳವಲ್ಲ / ಕೂಡಿಸುವ ಒಂದುಗೂಡಿಸುವ / ಬೆಳಕ ಮೂಡಿಸಿ ಕತ್ತಲೋಡಿಸುವ / ಕೆಲಸ ಅಷ್ಟು ಸುಲಭವಲ್ಲ / ವ್ಯಷ್ಟಿಯ ಕೇಂದ್ರದಿಂದ / ಸಮಷ್ಟಿಯ ವರ್ತುಲ ರಚಿಸುವ / ಬಟ್ಟೆ ತೋರುವ ದಿಗಂಬರ ಕೆಲಸ / ಅಷ್ಟು ಸುಲಭವಲ್ಲ // ಹೊಕ್ಕುಳಿನ ಕಮಲ ಹೃದಯಕಮಲ / ಸಹಸ್ರಾರ ಕಮಲಗಳ ಮಧುರಸಕೆ ತುಯ್ಯುದವರಾರು / ಅಪ್ಪ ಅವ್ವ ಗುರುಗಳ ಋಣ / ನೆನೆದು ತೊಯ್ಯುದವರಾರು // ಇಂಥ ಪುಣ್ಯದ ಕಣ್ಣು ತೆರೆಯಿಸಿದ / ನಿಮಗೆ ಋಣಿಯಾಗಿರುತ್ತವೆ / ಬೆಳದಿಂಗಳುಂಡ ತಾರೆಗಳು / ಜೇನುಂಡು ಹೂವಾದ ಹೃದಯಗಳು

– ಬಸವರಾಜ ವಕ್ಕುಂದ, ಧಾರವಾಡ

೩. ಪ್ರಕಟವಾದ ಬರಹಕ್ಕೆ ಸಂಭಾವನೆ ಕೊಡುವ ಸತ್‌ಸಂಪ್ರದಾಯವನ್ನು ತಪ್ಪದೆ ಪಾಲಿಸಿಕೊಂಡು ಬರುತ್ತಿರುವ ತಾವು ಅಭಿನಂದನಾರ್ಹರು. **ಸಂಕಲನ-೨೩** ರಲ್ಲಿ ಪ್ರಕಟಿತ 'ನನ್ನ ಶಾಲಾಗುರುಗಳು' ಲೇಖನಕ್ಕೆ ದಯವಿಟ್ಟು ಗೌರವ ಸಂಭಾವನೆ ಕಳಿಸಬೇಡಿ. **ಸಂಕಲನ**ದಲ್ಲಿ ಲೇಖನ ಪ್ರಕಟವಾಗುವುದೇ ಗೌರವದ ಸಂಗತಿ. **ಸಂಕಲನ** ಸಂಚಿಕೆಯಿಂದ ಸಂಚಿಕೆಗೆ ಗುಣಮಟ್ಟದಲ್ಲಿ ಹೆಚ್ಚಿನದನ್ನು ಸಾಧಿಸಿಕೊಂಡು ಬರುತ್ತಿದೆ. ಅದಕ್ಕೆ ತಮ್ಮ ಅಸಾಧಾರಣ ಪ್ರತಿಭೆ, ಸಂತತವಾದ ಪರಿಶ್ರಮ, ಲೇಖಕ ಬಳಗದೊಂದಿಗಿನ ಅಂತಃಕರಣಪೂರ್ವಕ ಸಂಬಂಧಗಳೇ ಕಾರಣ. **– ಬಸವರಾಜ ಚಿಕ್ಕನರಗುಂದ, ಹುಬ್ಬಳ್ಳಿ**

೪. 'ಖಿತಾ' ಛಂದೋರೂಪ ಕುರಿತು ವಿವರಿಸಿದ್ದು, ಜೊತೆಗೆ ಅಮರಚಿಂತರ ಕವನ ಪ್ರಕಟಿಸಿದ್ದು ಯಥೋಚಿತವಾಗಿದೆ. ಡಾ. ಷ. ಶೆಟ್ಟರ್ ಅವರ ಪಾಂಡಿತ್ಯಪೂರ್ಣ 'ಕವಿರಾಜಮಾರ್ಗಮಂಥನ' ಕುತೂಹಲ ಕೆರಳಿಸುತ್ತಿದೆ. ಎಂ. ಡಿ. ವಕ್ಕುಂದ, ವಿನಯಾರ ಪದ್ಯ ಮತ್ತೆ ಮತ್ತೆ ಓದುವಂತಿವೆ. 'ಕಡೀಪುಟ' ಅರ್ಥಪೂರ್ಣವಾಗಿದೆ. **– ಎಸ್. ಎಂ. ಕಂಬಾಳಿಮಠ, ಕೊಪ್ಪಳ**

೫. **ಸಂಕಲನ-೨೩** ತಲುಪಿತು. ವಿನಯಾ, ಮಮತಾ ಜಿ. ಸಾಗರ, ಲಕ್ಕೂರು ಸಿ. ಆನಂದರ ಪದ್ಯ ಗಮನ ಸೆಳೆದವು. ಈ ಸಾರಿಯ 'ಕಡೀಪುಟ' ಬಹು ಅರ್ಥಪೂರ್ಣವಾಗಿದೆ. ವಿಚಾರಯೋಗ್ಯವಾದ ಮಾತುಗಳಿಂದ ಮತ್ತೆ ಓದಲೇಬೇಕೆನ್ನಿಸುವ ಹಾಗಿದೆ. ಬಹಳ ಕರಾರುವಾಕ್ಕಾಗಿ, ಠಾಕೋಠೀಕ್ ನಿಗದಿತ ದಿನಕ್ಕೆ **ಸಂಕಲನ** ತಲುಪುತ್ತದೆ. **– ಲಲಿತಾ ಸಿದ್ದಬಸವಯ್ಯ, ತುಮಕೂರು**

೬. **ಸಂಕಲನ** ಓದುತ್ತಿದ್ದಂತೆ ಹಳೆಯ ಆತ್ಮೀಯ ಸ್ನೇಹಿತ ಮತ್ತೆ ಭೇಟಿಯಾದ ಅನುಭವವಾಗುತ್ತದೆ. ಪತ್ರಿಕೆ ನಿಜಕ್ಕೂ ತುಂಬಾ ಅಚ್ಚುಕಟ್ಟಾಗಿ, ಅಷ್ಟೇ ಅರ್ಥಪೂರ್ಣವಾಗಿ ಬರುತ್ತಿದೆ. ಡಾ. ವಿನಯಾ ಅವರ ಕವನ ಮಾರ್ಮಿಕವಾಗಿದೆ, ವೈಚಾರಿಕವಾಗಿ ನನ್ನನ್ನು ಕಾಡುತ್ತಿದೆ. ಕವನದ ಹುಡುಗಿಯ ಸ್ಥಿತಿ ನಮ್ಮ ನಿತ್ಯ ಸಮಾಜದ ಪರಿಸ್ಥಿತಿಗೆ ಹಿಡಿದ ಕೈಗನ್ನಡಿ. 'ಕಡೀಪುಟ'ವಂತೂ ಆತ್ಮೀಯ ಅನುಭವದೊಡನೆ ಶ್ರೀಮಂತವಾಗಿದೆ. 'ಕಡೀಪುಟ' ಕಡೀತನಕಾ ಹಿಂಗ್‌ಅ ಬರ್‍ಲಿ.

– ಖುರ್ಷೀದ ಆಲಂ ಮೋಮಿನ, ಧಾರವಾಡ

೭. **ಸಂಕಲನ-೨೩** ರಲ್ಲಿ ಪ್ರಸನ್ನರು `ಜನಾನುರಾಗವೂ ರಂಗಭೂಮಿಯೂ` ಎಂಬ ಲೇಖನದಲ್ಲಿ ಪ್ರಸ್ತುತ ಕನ್ನಡ ರಂಗಭೂಮಿಯ ಬಗ್ಗೆ ಭೂತಗನ್ನಡಿ ಹಿಡಿದಿದ್ದಾರೆ. ವೇದಿಕೆಗಳ ಮೇಲೆ ಮಾಡುವ ಭಾಷಣ, ಗೋಷ್ಠಿಗಳಲ್ಲಿ ಮಂಡಿಸುವ ಪ್ರಬಂಧ, ಪತ್ರಿಕೆಗಳಲ್ಲಿ ಬರೆಯುವ ವಿಮರ್ಶೆ ಇತ್ಯಾದಿಗಳೇ ಬೇರೆ–ಈಗ ನಾವು ಎದುರಿಸುತ್ತಿರುವ ವಾಸ್ತವ ಪರಿಸ್ಥಿತಿಗಳೇ ಬೇರೆ! ಸಮಕಾಲೀನ ಕನ್ನಡ ರಂಗಭೂಮಿಯೂ ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಖಂಡಿತವಾಗಿಯೂ ಸೋತಿದೆ; ಸೋಲುತ್ತಲೇ ಇದೆ. ಕನ್ನಡ ರಂಗಭೂಮಿಯ ಉದ್ಧಾರ ಮಾಡಹೊರಟಿರುವ ನಮ್ಮಂಥ ರಂಗಕರ್ಮಿಗಳು `ನಾಟಕವಾಡುವುದು ಪ್ರೇಕ್ಷಕರಿಗೆ; ಪ್ರೇಕ್ಷಕರನ್ನು ತಲುಪದೇ ಇರುವಂಥಾದ್ದು ಉಳಿಯುವುದಿಲ್ಲ, ಬೆಳೆಯುವುದಿಲ್ಲ` ಎಂಬ ಮೂಲತತ್ವವನ್ನು ಅರಿತು ಮುಂದೆ ಸಾಗಬೇಕಾಗಿದೆ. **– ಕೆ. ಆನಂದ ಗಾಣಿಗ, ಉಡುಪಿ**

೮. **ಸಂಕಲನ-೨೩** ರ ಲೇಖನಗಳು ತುಂಬಾ ಚೆನ್ನಾಗಿವೆ. ಸಿ.ಡಿ.ಎನ್. ಅವರ ನೆನಪಂತೂ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ. ಜಿ. ಕೆ. ರವೀಂದ್ರಕುಮಾರರ ಕವನಗಳೂ ಇಷ್ಟವಾದವು.

– ಡಾ. ಡಿ. ಸಿ. ರಾಜಪ್ಪ, ಬೆಂಗಳೂರು

೯. ಸಪ್ಟೆಂಬರ್ ತಿಂಗಳ ಶಿಕ್ಷಕರ ದಿನೋತ್ಸವದ ಸಂದರ್ಭದಲ್ಲಿ ಆ ಬಗ್ಗೆ ಹೇಳದೆಯೇ ಶಾಲಾಗುರುಗಳ ಬಗ್ಗೆ ಗೌರವ ತೋರಿ ಪ್ರಕಟಿಸಿದ ಎರಡೂ ಲೇಖನಗಳು ಭಿನ್ನ ಧ್ವನಿ, ಅನುಭವ, ಧಾಟಿಗಳಲ್ಲಿದ್ದು ಆಪ್ತವೆನಿಸಿದವು. ಅವಕ್ಕೆ ಹೊಂದುವಂತೆ ಬರೆದ 'ಕಡೀಪುಟ'ವೂ ದಿನ ಆಚರಣೆಯ ಬಗ್ಗೆ ಮರುಚಿಂತಿಸುವಂತೆ ಮಾಡಿದೆ. **– ಬಿ. ಎ. ಸನದಿ, ಕುಮಟಾ**

– ಶಿವಶಂಕರ ಹಿರೇಮಠ, ಧಾರವಾಡ

೧೦. **ಸಂಕಲನ** ಚೆನ್ನಾಗಿ ಬರುತ್ತಿದೆ ಮತ್ತು ಅದು ಈಗ ನಮಗೆಲ್ಲ ಖಂಡಿತಾ ಅಗತ್ಯವಾಗಿದೆ ಸಹ. ಸಾಹಿತ್ಯ ಸಂಚಿಕೆಗಳು ಹೆಚ್ಚಿದಷ್ಟು ನಮ್ಮ ಅನಿಸಿಕೆ, ಒಂದು ಚರ್ಚೆ ಮಂಡಿಸುವ ವಾತಾವರಣವೂ ಇರುತ್ತದೆ. 'ಸಂಕ್ರಮಣ'ದ ದಿನಗಳಿಂದಲೇ ನಾನು ನಿಮ್ಮೊಂದಿಗೆ ಇಲ್ಲವೆ! ಮುಂದೂ ಇರುತ್ತೇನೆ. ನಿಮ್ಮಂಥವರೊಂದಿಗೆ ಇರುವುದೇ ಒಂದು ಮಹತ್ವ. **– ಎಸ್. ಶೇಷಾದ್ರಿ ಕಿನಾರ, ಶಿವಮೊಗ್ಗ**

೧೧. **ಸಂಕಲನ** ಸರಿಯಾಗಿ, ತಪ್ಪದೇ ಸತ್ವಪೂರ್ಣ ಲೇಖನಗಳೊಂದಿಗೆ ಬರುತ್ತಿದೆ. ಅಷ್ಟೊಂದು ಕಾಳಜಿ ಇಟ್ಟು, ಪತ್ರಿಕೆ ತರುತ್ತಿರುವುದು ನಿಮ್ಮ ಶ್ರಮ ಹಾಗೂ ನಿಭಾಯಿಸುವ ಹೊಣೆಗಾರಿಕೆ ಎಂದೇ ಹೇಳಬೇಕು. ಬಸವರಾಜ ಚಿಕ್ಕನರಗುಂದ ಅವರ `ಗುರುಗಳು` ಲೇಖನ ಅಂದಿನ ಶಿಷ್ಯರ ವಿನಯ ವಿಧೇಯತೆಗಳನ್ನು ವಿವರಿಸುತ್ತದೆ. ರಾಗಿಣಿ ಆರ್. ಅವರ 'ಅಪ್ಪ ಅವ್ವ' ಬಹಳ ಹಿಡಿಸಿತು. ಹೇಳಿದ ಸಮಯಕ್ಕೆ ಸ್ವರ್ಗ ಸೇರಿದ್ದೂ ಒಂದು ಪವಾಡವೇ. ಭಾಸ್ಕರ ಮಯ್ಯ ಅವರ `ಏಳು ಹಿಂದೀ ಅನುವಾದ ಕವಿತೆಗಳು` ಇಂದಿನ ಕ್ರೂರ ವ್ಯವಸ್ಥೆಯನ್ನು ತಣ್ಣಗೆ ಬಿಂಬಿಸುತ್ತವೆ. ಎಂ. ಡಿ. ವಕ್ಕುಂದರ, ವಿನಯಾ ಹಾಗೂ ಲಕ್ಕೂರ ಆನಂದರ ಕವನಗಳು ಸುಂದರವಾಗಿವೆ. ಶ್ರೀನಿವಾಸ ಸುತ್ರಾವೆ ಅವರು ಸಿ.ಡಿ.ಎನ್. ಅವರ ಆದರ್ಶ ಚಿತ್ರ ಸಜೀವಗೊಳಿಸಿದ್ದಾರೆ. – ಎಂ. ಡಿ. ಗೋಗೇರಿ, ಹುಬ್ಬಳ್ಳಿ

೧೨. ಸಂಕಲನ ಸಾಹಿತ್ಯಾಸಕ್ತರಿಗೆ ಭೂರೀಭೋಜನ / ಆದರೆ ಸಂಪಾದಕರಿಗಷ್ಟೇ ಗೊತ್ತು ಅದರ ಹಿಂದಿನ ತಯಾರಿ-ಪರಿಶ್ರಮ / ಹನೀ ಆದರೂ ತಲುಪಿದಾಗ ಕೈಗೆ ಸಂಕಲನ / ನಮಗಂತೂ ಸಂಭ್ರಮವೋ ಸಂಭ್ರಮ! **– ಡಾ. ಎಸ್. ಎಂ. ಶಿವಪ್ರಕಾಶ್, ಮಂಗಳೂರು**

೧೩. **ಸಂಕಲನ** ತುಂಬಾ ಚೆನ್ನಾಗಿ ಬರುತ್ತಿದೆ. ತಮ್ಮ ಅವಿರತ ಪ್ರಯತ್ನಕ್ಕೆ ಕನ್ನಡಿಗರೆಲ್ಲ ಕೃತಜ್ಞರಾಗಿರಬೇಕು. ಇಂತಹ ಉತ್ತಮ ಪತ್ರಿಕೆಯನ್ನು ಓದದೆ, ಮನರಂಜನೆಯ ಮರೀಚಿಕೆಯ ಮುಂದೆ ಕಾಲ ಕೂಡುವವರಿಗೆ ಏನೆನ್ನಬೇಕು? – ವಾಸಂತಿ ಪ್ರಭಾಕರ ನಾಯಕ, ಚಿಕ್ಕಮಗಳೂರು

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಮ್ಮ ಮನಿಗೆ ಪೇಪರ್ ಕೊಡಾಕ ಒಬ್ಬ ಹುಡುಗ ಬರ್ತಾನ. ಎಂಟನೇತ್ತ ಕಲೀತಾನಂತ. ನಿನ್ನ ಹೆಸರೇನಪಾ ಅಂದೆ. ಕ್ರಿಷ್ಣ ಅಂದ. ಅನೇಕ ದಿನಗಳಿಂದ ನನ್ನ ತಲ್ಯಾಗ ದುಮಡೀ ಹಾಕತೊಡಗಿದ್ದ ಈ ಶಬ್ದದ ಉಚ್ಚಾರಿತ ರೂಪ ಮತ್ತು ಲಿಖಿತ ರೂಪದ ದೆವ್ವಗಳು ಈಗ ದಿಗ್ಗನ್ಅ ಎದ್ದು ಕುಣ್ಯಾಕ್ಹತ್ತಿದುವು. ನನಗ ಕಲಿಸಿದ ಎಷ್ಟೋ ಮಂದಿನ್ನ ಕೇಳಿದ್ದೆ. ಅದ ಹಂಗ್ಅ ಅಂತ ಬಾಯಿ ಮುಚ್ಚಿಸಿದ್ದರು. ಇವತ್ತ ಈ ಹುಡುಗನ್ನರ ಕೇಳಿ ತಿಳಕೊಂಡ್ರಾತು ಅಂದುಕೊಂಡು, ಕುಂಡರಿಸಿಕೊಂಡೆ. ನಿನ್ನ ಹೆಸರು ಇನ್ನೊಮ್ಮೆ ಹೇಳು ಅಂದೆ. ಮತ್ತ ಹಂಗ್ಅ 'ಕ್ರಿಷ್ಣ...' ಅಂದ. ಬರದು ತೋರಸು ಅಂದೆ. ಕನ್ನಡದಾಗ ಕೃಷ್ಣ ಅಂತ ಬರದ. ಅಲ್ಲೋ, ಇಲ್ಲಿ ಕೃ ಅಂತ ಬರದಿ. ಬಾಯಿಲೆ ಕ್ರಿ ಅಂತೀದಿ. ಯಾವುದು ಖರೆ? ಅಂದೆ. ಎರಡೂ ಖರೆ ಅಂದ. ಅದ್ಹೆಂಗೋ, ಅನಕೊಂತ ನಾನು ಎರಡು ರೀತಿಲೆ ಕ್ರುಷ್ಣ ಮತ್ತು ಕ್ರಿಷ್ಣ ಅಂತ ಬರದೆ. ಅವುನ್ನ ಬರೊಬ್ಬರ ಕ್ರುಷ್ಣ ಮತ್ತು ಕ್ರಿಷ್ಣ ಅಂತ ಸರಿಯಾಗೇ ಓದಿದ. ಹಂಗಾರ ನೀ ಬಾಯಿಲೆ ಹೇಳುವ ಕ್ರಿಷ್ಣ, ಇಲ್ಲಿ ನಾ ಬರೆದಿರುವ ಕ್ರಿಷ್ಣ ಒಂದ್ಅ ಇದ್ದಮ್ಯಾಲ ನಿನ್ನ ಹೆಸರನ್ನ ನೀ ಕೃಷ್ಣ ಅಂತ ಬರೀಬಾರದು. ಅಥವಾ ಕೃಷ್ಣ ಅಂತ ಬರದರ ಬಾಯಿಲೆ ಹೇಳುವಾಗನೂ ನಿನ್ನ ಹೆಸರು ಕ್ರುಷ್ಣ ಅಂತನ್ಅ ಉಚ್ಚಾರ ಮಾಡಬೇಕು ಅಂದೆ. ಅವ್ನಗ ಗದ್ದಲ ಹಿಡೀತು. ಏನೋರೆಪಾ, ಎಲ್ಲಾರೂ ನನ್ನ ಹಂಗ ಕರೀತಾರು, ಹಿಂಗ ಬರ್‍ಯಾಕ ಕಲಿಸ್ಯಾರು ಅಂದ. ಇಂಗ್ಲಿಶಿನ್ಯಾಗ ಹೆಂಗ ಬರೀತಿ ಅಂದೆ. **Krishna** ಅಂತ ಬರದ. ಬರೊಬ್ಬರ್, ಇದು ನೀ ಬಾಯಿಲೆ ಹೇಳಿದ್ಹಂಗ್ಅ ಅಯ್ತಿ. ಈಗ ನೀ ಕನ್ನಡದಾಗ ಬರದಿದ್ದೆಲ್ಲ, ಹಂಗ ಇಂಗ್ಲಿಶಿನ್ಯಾಗ ಬರಿ ಅಂದೆ. ಕೃ ನೆನಪ ಇಟಗೊಂಡು **Krushna** ಅಂತ ಬರದವನ್ಅ, ಏ ಅಲ್ಲ ತಗೀರಿ, ಇದ ಬರೊಬ್ಬರ ಅಲ್ಲ. **Kri** ನ್ಅ ಖರೆ ಅಂದ. ಹಂಗಿದ್ದರ ನಿನ್ನ ಹೆಸರು ಕನ್ನಡದಾಗ ಕ್ರಿ ಅಂತನ್ಅ ಬರಿ ಅಂದೆ. ನಮ್ಮಪ್ಪಾರ್ನ ಕೇಳತೇನ್ರಿ ಅಂದ. ನಿಮ್ಮ ಮಾಸ್ತರ್ನೂ ಕೇಳು. ಯಾವುದು ಹೆಂಗ ಏನ ಖರೆ ಅಂತ ನನಗೂ ಬಂದ್ ತಿಳಸು ಅಂದೆ. ಜೇಲಿನಿಂದ ಬಿಡುಗಡೆ ಆದವರ್ಹಂಗ ಎದ್ದು ಓಡಿದ.

ಇವತ್ತಿಗೂ ದಿನಾ ಪೇಪರ್ ಕೊಡಾಕ ಬರ್ತಾನ. ಆದರ ನನ್ನ ನೋಡಿದ ಕೂಡಲೇ, ಇನ್ನ್ಅ ಕೇಳಿಲ್ರಿ ಅನಕೊಂತ, ನನ್ನ ಕಡೆ ಒಂದು ನಮೂನಿಯ ಕೃಷ್ಣ ನಗೆ ಚೆಲ್ಲಿಕೊಂತ ಹೋಗಿಬಿಡತಾನು.

ಇಂಥಾವು ಇನ್ನೂ ಬೇಕಾದಷ್ಟು ಶಬ್ದ ಅದಾವು. ಅವುನ್ನ ಈ ರೀತಿ, ಇಷ್ಟ ಹದಗೆಡಿಸಿ ನಾವು ಉಚ್ಚಾರ ಮಾಡೂದಿಲ್ಲ. 'ಕೃ' ಮತ್ತು 'ಕ್ರು'ದೊಳಗೂ ಉಚ್ಚಾರಭೇದ ಅಯ್ತಿ, ಒಪ್ಪತೀನಿ. ಆದರ ಕೃ ಬರೆದು ಕ್ರಿ ಅನ್ನೂದಂತೂ ಭಯಂಕರ ಅನಸತಯ್ತಿ. ಋಣ, ಋತು; ಕೃತಕ, ಕೃತಜ್ಞ, ಕೃತ್ರಿಮ, ಕೃಪೆ, ಕೃಷಿ ಮುಂತಾದುವನ್ನ ಸಾಧ್ಯವಿದ್ದಷ್ಟೂ ಅವುಗಳ ಲಿಖಿತ ರೂಪಕ್ಕ ಹತ್ತಿರ ಬರೂಹಂಗ್ಅ ಉಚ್ಚಾರ ಮಾಡತೇವು. ಅದರ್ಹಂಗನ್ಅ ಗೃಹಸ್ಥ; ನೃಪತಿ, ತೃಪ್ತಿ, ದೃಷ್ಟಿ, ಧೃತರಾಷ್ಟ್ರ, ಪೃಥ್ವಿ, ಭೃಂಗ, ಮೃಗ, ಮೃತ್ಯು, ಮೃದು, ಮೃಷ್ಟಾನ್ನ, ವೃಂದಾವನ, ವೃದ್ಧ, ವೃಕ್ಷ, ಬೃಹಸ್ಪತಿ, ಸೃಷ್ಟಿ, ಸಂಸ್ಕೃತ ಮುಂತಾದ ಪದಗಳನ್ನೂ ಬರೊಬ್ಬರ ಅವುಗಳ ಮಗ್ಗುಲದಾಗ್ಅ ನಿಂತ ಉಚ್ಚಾರ ಮಾಡತೇವಿ. ಆದರ ಈ ಕೃಷ್ಣ ಕ್ರಿಷ್ಣಗಳ ಉಚ್ಚಾರಭೂತದ ಹುಳ ಅಂದರ ಕೀಟ ಅರ್ಥಾತ್ ಕ್ರಿಮಿ ನನ್ನ ನಾಲಿಗಿನ್ನ ಭಾಳ ಕೊರ್‍ಯಾಕ್ಹತ್ತೇತಿ.

ಅಂದ್ಹಂಗ ಕನ್ನಡದ ಈ 'ಕ್ರಿಮಿ'ನೂ ಒಂದು ದೊಡ್ಡ 'ಕೃಮಿ'. ಸಂಸ್ಕೃತದ ಕೃಮಿಗೆ ಕ್ರಿಮಿ ಅಂತೇವಿ, ಮತ್ತ ಕ್ರಿಮಿ ಅಂತನ್ಅ ಬರೀತೇವಿ... ಹಂಗ ಕ್ರಿಷ್ಣ ಅಂತ ಉಚ್ಚರಿಸಿದ ಮ್ಯಾಲ ಹಂಗ್ಅ ಯಾಕ ಬರೀಬಾರದು? 'ಕೃಮಿ'ನ್ನ ಕಳಚಿಕೊಂಡ್ಹಂಗ ದೇವಾಂಶೀಯ(?) 'ಕೃಷ್ಣ'ನ್ನ ಕೈಬಿಡಾಕ ಸಾಧ್ಯಿಲ್ಲೇನು!

ಉತ್ತರ ಭಾರತದವರ 'ಬಾಯಾಗ' ಋ, ಕೃ, ತೃ, ಮೃ, ಪೃ ಇಂಥವೆಲ್ಲ ರಿ, ಕ್ರಿ, ತ್ರಿ, ಮ್ರಿ, ಪ್ರಿ ಅಂತ ಉಚ್ಚಾರ ಆಗೂದರಿಂದ ಅವರು ಸಂಸ್ಕೃತವನ್ನ ಸನ್‌ಸ್ಕ್ರಿತ್, ಸೃಷ್ಟಿಯನ್ನ ಸ್ರಿಷ್ಟಿ ಮಾಡ್ತಾರ. ಅದನ್ನ ಕೇಳಿ ಇಂಗ್ಲಿಶ್‌ನವರು ಅನುಸರಿಸಿದರು. ಅವರನ್ನ ನೋಡಿ ದಕ್ಷಿಣದ ನಮ್ಮವರು ಅನುಕರಿಸಿದರು. ಹೀಂಗಾಗಿ ಎಲ್ಲಾ ಬಿಟ್ಟು ಲೀಲಾಧಾರಿ ಕೃಷ್ಣ ಮಾತ್ರ ಬಾಯಾಗ ಕೈಯಾಗ ಮೈಯಾಗ ಅರಿವ್ಯಾಗ ಅಡವ್ಯಾಗ ಸಿಕ್ಕಸಿಕ್ಕಂಗ ಆಟಾ ಆಡಿಕೊಂತ ನಾನಾ ರೂಪಗಳನ್ನ ತಳೆದಿರಬೇಕು.

ಅನನ್ಯ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

ಲಭ್ಯವಿರುವ ಪುಸ್ತಕಗಳು

ನಾಟಕ : ೧. ಆಷಾಢದ ಒಂದು ದಿನ : ಮೋಹನ್ ರಾಕೇಶ್ ೧೫-೦೦
೨. ಆಧೇ ಅಧೂರೆ : ಮೋಹನ್ ರಾಕೇಶ್ ೧೨-೦೦
೩. ಅಲೆಗಳಲ್ಲಿ ರಾಜಹಂಸಗಳು : ಮೋಹನ್ ರಾಕೇಶ್ ೧೨-೦೦
೪. ಅರಗಿನ ಬೆಟ್ಟ : ಹೂಲಿ ಶೇಖರ್ ೧೦-೦೦
೫. ದಫನ್ : ಹೂಲಿ ಶೇಖರ್ ೯-೦೦
೬. ಅಂಧಯುಗ : ಧರ್ಮವೀರ್ ಭಾರತೀ ೨೦-೦೦
೭. ಕೋರ್ಟ್ ಮಾರ್ಶ್ಯಲ್ : ಸ್ವದೇಶ್ ದೀಪಕ್ ೬೦-೦೦
೮. ಪ್ರಸನ್ನರ ನಾಲ್ಕು ನಾಟಕಗಳು : ಪ್ರಸನ್ನ ೧೪೦-೦೦
೯. ಶಸ್ತ್ರ ಸಂತಾನ : ರಾಮೇಶ್ವರ್ ಪ್ರೇಮ್ ೬೦-೦೦
೧೦. ಹ್ಯಾಮ್ಲೆಟ್ : ಶೇಕ್ಸ್‌ಪಿಯರ್ : ಪ್ರಸನ್ನ ೮೦-೦೦
೧೧. ತದ್ರೂಪಿ : ಪ್ರಸನ್ನ ೫೦-೦೦
೧೨. ಚೋರ ಚರಣದಾಸ : ಹಬೀಬ್ ತನ್‌ವೀರ್ ೬೦-೦೦

ಕಾವ್ಯ : ೧೩. ಪ್ರತೀಕ್ಷೆ : ಸಿದ್ಧಲಿಂಗ ಪಟ್ಟಣಶೆಟ್ಟಿ ೧೭-೦೦
೧೪. ಹೆಮ್ಮರಗಳು ತಲೆಯೆತ್ತಿವೆ : ರಂಜನ ಭಟ್ಟ ೯-೦೦
೧೫. ದಳೆಗಳು : ಜಯರಾಮ ಕಾರಂತ ೬-೦೦
೧೬. ಮೀರಾವಾಣಿ : ಸಿದ್ಧಲಿಂಗ ಪಟ್ಟಣಶೆಟ್ಟಿ ೫-೦೦
೧೭. ನೀನಾ : ಸಿದ್ಧಲಿಂಗ ಪಟ್ಟಣಶೆಟ್ಟಿ ೧೫-೦೦
೧೮. ಕಿಚ್ಚಿಲ್ಲದ ಬೇಗೆ : ಎಸ್. ಜಿ. ಸ್ವಾಮಿ ೨೪-೦೦
೧೯. ಇಂದು ರಾತ್ರಿಯ ಹಾಗೆ : ಸಿದ್ಧಲಿಂಗ ಪಟ್ಟಣಶೆಟ್ಟಿ ೨೫-೦೦
೨೦. ಅಂತರಂಗದ ಕವನಗಳು : ಸಿದ್ಧಲಿಂಗ ಪಟ್ಟಣಶೆಟ್ಟಿ ೨೦-೦೦
೨೧. ಬಿಹಾರೀ ಸಪ್ತಶತೀ : ಮ. ಸು. ಕೃಷ್ಣಮೂರ್ತಿ ೨೦-೦೦
೨೨. ಸ್ವಂತಕ್ಕೆ ಸ್ವಂತಾವತಾರ : ನಾ. ಮೊಗಸಾಲೆ ೩೦-೦೦
೨೩. ಧ್ವನಿಗವನಗಳು : ಎಸ್. ಜಿ. ಸ್ವಾಮಿ ೨೦-೦೦
೨೪. ಕಬೀರ ಪದಾವಲಿ : ಮ. ಸು. ಕೃಷ್ಣಮೂರ್ತಿ ೫೦-೨೦
೨೫. ಮದಿರೆ ಮಂದಿರ : ಎಸ್. ಜಿ. ಸ್ವಾಮಿ ೪೦-೦೦
೨೬. ಪಟ್ಟಣಶೆಟ್ಟರ ಸಮಗ್ರ ಕಾವ್ಯ ೨೦೦-೦೦

ವಿಮರ್ಶೆ+ವೈಚಾರಿಕ : ೨೭. ರಂಗಾಯಣ : ಸಿದ್ಧಲಿಂಗ ಪಟ್ಟಣಶೆಟ್ಟಿ ೫೦-೦೦
೨೮. ಚಹಾದ ಜೋಡಿ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೧೧೦-೦೦
೨೯. ಚಹಾದ ಜೋಡಿ ಚೂಡಾದ್ದಾಂಗ-೨ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೭೫-೦೦
೩೦. ಋಣಾನುಬಂಧ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೫೫-೦೦
೩೧. ಪರಿಭಾವನ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೧೦೦-೦೦

೩೨. ಚಹಾದ ಜೋಡಿ ಚೂಡಾದ್ಹಾಂಗ-೩ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೯೦-೦೦

೩೩. ಆಕಲನ : ಡಾ. ಹೇಮಾ ಪಟ್ಟಣಶೆಟ್ಟಿ ೭೫-೦೦

೩೪. ಚಹಾದ ಜೋಡಿ ಚೂಡಾದ್ಹಾಂಗ-೪ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೯೫-೦೦

೩೫. ಅನುಸ್ವಾದನ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೬೦-೦೦

೩೬. ವಾಮನರಾವ್ ಮಾಸ್ತರ್ : ಎನ್ಕೆ ೪೦-೦೦

೩೭. ಮಧ್ಯಮಪಥ : ಅರವಿಂದ ಚೊಕ್ಕಾಡಿ ೮೦-೦೦

೩೮. ಚಹಾದ ಜೋಡಿ ಚೂಡಾದ್ಹಾಂಗ-೫ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ೬೦-೦೦

೩೯. ಸಹೃದಯ : ಸಿ. ಪ. ಅಭಿನಂದನ ಗ್ರಂಥ ೪೦೦-೦೦

೪೦. ಹೊನ್ನಪುರ : ಗ. ಹು. ಹೊನ್ನಾಪುರಮಠರ ಸ್ಮರಣಗ್ರಂಥ ೧೫೦-೦೦

ಕಥಾಸಾಹಿತ್ಯ : ೪೧. ಭುಗಿಲು : ಮೋಹನ ಚೆನ್ನಿ ೨೦-೦೦

೪೨. ರಾಕ್ಷಸ : ಶಾಂತಿನಾಥ ದೇಸಾಯಿ ೨೦-೦೦

೪೩. ಕುಂವೀ ಆಯ್ದ ಕಥೆಗಳು : ಕುಂ. ವೀರಭದ್ರಪ್ಪ ೧೫-೦೦

ಪ್ರವಾಸಕಥನ : ೪೪. ಆಲ್ಮನೆಯಿಂದ ಆ್ಯನ್ಆರ್ಬರ್‌ಗೆ : ಪಿ. ಎಂ. ಹೆಗಡೆ ೬೦-೦೦

ಅನನ್ಯ ಪುಸ್ತಕಗಳ ವಿಶೇಷ ಕೊಡುಗೆ

ಸಂಕಲನದ ಚಂದಾದಾರರಿಗೆ ೪೦% ರಿಯಾಯತಿ ಅಂಚೆವೆಚ್ಚ ಪ್ರತ್ಯೇಕ

ಕೈಮಗ್ಗದ ಬಟ್ಟೆಗಳನ್ನೇ ತೊಡಿರಿ

ದೇಸಿ ನಿಮ್ಮ ಹವ್ಯಾಸವಾಗಲಿ

ಸಂಕಲನಕ್ಕೆ ಶುಭಾಶಯಗಳು

ದೇಸಿ ಧರ್ಮದರ್ಶಿ ಸಂಸ್ಥೆ

೨೭, ಪಟಾಲಮ್ಮಗುಡಿ ಬೀದಿ, ಬಸವನಗುಡಿ, ಬೆಂಗಳೂರು-೫೬೦ ೦೦೪

✆ ೦೮೦-೨೬೫೭ ೬೬೬೯

SANKALANA : RNI No. KARKAN 14160 / 10 / 1 / 2002 - TC

ಸೌಂದರ್ಯ ಲೋಕದಲ್ಲಿ ವಿಹರಿಸಲು ವಿಶೇಷ ವಿನ್ಯಾಸ

ಸೌಂದರ್ಯ ಹಾಗೂ ಹಣಕ್ಕೆ ತಕ್ಕ ಮೌಲ್ಯದ ಸಮ್ಮಿಲನ ಪ್ರಿಯದರ್ಶಿನಿ ಸೀರೆಗಳಲ್ಲಿ. ಬ್ರೋಕೇಡ್ ಹಾಗೂ ಸಾಂಪ್ರದಾಯಕ ವಿನ್ಯಾಸಗಳಲ್ಲಿ ಕಲಾಂಜಲಿ, ಕಾಂತಾ ಹಾಗೂ ಜಾಮ್ದಾನಿ ಸೀರೆಗಳ ಬೃಹತ್ ಶ್ರೇಣಿ.

ಬ್ರೋಕೇಡ್: ವಿವಿಧ ಆಕರ್ಷಕ ವರ್ಣಗಳಲ್ಲಿ ಬಂಗಾರದ ಹಾಗೂ ಬೆಳ್ಳಿ ಜರಿಯ ವಿನ್ಯಾಸಗಳು.

ಕಾಂತಾ: ಕಲ್ಕತ್ತಾ ಹಾಗೂ ಡಾಕಾದ ಸಾಂಪ್ರದಾಯಕ

ಗಂಡಭೇರುಂಡ: ಎರಡು ತಲೆಯ ಗಂಡಭೇರುಂಡ ಪಕ್ಷಿಯ ವಿನ್ಯಾಸದ ಸೀರೆಗಳು

ಜಾಮ್ದಾನಿ: ನೇಯ್ಗೆಯ ಸಮಯದಲ್ಲಿಯೇ ಅಂಚುಗಳಲ್ಲಿ ಅಳವಡಿಸಿದ ಆಕರ್ಷಕ ಕಸೂತಿಯ ವಿನ್ಯಾಸ

ಕಲಾಂಜಲಿ: ಕಂಠಹಾರದ ಮಾದರಿಯಲ್ಲಿ ನೇಯ್ದ ವಿಷಿಷ್ಠ ಸೀರೆ.

ಪ್ರಿಯದರ್ಶಿನಿ

ಕೈಮಗ್ಗದ ತವರು

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಪ್ರಿಯದರ್ಶಿನಿ ಕಮರ್ಷಿಯಲ್ ಕಾಂಪ್ಲೆಕ್ಸ್, ನಂ. 1, ಟ್ಯಾಂಕ್ ರೋಡ್, ಹಲಸೂರು,

ಬೆಂಗಳೂರು - 560 042 ಫೋನ್: 080-25575421/2 e-mail: khdc@vsnl.net website: www.khdcl.com

ಕರ್ನಾಟಕದಾದ್ಯಂತ ಮಾರಾಟ ಮಳಿಗೆಗಳು ಮತ್ತು:

• ನವದೆಹಲಿ • ಮುಂಬೈ • ಕೊಲ್ಕತ್ತ • ಚೆನ್ನೈ • ಹೈದರಾಬಾದ್ • ಜೈಪುರ್ • ಕಾನ್‌ಪುರ್ ಗಳಲ್ಲಿ ನಹ